DAMAGE BOOK

THE BOOK WAS DRENCHED

TEXT FLY WITHIN THE BOOK ONLY

UNIVERSAL LIBRARY
OU_198246
UNIVERSAL LIBRARY

**OSMANIA UNIVERSITY LIBRARY**

Call No. K841 S363 Accession No. K1164

Author సిద్ధనాగేశ్వర

Title సిద్ధనాగేశ్వరుని చరిత్రము

This book should be returned on or before the date last marked below

ಶಿವಾನುಭವ ಗ್ರಂಥಮಾಲಾ ನಂ॥ ೩೦

# ಸಿದ್ಧರಾಮೇಶ್ವರನ ವಚನಗಳು.

ಸಂಪಾದಕರು.

ರಾ॥ ಸಾ॥ ಫ. ಗು. ಹಳಕಟ್ಟಿ.
ಬಿ. ಎ. ಎಲ್. ಎಲ್. ಬಿ. ವಕೀಲ.

ವಿಜಾಪುರ.

ಬೆಲೆ ೧ ರೂಪಾಯಿ

(ಗ್ರಂಥದ ಸ್ವಾಮಿತ್ವವು ಸಂಪಾದಕರ ಕಡೆಗೆ ಇಡಲ್ಪಟ್ಟಿದೆ.)

# ಪ್ರಸ್ತಾವನೆ.

ನಾವು ಶ್ರೀ ಸಿದ್ಧರಾಮೇಶ್ವರನ ವಚನಗಳನ್ನು ಕೈಬರಹದ ಎರಡು ಪ್ರತಿಗಳ ಸಹಾಯದಿಂದ ಈಗ ಸಿದ್ಧಪಡಿಸಿದ್ದೇವೆ. ಒಂದು ಪ್ರತಿಯು ರಾ॥ ರಾ॥ ಬಸಲಿಂಗಪ್ಪ ಕಿಣಗಿ ಮು. ಬಾಗಲಕೋಟೆ ಇವರು ಕಳಿಸಿದ್ದು. ಮತ್ತೊಂದು ಡಾ॥ ಎಸ್. ಸಿ. ನಂದೀಮಠ ಎಮ್. ಏ. ಪಿ. ಎಚ್. ಡಿ. ಇವರು ಗೋಕಾವಿಯಲ್ಲಿ ದೊರಕಿಸಿ ಕಳಿಸಿದ್ದು. ಇದಕ್ಕೋಸ್ಕರ ನಾವು ಈ ಉಭಯ ಮಹನೀಯರಿಗೆ ಬಹಳ ಆಭಾರಿಯಾಗಿದ್ದೇವೆ.

ಶ್ರೀ ಸಿದ್ಧರಾಮೇಶ್ವರನು ಶ್ರೀ ಬಸವೇಶ್ವರನ ಸಮಕಾಲೀನನು. ಮತ್ತು ಆಗಿನ ಕಾಲದ ವಚನಕಾರರಲ್ಲಿ ಅತ್ಯಂತ ಪ್ರಸಿದ್ಧಹೊಂದಿದವನು. ಈತನ ವಚನಗಳನ್ನು ಮುದ್ರಣಗೊಳಿಸಿದ್ದು ಇದೇ ಮೊದಲನೆಯದಾದ್ದರಿಂದ ಈ ಗ್ರಂಥದಲ್ಲಿ ಅನೇಕ ದೋಷಗಳಿರಬಹುದು. ಅವುಗಳನ್ನು ವಾಚಕರು ಕ್ಷಮಿಸಬೇಕೆಂದು ನಮ್ಮ ಸವಿನಯ ವಿನಂತಿ ಇದೆ.

ಪುರಾತನ ಗ್ರಂಥಗಳನ್ನು ಶುದ್ಧವಾಗಿ ಮುದ್ರಣಗೊಳಿಸಲಿಕ್ಕೆ ಹೆಚ್ಚು ಪ್ರತಿಗಳು ದೊರೆದಷ್ಟು ಅನುಕೂಲವಾದದ್ದು. ಆದ್ದರಿಂದ ಶ್ರೀ ಸಿದ್ಧರಾಮೇಶ್ವರನ ವಚನಗಳು ಮತ್ತೆ ಯಾರಲ್ಲಾದರೂ ಇದ್ದಲ್ಲಿ ಅವುಗಳನ್ನು ನಮ್ಮ ಕಡೆಗೆ ಕಳಿಸಿಕೊಡಬೇಕೆಂದು ನಮ್ಮ ವಿನಂತಿ ಇದೆ. ಮುಂದಿನ ಮುದ್ರಣದ ಕಾಲಕ್ಕೆ ಅವು ನಮಗೆ ಬಹಳ ಉಪಯೋಗವಾಗದೆ ಇರವು.

ನಮ್ಮ ಕರ್ನಾಟಕಸ್ತರು ಅದರಲ್ಲಿ ವಿಶೇಷವಾಗಿ ವೀರಶೈವರು ಈ ಮಹಾಪುರುಷನ ಈ ವಚನಗ್ರಂಥವನ್ನು ಆದರಿಸಿ ಹಿಂದೆ ಬಿದ್ದ ವಚನವಾಙ್ಮಯವನ್ನು ಮುಂದೆ ತರಲು ಸಹಾಯಕರಾಗುವರೆಂದು ಭಾವಿಸಿದ್ದೇವೆ.

**ವಿಜಾಪುರ** — **ಫ. ಗು. ಹಳಕಟ್ಟಿ.**

ತಾ॥ ೫—೨—೧೯೩೨ — ಸಂಪಾದಕ

# ಸಿದ್ಧರಾಮೇಶ್ವರ ದೇವರು ನಿರೂಪಿಸಿದ
# ಷಟ್‌ಸ್ಥಲದ ವಚನಗಳು.

೧. ಹೃದಯ ಕಮಲದಲ್ಲಿ ವಾಸವಾಗಿರುವಾತನೊಬ್ಬನು, ಮನದ ಕೊನೆಯಲ್ಲಿ ಇರುವಾತನೊಬ್ಬನು, ಚಿದಾಕಾಶದಲ್ಲಿರುವಾತನೊಬ್ಬನು, ಇವರೆಲ್ಲರಲ್ಲಿ ಇರುವಾತನೊಬ್ಬನು ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನು.

೨. ಸಿದ್ಧ ಸಿದ್ಧರುಗಳೆಲ್ಲ ರಸವಾದವ ಕಲಿತು ಬಂಧನಕ್ಕೆ ಗುರಿಯಾದರು. ಅಮೃತವ ಸೇವಿಸಿದ ಸುರರೆಲ್ಲ ಪ್ರಳಯಕ್ಕೆ ಗುರಿಯಾದರು. ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನರಿದವರೆಲ್ಲ ಬಯಲಿಗೆ ಬಯಲಾದರು.

೩. ಕಲ್ಪವೃಕ್ಷ ಮರನೆನ್ನಬಹುದೇ? ಕಾಮಧೇನು ಪಶುವೆನ್ನಬಹುದೇ? ಪರುಷ ಪಾಷಾಣವೆನ್ನ ಬಹುದೇ? ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ನುಂಗಿದವರೆಲ್ಲ ಮಾನವರೆನ್ನಬಹುದೇ?

೪. ಕೆಲವರು ಲಿಂಗವ ಪೂಜಿಸಿ ಪಡೆದರು ಗತಿಯು. ಕೆಲವರು ಲಿಂಗವ ಪೂಜಿಸಿ ಪಡೆದರು ಮತಿಯು. ನಮ್ಮ ಕಪಿಲಸಿದ್ಧನ ಪೂಜಿಸಿ ಪಡೆಯಲಿಲ್ಲವನ ಜ್ಯೋತಿಯು.

೫. ಲಿಂಗವ ಪೂಜಿಸಿದವರು ಹಲಬರುಂಟು. ಅಂಗವ ಪೂಜಿಸಿದವರು ಒಬ್ಬರೂ ಇಲ್ಲ. ಕಾಮವ ತೊರೆದವರು ಹಲಬರುಂಟು. ನಿಃಕಾಮವನಳಿದವರು ಒಬ್ಬರೂ ಇಲ್ಲ ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ.

೬. ಪರುಷ ಸೋಂಕಿದ ಬಳಿಕ ಕಾರ್ಬೋನ್ನದ ಕೇಡು ನೋಡಿರಯ್ಯ. ಜ್ಯೋತಿ ಸೋಂಕಿದ ಬಳಿಕ ತಮಂಧದ ಕೇಡು ನೋಡಿರಯ್ಯ. ಅಮೃತ ಸೋಂಕಿದ ಬಳಿಕ ರೋಗದ ಕೇಡು ನೋಡಿರಯ್ಯ. ನಮ್ಮ ಕಪಿಲಸಿದ್ಧಮಲ್ಲನ ಸೋಂಕಿದ ಬಳಿಕ ಭವದ ಕೇಡು ನೋಡಿರಯ್ಯ.

೭. ಕ್ರಿಯೆವಿಡಿದು ಆಚರಿಸಬೇಕಲ್ಲದೆ ಅಕ್ರಿಯದೊಡನಾಚರಿಸಲಾಗದು. ಜ್ಞಾನವಿಡಿದು ನೋಡಬೇಕಲ್ಲದೆ ದೃಷ್ಟಿವಿಡಿದು ನೋಡಬಾರದು.

ಲಿಂಗವಿಡಿದು ಪೂಜಿಸುವದಲ್ಲದೆ ಅಂಗವಿಡಿದು ಪೂಜಿಸಲಾಗದು ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ.

೮. ಜ್ಞಾನವಿಡಿದು ಆಚರಿಸಿದರಲ್ಲದೆ ಕ್ರಿಯೆವಿಡಿದು ಆಚರಿಸಲಿಲ್ಲವು. ಕ್ರಿಯೆವಿಡಿದು ಆಚರಿಸಿಧರು ಜ್ಞಾನವಿಡಿದು ಆಚರಿಸಲಿಲ್ಲವು. ರೂಪುವಿಡಿದು ನಿರೀಕ್ಷಿಸುವರಲ್ಲದೆ ಅರೂಪವಿಡಿದು ನಿರೀಕ್ಷಿಸರು. ಜ್ಞಾನವಿಡಿದಾಚರಿಸಿದರು ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಚನ್ನಬಸವಣ್ಣನವರು.

೯. ಸಮದೃಷ್ಟಿಯಾಗದವನ ಭಕ್ತನೆಂತೆಂಬೆ? ವಿಷಯಗಳಳಿಯದವನ ಮಹೇಶನೆಂತೆಂಬೆ? ಶಿವಕರುಣವಿಡಿಯದನ್ನಕ್ಕ ಪ್ರಸಾದಿ ಎಂತೆಂಬೆ? ಅಂಗೇಂದ್ರಿಯಂಗಳಳಿಯದವನ ಪ್ರಾಣಲಿಂಗಿ ಎಂತೆಂಬೆ? ಸಂಕಲ್ಪ ಹರಿಯದನ್ನಕ್ಕ ಶರಣನೆಂತೆಂಬೆ? ನಮ್ಮ ಕಪಿಲಸಿದ್ಧ ಮಲ್ಲೇಶನ ಕೂಟವನರಿಯದವನ ಐಕ್ಯನೆಂತೆಂಬೆ?

೧೦. ಭಕ್ತನಾದ ಬಳಿಕ ಜಂಗಮದ ಗುಣವನರಸಲದೇಕೋ? ಮಹೇಶನಾದ ಬಳಿಕ ವಿಷಯಕ್ಕೆಳಿಸುವದದೇಕೋ? ಪ್ರಸಾದಿಯಾದ ಬಳಿಕ ಕಂಡುದಕ್ಕೆ ಕೈದುಡುಕುವದೇಕೋ? ಪ್ರಾಣಲಿಂಗಿಯಾದ ಬಳಿಕ ಪ್ರಪಂಚದ ಹಂಗೇಕೋ? ಶರಣನಾದ ಬಳಿಕ ಮೋಕ್ಷದ ಹಂಗೇಕೊ? ಐಕ್ಯನಾದ ಬಳಿಕ ನಮ್ಮ ಕಪಿಲಸಿದ್ಧ ಮಲ್ಲಯ್ಯನ ನಾಮಸ್ಮರಣೆಯದೇತಕೋ?

೧೧. ಭಕ್ತನಾದ ಬಳಿಕ ಜಂಗಮ ಮೆಚ್ಚಬೇಕು. ಜಂಗಮನಾದ ಬಳಿಕ ಭಕ್ತ ಮೆಚ್ಚಬೇಕು. ಭಕ್ತನ ಕಾಯವೇ ಜಂಗಮ ಕಾಯ. ಜಂಗಮದ ಕಾಯವೇ ಭಕ್ತನ ಕಾಯ. ಕಪಿಲಸಿದ್ಧ ಮಲ್ಲೇಶಯ್ಯನಲ್ಲಿ ಇದೇ ಉಪಾಯ.

೧೨. ಭಕ್ತನಾದ ಬಳಿಕ ಭಕ್ತಸ್ಥಲವಳವಡುವದೇ ದುರ್ಲಭ. ಮಹೇಶನಾದ ಬಳಿಕ ಮಹೇಶಸ್ಥಲವಳವಡುವದೇ ದುರ್ಲಭ. ಭಕ್ತಸ್ಥಲ ಬಸವಣ್ಣಂಗಾಯಿತ್ತು. ಮಹೇಶಸ್ಥಲ ಚನ್ನಬಸವಣ್ಣಂಗಾಯಿತ್ತು. ಮೀರಿದ ಸ್ಥಲ ನಮ್ಮ ಪ್ರಭುವಿಂಗಾಯಿತ್ತು. ಕಪಿಲಸಿದ್ಧ ಮಲ್ಲಯ್ಯ ಎನಗಿನಿತೊಂದೊರೆವ ಪರಿ.

೧೩. ಶಾಸ್ತ್ರವ ಹೇಳುವವರೊಂದು ಕೋಟಿ. ವೇದವೇದಾಂತವ ಹೇಳುವವರೊಂದು ಕೋಟಿ. ನ್ಯಾಯಾನ್ಯಾಯ ಹೇಳುವವರೊಂದು

ಕೋಟಿ. ಕಪಿಲಸಿದ್ಧನ ಮಾಯಾಕೀಲವ ಹೇಳುವವರೋರ್ವರು ಇಲ್ಲ ಎಲ್ಲಾದರೂ.

೧೪. ಶಾಸ್ತ್ರದ ರಂಜನೆ ಲೋಕಕ್ಕಲ್ಲದೆ ಲೋಕವಿರಹಿತಂಗೆಲ್ಲಿಯದೊ? ವೇದವೇದಾಂತದ ರಂಜನೆ ಮುಮುಕ್ಷುಗಳಿಗಲ್ಲದೆ ಮೋಕ್ಷರಹಿತರಿಗೆಲ್ಲಿಯದೋ? ನಮ್ಮ ಕಪಿಲಸಿದ್ಧನ ಮಾಯಾ ಕೀಲವ ತಿಳಿವರಿ ತಿಳಿಯುವವರಿಗಲ್ಲದೆ ಸಿಶ್ಯಾನ್ಯರಿಗೆಲ್ಲಿಯದೋ?

೧೫. ವೇಷವ ಧರಿಸಿ ಫಲವೇನಯ್ಯ, ವೇಷದಂತಾಚರಣೆ ಇಲ್ಲದನ್ನಕ್ಕ? ವೇದಾಂತವನೋದಿ ಫಲವೇನಯ್ಯ, ಬ್ರಹ್ಮ ತಾವಾಗದನ್ನಕ್ಕ? ನಾನು ಕೆರೆಯ ತೋಡಿ ಫಲವೇನಯ್ಯ, ಪುಣ್ಯತೀರ್ಥಗಳು ಬರದನ್ನಕ್ಕ ಕಪಿಲಸಿದ್ಧ ಮಲ್ಲಿನಾಥಾ?

೧೬. ಶೇಷನಫಣಿಯಲ್ಲಾಡುವದು ಲೇಸು ಕಂಡಯ್ಯ. ಮೃತ್ಯುವಿನ ಬಾಯೊಳಗಿರುವದು ಬಹು ಲೇಸು ಕಂಡಯ್ಯ. ನಮ್ಮ ಕಪಿಲಸಿದ್ಧ ಮಲ್ಲಿನಾಥನ ಶರಣರು ನಡೆದ ದಾರಿಯಲ್ಲಿ ನಡೆಯುವದು ಲೇಸು ಕಂಡಯ್ಯ.

೧೭. ಊರಿಗೊಂದು ಹಳ್ಳವಾದರೆ ನೀರು ಕುಡಿಯುವವರಿಗೂ ಒಂದೇ ಹಳ್ಳವೆ ಇಲ್ಲಿಲ್ಲ. ಅರಿಯುವವರಿಗೂ ಒಬ್ಬ ದೇವರಾದರೆ ಆ ಲೋಕದವರಿಗೂ ಒಬ್ಬನೇ ಇಲ್ಲಿಲ್ಲ. ನಮ್ಮ ಕಪಿಲಸಿದ್ಧ ಮಲ್ಲೇಶನಲ್ಲದೆ ಬೇರೆ ದೈವವಿಲ್ಲ.

೧೮. ಅವ್ಯಕ್ತವೆಂದರಿದಾತನೇನ ಮರನಾಗಲಿಲ್ಲವು. ಬ್ರಹ್ಮೋಹಮಸ್ಮಿತಿ ಎಂದರಾತನೇನು ಮುಕ್ತನಾಗಲಿಲ್ಲವು. ನಮ್ಮ ಕಪಿಲಸಿದ್ಧ ಮಲ್ಲೇಶನಲ್ಲಿ ಗುಣತ್ರಯವಳಿದನ್ನಕ್ಕ.

೧೯. ಆಗುವದನು ತಪ್ಪಿಸಿಹೆನೆಂದರೆ ತಪ್ಪಲರಿಯದು. ಆಗು ಭೋಗಂಗಳ ತಪ್ಪಿಸುವಡೆ ಸಚ್ಚಿದಾನಂದ ಶಿವಯೋಗಿಗಲ್ಲದೆ ನರರಿಗೆಲ್ಲಿಯದೊ ಕಪಿಲಸಿದ್ಧ ಮಲ್ಲಯ್ಯ?

೨೦. ಮಾಡುದುದ ಮಾಡಲು ದೈವಬಲವೆಂಬುದೀ ಲೋಕ. ಎಲೆ ಕಪಿಲಸಿದ್ಧ ಮಲ್ಲಯ್ಯ ಏಲೇಶಂಗೆ ಪ್ರಾಣವ ಕೊಟ್ಟಿದ್ದುದಾವ ಬಲ ಹೇಳಯ್ಯ? ಸೆರಿಗೊಡ್ಡಿ ಬೇಡುವೆ.

೨೧. ಸಂಚಿತಾದಿ ಕರ್ಮತ್ರಯಂಗಳು ಜೀವನಿಗಲ್ಲದೆ ಶಿವಸ್ವರೂಪನಿಗೆಲ್ಲಿಹದೊ? ಆಡುವ ಗೊಂಬೆಯನು ಆಡಿಸುವಾತಂಗಲ್ಲದೆ ಆಡುವ

ಗೊಂಬೆಯಾಗೆಲ್ಲಿಹದೊ ಸ್ವತಂತ್ರತೆಯು? ಕಪಿಲಸಿದ್ಧ ಮಲ್ಲಯ್ಯ ಇದರಿರವ ಸ್ವತಂತ್ರನಿಗಲ್ಲದೆ ಅಸ್ವತಂತ್ರನಿಗೆಲ್ಲಿಹದೊ?

೨೨. ಲಿಂಗವ ಪೂಜಿಸುವವರ ಕಂಡರೆ ಎನ್ನ ಮನವು ಉಬ್ಬಿತ್ತು ನೋಡಯ್ಯ. ಜಂಗಮವ ಪೂಜಿಸುವವರ ಕಂಡರೆ ಹೋದ ಪ್ರಾಣ ಬಂದಂತಾಯಿತ್ತಯ್ಯ. ತನ್ನ ತಾನರಿಯುವವರ ಕಂಡರೆ ಕಪಿಲಸಿದ್ಧ ಮಲ್ಲಯ್ಯನೀತನೆಂದು ನಂಬಿತ್ತು ನೋಡಯ್ಯ ಎನ್ನ ಮನ.

೨೩. ಲಿಂಗವಾದ ಬಳಿಕ ಪಂಚಸೂತ್ರಸಹವಾಗಿರಬೇಕು. ಜಂಗಮವಾದ ಬಳಿಕ ಸದ್ಗುಣ ಸಹಿತವಾಗಿರಬೇಕು. ತನ್ನ ತಾನರಿವಾತನಾದ ಬಳಿಕ ಮರೀಚಿಯ ಜಲದಂತಿರಬೇಕು ನಮ್ಮ ಕಪಿಲಸಿದ್ಧ ಮಲ್ಲೇಶನಲ್ಲಿ.

೨೪. ಲಿಂಗವ ಪೂಜಿಸುವವರನಂತರುಂಟು. ಜಂಗಮವ ಪೂಜಿಸುವವರನಂತರುಂಟು. ತನ್ನ ತಾನರಿದು ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಕೂಡುವವರೊಬ್ಬರೂ ಇಲ್ಲ.

೨೫. ತಿಳಿಯದೆ ಪೂಜಿಸಿದರಾಗುವದೇನೋ ಅಯ್ಯ? ತಿಳಿದು ತಿಳಿದು ಮಾಡಬೇಕು. ಜಂಗಮಾರ್ಚನೆಯ ತಿಳಿದು ಮಾಡಬೇಕು. ತಿಳಿಯದೆ ಮಾಡಲು ನಿನ್ನ ಸಿದ್ಧಿಗಳಿಗೆ ಸಿದ್ಧರಲ್ಲದೆ ನಿನ್ನಂಗ ದೊರೆಕೊಂಬ ಪರಿಯ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೬. ಸಕಲ ನಿಃಕಲದಲ್ಲಿ ಬ್ರಹ್ಮಾಂಡದ ತತ್ವದಲ್ಲಿ ಕರ್ಮದ ಸೊಮ್ಮಿನ ಸೀಮೆಯನತಿಗಳೆದು ಅದು ಲಿಂಗವೆಂದು ತೋರಬಲ್ಲಾತ ಗುರು. ತನುಗುಣ ಸಂಬಂಧವ ತಾನೆಂದು ತೋರಲೀಯದೆ ನಿಶ್ಚಯವ ಮಾಡಿ ತಾತ್ಪರ್ಯವ ಕಳೆಯಾಗಿರಿಸಿ ಸಕಲದಲ್ಲಿ ನಿಃಕಲದಲ್ಲಿ ರೂಪಿನಲ್ಲಿ ಅರೂಪಿನಲ್ಲಿ ಭಾವದಲ್ಲಿ ನಿರ್ಭಾವದಲ್ಲಿ ಅವೆ ಅವಾಗಿ ತೋರಬಲ್ಲಾತ ಗುರು. ಈ ಪರಿಯ ತೋರಿ ಎನ್ನ ಭವ ತಪ್ಪಿಸಿದ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ ಪರಮ ಗುರುವು.

೨೭. ಶ್ರೀಗುರುವೆ ಭವಪಾಶದೂರನೇ, ಶ್ರೀಗುರುವೆ ಆದಿ ಅಂತ್ಯದೂರನೆ, ಶ್ರೀಗುರುವೆ ಆನಂದಮಯರೂಪನೆ, ನೀ ಗತಿ ಎಂದಾತ ಅನಾಥ ಸೈದುವನು ಶ್ರೀಗುರು ಮಲ್ಲಿಕಾರ್ಜುನನ.

೨೮. ಶ್ರೀಗುರುವೆ ದಿವ್ಯ ಮಹಾ ಮುನಿಯೆ ಶ್ರೀಗುರುವೆ ಲೋಕ ಮೀರೇಳು ಹೆತ್ತವನೆ, ಆನಂದ ಚಿನ್ಮಯ ಮಹಾಗುರುದೇವ ಶಿಷ್ಯ ಕಾರಣ ನೀವು ಪರಮ ಶಿವಮೂರ್ತಿಯಾದಿರಯ್ಯಾ. ನಿತ್ಯ ಪ್ರಸಾದದಲ್ಲಿ ಮುಕ್ತನ ಮಾಡಿದ ನಿತ್ಯ ಜ್ಯೋತಿರ್ಮಯನೆ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನನೆ.

೨೯. ಗುರುವೆ ಇಹಪರ ಗುರುವೆ ಕರುಣಾಕರನೆ ಗುರುವೆ ಶುದ್ಧಾತ್ಮನೆ ನಿರ್ಮಳಾಂಗ ಗುರುವೆ ನಿನ್ನಂತೆ ಎನ್ನನು ಮಾಡಿದ ಪರಮ ಗುರುವೆ ನೀನು ಮಲ್ಲಿಕಾರ್ಜುನಾ.

೩೦. ಅನುಪಮನೆ ನಿನ್ನ ಹವಣಿಸಲಿಕ್ಕರಿದಯ್ಯಾ. ಘನತರವೆನಿಸುವ ಸಾಯುಜ್ಯ ಪದವ ಮೀರಿದ ಶಬ್ದ ಹಲವ ಮೀರಿದ ಬ್ರಹ್ಮವ ಗುರುಕರುಣದಿಂದೆ ಕಂಡೆ. ಪರಮ ಪದವ ಗುರುವೆ ಮದ್ಗುರುವೆ ಸದ್ಗುರುವೆ ತ್ರೈಜಗದ್ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೧. ಮಲತ್ರಯಂಗಳಲ್ಲಿ ಕುದಿಯಲೀಯದೆ, ಮನಸಿಜನ ಬಾಣಕ್ಕೆ ಗುರಿಯಾಗಲೀಯದೆ ಎನ್ನ ತನ್ನಂತೆ ಮಾಡಿದನಯ್ಯಾ. ಶ್ರೀಗುರುಪದ ನಾಲ್ಕು ಮೀರಿ ಭವಕ್ಕೆ ಹೇತುವಾಗಲೀಯದೆ ಕರುಣಿಸಿ ಮುಕ್ತನ ಮಾಡಿದೆಯಯ್ಯಾ. ಶ್ರೀಗುರುವೆ ಪರಮ ಗುರುವೆ ಪರಿಭವಕ್ಕೆ ಬಾರಲೀಯದಂತೆ ಎನ್ನ ನಿನ್ನವರೊಳಗೊಬ್ಬನೆಂದೆನಿಸಿದೆಯಲ್ಲಾ. ಗುರುವೆ ಪರಮಗುರುವೆ ಕಾಲನ ಕಮ್ಮಟಕ್ಕೆ ಗುರಿಯಹ ಎನ್ನನು ತೆಗೆದು ಗುರುಲಿಂಗ ಜಂಗಮತ್ರಯ ಲಿಂಗಕ್ಕೆ ಕಾರಣಿಕನ ಮಾಡಿದೆ, ಇನ್ನು ಭವಕ್ಕೆ ಬಾರೆನು. ನಿನ್ನವರಾದಂತೆ ತಪ್ಪೆನು. ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ ಎನ್ನ ಮೀರಿದಪರ ಒಂದೂ ಇಲ್ಲ.

೩೨. ಸೀಮೆ ಸಾಯುಜ್ಯವ ಮೀರಿದಾತ ಗುರು. ಸೋಮ ಪ್ರಭೆಯಿಂದತ್ತತ್ತಲಾದ ಪಾವನ ಅ? ಅಕ್ಷರವರಿತನಾತ ಗುರುವಯ್ಯಾ. ನಾದ ಬಿಂದು ಕಳೆಯಾದಿಯ ರಿದಾತನು ಅಭೇದ್ಯ ಗುರು ಬಸವಣ್ಣ ಶ್ರೀ ಮಲ್ಲಿಕಾರ್ಜುನಾ.

೩೩. ಅಯ್ಯಾ ನಿನ್ನ ಕೈಯ್ಯಲ್ಲಿ ಬೆಚ್ಚಲೊಡನೆ ಅಯ್ಯಾ ಅಯ್ಯಾ ಬ್ರಹ್ಮಾಂಡಂಗಳು ತರತಳಿಸುತ್ತವೆ. ಬ್ರಹ್ಮ ಮರೆದನು. ವಿಷ್ಣು ತಾ ಕೊರಗಿದನು. ವೇದಂಗಳು ದೆಸೆದೆಸೆಗೆ ಬಾಯಿಡಲು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ನಿಮ್ಮ ಕೈಶಬ್ದವನಿತುಂಟು.

೩೪. ನಾಗೇಂದ್ರನ ವಿಷವನು ಬ್ರಹ್ಮನ ಕಪಾಲವನು ಮತ್ತೊಬ್ಬರಿಗೆ ಹಿಡಿಯ ತೀರುವದೇ? ಎಲೆ ಅಯ್ಯ, ಎತ್ತಿದರೆ ಮೇಲೇಳು ಲೋಕವನುರುಹುವದು. ಇಳುಹಿದರೆ ಕೆಳಗೇಳು ಲೋಕವನುರುಹುವದು. ಇವನೆತ್ತದೆ ಇಳುಹದೆ ಹಿಡಿದು ಕೊಂಡಾಡುವ ದೇವ ನಮ್ಮ ಕಪಿಲಸಿದ್ಧ ಮಲ್ಲಿನಾಥಯ್ಯನೆ.

೩೫. ಜಟೆಯಲ್ಲಿ ನದಿಗಳು ಕೂಡಲು ನಾಂಟ್ಯವನಾಡಿದೆ ನಾಟಕ ಸೂತ್ರಕ್ಕೆ ಅನೇಕ ಮಹಾಮಹಿಮನೆ ಕೋಟಿ ದಾನವರ ಮರುಳಾಟ ವೀರನೇ ಕೋಟಿ ಗುಣಯುತ ನಮ್ಮ ಶ್ರೀ ಗುರು ಮಲ್ಲೇಶ್ವರಾ.

೩೬. ಪಾತಾಳ ವಿತ್ತಿತ್ತ ಪಾದಂಗಳತ್ತತ್ತ. ದಶಭುಜಂಗಳತ್ತತ್ತ ಬ್ರಹ್ಮಾಂಡ ವಿತ್ತಿತ್ತ. ಮಣಿ ಮುಕುಟ ವತ್ತತ್ತ ಚನ್ನಮಲ್ಲಿಕಾರ್ಜುನಯ್ಯ ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಿ ಲಿಂಗವೆ.

೩೭. ಲಿಂಗೋದಕದಿಂದ ಅಂಗರಕ್ಷಂಗಳ ಮಾಡುವೆ. ಪ್ರಸಾದೋದಕದಿಂದೆ ಪ್ರಾಣದ ನೆಲೆಯನರಿವೆ. ...... . ......ಇಂತೀ ತ್ರಿವಿಧೋದಕದಿಂದ ಶುದ್ಧನಹೆ ಸಿದ್ಧನಹೆ ಪ್ರಸಿದ್ಧನಹೆ ಕಪಿಲ ಸಿದ್ಧಮಲ್ಲಿಕಾರ್ಜುನನಾಥನಹೆ.

## ಪಾದೋದಕ ಕ್ರಮ.

೩೮. ಅಂಗ ಲಿಂಗ ಸಂಬಂಧಿಯಾದ ಬಳಿಕ ಗುರುವಿನನುಮತದಿಂದ ಸ್ವಾನುಭವ ಲಿಂಗ ಸಂಬಂಧಿಯಾದ ಬಳಿಕ ಪ್ರಾಣವಿಪ್ಪನೆಲೆಯನರಿದು ಆ ಲಿಂಗಮಜ್ಜನೋದಕದಿಂದ ನಿನ್ನ ಕಾಯಶುದ್ಧಿ. ಆ ಲಿಂಗ ನಿರೀಕ್ಷಣೋದಕದಿಂದ ಅವಯುವ ಶುದ್ಧಿ. ಆ ಲಿಂಗ ಪ್ರಸಾದೋದಕ ನಿನ್ನ ಪರಮ ಪದವು. ಇಂತು ಪಾದೋದಕತ್ರಯದಲ್ಲಿ ಸುಖಿಯಾಗಿ ಕಪಿಲ ಸಿದ್ಧ ಮಲ್ಲಿಕಾರ್ಜುನನ ಕೂಡಿ ನಿತ್ಯವಾಗು ಸಂದಿಲ್ಲದೆ.

೩೯. ಕಲ್ಪಿತೋದಕ ಒಂದು, ಅರ್ಪಣೋದಕ ಮೂರು. ಮತ್ತ್ತ ಅಂಗೋದಕವು ತ್ರಯವಾಗಿ ಮಿಕ್ಕ ಪ್ರಸಾದೋದಕ ಅವು ಮೂರು. ಸತ್ವ ರಜ ತಮ ವನತಿಗಳೆ ದವರಿಗಲ್ಲದೆ ಹತ್ತು ಪಾದೋದಕವ ನರಿಯಲರಿದು. ತಾನು ಚಿತ್ತ ಶುದ್ಧನಾಗಿ ಗುರು ಕರುಣದಿಂದವೆ ಹತ್ತು ಪಾದೋ

ದಕವ ಗ್ರಹಿಸುವ ಭಕ್ತರಿಗೆ ಸಂದಿಲ್ಲದಿಹೆ. ಅವರು ನೀನು ಮುತ್ತು ನೀರನು ಕೂಡಿದಾನಂದದ ಭೇದದ ಒಲು ತತ್ವಮುಸಿಯುಪ್ಪನೇ ಶ್ರೀ ಗುರು ಮಲ್ಲಿಕಾರ್ಜುನಃ?

೪೦. ಮುಖದಿಂದ ಹುಟ್ಟಿಪ್ಪ ಮೂರು ಅರ್ಪಿತೋದಕದ ಒಳಗೆ ಹುಟ್ಟಿತ್ತು. ಶುದ್ಧ ಪ್ರಸಾದೋದಕ ಸದಮಲ ಜ್ಞಾನದಂಘ್ರಿಯಲ್ಲಿ ಹುಟ್ಟಿತ್ತೊಂದುದಕ. ವದನ ವೈದರದಲ್ಲಿ ಉದ್ಭವಿಸಿದವು. ತಾವು ಕರಣೇಂದ್ರಿಯಂಗಳ ನತಿಗಳೆದು ಹತ್ತನೆಯ ಪಾದೋದಕ ಕ್ರಮವಿಂತುಟು ಕಪಿಲ ಸಿದ್ಧ ಮಲ್ಲಿಕಾರ್ಜುನಾ.

೪೧. ಲಿಂಗಾಂಗಿಗಳಿಗೆ ಪಾದೋದಕವಲ್ಲದೆ ಅಂಗಭವಿಗೆ ಪಾದೋದಕವೆಲ್ಲಿಹದೊ? ಶರಣರಿಗೆ ಶಿವಾನುಭವ ಗೋಷ್ಠಿಯಲ್ಲದೆ ಶರ ತಾಗಿದವನಿಗೆ ಶಿವಾನುಭವ ಗೋಷ್ಠಿ ಎಲ್ಲಿಹುದೊ? ಲಿಂಗವಿರಹಿತರಿಗೆ ಪಾದೋದಕ ಸಲ್ಲದು ಸಲ್ಲದು. ಕೊಟ್ಟವಂಗೆ ಮುಕ್ತಿಯು ಮೊದಲೆ ಇಲ್ಲವು.

೪೨. ಆದಿ ಆಧಾರವಿಲ್ಲದಂದಿನ ಪ್ರಸಾದ, ಅಗಮ್ಯ ಅಗೋಚರ ಅಪ್ರಮಾಣವೆಂದೆನಿಸುವ ಪ್ರಸಾದ, ಅಣೋರಣೀಯಾನ್ ಮಹತೋ ಮಹೀಯಾನ್ ಎಂದೆನಿಸುವ ಪ್ರಸಾದ, ನಿಜೈಕ್ಯಂ ಪ್ರಾಣ ನಿರ್ಮಲಂ ಎಂದೆನಿಸುವ ಪ್ರಸಾದವು, ಶಿವೈಕ್ಯಂ ಸುಖಸಂಬಂಧಃ ಎಂದೆನಿಸುವ ಪ್ರಸಾದ, ಪರಮಾತ್ಮತ್ಯಮಿ ರುದ್ರಂ ಎಂದೆನಿಸುವ ಪ್ರಸಾದ, ಇನಿತಪ್ಪ ಪರಮ ಸುಖದ ಪರಮ ಪ್ರಸಾದವು ಒಂದಾಗಿ ನಿತ್ಯ ಮುತ್ತೈದೆಯ ಭಾವದಲ್ಲಿ ಶುದ್ಧವಾಯಿತ್ತಯ್ಯ ಕಪಿಲಸಿದ್ಧ ಮಲ್ಲಿನಾಥಯ್ಯ.

೪೩. ಕಾಯ ಪ್ರಸಾದವೆನ್ನ ಧನ ಪ್ರಸಾದವೆನ್ನ ಭಾವ ಪ್ರಸಾದವೆನ್ನ ಸುಯಿಧಾನ ಪ್ರಸಾದವೆನ್ನ ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಪ್ರಸಾದವ ಹಾಸಿ ಹೊದಿಸಿಕೊಂಡಿದ್ದೆನು.

೪೪. ಎನ್ನಕಾಯ ಪ್ರಸಾದವಾಯಿತ್ತು. ಎನ್ನ ಜೀವ ಪ್ರಸಾದವಾಯಿತ್ತು. ಎನ್ನ ಭಾವ ಪ್ರಸಾದವಾಯಿತ್ತು. ಎನ್ನ ಪ್ರಾಣ ಪ್ರಸಾದವಾಯಿತ್ತು. ಎನ್ನ ಕರಣೇಂದ್ರಿಯಂಗಳೆಲ್ಲವು ಪ್ರಸಾದಮಯವಾದವು ನೋಡಾ. ಘನಲಿಂಗ ಮೋಹದ ಚನ್ನಮಲ್ಲಿಕಾರ್ಜುನಯ್ಯ ನೀವೆನ್ನ ಕರಸ್ಥಲದ ಪ್ರಸಾದ ರೂಪಾದಿರಾಗಿ.

೪೫. ಮಡಿವಾಳಯ್ಯ ತನ್ನ ದೇಹವ ಕೊಟ್ಟು ಗಣಾಚಾರದ ಶಕ್ತಿ ಪ್ರಸಾದವ ಪಡೆದ. ಘಟ್ಟಿವಾಳಯ್ಯ ತನ್ನ ಮಾಯೆಯ ಕೊಟ್ಟು ಮೂಲ ಪ್ರಸಾದವ ಪಡೆದ. ಮರುಳಸಿದ್ಧಯ್ಯ ಮನವ ಕೊಟ್ಟು ಗಣ ಪ್ರಸಾದವ ಪಡೆದ. ನಾನು ಕರಣಾದಿಗಳ ಕೊಟ್ಟು ಚನ್ನಬಸವಣ್ಣನ ಪ್ರಸಾದವ ಪಡೆದು ಭವ ವಿರಹಿತನಾದೆನು ನೋಡಾ ಕಪಿಲಸಿದ್ಧ ಮಲ್ಲಿನಾಥಾ.

೪೬. ಪ್ರಸಾದ ಕಾಯನಾದ ಬಳಿಕ ರಸ ರಸಾಯನೌಷಧಿಯ ಹಂಗೇಕೊ? ಮನೋ ಇಚ್ಛೆ ಪೂರ್ಣವಾದ ಬಳಿಕ ಮಂತ್ರದ ಲಕ್ಷದ ಹಂಗೇಕೋ? ನೀನಿಲ್ಲಿಗೆ ಬಂದ ಬಳಿಕ ಪರ್ವತದ ಹಂಗೇಕಯ್ಯ ಎನಗೆ ಕಪಿಲಸಿದ್ಧ ಮಲ್ಲಿನಾಥಾ.

೪೭. ದೇವನಿಂತವನೆಂದು ನಂಬಲಾಗದಯ್ಯ. ಬಾ ಎಂದು ಹೇಳಿ ಬಯಲಾದ ದೇವನೊಳ್ಳಿದನೆ? ದೇವನಿಂತವನೆಂದು ನಂಬಲಾಗದಯ್ಯ. ತನ್ನ ಕಾರ್ಯಕ್ಕೆ ಹೆಣಗಾಡಿಸಿದ ಒಳ್ಳಿದನೆ ಕಪಿಲಸಿದ್ಧಮಲ್ಲಯ್ಯ? ನಿನ್ನ ಲೀಲೆ ತಿಳಿಯದಾರಿಂಗೆ.

೪೮. ಮಾಡಿ ಮಾಡಿ ಹೋದರು ಕೆಲಬರು. ನೋಡಿ ನೋಡಿ ಹೋದರು ಹಲಬರು. ನೀಡಿ ನೀಡಿ ಹೋದರು ಕೆಲಬರು. ನೀಡದೆ ನೋಡದೆ ಮಾಡದೆ ಹೋದವರಾರನು ಕಾಣೆ ನಿಮ್ಮ ಹೃದಯ ಕಮಲದೊಳು ಮಲ್ಲಯ್ಯ.

೪೯ ಮಾಡಿದರು ಮಾಡಿದರು ತಮ್ಮ ಹಿತಕ್ಕಲ್ಲದೆ, ಮತ್ತಾರ ಹಿತಕ್ಕಲ್ಲ ನೋಡಯ್ಯ! ನೋಡಿದರು ನೋಡಿದರು ತಮ್ಮ ಹಿತಕ್ಕಲ್ಲದೆ ಮತ್ತಾರ ಹಿತಕ್ಕಲ್ಲ ನೋಡಯ್ಯ! ತನ್ನ ಬಿಟ್ಟನ್ಯ ಹಿತವ ನೋಡಿದರೆ ಕೂಡಿಕೊಂಬ ನಮ್ಮ ಕಪಿಲಸಿದ್ಧ ಮಲ್ಲಯ್ಯನವರು.

೫೦. ಲಿಂಗವಾದ ಬಳಿಕ ಪೂಜಿಸಲಿಲ್ಲ ಜಂಗಮವಾದ ಬಳಿಕ ನೋಡಲಿಲ್ಲ. ಪ್ರಸಾದಿಯಾದ ಬಳಿಕ ರುಚಿಸಲಿಲ್ಲ. ಇಂತೀ ತ್ರಿವಿಧ ಒಂದಾದ ಬಳಿಕ ಕಪಿಲಸಿದ್ಧ ಮಲ್ಲಯ್ಯ ಬೇರೊಂದು ತಿಳಿಯಲಿಲ್ಲ.

# ಐಕ್ಯಸ್ಥಲ.

೫೧. ಪೂಜಿಸ ಹೋದರೆ ಪೂಜಾ ಪದಾರ್ಥವಿಲ್ಲದಂತಾಯಿತ್ತಯ್ಯ! ನಮ್ಮ ಚನ್ನಬಸವೇಶ್ವರನ ಗುರುವಿನ ಬೋಧೆಯಿಂದ ಮಾಡಿಸ ಹೋದರೆ ಮಾಡುವ ರೂಪು ಇಲ್ಲದಂತಾಯಿತ್ತಯ್ಯ! ಅಲ್ಲಮನ ವಚನದಿಂದ ಇದರಿರವ ತಿಳಿಯಬೇಕೆಂದು ಹೋದರೆ ಆನು ಕಾಣೆ ಕಪಿಲಸಿದ್ಧ ಮಲ್ಲಯ್ಯ.

೫೨. ಭಾವಲಿಂಗದಿಂದ ಇಷ್ಟಲಿಂಗ ಧ್ಯಾನಿಸ ಹೋದರೆ ಇಷ್ಟಲಿಂಗವೆ ಭಾವಲಿಂಗವಾಯಿತ್ತು. ಭಾವಲಿಂಗದಿಂದ ತ್ರಿವಿಧವನರಿದಿಹೆನೆಂದರೆ ಭಾವಲಿಂಗವೆ ಮಹಾಲಿಂಗವಾಗಿ ಅಳವಡಿಸಿದನು ಎನ್ನ ಗುರು ಚನ್ನಬಸವಣ್ಣನು ಕಾಣಾ ಕಪಿಲಸಿದ್ಧ ಮಲ್ಲೇಶಾ.

---

## ಸಿದ್ಧರಾಮೇಶ್ವರ ದೇವರು ಅಕ್ಕನಾಗಯನ ಲಿಂಗಪೂಜಾ ಗ್ರಹದಲ್ಲಿ ಹೋಗಿ ಹಾಡಿದ ವಚನ.

೫೩. ಅವ್ವಾ ನೀ ನೀರೆರೆದರೆ ನಾ ನೆನೆಯೆನು. ಎರೆಯದಿದ್ದರೆ ಒಣಗನು ನೋಡವ್ವಾ. ಎರೆದು ಎರೆಯದಿದ್ದರೆ ಕೂಡಿಕೊಂಡು ಮರೆವನವ್ವಾ ಕಪಿಲಸಿದ್ಧ ಮಲ್ಲಯ್ಯನವ್ವಾ.

---

## ನೀಲಮ್ಮನವರ ನೋಡಿ ಹಾಡಿದ ವಚನಗಳು.

೫೪. ಅವ್ವಾ ಅವ್ವಾ ನಾನೇನೆಂಬೆನೀ ವಿಚಿತ್ರವನು? ನೀರನೆರೆಯದೆ ಆದುದು ನೋಡವ್ವಾ ವೃಕ್ಷ. ಗಾಳಿ ಇಲ್ಲದೆ ಚಲಿಸುತ್ತಿಹುದು. ಋತುವಿದಾಗದೆ ಫಲವಾಗುವದದು ನೋಡಿ ನಮ್ಮ ಚನ್ನಬಸವಣ್ಣ ಮೊಳಕೆಯ ಚಿವಟಿ ಒಗೆವ ನೋಡವ್ವಾ. ಆದೆ ಕಪಿಲಸಿದ್ಧ ಮಲ್ಲೇಶನ ರೂಪು ನೋಡವ್ವಾ.

೫೫. ಶಬ್ದ ನೋಡುವಡೆ ನಪುಂಸಕ. ಅದರ ಕಾರ್ಯ ನೋಡುವಡೆ ಹರಿ ಹರ ಬ್ರಹ್ಮಾದಿಗಳನೆಲ್ಲ ಮುರಿದಿಕ್ಕಿತ್ತು. ಅದರಂತೆ ಹೋದರೆ ತನ್ನನು ಬಿಡದು. ತಾ ತಿಳಿದು ಹೋದರೆ ತನ್ನ ಕಡೆ ಬರದು ನೋಡಾ ಕಪಿಲಸಿದ್ಧ ಮಲ್ಲಯ್ಯ.

೫೬. ಮನೋ ಶಬ್ದ ನಪುಂಸಕ ಎಂಬ ನ್ಯಾಯಜ್ಞನ ಮಾತ ಪುಸಿಯಲ್ಲ ನೋಡಯ್ಯ. ಶಬ್ದ ನಪುಂಸಕವಾಗಿ ಕಾರ್ಯ ಪುಲ್ಲಿಂಗವಾದರೆ ಆ ಶಬ್ದ ಪಾಣಿಗೆ ತಿಳಿಯದೆ ಹೋಯಿತ್ತಯ್ಯ ಕಪಿಲಸಿದ್ಧ ಮಲ್ಲಯ್ಯ.

೫೭. ವೇದ ವೇದಾಂತವನೋದಿದರೇನು, ಮನೋಸೂತಕವಳಿಯದನ್ನಕ್ಕ? ಸಿದ್ಧ ಸಿದ್ಧಾಂತವ ಶ್ರಮ ಬಟ್ಟರೇನು ಸಾಧಿಸಿ ಕೀರ್ತಿಯ ಹಡೆಯದನ್ನಕ್ಕ? ಇವೆಲ್ಲ ಹೊರಗಣ ಮಾತು. ಮಾತೊಂದೆ. ನಮ್ಮ ಕಪಿಲ ಸಿದ್ಧ ಮಲ್ಲೇಶನಲ್ಲಿ ಸದಾಚರಣ ಸನ್ಮಾರ್ಗವಯ್ಯ.

೫೮. ವೇದ ವೇದಾಂತವನೋದಿದವರೆಲ್ಲ ನಿರಂಜನರಾದರೆ ಜನರಾರೋ? ಈ ಲೋಕದಲ್ಲಿ ಸಿದ್ಧಾಂತವ ಸಾಧಿಸಿದವರೆಲ್ಲ ದೇವರಾದರೆ ಸುರರಾರೋ? ಸ್ವರ್ಗದಲ್ಲಿ ವೇದಾಂತ ವಳವಟ್ಟಿತ್ತು. ಪ್ರಥಮರಿಗೆ ಸಿದ್ಧಾಂತವಳವಟ್ಟಿತ್ತು. ಒಬ್ಬರೊಬ್ಬರಿಗೆ ಈ ಎರಡರ ಕೀಲನಳವಟ್ಟಿತ್ತು. ಎನ್ನ ಗುರು ಚನ್ನಬಸವಣ್ಣಂಗೆ ಕಪಿಲ ಸಿದ್ಧ ಮಲ್ಲಿಕಾರ್ಜುನಾ.

೫೯. ತಿಳಿ ನೀರೆಂಬಿ. ತಿಳಿ ನೀರೆಂಬಿ. ತಿಳಿ ನೀ ಯೆಂದು ಒಂದು ದಿನ ಅಂದಿಲ್ಲೆಲೆ ಮಾನವಾ ಕ್ಷಣಕ್ಕೆ ಕ್ಷಣಕ್ಕೆ ತಿಳಿ ನೀ ಎಂದರೆ ತಳು ಹದೆ ತನ್ನ ನಿಜವ ಕೊಡನೆ ಕಪಿಲಸಿದ್ಧಮಲ್ಲೇಂದ್ರಾ.

೬೦. ಅಂಗಕ್ಕೆ ಭೋಗವ ಕೊಟ್ಟವರ ನೋಡಿದೆನಲ್ಲದೆ ಲಿಂಗಕ್ಕೆ ಕೊಟ್ಟವರ ನೋಡಲಿಲ್ಲವು ಲಿಂಗಕ್ಕೆ ಷೋಡಶೋಪಚಾರಂಗಳ ಕೊಟ್ಟವರ ನೋಡಿದೆನಲ್ಲದೆ ಮನವ ಕೊಟ್ಟವರ ನೋಡಲಿಲ್ಲ. ಮನವ ಕೊಟ್ಟವರ ನೋಡಿದೆನಲ್ಲದೆ ಮನ ಲಿಂಗವಾದವರ ನೋಡಲಿಲ್ಲ ಕಪಿಲಸಿದ್ಧ ಮಲ್ಲಯ್ಯ.

೬೧. ಉಂಡು ಉಂಡು ಹೋಗುವವರ ನೋಡಿ ನೋಡಿ ನಾಚಿತ್ತಯ್ಯ ಎನ್ನ ಮನ. ಎಡಹಿ ಎಡಹಿ ಹೋಗುವವರ ನೋಡಿ ನಾಚಿತ್ತಯ್ಯ ಎನ್ನ ಮನ. ಉಣದೆ ಎಡಹದೆ ಹೋದರೆ ಅವರೆ ಬಸವಾದಿ ಪ್ರಮಥರೆಂದೆ. ಅವರೇ ನೀನೆಂದು ಭಾವಿಸುವೆನಯ್ಯ ಕಪಿಲ ಸಿದ್ಧಮಲ್ಲಿಕಾರ್ಜುನಾ.

೬೨. ಜಲವ ತರದೆ ಪಾಕನ ಹೊತ್ತಿಸದೆ ಪಾಕವ ಮಾಡಿ, ಉಣಬಲ್ಲರೆ ಐಕ್ಯನೆಂಬೆ. ಆರೂಢನೆಂಬೆ. ಆರು ಸ್ಥಲವ ಮೀರಿದ ಮಹಾ ಯೋಗಿ ಎಂಬೆ ಕಪಿಲಸಿದ್ಧಮಲ್ಲಿಕಾರ್ಜುನಾ.

೬೩. ನೀರ ಮೇಲೆ ನಡೆಯುವವರನಂತರುಂಟು. ಖೇಚರದಲ್ಲಿ ನಡೆಯುವವರನಂತರುಂಟು. ಕಪಿಲಸಿದ್ಧ ಮಲ್ಲಿಕಾರ್ಜುನಾ ಕಾಲಿಲ್ಲದೆ ನಡೆಯು ವವರೋರ್ವರಿಲ್ಲ.

೬೪. ಮಣಿಗಳಿಗೆ ಎಜ್ಜ ಹಿಡಿಯುವರಲ್ಲದೆ ಮನಕ್ಕೆ ಎಜ್ಜ ಹಿಡಿಯುವರಾರು ಇಲ್ಲ. ವ್ಯಾಧಿಗೆ ಔಷಧವ ಕೊಡುವರಲ್ಲದೆ ಮರಣಕ್ಕೆ ಔಷಧವ ಕೊಡುವರಾರು ಇಲ್ಲ. ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ಗರ್ಭದೊಳು ಪ್ರಮಥ ಚಿಂತಾಮಣಿ ಚನ್ನಬಸವಣ್ಣನಲ್ಲದೆ ಮತ್ತಾರು ಇಲ್ಲ.

೬೫. ವೇಷದಲ್ಲಿ ಭಕ್ತನಾದರೇನು? ವೇಷದಲ್ಲಿ ಮಹೇಶನಾದರೇನು? ಗುಣವಿಲ್ಲದನ್ನಕ್ಕರ ಕ್ಷೀರಕ್ಕೂ ತಕ್ರಕ್ಕೂ ಭೇದವೇನುಂಟ ? ರುಚಿಯಿಂದಲ್ಲದೆ ರೂಪದಿಂದವೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೬. ದುಷ್ಕರ್ಮಗಳ ಮಾಡುವವರನಂತರುಂಟು. ಸತ್ಕರ್ಮಗಳ ಮಾಡುವವರೊಬ್ಬರು ಇಲ್ಲ ನೋಡಯ್ಯ ದುಷ್ಕರ್ಮವೆಂದರೆ ವಿಷಯ ವಾಸನೆ. ಸತ್ಕರ್ಮವೆಂದರೆ ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡುವ ವಾಸನೆ.

೬೭. ಅರುವತ್ತೆಂಟು ಸಹಸ್ರ ವಚನಗಳ ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯ! ಹಾಡುವದೊಂದೆ ವಚನ ನೋಡುವದೊಂದೆ ವಚನ. ವಿಷಯ ಬಿಟ್ಟು ನಿರ್ವಿಷಯ ವಾಗುವದೊಂದೆ ವಚನ ಕಪಿಲಸಿದ್ಧ ಮಲ್ಲೇಶನಲ್ಲಿ.

೬೮. ನಿರ್ವಿಷಯನಾಗಬೇಕೆಂದು ಹೇಳುವರಲ್ಲದೆ ಆದವರನು ಒಬ್ಬರನು ಕಾಣೆ ನೋಡಯ್ಯ. ಆಗುವದೆ ಆಗುವದೆ ಮಾಯಾಂಶಿಕಂಗೆ? ಆಗುವುದು ನಿಸ್ಸಂಶಿಕಂಗಲ್ಲದೆ ಇನ್ನಾರಿಗಯ್ಯ ಕಪಿಲಸಿದ್ಧಮಲ್ಲಿನಾಥಾ?

## ಪ್ರಾಣಲಿಂಗಿ ಸ್ಥಲಕ್ಕೆ ಸೇರಿದ ವಚನಗಳು.

೬೯. ಶೃತಿ ಸ್ಮೃತಿ ಪುರಾಣಾಗಮೋಪನಿಷದ್ವಾಕ್ಯವನರಿವರಲ್ಲದೆ ಶೃತ್ಯಾತೀತ ಮೂರ್ತಿಯನರಿದವರು ಒಬ್ಬರು ಇಲ್ಲ ನೋಡಯ್ಯ. ಸರ್ವಂ ಖಲ್ವಿದಂ ಬ್ರಹ್ಮವೆಂದರಿದು ಮತ್ತೇನುನರಿಯದೆ ಹೋದೆನಯ್ಯ ನಿಮ್ಮ ಮಹಾ ಬಯಲಿಲ್ಲದ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೦. ಲಿಂಗಪೂಜೆಯ ಮಾಡಿ, ಲಿಂಗದ ಕರುಣ ಹಡೆಯಿರೆಂದು ಹೇಳುವರಲ್ಲದೆ ನೀ ನಾ ಲಿಂಗಾಗೆಂದು ಹೇಳುವರಿಲ್ಲ ನೋಡಯ್ಯ ಲಿಂಗ ನೀನೆಂದು ಹೇಳುವರಲ್ಲದೆ ಲಿಂಗದ ಲೀಲೆ ಹೇಳುವರಿಲ್ಲ ನೋಡಯ್ಯ. ಲಿಂಗದ ಲೀಲೆ ಹೇಳುವರಲ್ಲದೆ ಲಿಂಗ ತಾವಾದವರಿಲ್ಲ ನೋಡಯ್ಯ ಲಿಂಗ ತಾವಾದವರು ಇಹರಲ್ಲದೆ ಲಿಂಗ ಶಬ್ದ ಮುಗ್ಧ ನಾದವರು ಒಬ್ಬರು ಇಲ್ಲ ಕಪಿಲಸಿದ್ಧಮಲ್ಲಯ್ಯ.

೭೧. ಸಿಂಹ ಮದಕರಿಯ ಮೇಲೆ ಹಾರುವದಲ್ಲದೆ, ಮದ ಮಹಿಷಿಯ ಮೇಲೆ ಹಾರುವದೆ ಅಯ್ಯ! ಪಕ್ಷಿ ಆಕಾಶದಲ್ಲಿ ಹಾರುವದಲ್ಲದೆ ಪಂಜರದಲ್ಲಿ ಹಾರದು ನೋಡಯ್ಯ! ನಮ್ಮ ಕಪಿಲಸಿದ್ಧ ಮಲ್ಲೇಶನನರಿವವರು ಜ್ಞಾನದ ಮೇಲೆ ಹಾರುವರಲ್ಲದೆ ಅಜ್ಞಾನದಲ್ಲಿ ಹಾರರು.

೭೨. ನಿತ್ಯವೆಂದರೆ ಲಿಂಗ, ಅನಿತ್ಯವೆಂದರೆ ಅಂಗ. ಮತ್ತು ನಿತ್ಯವೆಂದರೆ ಜ್ಞಾನ, ಅನಿತ್ಯವೆಂದರೆ ಅಜ್ಞಾನ. ನಿತ್ಯ ಕಾರ್ಯವು ಸತ್ಕರ್ಮ ಅನಿತ್ಯ ಕಾರ್ಯಗಳೆ ದುರ್ವಿಷಯಗಳು. ವಿಷಯಗಳೆ ನಿತ್ಯಗಳಾಗಲು ಜ್ಞಾನಿ ಎಂದು ಐಕ್ಯನೆಂದು, ಪ್ರಮಥನೆಂದು, ವೀರಶೈವನೆಂದು ಕಪಿಲಸಿದ್ಧ ಮಲ್ಲಿಕಾರ್ಜುನನೆಂದು ಬೇರೆ ಉಂಟೇನೋ ಹಾವಿನ ಹಾಳ ಕಲ್ಲಯ್ಯ.

# ವಿಭೂತಿ ಸ್ಥಲ.

೭೩. ಹಿತವಿದೆ. ಸಕಲ ಲೋಕದ ಜನ್ಮಕ್ಕೆ ಮಿತವಿದೆ. ಶೃತಿ ಪುರಾಣಾಗಮದ ಗತಿ ಇದೆ. ಭಕುತಿಯ ಬೆಳಗಿನ ಉನ್ನತಿ ಇದೆ. ಶ್ರೀ ವಿಭೂತಿಯನೊಲಿದು ಧರಿಸಿರೆ. ಭವವ ಪರಿವುದು. ದುರಿತ ಸಂಕುಳವ ನೊರಸುವುದು. ಹರನ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಲ್ಲಿರುವದು. ನಿರುತವಿದು ನಂಬು ಮನುಜಾ. ಜನನ ಭೀತಿಯು ವಿಭೂತಿ ಮರಣ ಭಯದಿಂದ ಅಗಸ್ತ್ಯ ಕಶ್ಯಪ ಜಮದಗ್ನಿಗಳು ಧರಿಸಿದರೆಂದು ನೋಡಾ ಶ್ರೀಮಲ್ಲಿಕಾರ್ಜುನನ ಒಲಿಸುವ ವಿಭೂತಿ.

೭೪. ಒಪ್ಪುವ ಶ್ರೀ ವಿಭೂತಿಯು ನೊಸಲಲ್ಲಿ ಧರಿಸಿ ದೃಷ್ಟಿವಾರೆ ನಿಮ್ಮ ನೋಡಲೊಡನೆ ಬೆಟ್ಟದಷ್ಟು ತಪ್ಪುಳ್ಳೊಡೆಯೂ ಮುಟ್ಟಲಮ್ಮವು ನೋಡಾ. ದುರಿತನ್ಯಾಯವ ಪರಿಹರಿಸಬಲ್ಲಡೆ ಓಂ ನಮಃ ಶಿವಾಯ ಶರಣೆಂಬುದೆ ಮಂತ್ರ. ॥ಶ್ಲೋ॥ ನಮಃಶಿವಾಯೇತಿ ಮಂತ್ರ ಯಃ ಕರೋತಿ ತ್ರಿಪುಂಡ್ರಕಂ॥ ಸಪ್ತಜನ್ಮ ಕೃತಂ ಪಾಪಂ। ತತ್ಕ್ಷಣಾದೇವ ನಶ್ಯತಿ॥ ಸಿಂಹದ ಮರಿಯು ಶಿಳ್ಳು ನಾಯಿ ತಿಂಬಡೆ ಭಂಗವಿನ್ನಾರದೊ ಚನ್ನಮಲ್ಲಿಕಾರ್ಜುನಾ.

೭೫. ಏಳು ಕೋಟಿ ಮಹಾಮಂತ್ರ. ಉಪಮಂತ್ರಗಳಿಗೆ ಲೆಕ್ಕವಿಲ್ಲ. ಚಿತ್ತ ವ್ಯಾಕುಳನಾಗಿ ಭ್ರಮಿಸದಿರಾ ಎಲೆ ಮನವೆ. ಶಿವಶಿವಾ ಶಿವಶಿವಾ ಶಿವಶಿವಾ ನಮೊ ನಮೊ ಶಿವಶಿವಾ ಶಿಪಶಿವಾ ನ ಶರಣೆಂದರೆ ಸಾಲದೆ? ಅದೆಂತೆಂದಡೆ ಶಿವೇತಿ ಮಂಗಲಂ ನಾಮ ಯಸ್ಯ ವಾಚಿ ಪ್ರವರ್ತತೆ ಭಸ್ಮೀ ಭವಂತಿ ತಸ್ಯಾಶುರ್ಮಹಾ ಪಾತಕ ಕೋಟಯಃ ಇಂತೆಂದುದಾಗಿ ಎನಗಿದೆ ಮಂತ್ರ ಎನಗಿದೆ ತಂತ್ರ. ಎನಗಿದೆ ಗತಿ. ಮತಿ ಚೈತನ್ಯವಯ್ಯಾ. ಸದ್ಗುರು ಚನ್ನಮಲ್ಲಿಕಾರ್ಜುನ ತೋರಿದ ಎನಗಿದೆ ಸಹಜ ಮಂತ್ರ.

೭೬. ಎಲೆ ದೇವಾ ನೀನೊಬ್ಬನೆ ಹಲವು ರೂಪಾಗಿ ಬಂದಿಯಯ್ಯ! ಭಕ್ತಿಯಲ್ಲಿ ಬಸವಣ್ಣನಾಗಿ ಬಂದಿರಿ. ಮನದ ಮೈಲಿಗೆಯ ತೊಳೆಯುವಲ್ಲಿ ಮಡಿವಾಳನಾಗಿ ಬಂದಿರಿ. ಎನ್ನ ಭಕ್ತಿಗೆ ಸೊನ್ನಲಿಗೆಯಲ್ಲಿ ಕಪಿಲಸಿದ್ಧ ಮಲ್ಲನಾಗಿ ನಿಂದಿರಿ.

೭೭. ಭಕ್ತನಾದರೆ ಬಸವಣ್ಣನಾಗಬೇಕು. ಜಂಗಮನಾದರೆ ಪ್ರಭುವಿನಂತಾಗಬೇಕು. ಭೋಗಿಯಾದರೆ ನಮ್ಮ ಗುರು ಚನ್ನಬಸವಣ್ಣನಂತಾ

ಗಬೇಕು. ಯೋಗಿಯಾದರೆ ನನ್ನಂತಾಗಬೇಕು. ನೋಡಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೮. ಧರೆ ಇಲ್ಲದೆ ಬೆಳೆಯುಬಹುದೆ ಧಾನ್ಯ? ಮಳೆ ಇಲ್ಲದೆ ನೋಡ ಬಹುದೆ ಬೆಳೆಗಳ? ಒಂದು ವಸ್ತುವಿಗಾದರೂ ದ್ವಂದ್ವವೆ ಬೇಕು. ನಮ್ಮ ಕಪಿಲಸಿದ್ಧ ಮಲ್ಲನ ನೋಡುವರೆ ಲಿಂಗಪೂಜೆ, ಜಂಗಮ ದಾಸೋಹವೆ ಬೇಕು.

೭೯. ಲಿಂಗಾಂಗ ಒಂದಾದ ಬಳಿಕ ಭಕ್ತನ ನೋಡಲಿಲ್ಲವು. ಲಿಂಗಾಂಗ ಒಂದಾದ ಬಳಿಕ ಜಂಗಮವ ನೋಡಲಿಲ್ಲವು. ಲಿಂಗಾಂಗ ಒಂದಾದ ಬಳಿಕ ಏನೆಂದರಿಯಲಿಲ್ಲವು ನೋಡಯ್ಯಾ. ಎಮ್ಮಯ್ಯ ಕಪಿಲಸಿದ್ಧ ಮಲ್ಲಯ್ಯ ಎಲ್ಲರಲ್ಲಿಯೂ.

೭೯. ಲಿಂಗಾಂಗ ಒಂದಾದುದಕ್ಕೆ ಇದೆ ಕುರುಹು ನೋಡಾ. ಅಂಗ ಗುಣಂಗಳ ಬಿಟ್ಟು ಲಿಂಗ ಗುಣಂಗಳಾದಡೆ, ಅದೆ ಲಿಂಗಾಂಗ ಸಾಮರಸ್ಯ. ಲಿಂಗ ಗುಣಗಳ ಬಿಟ್ಟು ಅಂಗ ಗುಣಗಳಾದಡೆ ಅದೆ ಯಮ ಲೋಕ ಸಾದೃಶ್ಯ. ಇದು ಪುಸಿಯಲ್ಲ. ಪುಸಿಯಲ್ಲ, ಪುಸಿಯಾದರೆ ನೀನೇಕೆ ಒಲಿಯಲಿಲ್ಲೆಮ್ಮಣ್ಣ ಬೊಮ್ಮಯ್ಯಂಗೆ ಕಪಿಲಸಿದ್ಧಮಲ್ಲಿಕಾರ್ಜುನಾ?

೮೧. ಭಕ್ತನಾದುದಕ್ಕೆ ಇದೆ ಚಿಹ್ನವು ನೋಡಾ! ಎಲೆ ದೇವಾ ಕೈಯ್ಯಲ್ಲಿರಲು ಮಾಂಸದ ಮುದ್ದೆ. ಬಾಯಲ್ಲಿರಲು ವಾರಾಂಗನೆಯ ತಾಂಬೂಲ. ಮನದಲ್ಲಿರಲು ಕತ್ರಿಯ ಭಾವ. ಕೊರಳಲ್ಲಿರಲು ಕೊರಳ. ಲಿಂಗ ದೇಹದಲ್ಲಿರಲು, ಲಿಂಗ ಲಾಂಛನ ಜಂಗಮವೆಂದು ನಂಬುವುದು ಕಾಣಾ ಕಪಿಲಸಿದ್ಧ ಮಲ್ಲಿನಾಥಾ.

೮೨. ಅವರವರ ಸದಾಚರಣೆ ಅವರವರಿಗೆ. ಅವರವರ ದುರಾ ಚರಣೆ ಅವರವರಿಗೆ. ಅವರವರ ಸದಾಚರಣೆ ನಮಗೇನು ಮೋಕ್ಷವ ಕೊಟ್ಟಿತ್ತೊ? ಅವರವರ ದುರಾಚರಣೆ ನಮಗೇನು ಭವದಲ್ಲಿ ತಳ್ಳಿ ಬಿಟ್ಟಿತ್ತೊ? ನಮ್ಮ ಲಕ್ಷ ಲಾಂಛನದಲ್ಲಿ, ನಿಮ್ಮ ಲಕ್ಷ ನಮ್ಮಲ್ಲಿ. ಇದು ಸಟೆ ಎಂದು ನುಡಿಯ ಬೇಡ ದೇವಾ! ಮಗನಿಗಾದ ನೋವು ತಾಯಿತಂದೆಗಳಿಗಾ ಗದೆ ಅನ್ಯರಿಗೆಲ್ಲಿಹದೋ? ಕಪಿಲಸಿದ್ಧ ಮಲ್ಲಯ್ಯ ನಮ್ಮ ನೋವೆ ನಿಮ್ಮ ನೋವು.

೮೩. ಭಕ್ತರಾದ ಬಳಿಕ ಆವರಿವರೆನ್ನದೆ ಮಾಡುವರಯ್ಯಾ ಪ್ರಸಂಗವ. ಭಕ್ತನಾದ ಬಳಿಕ ಅವರಿವರೆನ್ನದೆ ಶರಣೆಂದು ಮನ್ನಿಸುವುದಯ್ಯಾ. ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೪. ಭಕ್ತಿಯ ಬೆಳಸಿ ಹೇಳಿದೆನಲ್ಲದೆ, ಭಕ್ತಿಯ ಮಾಡಿ ಬೆಳೆಯಲಿಲ್ಲ ನಾನು. ಭಕ್ತಿಯ ಶಕ್ತಿ ಬಸವಣ್ಣಂಗಾಯಿತ್ತು. ಜ್ಞಾನದ ಶಕ್ತಿ ಚನ್ನಬಸವಣ್ಣಂಗಾಯಿತ್ತು. ಯೋಗದ ಸಿದ್ಧಿ ಸಿದ್ಧರಾಮಂಗಾಯಿತ್ತು ನಿಮ್ಮರಮನೆಯಲ್ಲಿ ನೋಡಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೫. ಭಕ್ತ ಭಕ್ತನ ಕಂಡಲ್ಲಿ ಕೈಮುಗಿವುದೆ ಭಕ್ತಸ್ಥಲ. ಜಂಗಮನು ಜಂಗಮನ ಕಂಡಲ್ಲಿ ಶರಣೆಂಬುದೆ ಜಂಗಮಸ್ಥಲ. ಭಕ್ತ ಜಂಗಮನೆರಡು ಬೇರುಂಟೇ? ರಸದಂತೆ ಭಕ್ತ ರುಚಿಯಂತೆ ಜಂಗಮ ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೬. ಭಕ್ತನು ಭಕ್ತಿಯಿಂದರ್ಪಣ ಮಾಡಿಸುವಡೆ ಭಕ್ತಂಗೆ ಭಕ್ತಸ್ಥಲ. ಜಂಗಮನು ಆ ಭಕ್ತನ ಭಕ್ತಿಯ ವಹಿಸಿ ಪಾದೋದಕವ ಕೊಡುವುದೆ ಆ ಜಂಗಮಕ್ಕೆ ಭಕ್ತಸ್ಥಲ. ಭಕ್ತಗಾಗಲಿ ಜಂಗಮಕ್ಕಾಗಲಿ ಭಕ್ತಿಯೇ ಬೇಕು. ಭಕ್ತಿ ಇಲ್ಲದೆ ಮೆರೆವವರು ಭಕ್ತರಲ್ಲ, ಜಂಗಮರಲ್ಲ ನೋಡಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೭. ಭಕ್ತಂಗೆ ಜಂಗಮಂಗೆ ರೂಪದಿಂದ ಭೇದವೊ? ಆಚರಣೆಯಿಂದ ಭೇದವೊ? ಅಲ್ಲಲ್ಲ. ಭಕ್ತನಾದರೂ ಮೂರರಕ್ಕೆ ಒಳಗು. ಜಂಗಮವಾದರೂ ಮೂರರಕ್ಕೆ ಹೊರಗು. ಒಳಗಾದವರಿಗೆ ಹೊರಗಾದವರ ಪಾದೋದಕವಿಲ್ಲದೆ ಒಳಗಾದವರ ಪಾದೋದಕ ಸಲ್ಲದು. ತೆಗೆದುಕೊಂಡವರಿಗೆ ನರಕ ತಪ್ಪದು. ಕೊಟ್ಟವಂಗೆಯೂ ಭವ ಹಿಂಗದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೮ ಎಲೆ ಅಯ್ಯಾ ಅವರ ಗುಣಕ್ಕೆ ಮುನಿವೆನಲ್ಲದೆ ಆವರ ರೂಪಿಂಗೆ ಮುನಿವೆನೆ? ಇಲ್ಲಿಲ್ಲ. ಅವನು ಅನಾಚಾರದಲ್ಲಿ ಆಚರಿಸಿದರೆ ತಂದೆಯು ಸದಾಚಾರಕ್ಕೆ ತರಬೇಕೆಂದು ಆತನ ಮೇಲೆ ಮುನಿವನೆ? ಇಲ್ಲಿಲ್ಲ. ನಾನಂತಾಗಬೇಕೆಂದು ಮುನಿವೆನಲ್ಲದೆ ಜಂಗಮಕ್ಕೆ ಮುನಿವೆನೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

# ಭಕ್ತಸ್ಥಲ.

೮೯. ಎಲೆ ಅಯ್ಯ ಅಯ್ಯ ಎನ್ನ ಶಿರ ನಿಮ್ಮ ಚರಣವ ಮುಟ್ಟಿದ ಬಳಿಕ ಎನ್ನಲ್ಲಿ ಗುಣದೋಷವನರಸುವರೆ? ಭೃತ್ಯಾಪರಾಧ ಸ್ವಾಮಿನೋ ದಂಡ ಕಪಿಲಸಿದ್ಧ ಮಲ್ಲಿಕಾರ್ಜುನದೇವಾ ತ್ರಾಹಿ ತ್ರಾಹಿ ಕಾಯಯ್ಯ.

೯೦. ನಿಮ್ಮ ನಿಜದಂತುವನಾರು ಬಲ್ಲರಯ್ಯ. ಚತುರ್ದಶ ಭುವನಂಗಳೆಲ್ಲವು ನಿಮ್ಮ ಕರಸ್ಥಲದೊಳಗಡಗಿಪ್ಪವಯ್ಯ. ನಿಮಗೆಣೆಯುಪ್ಪ ದೇವರುಂಟೆ ಕಪಿಲಸಿದ್ಧಮಲ್ಲಿಕಾರ್ಜುನಾ?

೯೧. ಅನಂತಕೋಟಿ ದೇವರೆಲ್ಲರು ತಂಡತಂಡದಲ್ಲಿ ಪ್ರಣಾಮಂಗೈಯ್ಯಲು ಅವರ ಮುಕುಟ ಸಂಘಟ್ಟ ರಜ ಉದುರಲಿಕ್ಕೆ ಅಲ್ಲಿ ರಜತಗಿರಿಗಳಾದವು ಕಪಿಲ ಸಿದ್ಧ ಮಲ್ಲಿಕಾರ್ಜುನದೇವಾ ನಿಮ್ಮ ಮುಂದೆ.

೯೨. ಹರಿಯೆಂಬಾತ ನಿಮ್ಮ ಚರಣವನರಿಯ. ಬ್ರಹ್ಮಯೆಂಬಾತ ನಿಮ್ಮ ಮುಕುಟವನರಿಯ. ಯತಿವ್ರತಿಗಳೆಂಬವರು ನಿಮ್ಮ ಒಳಗನರಿಯರು. ಸಮಸ್ತ ದೇವರ್ಕಳು ನಿಮ್ಮ ಪ್ರಮಾಣವನರಿಯರು. ಶತ ಕೋಟಿ ಸೂರ್ಯರು ನಿಮ್ಮ ಬೆಳಗ ಕಾಣಲರಿಯರು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೯೩. ನೆನಿಸುವೆ, ಮರಸುವೆ. ಎನ್ನ ಗುಣ ದೋಷ ನಿಮ್ಮದು ಕೇಳಯ್ಯ. ನಮ್ಮ ಬಿನ್ನಪವ. ನಿಮ್ಮ ನೆನೆವ ನಾನಲ್ಲ ಕಂಡಯ್ಯ. ನಿಮ್ಮಿಂದ ನಿಮ್ಮ ನೆನೆವೆನು. ಕೃಪೆ ಮಾಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೯೪. ಕೈಗಳ ಬಿಚ್ಚಿ ಬಿಸಾಟರೆ ಬಿಡೆನು. ಮೈಗಳ ಕಡಿದು ಹರಿದಡೆ ಬಿಡೆ ಬಿಡೆನು ನಿಮ್ಮ ಚರಣ. ನೀನು ಎನ್ನ ತನುವಳಿದರೆ ನಿಮ್ಮ ಜ್ಞಾನ ತನುವಿನಿಂದ ಹೊದ್ದುವೆನು ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೯೫. ಸ್ತೋತ್ರವೆಂಬವು ನಿನ್ನಿಂದಲಾದವು ಕಂಡಯ್ಯ. ಮೂರ್ತಿ ಎಂಬುದು ನೀನು ನೆನೆದಡಾದುದು ಕಂಡಯ್ಯ. ಆ ಮೂರ್ತಿ ಎಂಬುದು ನಿನ್ನ ಸ್ವಭಾವವು ಕಂಡಯ್ಯ. ಎನ್ನ ಹೃತ್ಕಮಲದೊಳಗೆ ಹುಟ್ಟುವ ಸ್ಮರಣೆ ತಾನೆನ್ನ ಗತಿ ನೋಡಯ್ಯ ಕಪಿಲಸಿದ್ಧಮಲ್ಲಿನಾಥಯ್ಯ ನೀನು ಸ್ತೋತ್ರ ಪ್ರಿಯನಲ್ಲದಿದ್ದರೆ ಬಾಣ ಮಯೂರ ಹಲಾಯುಧರಿಗೆ ಒಲಿದೆ ಎಂತು ಹೇಳಯ್ಯ.

೯೬. ವೇದ ಪ್ರಿಯನಲ್ಲಯ್ಯ ನೀನು. ಅವೆಲ್ಲಕ್ಕೆ ಅಸಾಧ್ಯ ಕಂಡಯ್ಯ. ನೀನು ಭಕ್ತಿಪ್ರಿಯನೆಂದು ಮೊರೆಹೊಕ್ಕೆ ಕಾಯಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೯೬ ವೇದ ಪ್ರಿಯನಾದಡೆ ಛಿದ್ರಿಸುವಿಯಾ ಬ್ರಹ್ಮನ ಮಸ್ತಕವ? ಶಾಸ್ತ್ರ ಪ್ರಿಯನಾದಡೆ ಒಳಗುವಡುವಿಯಾ ಶಬ್ದಕ್ಕೆ? ಮುಕ್ತಿಪ್ರಿಯನಾದಡೆ ಭವಕ್ಕೆ ತರುವಿಯಾ ನನ್ನ? ಭಕ್ತಿಪ್ರಿಯನಾದಲ್ಲಿ ಒಯ್ಯಲಿಲ್ಲವೆ ಬೇಡನ ಎಲೆ ಕಪಿಲ ಸಿದ್ಧಮಲ್ಲಿಕಾರ್ಜುನಾ?

೯೭. ಎನ್ನ ಕೂಪವೆಂಬುದು ನಿಮ್ಮ ಕಣ್ಣು ನೋಡಯ್ಯ. ನಾನೇತರೊಳಗೇನು ಹೇಳಯ್ಯ? ನಿಮ್ಮ ಜ್ಞಾನದ ತೇಜದ ಮುಂದೆ ಎನ್ನರಿವು ಏತರದು ಹೇಳಯ್ಯ? ಎನ್ನ ದಿಟದ ಭಕ್ತಿ ನಿಮ್ಮ ರೂಪು ಕಂಡಯ್ಯ. ಎನ್ನ ಸಟೆಯ ಭಕ್ತಿ ನಿಮ್ಮ ರೂಪು ಕಂಡಯ್ಯ. ಎನಗೆ ಬೇರೆ ಸ್ವತಂತ್ರ ಉಂಟೆ ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ?

೯೮. ಓಡಿದು ಆಗ್ರದಿಂದೆ ನೀನೆನ್ನ ಮೇಲಕ್ಕೆ ಒಲಿಸಾ. ಹೋ, ಹೋಹೆ ಕಾಣಯ್ಯ. ಕೈಯ್ಯ ಹಿಡಿದರೆ ಅಂತು ಮುರಚುವೆ. ಉದರದ ಲಪ್ಪಿ ಹಿಡಿವಡೆಂತು ಮುರಚುವೆ? ನೀನಿಂತು ಹೋಹ ಪರಿಗಳ ನಿಲಿಸುವೆನು. ಕೇಳು ಗಡಾ. ಸೂಕ್ಷ್ಮ ತನುವಿನಲ್ಲಿ ಹಿಡಿಗಡೆ ಎನ್ನ ಮುರಚುವೆ ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೯೯. ಎನ್ನನಾಗಳೆ ಬಂದಿವಿಡಿದೆ ಗಡಾ ನೀನು. ನಿಮ್ಮ ಹಿಡಿವರೆ ಹಿಡಿವರು. ತನುವಿರೆ ತನು ಬೇರಾದವರು ನಿಮ್ಮ ಹಿಡಿವರೆ ಹಿಡಿವರು. ಮನವಿರೆ ಮನ ಬೇರಾದವರು ನಿಮ್ಮ ಹಿಡಿವರೆ ಹಿಡಿವರು. ಕೈ ಇರೆ ಕೈ ಬೇರಾದವರು ಈಪುಳ್ಳವರು ಮೊದಲಾಗಿ ನಿಮ್ಮ ಹಿಡಿಯಲಾರರು. ಕಪಿಲಸಿದ್ಧ ಮಲ್ಲಿಕಾರ್ಜುನ ನಿಮ್ಮ ಹಿಡಿದು ತಡೆಯಲಾನೇತರವನಲ್ಲ. ಕರುಣದಿಂದ ಬಾರಾ ಎನ್ನ ದೇವರ ದೇವಾ.

೧೦೦. ತೆರಹಿಲ್ಲದ ಘನ ತೆರಹಿಲ್ಲದ ರೂಹಿಂಗೆ ಬಂದ ಕಾರಣವೇನು ಹೇಳಾ? ಎಲೆ ಅಯ್ಯ ಭಕ್ತಿ ಕಾರಣ ಏನು ಹೇಳಾ ಇಚ್ಛೆಗೆ ಬಂದ ಬಳಿಕ ಉಪಚಾರಕ್ಕೆ ತೆರಹುಂಟೆ ಕಪಿಲಸಿದ್ಧ ಮಲ್ಲಿನಾಥ ಬಿಜಯಮಾಡಾ ಕರುಣಿಗಳರಸಾ.

೧೦೧. ಅಯ್ಯ ಕಾಯ ಲಿಂಗವೋ? ಕಾಯದಲ್ಲಿ ಸಾರಿಪ್ಪ ಲಿಂಗ ಲಿಂಗವೊ? ಪ್ರಾಣ ಲಿಂಗವೊ? ಪ್ರಾಣದಲ್ಲಿ ಸಾರಿಪ್ಪ ಲಿಂಗ ಲಿಂಗವೋ?

ಜ್ಞಾನ ಲಿಂಗವೊ? ಜ್ಞಾನದ ಮೊನೆಯಲ್ಲಿ ಬೆಳಗುವ ಲಿಂಗ ಲಿಂಗವೋ? ಲಿಂಗ ಪ್ರಾಣ ಪ್ರಾಣ ಲಿಂಗವೆಂತೆಂದರಿಯೆನು. ನಿಮ್ಮ ಕಾಯದ ಕರಸ್ಥಲದ ಸಾರಿದ ಲಿಂಗ ಪ್ರಾಣದೊಳಗೆ ವೇದ್ಯವಾದ ಪರಿಯನುಪ ದೇಶಿಸಿ ಕೃಪೆಮಾಡಾ ಪ್ರಭುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೦೨. ಬೆಳಗು ಬೆಳಗು ಹಳಚುವಲ್ಲಿ ಕತ್ತಲೆ ಉಳಿಯಬಲ್ಲುದೆ ಅಯ್ಯಾ? ಶರಣರು ಮಹಾನುಭಾವ ಗೋಷ್ಠಿಯ ಮಾಡುವಲ್ಲಿ ಸಂಗ ದೊಳಿರ್ದವರ ಅಜ್ಞಾನವಳಿದು ನಿಜವನೈದುವರಯ್ಯ. ನಿಮ್ಮ ಮಹಾನು ಭಾವದ ಸೋಂಕಿನ ಸೆರಗಿನೊಳಗಿರ್ದ ನಾನು ಪರಮ ಸುಖಿಯಾಗಿ ಮಡಿವಾಳನ ಪಾದದಲ್ಲಿ ಮನ ಮಗ್ನವಾದೆನು ಕಾಣಾ ಕಪಿಲಸಿದ್ಧಮ ಲ್ಲಿಕಾರ್ಜುನಾ.

೧೦೩. ತನು ಉಂಟೆಂಬ ಭಾವ ಮನದಲ್ಲಿಲ್ಲವಯ್ಯ. ಮನ ಉಂಟೆಂಬ ಭಾವ ಅರುವಿನಲ್ಲಿಲ್ಲವಯ್ಯಾ. ಅರಿವು ಉಂಟೆಂಬ ಭಾವ ನುಡಿ ಒಳಗಿಲ್ಲವಯ್ಯ. ಇಂತೀ ತನು ಮನ ಜ್ಞಾನವೆಂಬ ತ್ರಿವಿಧವು ಏಕಾ ರ್ಥವಾದ ಬಳಿಕ ಆವ ತನುವಿನ ಮೇಲೆ ಸ್ವಾಯತವ ಮಾಡುವೆ? ಎನ್ನ ಕಾಯವೆ ಬಸವಣ್ಣನು. ಎನ್ನ ಪ್ರಾಣಲಿಂಗವೆ ಪ್ರಭುದೇವರು. ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಒಳಗು ಹೊರಗೆಂಬುದಿಲ್ಲ ಕಾಣಾ ಚನ್ನ ಬಸವಣ್ಣಾ.

೧೦೪. ತನುವಿದ್ದು ತನುವಿಲ್ಲ. ಮನವಿದ್ದು ಮನವಿಲ್ಲ. ಭಾವ ವಿದ್ದು ಭಾವವೆಂಬ ಬುದ್ಧಿ ಇಲ್ಲ. ನೀನೆಂಬುದುಂಟಾಗಿ ಭೃತ್ಯಾಚಾರ ವಿಲ್ಲ. ತಾನೆಂಬುದುಂಟಾಗಿ ಅಹಂಕಾರವಿಲ್ಲ. ಕಪಿಲಸಿದ್ಧಮಲ್ಲಿನಾಥಯ್ಯ ನಲ್ಲಿ ಲಿಂಗ ಸಂಗ ನಿರ್ಲೇಪನೆಂಬುದನಿದಿರಿಂಗೆ ನುಡಿದುದ ಹೇಳಬಾ ರದು ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ.

೧೦೫. ಪುಣ್ಯಪಾಪಂಗಳನರಿಯದ ಮುನ್ನ ಅನೇಕ ಭವಂಗಳಲ್ಲಿ ಬಂದು ನಿಮ್ಮ ನಿಲವನರಿಯದೆ ಕೆಟ್ಟೆನಯ್ಯ. ಇನ್ನು ನಿಮ್ಮ ಶರಣುವೊಕ್ಕೆ ನಾಗಿ ನಾ ನಿಮ್ಮನೆಂದು ಅಗಲದಂತೆ ಮಾಡಾ ಅಯ್ಯಾ. ನಿಮ್ಮ ಧರ್ಮ ನಿಮ್ಮ ಧರ್ಮ. ನಿಮ್ಮಲ್ಲಿ ಒಂದು ಬೇಡುವೆ. ಎನ್ನ ಕರ್ಮದ ಬಂಧನ ಬಿಡುವಂತೆ ಮಾಡಾ ಅಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ.

೧೦೬. ಎಂದಿಪ್ಪೆನಯ್ಯ ನಿಮ್ಮ ಗಣಂಗಳ ಸಮೂಹದಲ್ಲಿ? ಎಂದಿ ಪ್ಪೆನಯ್ಯ ಕೀಳಲಾಯ್ದು? ಎಂದಿಪ್ಪೆನಯ್ಯ ಕಿಂಕರನಾಗಿ? ಎಂದಿಪ್ಪೆ

ನಯ್ಯ ನಿಮ್ಮ ನಾಮ ಡಿಂಗರಿಗನಾಗಿ? ಎಂದಿಪ್ಪೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ?

೧೦೭. ಎಂದಿಪ್ಪೆನಯ್ಯ ಶುದ್ಧ ಸಿದ್ಧ ಪ್ರಸಿದ್ಧ ಪ್ರವೇಶಿಸಿ? ಎಂದಿಪ್ಪೆನಯ್ಯ ಭಕ್ತಿ ಜ್ಞಾನ ವೈರಾಗ್ಯ ಸಂಪನ್ನನಾಗಿ? ಎಂದಿಪ್ಪೆನಯ್ಯ ತತ್ವಾತತ್ವ ತೂರ್ಯ ಸೀನೆಯಾಗಿ? ಎಂದಿಪ್ಪೆನಯ್ಯ ದೀಕ್ಷಾತ್ರಯದಲ್ಲಿ ಸಂಪನ್ನನಾಗಿ? ಎಂದಿಪ್ಪೆನಯ್ಯ ಲಿಂಗತ್ರಯದಲ್ಲಿ ಪ್ರಸಾದ ಸಂಪನ್ನನಾಗಿ? ಎಂದಿಪ್ಪೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ನಿಮ್ಮವರ ನಡುವೆ ಓರಂತೆ?

೧೦೮. ಒಡೆಯರುಳ್ಳ ತೊತ್ತಾನು. ತಾಯಿಯುಳ್ಳ ಶಿಶುವಾನು. ಸ್ವತಂತ್ರವೇಕಯ್ಯ? ನಿನ್ನವರ ನಡುವೆ ಎನಗೆ ನಿನ್ನವರು ಒಲ್ಲದಿದ್ದ ದುಃಖವನು ಮಾರಿವೆ ನಾನು. ನಿನ್ನವರಾಜ್ಞೆಯ ಮೀರಿದೆನಾಯಿತ್ತಾದಡೆ ನಿನ್ನಾಣೆಯಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೧೦೯. ಆವಾಗಳು ನಿನ್ನವರುಗಳು ನೀನೆಂಬ ಮನವ ಅತಿ ಉನ್ನತೋನ್ನತವ ಕೊಡು ಕಂಡ್ಯಾ ಎಲೆ ಅಯ್ಯ. ನಿಮ್ಮ ಧರ್ಮವಯ್ಯ. ನಿನ್ನ ಲಾಂಛನವ ಕಂಡು ತಾತ್ಪರ್ಯವೆಂದು ನಂಬುವ ಮನಸಿಂಗೆ ಮಂಗಳವನೀಯಯ್ಯ ನಿನ್ನವರ ಸಹ ಲೋಕದಲ್ಲಿ ಅವರ ಕಿಳಿಲ ಕಾಯ್ದಿರ್ಪ ಸ.ಕೃತವನು ತಪ್ಪದೆ ಕೊಡು ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿಮ್ಮ ಧರ್ಮ.

೧೧೦. ಹಿಂದೆ ಬಯಿಸಿದೆ ಕಾಳುತನದಲ್ಲಿ. ಎನ್ನ ಮಂದಮತಿಯ ನೋಡಿರಯ್ಯ ಕೆರೆ ಬಾವಿ ಹೂದೋಟ ಚಾಕ ಛತ್ರಂಗಳ ಮಾಡಿ. ದೈವಂಗಳ ಮೇಲೆ ಕೃಪೆಯುಂಟೆಂದು ಅನ್ನದಾನಿ ಎಂಬರು. ಆನು ದಾಸಿಯಲ್ಲವಯ್ಯ. ನೀ ಹೇಳಿದಂದೆ ನಾ ಮಾಡಿದೆನು. ನೀ ಬರಹೇಳಿದಲ್ಲಿ ನಾ ಬಂದೆನು. ನೀ ಇರಿಸಿದಂತೆ ಇದ್ದೇನೆ. ನೀನು ಇಚ್ಛಾಮಾತ್ರ ಮೀರಿದೆನಾಯಿತ್ತಾದಡೆ ಫಲಪದ ಜನನವ ಬಯಸಿದೆನಾದಡೆ ನಿಮ್ಮಾಣೆ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಭವಕ್ಕೆ ಬರಿಸದಿರಯ್ಯ.

೧೧೧. ಮಾಡಿಸಯ್ಯ ಎನಗೆ ನಿನ್ನವರ ಸಂಗವ ಮಾಡಿಸಯ್ಯ. ಮಾಡಿಸಯ್ಯ ಎನಗೆ. ನಿನ್ನವರ ಆನಂದವ ನೋಡಿಸಯ್ಯ. ನಿನ್ನವರ ಕೂಡ ಸಂಗವ ಮಾಡಿಸಯ್ಯ. ಎನಗೆ ಬಚ್ಚಬರಿಯ ಭಕ್ತಿಯನು ಕೊಡಿಸಯ್ಯ. ಎನಗೆ ಪಾದೋದಕ ಪ್ರಸಾದವ ನೊಚ್ಚತವ ಸಲಿಸಯ್ಯ.

ನಿಮ್ಮವರ ಕೂಡ ಸಿಕ್ಕಿ ಇರಿಸಯ್ಯ. ನಿನ್ನ ಪಾದ ಕೆಳಗೆ ನಿತ್ಯವಾಗಿ ಬರಿಸಯ್ಯ ಎನ್ನ ಭವಭವದಲ್ಲಿ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನೀನು ಇಂತು ಕೆಡಿಸಯ್ಯ ಎನ್ನ ಭವಭವದ ಹುಟ್ಟು.

೧೧೨. ನುಡಿಯುಬಹುದು ಅದ್ವೈತವನೊಂದು ಕೋಟಿ ವೇಳೆ. ಒಮ್ಮೆ ನುಡಿಯುಬಹುದೆ ಅದ್ವೈತವನೊಂದುಕೋಟಿ ವೇಳೆ? ಒಮ್ಮೆ ನುಡಿಯುಬಹುದೆ ನಿರ್ಧಾರವಾಗಿ ಸದ್ಭಕ್ತಿ ಸದಾಚಾರವನು? ನುಡಿದಂತೆ ನಡೆವ ನಡೆದಂತೆ ನುಡಿವ ಸದ್ಭಕ್ತಿ ಸದಾಚಾರಯುಕ್ತ ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯ ಪ್ರಭುವೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ

೧೧೩. ಇನಮಂಡಲದೊಳಗೆ ಕಿರಣವಡಗಿಪ್ಪಂತೆ, ಫಲವಹ ಬೀಜದಲ್ಲಿ ವೃಕ್ಷವಡಗಿಪ್ಪಂತೆ, ಇಂದು ಕಾಂತ ರವಿಕಾಂತದಲ್ಲಿ ಜಲಬಿಂದು ಅಗ್ನಿ ಇಪ್ಪಂತೆ, ಸಂದ ಕ್ಷೀರದಲ್ಲಿ ಹೊಂದಿ ದಧಿ ತಕ್ರ ನವನೀತ ಘೃತವಿಪ್ಪಂತೆ, ಅಂಗದ ಮೇಲೆ ಲಿಂಗ ಸಾಹಿತ್ಯವಾಗಿ ತನ್ನೊಳಗೆ ಆ ಲಿಂಗವ ಕಂಡು ಲಿಂಗದೊಳಗೆ ತನ್ನ ಕಂಡು ತನ್ನೊಳಗೆ ಸಮಸ್ತ ವಿಸ್ತಾರವನೆಲ್ಲವ ಕಂಡು ಜಂಗಮ ಮುಖ ಲಿಂಗವೆಂಬ ಭೇಧವನು ಲಿಂಗಕ್ಕೆ ಜಂಗಮವೆ ಪ್ರಾಣವಾಗಿಪ್ಪ ಭೇದವನು ಅಂಗದೊಳಗೆ ಲಿಂಗವೆ ಆಚಾರವಾಗಿ ಅಳವಟ್ಟ ವಿವರವನು ಲಿಂಗಾಂಗ ಸ್ಥಲ ಸಂಬಂಧ ಸ್ಥಳಕುಳಂಗಳ ವಿವರವಾಗಿ ಇದ್ದಿತೆಂಬುದನು ಕಂಗಳ ನೋಟಕ್ಕೆ ಗುರುವಾದ ಲಿಂಗವೆ ಅಂಗವನೊಳಕೊಂಬ ಭೇದವನು ಸಂಗನಬಸವಣ್ಣ ಚನ್ನಬಸವಣ್ಣನಿಂದೆ ಕೃಪೆ ಮಾಡಿಸಿ ಎನ್ನನುಳುಹು ಪ್ರಭುವೇ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಯ್ಯ.

೧೧೪. ಬಡವ ನಿಧಾನ ಕಂಡಂತೆ ಹಾರುವ ಮಾಳವ ಕಂಡಂತೆ ಶಿಸು ತನ್ನ ತಾಯು ಕಂಡಂತೆ ವೀರ ತಾನು ಪರಸೇನೆಯ ಕಂಡಂತೆ ತಾನು ಚನ್ನಬಸವಣ್ಣನ ಪಾದ ಕಮಲವ ನೋಡಿ ಹರುಷಿತನಾದೆ. ಮಾಡಿ ಮಾಡಿಸಾ ಉಪದೇಶ. ನೋಡಿ ನೋಡಿಸಾ ಮಹಿಮೆಯು. ಇದರದ್ಭುತವೇಕೆಂದರೆ ಕೊಡಿಸಾ ಎನ್ನ ಕೈಯ್ಯಲ್ಲಿ ಇಷ್ಟಲಿಂಗವ ಪರಮ ಪ್ರಭುವೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೧೧೫. ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶ ಘನವೆಂದು ನಂಬಿದೆನಯ್ಯ ನಂಬಿದೆನಯ್ಯ. ಈ ಎರಡರ ಬೋಧೋದ್ಧಾರಕೆ ಚನ್ನಬಸವಣ್ಣನೆ ಘನ ಗುರು. ಘನ ಲಿಂಗ ಘನ ಜಂಗಮ

ವೆಂದು ನಂಬಿದೆನಯ್ಯ. ಇದನಲ್ಲೆಂದರೆನ್ನ ಗುಣವೆನ್ನನೆ ಸುಡಲೀಯ್ಯದೆ ಅಲ್ಲಯ್ಯ ಕಪಿಲಸಿದ್ಧಮಲ್ಲಯ್ಯ?

೧೧೬. ಎಲ್ಲ ಪ್ರಮಥರು ಲಿಂಗವ ಧರಿಸುತ್ತಿರಲಾನೇನು ಒಲ್ಲೆನೆಂಬುವದು ಕರ್ಮದ ಬಲೆಯೋ? ಮಾಯದ ಬಲೆಯೊ? ಎಲೆ ಕಪಿಲ ಸಿದ್ಧಮಲ್ಲಯ್ಯ ನಾ ಧರಿಸಿಕೊಂಬುವೆ ಲಿಂಗವ. ನೀ ಕರಿಸಿಕೊಂಬುವನಾಗು ಮತ್ತೋರ್ವನ ನಿನ್ನ ಪೂಜೆಗೆ ನಾ ನಿನ್ನವನಲ್ಲೆಲೆ ದೇವಾ.

೧೧೭. ವ್ಯಾಧಿ ಹೋಗುವ ಪರಿಯಂತರ ರಸ ರಸಾಯನದ ಹಂಗೇಕಯ್ಯ? ಕ್ಷುತ್ಪಿಪಾಸೆಯಡಗುವ ಪರಿಯಂತರ ಅನ್ನೋದಕದ ಹಂಗೇಕಯ್ಯ? ನಾ ಲಿಂಗ ಸಂಬಂಧಿಯಾಗುವ ಪರಿಯಂತರ ನಿಮ್ಮ ಹಂಗಿನವನಯ್ಯ ಎಲೆ ಕಪಿಲಸಿದ್ಧಮಲ್ಲಿನಾಥಾ.

೧೧೮. ಹಾರುವೆ ಹಾರುವೆನಯ್ಯ. ಮೂರರ ಮನೆಯ ನೋಡುವೆ ನೋಡುವೆನಯ್ಯ. ಆರರ ಮನೆಯ ಕೊಡುವೆ ಕೂಡುವೆನಯ್ಯ. ಈರಾರ ಮನೆಯ ಆಡುವೆ ಆಡುವೆನಯ್ಯ. ಕಪಿಲಸಿದ್ಧ ಮಲ್ಲಯ್ಯ, ಮತ್ತೂ ಮೂರರಲ್ಲೆ.

೧೧೯. ನದಿಯು ನೀರು ಹೋದವಯ್ಯ ಸಮುದ್ರಕ್ಕೆ. ಸಮುದ್ರದ ನೀರು ಬಾರವಯ್ಯ ನದಿಗೆ. ನಾವು ಹೋದೆನಯ್ಯ ಲಿಂಗದ ಕಡೆಗೆ. ಲಿಂಗ ಬಾರದು ನೋಡಯ್ಯ ನಿನ್ನ ಕಡೆಗೆ. ಮಗ ಮುನಿದರೆ ತಂದೆ ಮುನಿಯನು. ನಾ ಮುನಿದರೆ ನೀ ಮುನಿಯೆ ನೋಡಯ್ಯ ಕಪಿಲ ಸಿದ್ಧ ಮಲ್ಲಿನಾಥಾ.

೧೨೦. ಸ್ಥೂಲದೇಹ ತೊಳೆವರೇನು? ಸೂಕ್ಷ್ಮ ದೇಹ ಶುದ್ಧವಾದರೇನು, ಕಾರಣಾತೀತ ನಾಗದನ್ನಕ್ಕ? ಎಲೆ ಕಪಿಲ ಸಿದ್ಧ ಮಲ್ಲಿಕಾರ್ಜುನಾ ನಾ ಯೋಗಿಯಾದರೇನು ಮನ ಒಲಿದು ಚನ್ನಬಸವಣ್ಣ ಲಿಂಗವ ಕೊಡದನ್ನಕ್ಕ?

೧೨೧. ಏನೆಂಬೆ, ಏನೆಂಬೆ ಕೊಟ್ಟ ದೇವರಂದವ? ಮನದಲ್ಲಿ ಘನ ಲಿಂಗವಾಯಿತ್ತು. ಧ್ಯಾನದಲ್ಲಿ ಭಾವಲಿಂಗವಾಯಿತ್ತು. ನೇತ್ರದಲ್ಲಿ ಶಿವ ಲಿಂಗವಾಯಿತ್ತು. ಹೃದಯದಲ್ಲಿ ಮಹಾಲಿಂಗವಾಯಿತ್ತು. ಎನ್ನ ಕರ ಸ್ಥಲದಲ್ಲಿ ಇಷ್ಟಲಿಂಗವಾಗಿ ಆಳವಟ್ಟಿತ್ತು. ಎಲೆ ಕಪಿಲಸಿದ್ಧ ಮಲ್ಲಿಕಾ

ರ್ಜುನಾ ಎಲ್ಲ ಕಡೆಯಲ್ಲಿ ಪರಾತ್ಪರ ವಸ್ತುವಾಗಿ ಚನ್ನಬಸವಣ್ಣನಾಗಿ ನಾನು ಮರೆದೆನಯ್ಯ. ಎನ್ನ ನಾಮವ ನೋಡಯ್ಯ ಪ್ರಭುವೆ.

೧೨೨. ಇನ್ನಾಡುವೆ ಇನ್ನಾಡುವೆ ಮನಬಂದ ಪರಿಯಲ್ಲಿ. ಅದಕ್ಕೆ ನೀವು ಸಂದೇಹಗೊಳ್ಳದಿರಿ. ಪ್ರಮಥರಿರಾ ಸಂದೇಹವುಳ್ಳರೆ ಜಂಗಮವಲ್ಲ. ಸಂದೇಹನೆ ಲಿಂಗವಾದ ಬಳಿಕ ಇನ್ನೆಲ್ಲಿಹದಯ್ಯ ಇನ್ನೆಲ್ಲಿಹದಯ್ಯ ಸಂಕಲ್ಪ ವಿಕಲ್ಪವು ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೧೨೩. ಎರಡಳಿದು ಒಂದಳವಟ್ಟುದೆ ಭಕ್ತಿಸ್ಥಲ. ಮೂರಳಿದು ಎರಡಳವಟ್ಟುದೇ ಜಂಗಮಸ್ಥಲ. ಈ ಎರಡಳಿದು ನಿಂದುದೆ ಪ್ರಾಣಲಿಂಗಿ ಸ್ಥಲ ನೋಡಯ್ಯ ಗುರುವೆ, ಸುರತರುವೆನ್ನ ಕಾಮಧೇನುವೆ, ಕೈಲಾಸದ ಮಹಾಲಿಂಗ ಮೂರ್ತಿಯೇ, ಈ ಲೋಕದ ಜ್ಞಾನಮೂರ್ತಿಯೇ, ಕಪಿಲ ಸಿದ್ಧ ಮಲ್ಲೇಶನೇ, ಚನ್ನಬಸವಣ್ಣನೇ.

೧೨೪. ಮೂರಳಿದು ಮೂರಳವಟ್ಟುದೆ ಭಕ್ತಸ್ಥಲ. ಮೂರಳಿದು ಮೂರಳವಟ್ಟುದೇ ಜಂಗಮಸ್ಥಲ. ಅಳಿದು ಎಂದರೆ ಇದ್ದಮನ ಲಿಂಗಕ್ಕೆ ಕೊಟ್ಟಾಗಳೆ ಮಣ್ಣಳಿದುದು. ಇದ್ದ ಧನ ಜಂಗಮಕ್ಕೆ ಕೊಟ್ಟಾಗಳೇ ಹೊನ್ನಳಿದುದು. ಇದ್ದ ತನು ಗುರುವಿಗೆ ಕೊಟ್ಟಾಗಳೇ ಹೆಣ್ಣಳಿದುದು. ಅವರವರಾಚರಣೆಯ ನೋಡಿ ಕೊಡುವುದಲ್ಲದೆ ಬೇಡಿದ ಪರಿಯಲ್ಲಿ ಕೊಡುವದೇನೊ? ಅಯ್ಯ ಸಿಂಧು ಬಲ್ಲಾಳ ತನ್ನ ವಧುವ ಕೊಟ್ಟನೆಂದು ಹೇಳಿದಲ್ಲಿ ತನ್ನ ಹೆಂಡತಿಯನೇನಾದರೂ ಕೊಟ್ಟನೆ? ಇಲ್ಲಿಲ್ಲ. ಹೆಣ್ಣು ಎಂದರೆ, ತಾನು ಶರಣಸತಿ ಲಿಂಗಪತಿ ಎಂಬ ಭಾವದಿಂದ ಲಿಂಗಕ್ಕೆ ಮನ ಕೊಟ್ಟು ವಧುವಾದನಲ್ಲದೆ ತನ್ನಂಗನೆಯ ಕೊಡಲಿಲ್ಲವು. ಹೆಣ್ಣು ಎಂದರೆ ತನ್ನ ತನುವ ಗುರುವಿಗೆ ಕೊಟ್ಟು ಸ್ವಯಂಭುವಾದನಲ್ಲದೆ ತನ್ನಂಗ ನೆಯ ಕೊಡಲಿಲ್ಲವು. ಹೆಣ್ಣು ಎಂದರೆ ಜಂಗಮಕ್ಕೆ ಧನವ ಕೊಟ್ಟು ನಿಧಿನಿಧಾನಬಲ್ಲವಾದನಲ್ಲದೆ ತನ್ನಂಗನೆಯ ಕೊಡಲಿಲ್ಲವು. ಹೆಣ್ಣು ಸಲ್ಲದು ಜಂಗಮಕ್ಕೆ. ಹೊನ್ನು ಸಲ್ಲದು ಲಿಂಗಕ್ಕೆ. ಮಣ್ಣು ಸಲ್ಲದು ಗುರುವಿಗೆ. ಇದರ ಭೇದವನಂತ ಉಂಟು. ತಿಳಿವಡೆ ಬಹು ದುರ್ಲಭ. ತಿಳಿದು ನೋಡಿದಡೆ ಭಕ್ತಿಗೆ ಬಹು ಸುಲಭ. ತಿಳಿದು ಮಾಡಿ ಮೋಕ್ಷವ ಹಡೆ ದರಲ್ಲದೆ ತಿಳಿಯದೆ ಮಾಡಲು, ಅವರೇನು ಮರವಿನೊಳಗಿರುವ ಭಂಗಾ ರವಾಗಲಿ, ಸಮುದ್ರದೊಳಗಿರುವ ನಿಧಿನಿಧಾನಗಳಾಗಲಿ ತಂದಿಹರೇನೊ?

ಕಪಿಲಸಿದ್ಧಮಲ್ಲಿಕಾರ್ಜುನ ಇದರಿರವ ಹೇಳಿಕೊಡಯ್ಯ ಎನ್ನ ಪ್ರಾಣಗುರು ಚನ್ನಬಸವಣ್ಣನಿಂದ.

೧೨೫. ಮಾದಾರನಲ್ಲಿ ಉಂಡ ಶಿವನು. ನೀವೇಕೆ ಉಣ್ಣೆಸಿರಿ ಎಂದು ಕೇಳಿದರೆ ಕೊಡುವೆನುತ್ತರವ, ಕೇಳಿರೆಲೆ ಮನುಜರಿರಾ. ಮಾದಾರನಲ್ಲುಂಡ ಶಿವನು ಮೇದಾರನಲ್ಲಿಗೆ ಬಂದಲ್ಲಿ ರೂಪವಳಿದು ರೂಪಾಗಿ ಬಾ ಎಂದನಲ್ಲದೆ ಸಮರಸವ ಮಾಡಲಿಲ್ಲವು. ಮೇದಾರನಲ್ಲುಂಡು ಮಾದಾರನ ಮನೆಗೆ ಬಂದರೆ ರೂಪಳಿದು ರೂಪಾಗಿ ಬಾ ಎಂದನಂದು ಚನ್ನನು. ಶಬ್ದಸೂತಕ ಶರಣರಿಗಲ್ಲದೆ ಸೂತಕರಿಗೆಲ್ಲಿಹದೊ ಕಪಿಲಸಿದ್ಧಮಲ್ಲಿಕಾರ್ಜುನಾ? ನಿಮ್ಮ ಲೀಲೆ ನಿಮಗಲ್ಲದೆ ನಮಗೇಕಯ್ಯ ಈ ಜನರರಿಯದವರು.

೧೨೬. ಶಿವನು ಚನ್ನನ ಮನೆಯಲ್ಲಿ ಅಂಬಲಿಯನುಂಡನೆಂದರೆ ನಮ್ಮ ಗಣಂಗಳು ನಗುವರಯ್ಯ. ಕೈಬಡೆದು ಕೈಬಡೆದು ನಗುವರಯ್ಯ. ಶಿವನಾಚರಣೆ ಶಿವನಿಗೆ ಇರಲಿ. ನಮಗೇಕೆಂದರು? ಶಿವನು ಉತ್ಪತ್ತಿ ಸ್ಥಿತಿಲಯಂಗಳಿಗೆ ಕರ್ತನು. ನಾವು ಉತ್ಪತ್ತಿ ಸ್ಥಿತಿ ಲಯಂಗಳಳಿಯಬೇಕೆಂದು ಬಂದೆವಲ್ಲದೆ ಅವರಲ್ಲಿ ವಾಕ್ಸಾಮರಸ್ಯವಲ್ಲದೆ ಕಾಯಸಾಮರಸ್ಯವು ಇಲ್ಲವು. ಶಬ್ದವಿರಹಿತನಾಗಬೇಕೆಂಬವಂಗೆ ಶಬ್ದಸೂತಕವೇಕಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೧೨೭. ಅಧ್ಯಾತ್ಮ ಆಧ್ಯಾತ್ಮವೆಂದೆಂಬಿರಿ. ಆಧ್ಯಾತ್ಮವಾರಿಗೆ? ಶ್ರೀಗುರುಸ್ವಾಮಿ ಬಹಳವಪ್ಪ ಶಿವಲಿಂಗ ಸೂಕ್ಷ್ಮವ ಮಾಡಿ ಕರಸ್ಥಲದಲ್ಲಿ ಕೊಟ್ಟ ಬಳಿಕ ಬೇರೆ ಯೋಗವುಂಟೇ? ತನ್ನ ಹಸ್ತವ ಮಸ್ತಕದಲ್ಲಿಟ್ಟು ವಾಯು ಪ್ರಾಣಿಯಾಗಿದ್ದುದ ಕೊಂದು ಲಿಂಗ ಪ್ರಾಣಿಯ ಮಾಡಿದ ಬಳಿಕ ಅಕ್ಷರೈದರಲ್ಲಿ ಮುಕ್ತನ ಮಾಡಿದ ಬಳಿಕ ಮರಳಿ ಯೋಗವುಂಟೇ ಶಿವಯೋಗವಲ್ಲದೆ? ಲಿಂಗಾರ್ಚನೆಯ ಮಾಡಿ ಜಂಗಮ ಪ್ರಸಾದವ ಕೊಂಡ ಬಳಿಕ ಮರಳಿ ಬರಿಯ ಯೋಗಕ್ಕೆ ಒಡಂಬಡುವನೆ ಅರಿವು? ಇಂತಪ್ಪ ವನತಿಗಳೆದು ಶುದ್ಧ ಶಿವಯೋಗವ ಮಾಡಿದಾತ ಚನ್ನಬಸವಣ್ಣ ಮಹಾಲೋಕದಲ್ಲಿಪ್ಪ ಅಧ್ಯಕ್ಷರ ದ್ವಯವ ಭೇದಿಸಿ ತಂದು ಕರಸ್ಥಲದಲ್ಲಿರಿಸಿ ಇದು ಉರುತರ ಪದವೆಂದು ತೋರಿಕೊಟ್ಟ ಎನ್ನ ತನ್ನಂತೆ ಮಾಡಿದ ಗುರುವೆ ಚನ್ನಬಸವಣ್ಣ ಆನು ಚನ್ನಬಸವಣ್ಣನ ಕರುಣದಿಂದ ಅಭ್ಯಾಸ

ಯೋಗವನತಿಗಳಿದು ಶಿವಯೋಗದಲ್ಲಿ ನಿತ್ಯನಾಗಿ ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂಬ ಷಟ್ಸ್ಥಲಕ್ಕೆ ಅಧಿಕಾರಿಯಾದೆ. ನಿನ್ನ ವರ ಸಲುಗೆಗೆ ಸಂದೆ, ಚನ್ನಬಸವಣ್ಣನ ಕೃಪೆ ಎನ್ನನಿಂತು ಮಾಡಿತ್ತು ಕಾಣಾ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೨೮. ಹೆಸರಿಡಬಾರದ ಲಿಂಗವ ಹೆಸರಿಟ್ಟು ಎನ್ನ ಕರಸ್ಥಲಕ್ಕೆ ತಂದು ಕರತಳಾಮಳಕದಂತೆ ಮಾಡಿ ಎನ್ನ ಕರಸ್ಥಲಕ್ಕೆ ಕ್ರಿಯಾಲಿಂಗವ ಕೊಟ್ಟು ಶ್ರೀಗುರು ಚನ್ನಬಸವಣ್ಣ ಹೆಸರಿಟ್ಟ ಲಿಂಗದ ಹೆಸರ ಹೇಳು ವೆನು ಕೇಳಯ್ಯ. ಕಂಜ ಕರ್ಣಿಕೆಯು ಹಣೆಯಲ್ಲಿ ವಿಹತ್ತವವಸವೆಂದು ಬರೆದ ಐದಕ್ಷರವೇ ಆತನ ಪ್ರಥಮನಾಮ. ಅವ್ಯಯ ಕರದೊ ಳಿಪ್ಪ ಆರಕ್ಷರ ಆತನ ದ್ವಿತೀಯ ನಾಮ. ಅವ್ಯಯ ಆನಂದ ಮಸ್ತಕ ಮೊಳಿಪ್ಪ ಅಕ್ಷರವೆ ಆತನ ಆಚಾರ್ಯನಾಮ. ಇಂತೀ ನಾಮತ್ರಯಂಗಳ ನರಿದು ಧ್ಯಾನಾ ರೂಢನಾಗಿ ಮಾಡುವರು ಇತ್ತಾನಿಕೊಬ್ಬರು. ಈ ಬಸ ವಣ್ಣ ಮೊದಲಾದ ಪುರಾತರು ಆ ಅವ್ಯಯ ಅನುಮತದಿಂದ ಲಿಂಗಾರ್ಚ ನೆಯ ಮಾಡಿ ನಿತ್ಯ ನಿಜನಿವಾಸಿಗಳಾದರು. ಆ ಶರಣರ ಅನುಮತದರು ವಿನ ಉಪದೇಶವ ಕೇಳಿ ಎನ್ನಗಿನ್ನಾವುದು ಹದನವಯ್ಯ ಎಂಬ ಚಿಂತೆಯ ಬಿಟ್ಟು ಕಪಿಲಸಿದ್ಧ ಮಲ್ಲಿಕಾರ್ಜುಯ್ಯನ ಕೈಯಲ್ಲಿ ಪಿಡಿದೆನು.

೧೨೯ ಆದಿ ಆಧಾರವಿಲ್ಲದಂದಿನ, ಸಾದಾಖ್ಯ ದೇಹವಿಲ್ಲದಂದಿನ, ಸೀಮೆ ಸಂಬಂಧಗಳಿಲ್ಲದಂದಿನ, ಅನಾದಿ ಸಂಸಿದ್ಧನ ಆಗು ಮಾಡಿ ಹೆಸ ರಿಟ್ಟು ಕರಸ್ಥಲಕ್ಕೆ ತಂದು ಕೊಟ್ಟ ಗುರುಚನ್ನಬಸವಣ್ಣನಯ್ಯ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ.

೧೩೦. ಇಹಲೋಕ ಪರಲೋಕವೆಂಬ ಸಂದಳಿಯಿತ್ತಯ್ಯ. ಗುರು ವಿನ ಹಸ್ತದಲ್ಲಿ ಸತ್ತು ಪಂಚಾಕ್ಷರಿಯಿಂಪೆತ್ತಿದ ಕಾರಣದಲ್ಲಿ ನಿತ್ಯವು. ಲಿಂಗಾರ್ಚನೆಯ ಮಾಡುವ ಕಾರಣದಲ್ಲಿ ನಿತ್ಯವು. ವಿಭೂತಿ ರುದ್ರಾ ಕ್ಷಿಯ ಧಾರಣ ಮಾಡುವ ಕಾರಣದಲ್ಲಿ ಇಹಲೋಕವೆಂದೆನು. ಹಂಗು ಹರಿದು ಒಂದಾದ ಬಳಿಕ ಮಲತ್ರಯಂಗಳು ಹರಿದು ನಾನು ನೀನಾದ ಬಳಿಕ, ಎಲೆ ಅಯ್ಯ, ಭಕ್ತರ ಸರ್ವಾಂಗ ಲಿಂಗ ತನು ಭಕ್ತರಿಪ್ಪ ಲೋಕವೇ ರುದ್ರಲೋಕ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೧೩೧. ಶುದ್ಧವನರಿದೆ ಚನ್ನಬಸವಣ್ಣ ನಿಮ್ಮಿಂದೆ. ಸಿದ್ಧವನರಿದೆ ಚನ್ನಬಸವಣ್ಣ ನಿಮ್ಮಿಂದೆ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಚನ್ನಬಸ

ವಣ್ಣ ಗುರುವಾಗಿ ಬಂದು ಎನ್ನ ಜನ್ಮಕರ್ಮವ ನಿವೃತ್ತಿಯ ಮಾಡಿದನು. ಬದುಕಿದೆನಯ್ಯ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ.

೧೩೨. ರೂಪಿಂಗೆ ರೂಪು, ಜ್ಞಾನಕ್ಕೆ ದಾನ, ಪ್ರಾಣಕ್ಕೆ ಪ್ರಸಾದ ಲಿಂಗತ್ರಯವ ತಂದು ಅವರವರ ಕರದಲ್ಲಿ ದೀಕ್ಷೆಯ ಮಾಡಿದ ಚನ್ನಬಸವಣ್ಣ ಕಪಿಲಸಿದ್ಧಮಲ್ಲಿಕಾರ್ಜುನಾ.

೧೩೩. ಎಂದೊ ಎನಗೆ ಶಿವಪದ ಎಂದು ಚಿಂತಿಸುವಂಗೆ ಮುಂದು ತೋರುತ್ತಿದೆ ಪ್ರಸಾದದ ಬೀಡು. ಆ ಬೀಡು ಕಂಡು ಶಿವಗಣಂಗಳ ನೆರವ ಮಾಡಿಕೊಂಡು ಪರಮ ಗುರು ಚನ್ನಬಸವಣ್ಣನ ಶ್ರೀಪಾದಾರವಿಂದವನರಿದು ಅವರ ಕೃಪಾವಲೋಕನದಿಂದ ನಿಮ್ಮ ಶ್ರೀಪಾದವನರಿದೆ ಕಪಿಲಸಿದ್ಧಮಲ್ಲಿನಾಥಯ್ಯ.

೧೩೪. ಎನ್ನ ಜನನವು ಇಲ್ಲ. ಮುನ್ನವೆ ಸಂದಳಿದೆ. ಕಳುಹಿದಂತೆ ಉನ್ನತೋನ್ನತನಾದೆ. ಚನ್ನಬಸವಣ್ಣನ ಕರುಣದಿಂದೆ ನಿನ್ನ ರೂಪಾದೆ. ಇನ್ನೆನಗೆ ಅರಿವು ಉಂಟೇ ಕಪಿಲಸಿದ್ಧ ಮಲ್ಲಿಕಾರ್ಜುನಾ?

೧೩೫ ಎನ್ನ ತನ್ನವನೆನಿಸಿ ಮನ್ನಿಸಿದ ಭಕ್ತಿಯೊಳು ಸನ್ನುತನು. ಆದೆನ್ನೈ ಸಕಲದೊಳಗೆ. ಬಿನ್ನಾಣ ದೇಹವನು ತನ್ನಂತೆ ಮಾಡಿದನು ಚನ್ನಬಸವಣ್ಣನೈ ಶ್ರೀಗುರು ಮಲ್ಲಿಕಾರ್ಜುನಾ.

೧೩೬. ಕರಂಗಳೆ ಮನೆಯಾಗಿ ಕರಂಗಳಾಗಿ ಅರ್ಪಿಸುವ ಭೇದವನಾರು ಬಲ್ಲರಯ್ಯ ಚನ್ನಬಸವಣ್ಣನಲ್ಲದೆ? ತನ್ನ ಪ್ರಾಣ ಇಷ್ಟಲಿಂಗ ಸಂಬಂಧಿಯ ಇಂದ್ರಿಯಂಗಳೈದು ಮುಖಂಗಳಾಗಿ ಅರ್ಪಿಸುವ ಭೇದವನಾರು ಬಲ್ಲರಯ್ಯ ಚನ್ನಬಸವಣ್ಣನಲ್ಲದೆ? ಆನಂದ ಸ್ಥಾನದ ಅನುಮಿಷಾಕ್ಷದ ಸಂಯೋಗ ಅರ್ಪಣದ ಭೇದವ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ ಚನ್ನಬಸವಣ್ಣ ಬಲ್ಲ. ಮಿಕ್ಕಿನವರಿಗೆ ಸಾಮಾನ್ಯವೆಂಬೆನಯ್ಯ.

೧೩೭. ಭಕ್ತಿವಿಡಿದು ಭಕ್ತನಾದ. ಪ್ರಸಾದವಿಡಿದು ಧೈರ್ಯವಿಡಿದು ಆ ಭಕ್ತಂಗೆ ಪ್ರಸಾದಿಯಾದ ಪ್ರಸಾದಿ. ಕರ್ಮರಹಿತನಾಗಿ ಕಾಲ ಕಲ್ಪಿತವಿಲ್ಲದ ಆ ಭಕ್ತಂಗೆ ಪ್ರಾಣಲಿಂಗಿಯಾದ ಪ್ರಸಾದಿ. ಪತಿಭಕ್ತಿವಿಡಿದು ಕಾಮಮೋಕ್ಷಂಗಳಾಶೆಯಂ ನಿವೃತ್ತಿಯಂ ಮಾಡಿದ ಆ ಭಕ್ತಂಗೆ ಐಕ್ಯನಾದ ಪ್ರಸಾದಿ. ನಮ್ಮ ಕಪಿಲಸಿದ್ಧಮಲ್ಲಿನಾಥನಲ್ಲಿ ಸರ್ವಕ್ಕೆ ಚೈತನ್ಯವಾದ ನಮ್ಮ ಚನ್ನಬಸವಣ್ಣನೆಂಬ ಅಚ್ಚಪ್ರಸಾದಿ.

೧೩೮. ಮೂರು ಲಿಂಗಕ್ಕೆ ಮೂಲಮಂತ್ರವಾದಾತ ಗುರು. ಮೂರು ವಿದ್ಯಕ್ಕೆ ವಿದ್ಯಾರೂಪವಾದಾತ ಗುರು. ಒಡ್ಡಿದ ಪ್ರಪಂಚವನತಿಗಳೆದು ರೂಪಿಯ ರೂಪವಾದಾತ ಗುರು ಲೋಕತ್ರಯಕ್ಕೆ ಕಪಿಲಸಿದ್ಧಮಲ್ಲಿ ಕಾರ್ಜುನಯ್ಯ ಗುರು.

೧೩೯. ಐದು ಬ್ರಹ್ಮದಲ್ಲಿ ಅಯ್ಯ ನೀನು ಅತಿಶಯ ಜ್ಯೋತಿ ರ್ಮಯನು. ಆನಂದ ಸ್ಥಾನದಲ್ಲಿ ಅಯ್ಯ ನೀನು ಅತಿಶಯ ನಿತ್ಯಮ ಯನು. ಬಾಹ್ಯಾಭ್ಯಂತರದಲ್ಲಿ ಪರಿಪೂರ್ಣನು. ಎನ್ನ ಆಧಿಕ್ಯವನರಿ ಯಲ್ಕೆ ನಿಗಮಕ್ಕಭೇದ್ಯ. ಗುರುವಿನ ಕರುಣದಿಂದ ಎನ್ನ ಕರಸ್ಥಲದಲ್ಲಿ ಸಿಕ್ಕಿ ಒಳಗಾದೆ ಮಹಾಲಿಂಗ ಕಪಿಲಸಿದ್ಧಮಲ್ಲಿಕಾರ್ಜುನಾ.

೧೪೦. ಭೇದಿಸಬಾರದೆ ಇಪ್ಪ ಅಭೇದ್ಯ ಶಿವನೆ ನಿನ್ನ ಭೇದಿಸಿ ತಂದು ಕೊಟ್ಟನೆನ್ನ ಗುರು. ಇನ್ನು ನಾ ಬಿಡುವೆನೆ? ಬಿಡೆನು. ಮಚ್ಚಿದೆ ಪಾದೋದಕವ ನಚ್ಚಿದೆ ಪ್ರಸಾದವ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ.

೧೪೧. ಸೀಮೆ ಸಂಬಂಧಕ್ಕೆ ಮೀರಿಪ್ಪ ಮಂತ್ರಕ್ಕೆ ರಾಜಮಂತ್ರವು ತಾನು. ಪಂಚಾಕ್ಷರಿ ಪಂಚಾಕ್ಷರಿ ಗುಣದ ಬಸವಾಕ್ಷರತ್ರಯದ ಧ್ಯಾನ ಮೌನದ ಗುಣದ ಸತ್ವವಿಡಿದು ಆನಂದ ತ್ರೈಲಿಂಗ ಮೂಲಮಂತ್ರಕ್ಕೆ ಬಸ ವಾಕ್ಷರ ತ್ರಯವು ಮಾತೆಯಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೪೨. ದೆಸೆ ದಿಗ್ವಳಯದಲ್ಲಿ ಪಸರಿಸಿ ಪರ್ಬಿತ್ತು ನಿನ್ನ ನಾಮ. ವಸುಧೆ ಎಲ್ಲವು ಹೆಣ್ಣು ನೀನೆ ಗಂಡು. ಬಸವಾಕ್ಷರತ್ರಯದಿಂದುದ್ಭವಿಸಿ ಸಕಲ ಬ್ರಹ್ಮಾಂಡಗಳಾದವೈ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೪೩. ಮುನ್ನ ಮುನ್ನ ಶಶಿರವಿಗಳಿಲ್ಲದ ಮುನ್ನ, ಬ್ರಹ್ಮ ವಿಷ್ಣ್ವಾ ದಿಗಳುದ್ಭವಿಸದ ಮುನ್ನ ಮುನ್ನ, ಮೂರ್ತಿಗಳೆಂಟು ಒಂದಾಗದ ಮುನ್ನ, ತನುಮಧ್ಯವಳಯದಲ್ಲಿ ಸಕಲ ಬ್ರಹ್ಮಾಂಡ ಜಲಮಯವಾಗಿಪ್ಪಲ್ಲಿ, ಭಕ್ತಿ ಕಾರಣ ಬಸವನವಗ್ರಹಿಸಿಪ್ಪಲ್ಲಿ ಅಂದೆತ್ತಲಿದ್ದೆ. ಅದ ನೀನೆ ಬಲ್ಲೆಯಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಕುರುಹುಗೆಟ್ಟ ನಿಶ್ಚಿಂತನು.

೧೪೪. ಇಂದ್ರಾದಿ ದೇವತಾ ಸಂಕುಳಕೆ ಅಂತಪ್ಪ ಪದವನಿತ್ತಾತ ಬಸವಣ್ಣನಯ್ಯ. ಬ್ರಹ್ಮಾದಿ ದೇವತಾ ಮೊದಲಾದ ಜನ್ಮಕ್ಕೆ ಅಂತಪ್ಪ ಪದವನಿತ್ತಾತ ಬಸವಣ್ಣನಯ್ಯ. ಶಿವಲಿಂಗ ಭಕ್ತರಿಗೆ ಚರಲಿಂಗದಾಚರ

ಣೆಯ ಪರಿಯಾಯದಿಂದಳೆರೆದಾತ ಗುರು. ಇಹಪರದನುವಿಷದ ಶುದ್ಧಿ ಯನರಿದಾತ ಗುರು ಬಸವಣ್ಣನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೧೪೫. ಪ್ರಸಾದ ವೈದ ಪಾದೋದಕವೆರಡೈದರ ಆದಿ ಅಕ್ಷರದಲ್ಲಿ ದೀಕ್ಷಾತ್ರಯವು ನಾದದಿಂದವೆ ತೂಗಿ ಬಿಂದು ಸಮನಿಸದೀಗ. ಆಧಾರ ಸ್ಥಾನಕ್ಕೆ ಅತ್ಯತಿಷ್ಠ ಮೂಲಸ್ಥಾನದಲ್ಲಿ ಮುನ್ನೂರ ಕಮಲಕ್ಕೆ ಆದಿ ಭ್ರಮ ರನು ಬಸವ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೪೬. ಅಣ್ಣನ ನೋಡಿದರೆ ಲೋಕಕ್ಕೆ ಜಗದ ಕಣ್ಣು ಮದವ ಕಳೆದನು. ಮುಕ್ಕಣ್ಣಸಿಪ್ಪೆಡೆಯ ತೋರಿದ. ಅಣ್ಣ ಬಸವಣ್ಣ ವಾಙ್ಮ ನಕ್ಕಗೋಚರ ಮುಕ್ಕಣ್ಣನ ಅವತಾರಂಗಳನು ನಾ ವಿವೇಕದಿಂದರಿದು ಮೆರೆದ. ಸತ್ಯಶುದ್ಧ ನಿರ್ಮಳ ಕೈವಲ್ಯ ವಾಙ್ಮನಸಗೋಚರ ಸತ್ಯಶುದ್ಧ ಬಸವಣ್ಣ ಅಣ್ಣ ನಿಮ್ಮಿಂದ ಶುದ್ಧವ ಕಂಡೆ ಸಿದ್ಧವ ಕಂಡೆ ಪ್ರಸಿದ್ಧವ ಕಂಡೆ ಆರರಲ್ಲಿ ಆಂದೋಳವಾದೆ ಆರು ವ್ರತದಲ್ಲಿ ನಿಪುಣನಾದೆ. ನೀನೊಂದು ಮೂರಾದೆ ಮೂರೊಂದಾಗಿ ತೋರಿದ ಗುಣವಿಂತುಟಯ್ಯ ಬಸವಣ್ಣ. ಇನ್ನೇನಗಾಧಿಕ್ಯವಲ್ಲದೊಂದಿಲ್ಲ. ನಾ ನಿಮ್ಮ ವರ್ಣಿಸಿ ಹರಿವೆ. ಹರಿದು ಭರದಿಂದೆ ಗೆಲುವೆ ತತ್ವಮೂವತ್ತಾರರಮೇಲೆ ಒಪ್ಪಿಪ್ಪ ತತ್ವಮಸಿಯ ನೈದವೆ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಎನಗರಿದಪ್ಪುದಿಲ್ಲ ಕಾಣಾ ಬಸ ವನ ಪ್ರಸಾದದಿಂದ.

೧೪೭. ಲೋಕ ಲೌಕಿಕಗಳೆಲ್ಲ ನೀವು ಕೇಳಿರೆ. ಏಕೈಕ ರುದ್ರನ ವತಾರನರಿದೆವೆಂಬಿರಿ. ನೋಡಿ ನಚ್ಚಿರೆ ಶಿವನ. ಶಿವನು ಬಸವಣ್ಣನಾದ ನೋಡಿರೆ. ಬಸವಣ್ಣ ಗುರುವಾದ. ಬಸವಣ್ಣ ಲಿಂಗವಾದ. ಬಸವಣ್ಣ ಚರವಾದ. ಬಸವಣ್ಣ ಪರಿಣಾಮ ಪ್ರಸನ್ನ ಪರವಾದ. ಬಸವಣ್ಣ ಮೂಲತ್ರಯವಾದ. ಬಸವಣ್ಣ ಭಕ್ತಿ ಎರಡತೆಯಾದ. ಬಸವಣ್ಣ ಆರರ ಮೇಲೆ ತೋರಿದ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಬಸವಣ್ಣನ ಪ್ರಸಾ ದವ ಕೊಂಡು ಭವ ನಾಸ್ತಿಯಾದೆ.

೧೪೮. ಸೀಮೆ ಮೀರಿದ ಸಂಬಂಧನೆ ಸಂಬಂಧದಲ್ಲಿ ಸಮನಿಸದ ಸಂಯೋಗನೇ ಎನ್ನ ಸಲಹುವ ಗುರುಲಿಂಗಜಂಗಮ ಪಾದೋದಕ ಪ್ರಸಾದಕ್ಕೆ ಅರ್ಹನ ಮಾಡಿದೆ. ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ, ನೀ ಬಸವನಾಗಿ ಬಂದು ನಿನ್ನವರಿಗೆ ಯೋಗ್ಯನ ಮಾಡಿದೆ. ಭವವ ತಪ್ಪಿಸಿದೆ.

೧೪೯. ಗುರುವಾಗಿ ಬಂದು ಎನಗೆ ದೀಕ್ಷೆಯ ಮಾಡಿದಿರಿ. ಲಿಂಗವಾಗಿ ಬಂದೆನ್ನ ಮನದ ಮಲಿನವ ಕಳೆದಿರಿ. ಜಂಗಮವಾಗಿ ಬಂದೆನ್ನ ಪ್ರಪಂಚುಕತನವ ಕಳೆದು ಪರಮ ಸೀಮೆಯ ಮಾಡಿದಿರಿ. ಇಂತಿವೆಲ್ಲವೂ ಬಸವಣ್ಣನಾಗಿ ಎನಗೆ ಪ್ರಸಾದವ ನೀಡಿ ಸಲಹಿದ ಕಪಿಲಸಿದ್ಧ ಮಲ್ಲಿಕಾರ್ಜುನ ಇನ್ನೆನಗತಿಶಯವು ಇಲ್ಲ.

೧೫೦. ಅರ್ಪಿತ ಅವಧಾನ ಮುಖಂಗಳು ಎಲ್ಲರಿಗೆ ಸುಲಭವೆ? ಅನಾದಿ ಸಂಸಿದ್ಧವಾಗಿ ಬಂದ ಬಸವಣ್ಣಂಗಲ್ಲದೆ ತ್ರೈಲಿಂಗದ ಮೂಲಕ್ಕೆ ಮಂತ್ರಾದಿ ರೂಪ ಬಸವಣ್ಣ ಲಿಂಗಪ್ರಸಾದಕ್ಕೆ ಅರ್ಹ ಬಸವಣ್ಣ ಮೂರು ಲಿಂಗ ಒಂದಾದ ಮೂರ್ತಿ ಬಸವಣ್ಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ ನೀ ಸಾಕ್ಷಿಯಾಗಿ ಬಸವನ ನೆನೆವರು ನೀನಹರು.

೧೫೧. ಪ್ರಥಮಕ್ಕೆ ನಾಮಕ್ಕೀಗ ಬಸವಾಕ್ಷರವೇ ಬೀಜ. ಗುರು ನಾಮ ಮೂಲಕ್ಕೆ ಅಕ್ಷರಾಂಕ ಬಸವಣ್ಣ ಬಸವಣ್ಣ ಬಸವಣ್ಣ ಎಂದೀಗ ದೆಸೆಗೆಟ್ಟೆನಯ್ಯಾ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೫೨. ಆದಿ ಆಧಾರಕ್ಕೆ ಮೂಲ ತಾ ಬಸವಣ್ಣ ಹೋದನ್ಯೆ ಭಕ್ತಿಯೊಳಗೆ ಹೊಲಬು ದಪ್ಪಿ. ಊರನರಿಯದ ಗ್ರಾಮ ಹೊಲಬುದಪ್ಪಿದ ಸೀಮೆ ಆತನಾನತದಿಂದೆ ನೀನಾದೆನ್ಯೆ. ಬಸವಣ್ಣ ಬಸವಣ್ಣನೆಂಬ ನಾಮಾಕ್ಷರದೊಳಗೆ ದೆಸೆಗೆಟ್ಟೆನ್ಯೆ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೫೩. ಶುದ್ಧ ಸಿದ್ಧ ಪ್ರಸಿದ್ಧದ ನೆಲೆಯನರಿದಿಹೆನೆಂದು ತೊಳಲಿ ಬಂದೆ ಗಿರಿಗಹ್ವರದೊಳಗೆ. ಕಂಡೆ ಕಾಣೆನೆಂಬ ಸಂಶಯವಾಯಿತ್ತು. ಅದೇನು ಕಾರಣ? ನಿನ್ನವರ ಗಣಸಮೂಹಕ್ಕೆ ತಾತ್ಪರ್ಯವ ಒಲ್ಲರಾಗಿ ನೀನು ಸದ್ಭಕ್ತ ದೇಹಿಕನಾಗಿ ಸದ್ಭಕ್ತರಲ್ಲಿ ಒಚ್ಚತವಾಗಿಪ್ಪೆಯಾಗಿ ಇಪ್ಪಗಿರಿ ಗಹ್ವರದಲ್ಲಿ ಗುರುವಿನ ಕರುಣದಿಂದ ಕಂಡೆನೇನಿಪ್ಪೆ ನೆಲೆಯ ಶುದ್ಧವ ಲಿಂಗದಲ್ಲಿ ಸಿದ್ಧವ ಗುರುವಿನಲ್ಲಿ ಪ್ರಸಿದ್ಧವ ಜಂಗಮದಲ್ಲಿ ಕಂಡೆನರಿದೆ ನಚ್ಚಿದೆ ಮಚ್ಚಿದೆ. ಎನ್ನ ಸರ್ವ ಸ್ವಾಯತವ ನೊಚ್ಚಗೊಟ್ಟು ನಿನ್ನ ಗಣ ಸಮೂಹಕ್ಕೆ ಪ್ರಾಪ್ತನಾದೆ. ನಿನ್ನ ಭಕ್ತರ ಸಲುಗೆಗೆ ಸಂದೆ ಕಪಿಲಸಿದ್ಧ ಮಲ್ಲಿಕಾರ್ಜುನ ತಂದೆ.

೧೫೪. ಸೋಹಂ ನೀನೆ ಎಲೆ ಅಯ್ಯಾ. ಕೋಹಂ ತತ್ವ ತೂರ್ಯಾ ತೀತನು ನೀನೆ ಅಯ್ಯಾ. ನಾಹಂ ನಾಹಂ ನೀನೆ ಅಯ್ಯಾ. ಆನೆಂಬುದು

ಭ್ರಾಂತು ಎಂಬೆ. ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ ಗುರುವಿನ ಕೈಯ್ಯಲು ನಾನು ಸತ್ತು ಹುಟ್ಟಿದ ಬಳಿಕ ಆನು ನೀನೆಂಬ ಸಂದಳಿದೆ.

೧೫೫. ಅಂಗೈಯ್ಯ ನೋಟದೊಳು ಕಂಗಳ ನೆಟ್ಟು ಕಂಗಳ ತೇಜ ಹಿಂಗದು. ಲಿಂಗ ಪ್ರಭೆಯೊಳಗೆ ಅಂಗವೆಲ್ಲ ಲಿಂಗಲೀಯವಾಗಿ ಸಂಗ ನಿಸ್ಸಂಗವೆಂಬ ದಂದುಗ ಹರಿದು ಹಿಂದು ಮುಂದೆಂಬ ಭಾವ ವಳಿವುದು. ನಿಂದ ನಿಜದಲ್ಲಿ ನಿರಾಳದಲ್ಲಿ ಪ್ರಾಣಸಮರತಿಯಾಗಿ ಕಪಿಲ ಸಿದ್ಧಮಲ್ಲಿಕಾರ್ಜುನನಲ್ಲಿ ಪ್ರಭುದೇವರ ಪಾದಕ್ಕೆ ನಮೋ ನಮೋ ಎಂದು ಬದುಕಿದೆನು ಕಾಣಾ ಎನ್ನ ಗುರು ಚನ್ನ ಬಸವಣ್ಣನವರೆ.

೧೫೬. ವಾಣಿ ನಾಲ್ಕರ ಮೇಲೆ ಮಾಣದೆ ನುಡಿವ ನಿರ್ವಾಣಿಯ ಸಂಭಾಷಣೆಯ ಮಾಡಬಲ್ಲರೆ ನಿರ್ವಾಣವೇಳರೊಳಗೆ ಪರಿಪೂರ್ಣವಾಗಿರ್ಪ ಮಹಾವರ್ಣವ ತನ್ಮಯ ಮಾಡಬಲ್ಲರೆ ನಿರ್ವಾಣಸ್ಥಾನಹತ್ತರಲ್ಲಿ ಆನಂದ ಸಿಂಹಾಸನ ನಾನಾ ಬೆಳಗಿನ ಬೀಜದ ತಿರುಳನನುಭವಿಸಬಲ್ಲರೆ ಲಿಂಗಾನುಭಾವಿ. ಪ್ರಾಣ ಮಹತ್ತರದಲ್ಲಿ ಧ್ಯಾನಚತುಷ್ಟಯ ಕೂಡಿದಲ್ಲಿ ಸಕೀಲ ಬಲ್ಲರೆ ಲಿಂಗೈಕ್ಯ. ಇದು ಕಾರಣ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದನು.

೧೫೭. ಭಕ್ತರೂಪ ಬಸವಣ್ಣ ಗುರುರೂಪ ಚನ್ನಬಸವಣ್ಣ ಪ್ರಸಾದ ರೂಪು ಚನ್ನಬಸವಣ್ಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಪ್ರಭುವಾಗಿ ಬಂದು ಬಸವಣ್ಣ ಚನ್ನಬಸವಣ್ಣನ ಒಕ್ಕಪ ಕಂಡು ಜಂಗಮವಾದನು.

೧೫೮. ನಿಮ್ಮ ಮಹಿಮರು ನಿಮ್ಮ ಮಹಿಮೆಯ ತಿಳಿಯರು ನೋಡಯ್ಯ. ನಿಮ್ಮ ಸತ್ವವೇ ಬಸವಣ್ಣನು ನಿಮ್ಮ ಜ್ಞಾನವೇ ಚನ್ನಬಸವಣ್ಣನು ನಿಮ್ಮ ರಾಣಿಯರೇ ಅಕ್ಕನಾಗಮ್ಮನು ನಿಮ್ಮ ಮಹತ್ವವೆ ಪ್ರಭುದೇವನು ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೫೯. ಮರ್ಮವನರಿತು ಅಯ್ಯ ನಿಮ್ಮ ಕೊಂಬುವರು ಸುಲಭವೆ? ಲೋಕದಲ್ಲಿ ಲಿಂಗಭಕ್ತಿ ಜಂಗಮಭಕ್ತಿ ಗುರುಭಕ್ತಿ ಸುಲಭವೆ? ಲಿಂಗಭಕ್ತ ಪ್ರಭುದೇವರು ಜಂಗಮಭಕ್ತ ಬಸವಣ್ಣನು. ಗುರು ಮೊದಲಾದವರ ಪ್ರಸಾದ ಸರ್ವಕ್ಕೆ ಅನುಭಾವಿ ಚನ್ನಬಸವಣ್ಣ ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯ ಇಂತಿವರ ಪಾದಕ್ಕೆ ನಮೋ ನಮೋ ಎಂಬೆನು.

೧೬೦. ಎಲೆ ಎಲೆ ಲಿಂಗವೆ ನಾನಂದೆ ಬರಲಿಲ್ಲ ಕಲ್ಯಾಣಕ್ಕೆ. ಎಲೆ ಎಲೆ ಲಿಂಗವೆ ನಾನಂದೆ ಬರಲಿಲ್ಲ ಮಾರ್ಗಕ್ಕೆ. ಎಲೆ ಎಲೆ ಲಿಂಗವೆ ನಾನಂದೆ ಚನ್ನಬಸವಣ್ಣನಾಗಲಿಲ್ಲ ಲಿಂಗವೆ ಲಿಂಗವೇ ಕಪಿಲಸಿದ್ಧಮಲ್ಲಿ ಕಾರ್ಜುನಾ.

೧೬೧. ಗುರುವಿನ ಕೃಪೆಯಿಂದ ಸಾಧಾರಣ ತನುವ ಮರೆದೆ. ಗುರುವಿನ ಕೃಪೆಯಿಂದ ಶುದ್ಧಸಿದ್ಧ ಪ್ರಸಿದ್ಧ ಪ್ರಮಾಣವನರಿದೆ. ಎನಗಾಧಿಕ್ಯವಪ್ಪ ವಸ್ತು ಬೇರೊಂದಿಲ್ಲ. ಅದೇನು ಕಾರಣ? ಅವನಾದೆನಾಗಿ ಗುರುವೆ ಎನ್ನ ತನುವಿಂಗೆ ಲಿಂಗದೀಕ್ಷೆಯು ಮಾಡಿ ಎನ್ನ ಜ್ಞಾನಕ್ಕೆ ಸ್ವಾನುಭವ ದೀಕ್ಷೆಯು ಮಾಡಿ ಎನ್ನ ತನುಮನಧನದಲ್ಲಿ ವಂಚನೆ ಇಲ್ಲದೆ ಮಾಡಲೆಂದು ಜಂಗಮದೀಕ್ಷೆಯು ಮಾಡಿ ಎನ್ನ ಸರ್ವಾಂಗವು ನಿನ್ನ ಪವಿತ್ರಮಸ್ಥಾನ ಶುದ್ಧ ಮಂಟಪವಾದ ಕಾರಣ ವ್ಯಾಪ್ತಿಯನರಿಯದೆ ಲೋಕ ಎನ್ನೊಳಗಾಯಿತ್ತು ಆ ಲೋಕಕ್ಕೆ ಹೊರಗಾದೆನಾಗಿ. ಅದೇನು ಕಾರಣ? ಜನನ ಮರಣ ಪ್ರಳಯಕ್ಕೆ ಹೊರಗಾದೆನಾಗಿ. ಗುರುವೆ ಸದ್ಗುರುವೆ ಎನ್ನ ಭವದ ಬೇರು ಹರಿವೆ ಗುರುವೆ. ಭವಪಾಶ ವಿಮೋಚನನೆ ಅವ್ಯಯ ಮನದ ಸರ್ವಾಂಗ ಲೋಲುಪ್ತ ಭುಕ್ತಿ ಮುಕ್ತಿ ಫಲಪ್ರದಾಯಕ ಗುರುವೆ ಬಸವಣ್ಣ ಕಪಿಲಸಿದ್ಧಮಲ್ಲಿಕಾರ್ಜುನಾ ಚನ್ನಬಸವಣ್ಣನಾಗಿ ಪ್ರಭು ಮೊದಲಾಗಿ ಅಸಂಖ್ಯಾತರೆಲ್ಲರನು ತೋರಿದ ಗುರುವೆ.

೧೬೨. ಆಯಿತ್ತಾಯಿತ್ತು ಫಲವಿಲ್ಲದ ವೃಕ್ಷ. ಆಯಿತ್ತಾಯಿತ್ತು ಪದವಿಲ್ಲದ ಫಲ. ಆಯಿತ್ತಾಯಿತ್ತು ಸೀಮೆಯು ಮೀರಿದ ಸಂಬಂಧ. ಆಯಿತ್ತಾಯಿತ್ತು ಅನ್ವಯದಲ್ಲಿ ಆಂದೋಳ. ಆಯಿತ್ತಾಯಿತ್ತು ನಿತ್ಯದಲ್ಲಿ ಭಕ್ತಿ. ಆಯಿತ್ತಾಯಿತ್ತು ಭಕ್ತಿಯಲ್ಲಿ ವೈರಾಗ್ಯ. ಆಯಿತ್ತಾಯಿತ್ತು ವೈರಾಗ್ಯದಲ್ಲಿ ಅನುಗುಣ. ಆಯಿತ್ತಾಯಿತ್ತು ಸ್ವಾನುಭವ. ಸ್ವಾನುಭವದಲ್ಲಿ ಸಕಲಭಕ್ತಿ ಸಕಲ ಭಕ್ತಿಯಿಂದ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಸಂಯೋಗ ಬಸವಣ್ಣಂಗೆ.

೧೬೩. ಅಯ್ಯ ನಿಮ್ಮ ಶರಣ ಬಸವಣ್ಣನಿಂದೆ ಲಿಂಗವ ಕಂಡು ಒಳಗೆ ಬಚ್ಚಿಟ್ಟುಕೊಂಡೆನಯ್ಯ. ನಿಮ್ಮ ಶರಣ ಬಸವಣ್ಣನಿಂದೆ ನಿರವಯವನಾದೆನು. ಎಲೆ ಕಪಿಲಸಿದ್ಧಮಲ್ಲಿನಾಥಯ್ಯ, ನಿಮ್ಮ ಶರಣ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು.

೧೬೪. ಎಲೆ ಅಯ್ಯ ನಿಮ್ಮ ನಚ್ಚಿನ ಮೆಚ್ಚಿನ ಶರಣರ ಸಂಗದಲ್ಲಿ
ರಿಸಿ ಎನ್ನ ನೀ ಮಾಡಿದಿರಿ. ಆಹಾ, ನಿಮ್ಮ ಕರುಣವನೇನೆಂದು ಉಪಮಿ
ಸುವೆನು? ಎರಡು ಪುರವ ಮೆಟ್ಟಿ ಮೇಲು ಪುರವ ನೋಡುತ್ತಿರ್ದೆನು.
ಮೇಲು ಪುರವ ಭೇದಿಸಲೊಡನೆ ನೀನು ನಾನಾದೆನಯ್ಯ ಕಪಿಲಸಿದ್ಧ. ಮಲ್ಲಿ
ಕಾರ್ಜುನ ನಿಮ್ಮ ಶ ಣ ಪ್ರಭುದೇವರ ಕರುಣದಿಂದೆ ಆನು ಬದುಕಿದೆನು.

೧೬೫. ಅಯ್ಯಾ ಮೂರು ಪುರದ ಮೇಲುಪ್ಪರಿಗೆಯ ಕೆಲಸವನೇ
ನೆಂಬೆನಯ್ಯಾ. ಮುತ್ತಿನ ಕಲಶದ ಮೇಲೊಂದು ಅರಳಿದ ಪುಷ್ಪದ ಪರಿ
ಯೊಳಗೆ ಅಗ್ನಿಯ ಕಂಡೆನಾಗಿ ಕಪಿಲಸಿದ್ಧ ಮಲ್ಲಿನಾಥಯ್ಯ ನಿಮ್ಮ ಶರಣ
ಚನ್ನಬಸವಣ್ಣ ತೋರಿದ ಹಾದಿ ಸುಪಥವಾಗಿತ್ತಾಗಿ ನಾನು ಚನ್ನಬಸಣ್ಣಂಗೆ
ನಮೋ ನಮೋ ಎನುತಿರ್ದೆನು.

೧೬೬. ಅಜ್ಞಾಸಿದ್ಧನನರ್ಚಿಸುವಲ್ಲಿ ಆರಯ್ಯ ಬಲ್ಲವರು ಚನ್ನಬಸವ
ಣ್ಣನಲ್ಲದೆ? ಮೂರ್ತಿಯುಂಟು. ಆಗದ ಮುನ್ನ ಮುಖಲಿಂಗವಾಗಿರ್ದ ಸುದ್ದಿ
ಯನಾರು ಬಲ್ಲವರು, ಚನ್ನಬಸವಣ್ಣನಲ್ಲದೆ? ಸದಮಲಜ್ಞಾನದಲ್ಲಿ ಒಪ್ಪಿಪ್ಪ
ಅಕ್ಷರದ್ವಯದ ಭೇದಾದಿ ಭೇದವಂ ಭೇದಿಸಿ ಲೋಕಕ್ಕೆ ಭಕ್ತಿಯ ಸಾಧಿಸಿ
ಕೊಟ್ಟ ಲೋಕಕ್ಕೆ ಬರುತರವಾದ ಕಾರಣ ಚನ್ನಬಸವಣ್ಣನೈ ಕಪಿಲಸಿದ್ಧ
ಮಲ್ಲಿಕಾರ್ಜುನಾ.

೧೬೭. ಎಲೆ ಅಯ್ಯ ಗಾರುಡವ ಬಲ್ಲೆನಯ್ಯಾ. ಮತ್ತೆ ಗಾರುಡಿಗ
ನಲ್ಲ ನೋಡಯ್ಯಾ ಎನ್ನ ಮನದ ಮೇಲಿಪ್ಪ ಶಂಕೆ ಎಂಬ ವಿಷವಗಾ
ರುಡಿಸಿ ಮಾಣಿಸಿ ನಿಃಶ್ಶಂಕನಮಾಡಿದ ಕಪಿಲಸಿದ್ಧಮಲ್ಲಿನಾಥನಲ್ಲಿ ಮಡಿ
ವಾಳಮಾಚಿತಂದಿಯ ಪಾದಕ್ಕೆ ನಮೋ ನಮೋ ಎಂಬೆನು.

೧೬೮. ಮೂರು ಕಟ್ಟಿಗೆಯ ಮೂರರಲ್ಲಿರಿಸಿದೆನು. ನಿರಾಳ ನಿಪ್ಪ
ತ್ತಿಯಾದ ಲಿಂಗದಲ್ಲಿ ಆರೂಢ ಅಂಗುಲದೊಳಗೆ ಆರುಮೆರಳನಿರಿಸಿದೆನು.
ಧೀರ ಮೋಳಿಗೆಯ ಮಾರ ಶರಣು ಶರಣು. ಆರೂಢ ದಶಗಳ ಭೇದವನ
ರಿದಂತೆ ತೋರಿದ ಶರಣೆಂದೆನೈ ಕಪಿಲಸಿದ್ಧಮಲ್ಲಿಕಾರ್ಜುನಾ.

ಇಂತು ಬಸವರಾಜ ದೇವರು ಸಿದ್ಧರಾಮಯ್ಯ ದೇವರುಗಳು ಮೋಳಿ
ಗೆಯ ಮಾರಿತಂದೆಗಳೊಡನೆ ಮಹಾನುಭಾವ ಸಂಗೋಷ್ಠಿಯಂ ಮಾಡಿ
ತಮ್ಮ ಗೃಹಕ್ಕೆ ಲಿಂಗೈಕ್ಯವಾದಿಹೆವೆಂಬ ಆತುರದಿಂ ನುಡಿದ ಪ್ರಸ್ತಾವದ
ವಚನ.

೧೬೯. ಓಂ ಎಂದಲ್ಲಿ ನಿರಾಕಾರವಾದೆಯಲ್ಲ. ಓಂ ಎಲ್ಲ ತತ್ವಮಸಿ ಎಂದಲ್ಲಿ ತತ್ವರೂಪಾಗಿ ಜಗವ ರಕ್ಷಿಸಿಕನೆಂದು ಕರ್ತೃರೂಪಾದೆಯಲ್ಲ. ನಿಮಗೆ ಮರ್ತ್ಯದ ಮಣಿಹವಿಲ್ಲ ಪರಿಯಂತರ ಎನಗೆ ಕಟ್ಟುಗುತ್ತಿಗೆಯ ಹೊತ್ತು ಶಿವಭಕ್ತರ ಮನೆಗೆ ನೀವು ಕಾಯಕದ ಕೃತ್ಯ ಇನ್ನೆಷ್ಟು ದಿನ ಹೇಳಾ ನಿಷ್ಕಳಂಕ ಮಲ್ಲಿಕಾರ್ಜುನಾ.

೧೭೦. ಆದಿಮಧ್ಯಾಂತವ ಬೇಧಿಸಿದ ಮಹಿಮನು ನಾದಕ್ಕತೀತನು. ಪರಬ್ರಹ್ಮದ ಭೇದಾದಿ ಭೇದದ ಪರತತ್ವ ಮೂಲವೆಯಾದ ಆದಿಗುರುಘಟ್ಟಿವಾಳ ಕಪಿಲಸಿದ್ಧ ಮಲ್ಲಿನಾಥಾ

ಆ ಸಮಯದಲ್ಲಿ ಸಿದ್ಧರಾಮ ತಂದೆಗಳು ಮಹದೇವಿಯಕ್ಕಗಳ ಸ್ತುತಿಸಿದ ವಚನ.

೧೭೧. ಆಹುದಹುದು ಮತ್ತೇನು ಮರಹಿಂಗೆ ಹಿರಿದು ಕಿರಿದುಂಟಲ್ಲದೆ ಅರುಹಿಂಗೆ ಹಿರಿದು ಕಿರಿದುಂಟೆ ಹೇಳಯ್ಯ? ಸಾವಿಂಗೆ ಭಯ ಉಂಟಲ್ಲದೆ ಅಜಾತಂಗೆ ಭಯವು ಉಂಟೆ ಹೇಳಯ್ಯ ಕಪಿಲಸಿದ್ಧ ಮಲ್ಲಿನಾಥಯ್ಯನಲ್ಲಿ?

೧೭೨. ಎಲೆ ಎಲೆ ಅಯ್ಯ ನೀವು ಹೇಳಯ್ಯ. ಎನಗೆ ಗತಿ ಏನು? ಮತಿ ಏನು? ನಿಮ್ಮಲ್ಲಿ ಸಮರಸವೆಂತು ಹೇಳಯ್ಯ? ಮೂರನೆಯ ಕರು ಮಾಡದ ಮೇಲುವಾಗಿಲ ಮನೆಯೊಳಗಿಪ್ಪೆನು. ನಾನು ಕಾಮನ ಕಟ್ಟುವ ಪಂಜರವನಿಟ್ಟು ನಿಲ್ಲುವೆನು ಹೇಳು ಹೇಳಾ ನಿರ್ಣಯವ ಎಲೆ ಕಪಿಲಸಿದ್ಧ ಮಲ್ಲಿನಾಥಯ್ಯ.

ಆತ್ತಲಾ ಸೊನ್ನಲಾಪುರದಲ್ಲಿ ಸಿದ್ಧರಾಮಯ್ಯದೇವ ತಮ್ಮ ಮಹಾಜ್ಞಾನದಿಂದ ನೀಲಲೋಚನೆಯಮ್ಮನ ಲಿಂಗೈಕ್ಯವ ತಿಳಿದು ಸ್ತುತಿಸಿದ ಪ್ರಸ್ತಾವದ ವಚನ.

೧೭೩. ತಾಯಿಯೆ ಪರಮಸುಖಾಚಾರದ ಮೂರ್ತಿಯ ನಡಗಿಸಿ ನೀನೆಯಾದೆಯಮ್ಮಾ ತಾಯೆ. ಮಹಾಜ್ಞಾನ ಕಲ್ಪಿತದಲ್ಲಿ ನೀನೆಯಡಗಿದೆಯಮ್ಮಾ. ತಾಯಿ ನೀಲಮ್ಮನೆಂಬ ಸುಖವಾಸಿಮೂರ್ತಿ ಕಪಿಲಸಿದ್ಧಮಲ್ಲಿನಾಥಯ್ಯ ನಮ್ಮ ತಾಯಿ ನೀಲಮ್ಮನಾದಳು.

ಪ್ರಭುದೇವರಕೂಡ ಪ್ರಶ್ನೆಮಾಡಿದ ವಚನ ॥

೧೭೪. ಎಲೆ ಅಯ್ಯ ನಿಮ್ಮವರ ನೋವೆ ಎನ್ನ ನೋವು ನೋಡಾ. ಕಂಡು ಕಂಡು ಸೈರಿಸಲಾರೆ ನೋಡಯ್ಯ. ನಿಮ್ಮವರೊಡನೆ ಸರಸಾಗಿಪ್ಪ

ವರ ಕಂಡರೆ ನಾನವರಿಗೆ ಮುನಿವೆ ನೋಡಾ ಕಪಿಲಸಿದ್ಧಮಲ್ಲಿನಾಥ ನೀನವರಲ್ಲಿ ಇಪ್ಪೆಯಾಗಿ.

೧೭೬. ಎಕ್ಕೆವಿಂಡುಗಳೆಂಬುವರು ಮುಕ್ಕಣ್ಣ ನಿಮ್ಮ ಗಣಂಗಳು ಬತ್ತಿದ ಕೆರೆ ಬಾಯಿ ಬಿಟ್ಟಂತೆ ಮೊರೆಯಿಟ್ಟು ಬರಲು ಹೊತ್ತಿದ ಅಂಗಾಲು ಕಿಚ್ಚನೆತ್ತಿಗೆ ಮುಟ್ಟಿದರೆ ಚಕ್ಕನೆ ಕಪಿಲಸಿದ್ಧ ಮಲ್ಲಿನಾಥ ನೊಸಲ ಕಣ್ಣ ತೆಗೆದನು.

೧೭೭. ಬ್ರಹ್ಮನಾದಡಾಗಲಿ ವಿಷ್ಣುವಾದಡಾಗಲಿ ಇಂದ್ರನಾದಡಾಗಲಿ ಚಂದ್ರನಾದಡಾಗಲಿ ನಮ್ಮ ಶಿವಶರಣರ ನೋವು ಎಮ್ಮ ನೋವು ನೋಡಾ. ಅವರ ನೊರಸುವೆನುರುಹುವೆ ಎಂದು ಕಪಿಲಸಿದ್ಧ ಮಲ್ಲಿಕಾರ್ಜುನ ತನ್ನ ನೊಸಲ ಕಣ್ಣಿಂಗೆ ಬೆಸನನಿತ್ತರೆ ನಿಲಬಲ್ಲ ಗರುವರನಾರನು ಕಾಣೆ.

೧೭೮. ಅಯ್ಯ ನಿಮ್ಮ ಮೂರ್ತಿಯ ನೋಡಿಹೆನೆಂದರೆ ದೃಷ್ಟಿಯಾರವು. ನಿಮ್ಮ ತೇಜವನಾರು ನೋಡಲಮ್ಮರಯ್ಯ. ನಿಮ್ಮ ತೇಜವ ನೋಡುವವರಿಗೆ ಉಪಮಿಸಬಾರದು. ನೀವು ಮುನಿದು ನೊಸಲ ಕಣ್ಣ ತೆಗೆದರೆ ಅದಕ್ಕೆ ಇದಿರಪ್ಪರು ಇನ್ನಾರು ಹೇಳಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ ನಿಮ್ಮ ತೇಜವ ಮೂರು ಲೋಕವ ನುಂಗಿದರೆ ನೋಡಿ ಕಣ್ಣು ಮುಚ್ಚುತ್ತಿರ್ದೆನು.

---

# ಮಹೇಶ್ವರಸ್ಥಲ.

೧೭೯. ನೀ ಮುನಿದರೆ ಮುನಿ. ನಾನನ್ನುವೆನಯ್ಯ ಮೀರಿದ ವಚನವ ನೀ ಮಾಡಲಾದವು. ನಾನೇನು ಹೇಳಿದೆನೆ ಅಯ್ಯ? ಇಲ್ಲಿ ಇಲ್ಲವು ಬಹು ದುರ್ಲಭ ದುರ್ಲಭ ನಿಸ್ನ ಸ್ಥಲವಳವಡುವುದು ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನ.

೧೮೦. ಹೆಣ್ಣಳಿದ ಬಳಿಕ ಮಣ್ಣಿನ ಹಂಗೇಕಯ್ಯ? ಮಣ್ಣಳಿದ ಬಳಿಕ ಹೊನ್ನಿನ ಹಂಗೇಕಯ್ಯ? ಮುಕ್ಕಣ್ಣನಾದ ಬಳಿಕ ಮೂರರ ಹಂಗು ಏನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೧೮೧. ಅಳವಟ್ಟಿತ್ತಳವಟ್ಟಿತ್ತಯ್ಯ ನಿಮಗಲ್ಲದಾರಿಂಗೆ ಅಳವಟ್ಟಿತ್ತಳವಟ್ಟಿತ್ತಯ್ಯ. ನಿಮಗಲ್ಲದಾರಿಂಗೆ ಅಳವಟ್ಟ ಬಳಿಕ ಕಳವಳಗೊಂಡಳು ಕಪಿಲಸಿದ್ಧಮಲ್ಲಿನಾಥಾ.

೧೮೨. ಹೇಳುವರೆ ಬಹು ಸುಲಭ. ಆಳುವರೆ ಅದು ಬಹು ದುರ್ಘಟ ನೋಡಯ್ಯ. ಆಳಿದ ಹಂಗೇಕಯ್ಯ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನ ತಂದೆ.

೧೮೩. ಜಂಗಮವಾಗಿ ಫಲವೇನಯ್ಯ ಜಗದ ಹಂಗು ದೊರೆಯದನ್ನಕ್ಕ? ಯೋಗಿಯಾಗಿ ಫಲವೇನಯ್ಯ ನಿನ್ನಂಗ ಬರದನ್ನಕ್ಕ ಎಲೆಕಪಿಲಸಿದ್ಧಮಲ್ಲಿಕಾರ್ಜುನಾ?

೧೮೪. ನೀರಿಲ್ಲದಲ್ಲಿ ಜಳಕವಮಾಡಿ ತರುವಿಲ್ಲದಲ್ಲಿ ಪುಷ್ಪವನೆತ್ತಿ ಕರವಿಲ್ಲದೆ ಪೂಜಿಸಬಲ್ಲಡೆ ಜಂಗಮನೆಂಬೆ ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನ ದೇವ ಆನು ತ್ರಿಕರಣ ಶುದ್ಧನಾಗಿ.

೧೮೫. ನೀರ ಕುಡಿದು ಅಗ್ನಿಯ ನುಂಗಿದವರ ಜಂಗಮವೆಂಬೆ. ಊರ ನೋಡಿ ಸೇರದವಗೆ ಜಂಗಮವೆಂದೆಂಬೆ. ಹೆಣ್ಣ ಭೋಗಿಸಿ ಮುಕ್ಕಣ್ಣನ ಪಡೆದಾತನ ಜಂಗಮವೆಂಬೆನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೧೮೬. ಜಂಗಮವಾದುದಕ್ಕೆ ಇದೆ ಚಿಹ್ನ ನೋಡಾ. ಅಂಗವಿಡಿದು ಲಿಂಗವ ಪೂಜಿಸುವ ಲಿಂಗವಿಡಿದು ಅಂಗವ ಪೂಜಿಸ ನೋಡಾ. ಶತದಳ ಸಹಸ್ರ ಸೂರ್ಯವರ್ಣದ ಪದ್ಮದೊಳಿಪ್ಪ ಮಹಾಲಿಂಗವನರುಹಿ

ಪ್ರಾಣಲಿಂಗಿಯು ಕೊಟವನರಿವಾತನೇ ಜಂಗಮ ಕಾಣಾ ಕಪಿಲಸಿದ್ಧಮ ಲ್ಲಿಕಾರ್ಜುನಾ.

೧೮೭. ಒಂದು ಕೈಯಾದುದು ಗಂಡು. ಅಂದು ಲಗ್ನವ ಮಾಡ ಬೇಕೆಂದು ಬಂದನಯ್ಯಾ ಲಿಂಗವು ಆ ಲಿಂಗರಮಣನಾಗಬೇಕೆಂದು ಹೋದರೆ ನೆರೆದು ಸುಮ್ಮನಾದ ನೋಡಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ.

---

## ನಾಗಮ್ಮನವರ ಮುಂದೆ ಹಾಡಿದ ವಚನ.

೧೮೮. ನೋಡವ್ವ ನೋಡವ್ವ ಇದರಂದವ. ತಾ ಬಂದರೆನ್ನ ಕರ ಒಂದು ತಾಯಾಯಿತ್ತು. ಮತ್ತೊಂದು ಕರ ತಂದೆಯಾಯಿತ್ತು. ಅವರವರು ಕೂಡಿದಲ್ಲಿ ಶಬ್ದವಿಲ್ಲದ ಕೂಸು ಹುಟ್ಟಿತ್ತು. ಆ ಕೂಸು ಎನ್ನ ನಟ್ಟಿಬಿಟ್ಟಿತ್ತು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೧೮೯. ಬರುವ ಮುಂದೆ ಪುರುಷನಿದ್ದೆ. ಬಂದ ಬಳಿಕ ಸ್ತ್ರೀಯು ಳಾದೆ. ಇನ್ನು ಮೇಲೆ ನಪುಂಸಕನಾದೆ. ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜು ನನ ಕೂಡಬೇಕೆಂದಲ್ಲಿ ಪುರುಷನಾದೆ ನೋಡವ್ವ ಎನ್ನ ಹೆತ್ತ ತಾಯೆ.

೧೯೦. ಮೊಮ್ಮಗನಾಗಿ ಮೊಮ್ಮಗಳಾಗಿ ಮೊಮ್ಮಗನಾಗಿ ನಿಂದೆ ನೋಡವ್ವ. ಮಗನ ಕರುಣದಿಂದೆ ಮಗನಾಗಿ ಮಗನಾದೆ ನೋಡವ್ವ. ಮಗನ ಕರುಣದಿಂದ ಮಗನಾಗಿ ಮಗನಾದೆ ನೋಡವ್ವ. ಮಗನ ಕರುಣದಿಂದ ಮಗನು ಹೋಗಿ ಮಹಾಲಿಂಗನಾದೆ ನೋಡವ್ವ ನಿನಗೆ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೧೯೧ ಲಿಂಗ ಘನವೆಂಬೆನೆ ? ಗುರುವಿಡಿದು ಕಂಡೆ. ಗುರು ಘನವೆಂಬೆನೆ ? ಸಾಕಾರವಿಡಿದು ಕಂಡೆ ಸಾಕಾರ ಘನವೆಂಬೆನೆ ? ನಿರಾ ಕಾರವಿಡಿದು ಕಂಡೆ. ನಿರಾಕಾರ ಘನವೆಂಬೆನೆ? ಜಂಗಮ ವಿಡಿದು ಕಂಡೆನಯ್ಯಾ ಎಲೆ ಕಪಿಲ ಸಿದ್ಧಮಲ್ಲಿಕಾರ್ಜುನಾ.

೧೯೨. ಹೆತ್ತ ತಾಯಿ ನೀನೆ ಅವ್ವ. ನನ್ನ ಹತ್ತರ ಬಂದಾಕೆ ನೀನೆ ಅವ್ವ ಲಿಂಗದ ಮೊತ್ತವಾದಾಕೆ ನೀನೆ ಅವ್ವ. ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜು ನನ ರಾಣಿ ನೀನೆ ಅವ್ವ. ಇದರನುಭಾವ ತಿಳಿದಾತನೆ ಜಂಗಮ. ಇದರನು ಭಾವವನು ಕೇಳಿದಾತನೆ ಭಕ್ತ ನೋಡವ್ವ. ಆತ ಪ್ರಾಣಲಿಂಗಿಯವ್ವ.

೧೯೩. ನೀರನೆರೆಯದೆ ಒಂದು ಮರನಾಯಿತ್ತು ನೋಡವ್ವ. ಆ ಮರಕ್ಕೆ ಉರ್ಧ್ವಶಾಖೆ ಅಧೋ ಶಾಖೆ ಎಂಬ ಟೊಂಗೆಗಳಾದವು ನೋಡವ್ವ. ಮತ್ತನಂತ ಪರ್ಣಗಳಾದವು. ಪೂರ್ಧ್ವ ಶಾಖೆಯು ನೋಡ ಹೋದರೆ ಅಧೋಶಾಖೆ ಕಾಣಬಾರದು. ಅದೋ ಶಾಖೆ ನೋಡಹೋದರೆ ಊರ್ಧ್ವ ಶಾಖೆ ಕಾಣಬಾರದು. ಅದು ಪಿಚಾರಿಸಿ ನೋಡಿದರೆ ಒಂದೆಯಾಗಿಹುದು. ಇದರ ಕುರುಹು ನೋಡಿ ನೋಡಿ ನಿಬ್ಬೆರಗಾದೆ ನೋಡವ್ವ ಕಪಿಲ ಸಿದ್ಧ ಮಲ್ಲಿಕಾರ್ಜುನನಲ್ಲಿ.

೧೯೪. ಲಿಂಗವ ಪೂಜಿಸ ಹೋದರೆ ಲಿಂಗರೂಪಾದೆನು. ಜಂಗಮವ ಪೂಜಿಸ ಹೋದರೆ ಪ್ರಭುವಾದೆನು. ಗುರುವಿನ ಪೂಜಿಸ ಹೋದರೆ ಚನ್ನಬಸವಣ್ಣನಾದೆನು. ಎನಗಾಜ್ಞೆಯಾದರೆ ಬರಿಯ ಸಿದ್ಧರಾಮನಾಗಿ ನಿಂದೆನು ನೋಡಾ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ ನಿಮ್ಮ ಶರಣರ ಸಮೂಹದಲ್ಲಿ.

---

## ಸೊನ್ನಲಿಗಿಗೆ ಬರುವ ಅಭಿಪ್ರಾಯವು.

೧೯೫. ಎನ್ನ ಒಳಗೆ ಒತ್ತಿನೋಡುವಿರಿ. ಎನ್ನಲ್ಲೇನುಂಟಯ್ಯ? ನುಡಿಯಿಲ್ಲದಭವ ನೀನು. ನುಡಿಗಲಿತೆನೆಂದರೆ ನಿಮ್ಮನೊಡಂಬಡಿಸಲು ಆನು ಸಮರ್ಥನೆ? ಅನಂತ ವೇದಂಗಳೆಲ್ಲವು ನಿಮ್ಮ ಮುಂದೆ ಉಸರಿಕ್ಕಲಮ್ಮದೆಲ್ಲ ಮೂಕರಾಗಿದ್ದವು. ನಿಮಗಾನಿದಿರುತ್ತರವ ಕೊಟ್ಟ ಕೇಡಿಂಗೆ ಏನೆಂಬೆನೆಲೆ ಅಯ್ಯ ಕಪಿಲಸಿದ್ಧ? ನಾನುಭಯ ಭ್ರಷ್ಟನೆಂಬುದ ನೀವೆ ಬಲ್ಲಿರಿ.

೧೯೬. ಅಯ್ಯಾ ನಿಮ್ಮ ಕಂಡ ಕಾಣಕೆಯಲ್ಲಿ ನಂಬಿ ನಚ್ಚಿ ಶರಣುವೋಗಲರಿಯದೆ ಕೆಮ್ಮನೆ ಕೆಟ್ಟೆ. ಅಹಂಕಾರವ ಹೊತ್ತುಕೊಂಡು ಕೆಟ್ಟೆ ನೋಡಯ್ಯ. ಕೆಡಿಸಿ ಮರುಗಿ ಮರಸಿಹೆನೆಂಬ ಮರುಳ ನಾನಯ್ಯ. ಕಪಿಲಸಿದ್ಧಮಲ್ಲಿನಾಥಯ್ಯ ಹಾಲಲದ್ದು, ನೀರಲದ್ದು ನೀನೇ ಗತಿ ಮತಿ.

೧೯೭. ಎನ್ನ ಭಾರ ನಿಮ್ಮದಯ್ಯ. ಎನ್ನ ಹಾನಿ ವೃದ್ಧಿ ನಿಮ್ಮದಯ್ಯ. ಎನ್ನ ಕರ ಕಾಡದಿರು ತಂದೆ. ನಿನ್ನ ಕಾಟ ಎನ್ನ ಪ್ರಾಣದೋಟ ಕಪಿಲಸಿದ್ಧ ಮಲ್ಲಿನಾಥ ಕೊಲ್ಲು ಕಾಯಿ. ನಿನ್ನ ಧರ್ಮದವನಾನು.

೧೯೮. ಎನ್ನ ತನು ಕರಗಿದ ಎನ್ನ ಮನ ಕರಗಿದ ಮುಃಖವಿದಾರದಯ್ಯ. ಅಯ್ಯ ಅಯ್ಯ ಅಂದಳುವದಕ್ಕೆ ಇದಾರದಯ್ಯ? ಮನವೆಂಬ ಕೂರಸಿಗೆ ಗುರಿ ಮಾಡಿದವರಾರಯ್ಯ? ಆಹಾ ಎಂಬ ಧ್ವನಿಯು ಕೇಳಲಾರವೆ ಕಂಡು ಕರುಣದಿಂದ ಶಿರವ ಹಿಡಿದೆತ್ತಿ ಎನ್ನ ಕಣ್ಣಾಸೀರು ತೊಡೆದನು ಕಪಿಲ ಸಿದ್ಧ ಮಲ್ಲಿನಾಥಯ್ಯ.

೧೯೯. ಯೋಗದ ಹೊಲಬ ನಾನೆತ್ತ ಬಲ್ಲೆನಯ್ಯ ಯೋಗ ಶಿವ ಶಕ್ತಿ ಸಂಪುಟವಾಗಿಪ್ಪುದಲ್ಲದೆ. ಶಿವ ಶಕ್ತಿ ವಿಯೋಗನಾದ ಯೋಗ ವಿಲ್ಲವಯ್ಯ. ಹೃದಯ ಕಮಲದಲ್ಲಿ ಭ್ರಮಿಸದೆ ಇಪ್ಪಾತ ನೀನೆಯಲ್ಲದೆ ಎನಗೆ ಬೇರೆ ಸ್ವತಂತ್ರವಿಲ್ಲ ಕೇಳಾ ಕಪಿಲ ಸಿದ್ಧ ಮಲ್ಲಿಕಾರ್ಜುನಾ.

೨೦೦. ಉತ್ಪತ್ತಿ ಸ್ಥಿತಿಲಯವಿಲ್ಲದಭವ ನೀನು ಕಂಡಯ್ಯ. ಎನಗೆ ಬೇರೆ ಸ್ವತಂತ್ರವಿಲ್ಲ, ಕೇಳಾ. ನಿನ್ನ ಇಚ್ಛಾಮಾತ್ರದಿಂದ ನಾನಿಪ್ಪೆನು. ಹಿರಿಯ ನೀನೇ ದೇವಾ ಕಪಿಲ ಸಿದ್ಧ ಮಲ್ಲಿಕಾರ್ಜುನಾ.

೨೦೧, ಅಪ್ಪುದನಲ್ಲದುದನೊಪ್ಪವ ಮಾಡುವಿರಯ್ಯ. ನಿನ್ನೊಲವು ಚಲುವು ಕಂಡಯ್ಯ. ನೀನಿಂತು ನೋಡಿದರಂತಿಪ್ಪುದಲ್ಲವೆ ಅಪ್ಪುದಲ್ಲವೆಂಬವರಿಲ್ಲ ಕಾಣಾ ಕಪಿಲ ಸಿದ್ಧ ಮಲ್ಲಿಕಾರ್ಜುನಾ.

೨೦೨. ಮಾತುಳ್ಳನ್ನಕ್ಕ ದೇಹ ಹಿಂಗದು. ನೆನಹುಳ್ಳನ್ನಕ್ಕ ಪ್ರಾಣಸೂತಕ ಬಿಡದು. ಕಾಯದ ಜೀವದ ಹೊಲಿಗೆಯು ಸಂದ ಬಿಚ್ಚಲರಿಯದು. ಆನು ನಿರ್ದೇಹಿ ಎಂಪರೆ ನಗರೆ ನಿಮ್ಮ ಪ್ರಮಥರು? ಎನ್ನ ಅಂತರಂಗದುಲುಳ್ಳ ಅವಗುಣವ ಹಿಂಗಿಸಿ ನಿನ್ನಂತೆ ಮಾಡಿದ ಡಾನುಳಿವೆನಲ್ಲದೆ ಬೇರೆ ಗತಿಯ ಕಾಣೆ ನೋಡಾ ಅಯ್ಯಾ. ಕಪಿಲ ಸಿದ್ಧ ಮಲ್ಲಿನಾಥಾ ಹಿಂದೆ ಇಲ್ಲದಡೇನು ಮುಂದೆ ತಪ್ಪದು.

ಅಲ್ಲಮ ದೇವನು ಸಿದ್ಧರಾಮನ ಕೈವಿಡಿದು ಯೋಗ ಮಂದಿರಕ್ಕೆ ಬರತಕ್ಕ ಸಮಯದಲ್ಲಿ ಸಿದ್ಧರಾಮೇಶ್ವರ ದೇವರು ನುಡಿದ ವಚನ.

೨೦೩. ಎಮ್ಮನಲ್ಲ ಒಲಿದು ಒಲಿಸಿಕೊಡುತ್ತಿರೆ ಬಾರಾ ಬಾರಾ ಎಂದೆನ್ನ ಕರಣ ಹರಣವ ತೋರಿದರೆ ತಾನೆ ಒಲಿದು ಬಂದೆನ್ನ ತಲೆಯ ಪಿಡಿದು ನಗಹಿ ಎನ್ನ ಮನೆಗೆ ಬಂದ ಕಪಿಲ ಸಿದ್ಧ ಮಲ್ಲಿನಾಥನ ಒಲುಮೆಯ ಘನವನೇನೆಂದುಪಮಿಸುವೆನು?

ಆ ವೇಳೆಯಲ್ಲಿ ಎಮ್ಮ ಮಂದಿರಕ್ಕೆ ಪ್ರಭುಸ್ವಾಮಿಗಳು ಬಂದರೆಂದು ಸಂತೋಷದಿಂದ ಹಾಡಿದ ವಚನ.

೨೦೪. ಅಂಗವಳಿದು ನಿಂದವನೆಂದು ನಾನರಿಯೆ. ಆವ ವೇಷದಲ್ಲಿ ನಿಂದ ಠಾವ ನರಿಯೆ. ಕ್ರೋಧವೆಂಬ ಸಂಸಾರ ಸಾಗರದಲ್ಲಿ ಸಾಧನೆಯ ಮಾಡಲಾಗಿ ಪ್ರಭುದೇವರ ಸುಳುಹು ಅಘಟಿತವಾಯಿತ್ತು ಕಪಿಲ ಸಿದ್ಧ ಮಲ್ಲಿಕಾರ್ಜುನಾ.

೨೦೫. ಅಯ್ಯ ಅಯ್ಯ ನೀವು ಬಾರದಿದ್ದರೆ ಅಂತು ಹಂಬಲಿಸುತ್ತಿದ್ದೆ. ನೀನೆನ್ನ ಹಂಬಲವ ಕೇಳಿ ಕರುಣದಿಂದ ಭೋರನೆ ಬಂದರೆ ಆನು ತಳವೆಳಗಾಗಿ ಅವಗುಣವೆಂಬ ರಜವ ಕಳೆದು ಕಂಬಳಿಯಲ್ಲಿ ಪೀಠವನೊಲ್ಲದೆ ಹೃದಯ ಪೀಠವನಿಕ್ಕಿ ಮೇಲುಪ್ಪರಿಗೆಯ ಪೊರತೆಯ ತಂದು ಪಾದಾರ್ಚನೆಯ ಮಾಡಿ ಎರಡೆಸಳ ಕಮಲವ ನೆರೆದು ಪಾದಕ್ಕೆ ಪೂಜಿಸಿ ಕಂಗಳ ತಿರುಳ ತೆಗೆದು ಆರತಿಯನೆತ್ತಿ ಬಸಿರ ನುಂಗಿದ ಪರಿಮಳವ ಧೂಪವ ಬೀಸಿ ನೆತ್ತಿಯ ಪರಿಯಾಣದೊಳಿಟ್ಟು ಬೋನವ ಗಡಣಿಸಿದರೆ ಸುಯಿಧಾನ ಸವಿಯದೆ ಆರೋಗಣೆಯ ಮಾಡಿ ಉಂಡ ಬಾಯ ತೊಳೆವರೆ ಸಂದೇಹವಾದುದೆಂಬ ಮೇಲು ಸೆರಗಿನೊಳು ತೊಡೆದು ಕೊಂಡು ಬಾಯ ಮುಚ್ಚಳ ತೆಗೆಯದೆ ತ್ರಿಕರಣವೆಂಬ ತಾಂಬೂಲವನವಧರಿಸಿದ ಭಾವದ ಕನ್ನಡವ ಹರಿದು ಹಾಯಿಕಿದ ಆತನ ಪಾದಕ್ಕೆ ಶರಣೆಂದು ಪಾದೋದಕ ಕೊಂಡೆ ಪ್ರಸಾದಕ್ಕೆನ್ನ ಸೆರಗ ಹಾಸಿ ಆರೋಗಿಸಿ ಸುಖಿಯಾದೆನು ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಪ್ರಭುದೇವರ ಕರುಣವೆನಗೆ ಸಾಧ್ಯವಾದ ಪರಿಯನೇನೆಂದು ಉಪಮಿಸುವೆನು?

೨೦೬. ಆದಿಯಿಂದ ನಿಮ್ಮಿಂದವಲಾದೆನಯ್ಯ. ಆದಿಯಲ್ಲಿ ನಿಮ್ಮಲ್ಲಿ ತದ್ಗತನಾಗಿ ಇದ್ದೆನಯ್ಯ. ನಿಮ್ಮ ಹಸ್ತ ಮುಟ್ಟಿದಲ್ಲಿ ನಿಮ್ಮ ನೆನೆವ ಮನದೊಳಗಿಟ್ಟು ಕೊಂಡಿದ್ದೆನಯ್ಯ. ಕಾಯಕವೆಂಬ ಕಪಟವನೊಡ್ಡಿ ನಿನ್ನ ಮರಸಿಕೊಂಡಿದ್ದರೆ ನಿನ್ನ ಬೆಂಬಳಿಯ ಸಂದು ನಿಮ್ಮ ಕಂಡೆನಯ್ಯ. ಕಪಿಲ ಸಿದ್ಧ ಮಲ್ಲಿನಾಥಯ್ಯ ನೀನೆನ್ನ ಮನವ ತಿಳಿದಡೆ ಅಸಾಧ್ಯ ಉಂಟೆ ದೇವರದೇವಾ?

೨೦೭. ಕಂಡ ಕನಸು ದಿಟವಾಗಿ ಕಂಡೆನೆಂಬೆ. ಕಂಡೆನೆಂಬುದು ಬೆನ್ನ ಬಿಡದು. ಕಂಡುದುದ ಕಾಣೆನೆಂಬುದ ಎರಡನು ಅರಿಯದೆ ತವಕ

ತಲ್ಲಣಕ್ಕೆ ಎಡೆಯಾದೆನು. ತವಕದ ಕೂಟ ನಿಮ್ಮಲ್ಲಿ ತಗ್ಗತವಾದೆನು ಕಪಿಲಸಿದ್ಧ ಮಲ್ಲಿನಾಥಯ್ಯ ನಿಮ್ಮ ಕರುಣವೆನಗೆ ಸಾಧ್ಯವಾಯಿತ್ತು.

೨೦೮. ಕೊಡುವ ತವಕವೆ ನಿಮ್ಮಲ್ಲಿ ನಿಕೂಪನಾಗಿದ್ದಲ್ಲಿ ಕೂಪೆ ನೋಡಯ್ಯ. ನೀನೊಲ್ಲದಿದ್ದರೆ ಒಲ್ಲೆನಯ್ಯ. ಎನ್ನರಿವು ಮರವೆ ಇಬ್ಬರಿಗೂ ಸಮ ನೋಡಯ್ಯ. ಎನ್ನ ಬಯಕೆಯೊಳಗಣ ಬಯಕೆಯು ನಿಧಾನವು ನೀನೆಂದು ಕಂಡಬಳಿಕ ಬಯಸುವಾತ ನೀನೆ ಕಾಣಾ ಕಪಿಲಸಿದ್ಧ ಮಲ್ಲಿನಾಥಯ್ಯ,.

೨೦೯ ಅಣುವಿನೊಳಗಣ ಅಣುವಾಗಿಪ್ಪಿರಿ ಎಲೆ ದೇವಾ. ನೀವು ಮನದೊಳಗೆ ಘನವಾಗಿಪ್ಪಿರೆಲೆದೇವಾ. ಜಗದೊಳಗೆಲ್ಲವು ನೀವಿಲ್ಲದೆಡೆಯುಂಟೆ? ಎಂಬತ್ತುನಾಲ್ಕು ಲಕ್ಷ ಶಿವಾಲಯಂಗಳ ಮಾಡಿ ನೀವು ಒಮ್ಮನದೊಳಗಿಪ್ಪುದ ಕಂಡು ನಾನು ಮಾಡಿದೆನಲ್ಲದೆ ಕಪಿಲಸಿದ್ಧ ಮಲ್ಲಯ್ಯ ಎನಗೆ ಬೇರೆ ಸ್ವತಂತ್ರವಿಲ್ಲವರಿಯೆನು.

೨೧೦. ಸಕಲ ಲಿಂಗವ ಹಿಡಿದು ಅಗಲದೆ ನಡೆ ಎಂದಿರಾಗಿ ನಡೆವುತ್ತಿರ್ದೆನು. ಲಿಂಗ ಪ್ರತಿಷ್ಠೆಯ ಮಾಡೆಂದು ಎನಗೆ ನಿರೂಪಿಸುತ್ತಿರ್ದ ಕಾರಣ ಮಾಡುತ್ತಿರ್ದೆನಲ್ಲದೆ ಎನಗೆ ಬೇರೆ ಸ್ವತಂತ್ರ ಉಂಟೆ? ಹಿಂದೆ ನೀವು ಕೊಟ್ಟ ನಿರೂಪು ಹುಸಿಯಾದರೆ ಇನ್ನುಮುಂದೆ ಸ್ವಯವಪ್ಪಂತೆ ನಡಿಸಾ ಕಪಿಲಸಿದ್ಧ ಮಲ್ಲಿನಾಥಯ್ಯ.

೨೧೧. ಕೃಷಿಯ ಮಾಡಿ ಉಣ್ಣದೆ ಹಸಿವು ಹರವಿ ಇನ್ನೆಂತೊ. ಕರ್ಮಯೋಗವ ಮಾಡದೆ ನಿರ್ಮಲಸುಚಿತ್ತವನರಿವ ಪರಿ ಇನ್ನೆಂತೊ. ಬೇಯದ ಅಶನವನುಂಬ ತಾವಾವುದು ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗಕ್ಕೆ

೨೧೨. ಕೈಯ್ಯಲ್ಲಿ ಹಿಡಿದು ಕೊಂಬುದು ಕರ್ಮ ಪೂಜೆಯಲ್ಲವೆ? ಮನದಲ್ಲಿ ಮಾಡುವುದೆಲ್ಲವು ಕಾಯದ ಕರ್ಮವಲ್ಲವೆ? ಭಾವ ಶುದ್ಧವನರಿವ ಪರಿ ಇನ್ನಾವುದು ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೧೩. ಬಣ್ಣವಿಲ್ಲದ ಚಿನ್ನ ನಾನು ಕರ್ಮನಾದ ಪರಿ ಇನ್ನೆಂತಯ್ಯ. ಹೂವಣಿಗೆ ವಾಸನೆ ಮೂಡಿದ ಠಾವಿನಲ್ಲಿ ವಾಸನೆ ನಿಂದ ದಿಲ್ಲವೆ ಅಯ್ಯ? ಕ್ರಿಯೆ ಶುದ್ಧವಾದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವು ಭಾವಶುದ್ಧವಾಗಿಪ್ಪನು.

೨೧೪. ನುಡಿದೆಹೆನೆಂಬೆ. ಉಲುಹಿನ ಗಲಬೆಯ ತೋಟಿ ಬಿಡದು. ಉತ್ತಮ ಮಧ್ಯಮ ಕನಿಷ್ಠ ತಿರುಗಿ ಕಂಡಿಹೆನೆಂಬ ಕಾಲನ ಎಡೆಯಾಟ ಬಿಡದು. ಎನಗೆ ಗರ್ವ ಮೊದಲಾದಲ್ಲಿ ಕರ್ಮ ಮೆಗ್ಗಳವಾಯಿತ್ತು. ಉಭಯದ ತೋಟಿಯ ನಾ ಇನ್ನಾರಿಗೆ ಹೇಳುವೆ ಕಪಿಲಸಿದ್ಧಮಲ್ಲಿಕಾರ್ಜುನಾ?

೨೧೫. ಭೂಮಿ ಒಂದೆಂದಡೆಂಬ ವಚನವದೆ. ಹಿಂದೆ ಕಾಯ ಸೋನೆಯುರತಲ್ಲದೆ ಹೆಣ್ಣಿನರಸ ಚಿನ್ನದೋರದು. ಕಾಯಕರ್ಮವ ಮಾಡಿ ಜೀವ ಜ್ಞಾನವನರಿದು ತ್ರಿವಿಧಭಾವ ಶುದ್ಧವಾಗಿಯಲ್ಲದೆ ಮೇಲೆ ಕಾಣಲಿಲ್ಲ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ.

೨೧೬. ಆನೇನು ಮಾಡುವದೆಲ್ಲವನು ನೀನೆ ಅಲ್ಲವೆಂದರೆ ಅದು ಮಾಣಲಿ. ನಿಮ್ಮಾಣತೆ. ಕಾಣಬಾರದ ಘನವ ಕಾಯದಲ್ಲಿ ಧರಿಸಿ ಹೇಳಬಾರದ ನಿಜವ ಮನದಲ್ಲ ನೆಲೆಗೊಳಿಸಿ ತೋರಬಾರದ ಘನವ ಕಾಯದಲ್ಲಿ ಧರಿಸಿ ಹೇಳಬಾರದ ನಿಜವ ಮನದಲ್ಲಿ ನೆಲೆಗೊಳಿಸಿ ತೋರಬಾರದ ಕುರುಹ ಎನ್ನ ಅರಿವಿನಲ್ಲಿರಿಸಿ ಇನ್ನು ನಿಮ್ಮ ಕಾಂಬಂತೆ ಮಾಡಾ ಕಪಿಲಸಿದ್ಧಮಲ್ಲಿನಾಥಯ್ಯ.

ಪರಬ್ರಹ್ಮವೆಂಬುದು ಕಲ್ಪಿಸಿ ಹೇಳಬಾರದು. ಕಲ್ಪಿಸಿ ತೋರಬಾರದೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

೨೧೭. ಬೆರಿಸಿ ಬೆಚ್ಚಾತನ ಕಂಡೆನಯ್ಯ. ಆತನ ಬಟ್ಟೆಯ ಕಾಣೆ ನೋಡಯ್ಯ. ಶರೀರವಿಡಿದಿಪ್ಪ ಶತಕೋಟಿ ಜೀವಂಗಳ ಭೇದವನರಿಯನು. ನಿಮ್ಮ ನಾನೆತ್ತ ಬಲ್ಲೆನಯ್ಯ? ನೀವು ಮಾಡಿದ ಬೆಂಬಳಿಯಲ್ಲಿ ಹೊರಗಾಣದಿಪ್ಪೆನಲ್ಲದೆ ನಾ ಬೇರೆ ಕಾಂಬುದು ಹುಸಿ ನೀ ತೋರಯ್ಯ ಎನಗೆ ಕಪಿಲಸಿದ್ಧಮಲ್ಲಿನಾಥಯ್ಯ.

೨೧೮. ಉಪಮೆ ಅನುಪಮೆ ಎಂಬುದು ನಿಮ್ಮಾಧೀನ ಕಂಡಯ್ಯ. ಹೇಳಿ ಕೇಳಿಹೆನೆಂಬುದು ನೀವು ಕಂಡಯ್ಯ. ಎನ್ನಂತರಂಗಕ್ಕೆ ಬಹಿರಂಗಕ್ಕೆ ನೀವೇ ಕರ್ತರಾದ ಕಾರಣ ನಿಮ್ಮ ನಿಜವ ಹೇಳದಿರ್ದಡೆ ಎಂತು ಹೇಳುವೆನಯ್ಯ ಕಪಿಲಸಿದ್ಧಮಲ್ಲಿನಾಥಯ್ಯ.

೨೧೯. ಕಾಯ ವಿಡಿದಿಹನ್ನಕ್ಕ ಕಾಮವೇ ಮೂಲ. ಜೀವ ವಿಡಿದಿಹನ್ನಕ್ಕ ಕ್ರೋಧವೇ ಮೂಲ. ವ್ಯಾಪ್ತಿಯುಳ್ಳನ್ನಕ್ಕ ಸಕಲ ವಿಷಯಕ್ಕೆ ಆಶೆಯೇ ಮೂಲ. ಎನ್ನ ಆಶೆಯು ಪಾಶ ಗಾಸಿ ಮಾಡುತ್ತಿದೆ. ಶಿವಯೋಗದ ಲೇಸಿನ ಠಾವ ತೋರು ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೨೦. ನೀರ ಕ್ಷೀರದ ಸಂದುಗಳ ಹಂಸೆ ಬಿಚ್ಚಬಲ್ಲದಲ್ಲದೆ ನಾನೆತ್ತ ಬಲ್ಲೆನಯ್ಯಾ. ನೀನಿಕ್ಕಿದ ತೊಡಕ ಬಿಡಬಾರದು. ನೀವು ಬಿಡಿಸಿದ ತೊಡಕನಿಕ್ಕಬಾರದು. ಕಪಿಲಸಿದ್ಧಮಲ್ಲಿನಾಥಯ್ಯ ನೀನೆನ್ನ ಕಾಯದ ಜೀವದ ಹೊಲಿಗೆಯ ಬಿಡಿಸಾ ನಿಮ್ಮ ಧರ್ಮ.

೨೨೧. ಅಯ್ಯಾ ಮನದ ರಜವ ಮಣ್ಣ ಕಳೆದು ಶಾಂತಿಯ ಉದಕದಲ್ಲಿ ತೆಗೆವೆನಯ್ಯ. ಜಳಕವನೇ ಮಾಡಿ ಯೋಗ ಕಂಪನಿಕ್ಕಿ ಹೋದಿಹೆನಯ್ಯ. ಅದನೊಂದು ಎಡೆಗೆ ತಂದು ಒಟ್ಟಿ ಗಾಣದಲಿಕ್ಕಿ ಹಿಳಿವೆನಯ್ಯ. ಹಿಳಿದ ರಸದ ಕಂಪಕೊಡುವ ಒಡೆಯ ನೀನೆ ಕಪಿಲಸಿದ್ಧಮಲ್ಲಿನಾಥಯ್ಯ.

೨೨೨. ಮನವೆಂಬ ಸಂಕಲ್ಪವನರಿಯೆನು ಸಂಕಲ್ಪ ಸಿದ್ಧಿಯಾಯಿತ್ತಾಗಿ. ಸಂಕಲ್ಪವೆಂಬ ಸಂಬಂಧವ ನರಿಯೆನು ನಿಮ್ಮ ವಿಚಾರ ವೆಡೆಗೊಂಡಿತ್ತಾಗಿ. ನಿಮ್ಮ ವಿಚಾರವೇ ಅಂತರಂಗದೊಳಗೆ ತುಂಬಿತ್ತಾಗಿ ಎನ್ನ ಮನದ ಮುಂದೆ ಎಲ್ಲ ನೀನೆಯಾಗಿ ದೆರ್ಯಯ್ಯ ಕಪಿಲಸಿದ್ಧಮಲ್ಲಿನಾಥಯ್ಯ.

೨೨೩. ವಿವೇಕವೆಂಬುದು ಬೇರಿಲ್ಲ ಕಂಡಯ್ಯ. ವಿವೇಕ ನವನಾಳದ ಸುಳುಹ ತೊಡೆದು ಸುನಾಳವ ಶುದ್ಧವ ಮಾಡುವೆ. ಅಷ್ಟದಳ ಕಮಲವನು ಊರ್ಧ್ವಮುಖವಾಗಿ ನಿಜಪದದಲ್ಲಿ ನಿಲಿಸಿದೆ. ಐವತ್ತೆರಡಕ್ಷರವ ತಿಳಿದು ನೋಡಿ ಏಕಾಕ್ಷರದಲ್ಲಿ ನಿಲಿಸುವೆ ಕಪಿಲಸಿದ್ಧಮಲ್ಲಿನಾಥ ಎನ್ನ ವಿಚಾರದ ಹವಣ ನೀನೆ ಬಲ್ಲೆ.

೨೨೪. ಅಂತರಂಗದಲ್ಲಿ ನಿಮ್ಮ ನೋಡುವವನಲ್ಲ ಕೇಳು ಕಂಡಾ ಎಲೆ ಅಯ್ಯ. ಬಹಿರಂಗದಲ್ಲಿ ಬಳಸುವವನಲ್ಲ ಕೇಳು ಕಂಡಾ. ಸುಷುಮ್ನ ಬಟ್ಟೆಯ ತುದಿಯನಡರಿ ಸಾವಿರ ದಳದ ಮಂಟಪದಲ್ಲಿ ನಿಮ್ಮ ನೆಲೆಗೊಂಡಿಪ್ಪೆ ನೋಡಾ ಕಪಿಲಸಿದ್ಧಮಲ್ಲಿನಾಥಯ್ಯ.

೩೩೫. ನಾ ನಿಮ್ಮ ರೂಪ ವಿಚಾರಿಸುವನಲ್ಲ ಕೇಳಾ. ನಿನ್ನ ಧ್ಯಾನದಲ್ಲಿ ಇಟ್ಟಾತನಲ್ಲ ಕೇಳಾ. ಅತ್ಯತಿಷ್ಠದ್ದ ಶಾಂಗುಲದಲ್ಲಿ ನಿಮ್ಮ ನಿಲಿಸಿ ನಾನೊಂದೆಡೆಯಲ್ಲಿ ಇಪ್ಪಾತನಲ್ಲ ಕೇಳಾ. ಓಂಕಾರವೆಂಬ ಪೀಠಕ್ಕೆ ನಾನಾಗಿ ನಿಃಶಬ್ದವೆಂಬ ಲಿಂಗವ ನೆಲೆಗೊಳಿಸಿ ಬೆರಸಿ ಬೇರಿಲ್ಲದೆ ಇಪ್ಪೆ ನೋಡಯ್ಯ, ಕಪಿಲಸಿದ್ಧಮಲ್ಲಿನಾಥಯ್ಯನೇ ನೀನು ಪ್ರಣಮರೂಪಾಗಿ.

೩೩೬. ನಾದ ಬಿಂದು ಎಂಬಲ್ಲಿ ಅಂಗ ಸಂಬಂಧವೆಂಬೆನಯ್ಯ. ನಾದ ಪ್ರಾಣ ಬಿಂದು ಕಾಯವಾದ ಕಾರಣ ನಾದ ಸ್ವರವಲ್ಲ ಬಿಂದು ಕಾಯವಲ್ಲ. ಉಭಯ ಸೂತಕ ರಹಿತನ ಮಾಡಯ್ಯ. ನಾದ ಬಿಂದುವಿನ ವಡ್ಡತೋರಿ ಮನ ಮಗ್ನವಾದ ನಿಲವ ಕಪಿಲಸಿದ್ಧಮಲ್ಲಿಕಾರ್ಜುನ ನೀನೆ ಬಲ್ಲೆ.

೩೩೭. ಎನ್ನ ಮನದಲ್ಲಿ ಮತ್ತೊಂದಕ್ಕೆ ಇಂಬಿಲ್ಲ ಕಂಡಯ್ಯ. ನಿನ್ನ ನೆನವೇ ನಾನು. ನೀನು ಎನ್ನ ನೆನವೆ ಕಂಡಯ್ಯ. ನಿನಗೆಯೂ ಎನಗೆಯೂ ಒಮ್ಮನ ನೋಡಯ್ಯ. ನೀ ಮನ ಮುಕ್ತನಾದ ಕಾರಣ ನಿನ್ನೊಡನೆ ಎನ್ನ ಮನ ಮುಕ್ತನ ಮಾಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೩೩೮. ಮನ ಮಗ್ನವಾದ ಯೋಗವೆಂದಡೇನು ಕೊರತೆ ಹೇಳಾ ಎಲೆ ಅಯ್ಯ. ಮನವಿಲ್ಲದ ಬಚ್ಚಬರಿಯ ಬೊಮ್ಮವೆಂದಡೇನು ಹೇಳಾ ಎಲೆ ಅಯ್ಯ. ನುಡಿದ ಮಾತಿನಲ್ಲಿ ವಿವರ ತೋರುತ್ತಿದೆ ಎಂದಡೆ ತಾತ್ಪರ್ಯವಂತಪ್ಪುದೆ ಕಪಿಲಸಿದ್ಧಮಲ್ಲಿನಾಥ.

೩೩೯. ಅಂಗದಂತೆ ಲಿಂಗ ಲಿಂಗದಂತೆ ಅಂಗವಾದ ಬಳಿಕ ಅಂಗದಂತೆ ಲಿಂಗೈಕ್ಯ ಲಿಂಗದಂತೆ ಅಂಗೈಕ್ಯ. ಮನವೇ ಲಿಂಗ ಲಿಂಗವೇ ಮನವಾದ ಬಳಿಕ ಮಾತುಮಾತುಗಳೆಲ್ಲ ಹೊಳ್ಳಾದ ಕಾರಣ ಮೇಲೆ ಲಿಂಗೈಕ್ಯ ಲಿಂಗೈಕ್ಯವೇ ಸ್ವರಶಬ್ದ. ಸಂದಣಿಗೆ ಇನ್ನು ತೆರಹುಂಟೆ ಕಪಿಲಸಿದ್ಧಮಲ್ಲಿನಾಥಯ್ಯ?

೩೪೦. ಅಯ್ಯಾ, ನಿಮ್ಮ ದೇವರೆಂದು ಭಾವಿಸಲರಿಯೆನು ಕೇಳು ಕಂಡಾ. ಎನ್ನ ಮನವ ನುಂಗಿದೆ ಎಂದು ಹಿಂದೆ ನಿಮಗಾನು ಬಿನ್ನಹ ಮಾಡಿದ ಕಾರಣ ಎನ್ನ ಒಳ ಹೊರಗೆಲ್ಲಾ ನೀನೆ ಕಂಡಯ್ಯ. ನಿಮ್ಮೊ

ಳಗೆ ಅಡಗಿದ ನುಡಿಯು ಒಳಕೊಂಡ ಅರಿವು ಅರಿದರಿದು ಮರೆದ ಪರಿ ಎಂತಯ್ಯ ಕಪಿಲಸಿದ್ಧಮಲ್ಲಿನಾಥಯ್ಯ?

೨೩೧. ಅಯ್ಯ ಕಬ್ಬುನ ನೀರೊಳಕೊಂಬಂತೆ ಶಬ್ದ ನಿರಾಳವನೊಳಕೊಂಬಂತೆ ಮರೀಚಿಯು ಬಯಲೊಳಕೊಂಬಂತೆ ಎನ್ನನೆಂದೊಳಕೊಂಬೆ ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ?

೨೩೨. ಕೆರೆ ತೊರೆ ದೇಗುಲಂಗಳ ಕಡೆಯಿಂದ ನಿಮ್ಮ ಕಂಡೆ. ಎಡಹುವಕಲ್ಲ ಮರೆಯಲ್ಲಿ ನಿಧಾನವ ಕಂಡಂತೆ ಎನ್ನ ಮರವೆಯ ತಮದ ಅದ್ರಿಗೆ ದಿನಮಣಿ ಜನಿಸಿದಂತೆ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವೆಂಬ ಭ್ರಾಂತು ಸ್ವಯವಾಯಿತ್ತು ಪ್ರಭುದೇವರ ಕಾರುಣ್ಯದಿಂದ.

೨೩೩. ಅಯ್ಯ ನಿಮ್ಮ ಅರಸು ಉಂಡ ಶಬ್ದವೆನ್ನ ಮನಕ್ಕೆ ವೇದ್ಯವಾಯಿತ್ತು. ನಿಮ್ಮ ನಿಜ ಉಂಡ ಉಲುಹು ಎನ್ನ ಮತಿಗೆ ವೇದ್ಯವಾಯಿತ್ತು. ನಿಮ್ಮ ಕರುಣ ಪ್ರಸಾದವೆನ್ನ ಸರ್ವಾಂಗಕ್ಕೆ ವೇದ್ಯವಾಯಿತ್ತು. ನಿಮ್ಮ ಕಾಯವಿಡಿದಿಪ್ಪ ಕರಸ್ಥಲದ ಕಾರಣ ಹೇಳಾ ಕಪಿಲಸಿದ್ಧಮಲ್ಲಿನಾಥಾ.

೨೩೪. ಕಾಯವೇ ಪೀಠಿಕೆ, ಪ್ರಾಣವೇ ಲಿಂಗವಾಗಿರಲು ಬೇರೆ ಮತ್ತೆ ಕುರುಹು ಏಕಯ್ಯ? ಕುರುಹುವಿಡಿದು ಕೂಡುವ ನಿರವಯಲುಂಟೆ ಜಗದೊಳಗೆ? ನಷ್ಟವ ಕೈಯ್ಯಲ್ಲಿ ಹಿಡಿದು ದೃಷ್ಟವ ಕಂಡಿಹೆನೆಂದರೆ ಕಪಿಲಸಿದ್ಧಮಲ್ಲಿನಾಥಯ್ಯನು ಸಾಧ್ಯವಹ ಪರಿಯ ಹೇಳಾ ಪ್ರಭುವೆ.

೨೩೫. ಅಯ್ಯಾ ನಿಮ್ಮ ಕರಸ್ಥಲದ ಘನಲಿಂಗವನ್ನು ಸಮೀಪಿಸ ಬಲ್ಲವರಿಲ್ಲವಯ್ಯ. ನಿಮ್ಮ ಮಹಿಮೆಯನರಿವರೆ ನಾನೇತರೊಳಗೆ ಅಯ್ಯಾ? ಆ ಇಷ್ಟಲಿಂಗದೊಳಗೆ ಮುಟ್ಟಿದ ಶರಣನೊಳಗೆ ಮುಟ್ಟಿದ ಕರಸ್ಥಲವೇ ಇಷ್ಟವೆಂಬುದ ತಿಳುಹಿ ಎನ್ನನುಳುಹಿಕೊಳ್ಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೩೬. ಅಯ್ಯ, ನಿಮ್ಮ ಕರಸ್ಥಲದ ಘನ ನಿಮ್ಮಲ್ಲಿರಲಿ. ಕರಸ್ಥಲವನೊಲ್ಲೆ, ಪರಸ್ಥಲವನೊಲ್ಲೆ, ಆವುದನೊಲ್ಲೆ, ನೋಡಯ್ಯ. ಕಪಿಲಸಿದ್ಧ ಮಲ್ಲಿನಾಥಯ್ಯ ನೀ ಒಲಿದು ಸಂಗನಬಸವಣ್ಣನ ಶ್ರೀಪಾದವ ತೋರಿಹೆನೆಂಬ ಮಾತಿಂಗೆ ಮಾರುವೋದೆನು. ಇನ್ನು ತೋರಿ ಎನ್ನನುಳುಹಿಕೊಳ್ಳಾ ಎನ್ನ ದೇವರ ದೇವಾ.

೨೩೭. ಯತ್ರಯತ್ರ ಮಾಹೇಶ್ವರರಿರ್ದಗ್ರಾಮ ತತ್ರತತ್ರ ಶಿವಲೋಕ ನೋಡಾ. ಎಲೆ ಅಯ್ಯ, ಸತ್ಯವಚನವು ತಪ್ಪುವದೆ ಎಲೆ ಅಯ್ಯ? ಕಪಿಲ ಸಿದ್ಧಮಲ್ಲಿನಾಥಾ ನಿಮ್ಮ ಶರಣರು ಮೆಟ್ಟಿ ನಿಂದ ಧರೆ ಪಾವನವೆಂಬುದು ಇಂದೆನಗೆ ಅರಿಯ ಬಂದಿತ್ತಯ್ಯ.

೨೩೮. ಜಗದಲ್ಲುದಯಿಸಿ ಮತ್ತೆ ಜಲವು ತಾನಲ್ಲ. ಜಲವೆಂದಿಪ್ಪರು ಲೋಕದವರು. ಪರಮಗುರು ಚನ್ನಬಸವಣ್ಣ ಜಗವ ಪಾಲಿಸ ಬರಲು ಎನ್ನ ಪರಿಭವದ ದಂದುಗ ಹರಿಯಿತ್ತಯ್ಯ. ಆ ಸುದ್ದಿಯನರಿಯ ಬೇಕಾದ ಪರಿಯಲ್ಲಿ ಅನೇಕ ಜಡರೆಲ್ಲರು ನಡಿವುತ್ತಿಹರು. ಸತ್ತ ಪ್ರಾಣವ ನೆತ್ತಿ ಒಪ್ಪಿಪ್ಪ ನಿಶ್ಚಯವು ಮರ್ತ್ಯದವರಿಗುಂಟೆ ಶಿವಂಗಲ್ಲದೆ? ಶಿವಗುರು ಬಸವಣ್ಣ ಬಸವಗುರು ಶಿವನಾಗಿ ದೆಸೆಗೆಟ್ಟ ದೇವತಾ ಪಶುಗಳಿಗೆ ಪತಿಯಾದನು. ಬಸವಣ್ಣನ ನೆನಹು ಸುಖಸಮುದ್ರವಯ್ಯ ಕಪಿಲಸಿದ್ಧಮಲ್ಲಿನಾಥ ಬಸವಣ್ಣನ ತೋರಿದನಾಗಿ ಬದುಕಿದೆನು.

೨೩೯. ನಿಶ್ಚಲ ಶರಣರ ಮನೆಯ ಅಂಗಳದಲ್ಲಿ ಅಷ್ಟಾಷಷ್ಟಿ ತೀರ್ಥಂಗಳು ನೆಲಸಿಪ್ಪವಯ್ಯ. ನೀನು ಇಸಿಸುವೆರಸಿ ಒಲಿದಲ್ಲಿ ನಿಲಸಿಪ್ಪವಯ್ಯ ಕಪಿಲಸಿದ್ಧಮಲ್ಲಿಕಾರ್ಜುನ ಪ್ರಭುವೆ.

೨೪೦. ಬಸವಣ್ಣನ ಮನೆಯ ಸ್ಥಾನಂದ ನೋಡಿದರೆ ಎನ್ನ ಮನ ಬೇಸರವೋಗದೆ ಶಿವದಾಸನೆಂದು ಜೀವನ್ಮುಕ್ತನೆಂದು ಹೊಗಳುವೆನಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನ ಪ್ರಭುವೆ.

೨೪೧. ಅಯ್ಯಾ, ನಿಮ್ಮ ಶರಣರಲ್ಲದವರ ಮನೆ ಕೆಮ್ಮನೆ ಕಂಡಯ್ಯ. ನಿಮ್ಮ ಶರಣರ ಮನೆ ನೆರೆವನೆ ನೋಡಾ. ಎನಗೆ ಶಿರಿಯಾಳ ಮನೆ ಗಟ್ಟಿ ಬೇರೂರಿಗೆ ಒಕ್ಕಲು ಹೋದ. ದಾಸಿಮಯ್ಯ ಮನೆಗಟ್ಟಿ ವ್ಯವಹಾರ ನಾಡಿ ಹೋದ. ಸಿಂಧು ಬಲ್ಲಾಳ ಮನೆಗಟ್ಟಿ ಕೈಕೂಲಿಗಾರನಾಗಿ ಹೋದ. ಗಂಗೆ ವಾಳುಕರು ಮನೆಗಟ್ಟಿ ಲಿಂಗದ ಹೊಲಬನರಿಯದೆ ಹೋದರು. ಇವರೆಲ್ಲರು ಮನೆಯ ಮಾಡಿ ಮಹದ್ವಸ್ತುವ ನರಿಯದೆ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ ಪದವಿಗೊಳಗಾದರು. ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮನೆಯ ಕಟ್ಟಿದರೆ ಮರ್ತ್ಯ ಲೋಕವೆಲ್ಲವು ಭಕ್ತಿಸಾಮ್ರಾಜ್ಯವಾಯಿತ್ತು. ಆ ಮನೆಗೆ ತಲೆವಾಗಿ ಹೊಕ್ಕವರೆಲ್ಲರು ನಿಜಲಿಂಗ ಫಲವ ಪಡೆದರು. ಆ ಗ್ರಹವ ನೋಡಬೇಕೆಂದು

ನಾನು ಹಲವು ಕಾಲ ತಪಸಿದ್ದೆನು. ಕಪಿಲಸಿದ್ಧಮಲ್ಲಿನಾಥಾ ನಿಮ್ಮ ಶರಣ ಸಂಗನಬಸವಣ್ಣನ ಮಹಾ ಮನೆಗೆ ನಮೋ ನಮೋ ಎಂದು ಬದುಕಿದೆನು.

೨೪೨. ಮನೆಯ ನೋಡಿ ಮನ ಹೊಗುವಂತಾಗಬೇಕು. ಜನ ನೋಡಿದರೆ ಘನಕೀರ್ತಿವಂತರಾಗಬೇಕು. ನಮ್ಮ ಸಂಗನ ಮನೆ ಹೊಕ್ಕರೆ ಮನವಳಿದು ಮನೋರಥ ಬಸವಣ್ಣನಂತಾಗಬೇಕು ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೪೩. ಮನೆ ನೋಡಿ ಮರೆದೆನಯ್ಯ ಮಹತ್ವಗಳ. ಮನೆ ನೋಡಿ ಮೆರೆದೆನಯ್ಯ ಎನ್ನ ಮನೆ. ಮನೆ ನೋಡಿ ಮರೆದೆನಯ್ಯ. ಕಪಿಲಸಿದ್ಧಮ ಲ್ಲಿಕಾರ್ಜುನ ನಡಿಸಿದ ಹೋಮ ನೇಮ ಕೆರೆದೋಟ ಕೆಲಸಗಳು.

೨೪೪. ನಿಮ್ಮ ಶಕ್ತಿ ಆತನಲ್ಲಿಪ್ಪದು. ಆತನ ಪ್ರಾಣ ನಿಮ್ಮಲ್ಲಿ ಪ್ಪದು. ನಿಮ್ಮ ತಮ್ಮ ಭೇದವನಾರುಬಲ್ಲರು ಹೇಳಯ್ಯ? ಕಪಿಲಸಿದ್ಧ ಮಲ್ಲಿನಾಥಯ್ಯ ನಿಮ್ಮ ಶರಣ ಬಸವಣ್ಣನ ಅನುವ ನೀವೆ ಬಲ್ಲಿರಿ.

೨೪೫. ಕೇಳು ಕೇಳು ಅಯ್ಯ ಆದಿ ಅನಾದಿಯಿಲ್ಲದಂದು ಬಸವಣ್ಣನೆ ಭಕ್ತ. ಸುರಾಳ ನಿರಾಳವೆಂಬ ಶಬ್ದ ಹುಟ್ಟದ ಮುನ್ನ ನೀನೆ ಜಂಗಮ. ಈ ಉಭಯಭಾವದಲ್ಲಿ ಭೇದ ಉಂಟೆ ಕಪಿಲಸಿದ್ಧಮಲ್ಲಿನಾಥಯ್ಯ? ಬಸವಣ್ಣನ ನೆರೆ ನಂಬುದ ನಿಮ್ಮಲ್ಲಿ ನೀವೆ ತಿಳಿದು ನೋಡಿ ಕೃಪೆ ಮಾಡಾ ಪ್ರಭುವೆ.

೨೪೬. ಆದಿಯ ಮೂರ್ತಿಯಲ್ಲ. ಅನಾದಿಯ ಬಚ್ಚ ಬರಿಯ ಶೂನ್ಯವಲ್ಲ. ಅಂಗವಿದ್ದು ಅಂಗವಿಲ್ಲ. ಸಂಗ ಘನಪದದಲ್ಲಿ ವೇದ್ಯವಾದ ಮರುಳ ಶಂಕರ ದೇವರ ನಿಲವ ಪ್ರಭು ಬಸವಣ್ಣನಿಂದೆ ಕಂಡು ಬದುಕಿದೆನು.

೨೪೭. ಜ್ಞಾನವೆಂದು ವಿವಾದಿಸುವ ಅಣ್ಣಗಳಿರಾ, ಕೇಳಿರಯ್ಯ. ಜ್ಞಾನವೆಂದರೆ ಮಹತ್ವಗಳ ಮಾಡಿ ಮೆರೆದುದು ಜ್ಞಾನವೇ? ಅಲ್ಲಲ್ಲ. ಜ್ಞಾನವೆಂದರೆ ಸ್ವರ್ಗದ ವಾರ್ತೆಯ ಕೇಳಿ ಕೀರ್ತಿಯ ಹಬ್ಬಿದುದು ಜ್ಞಾನವೇ? ಅಲ್ಲಲ್ಲ. ಜ್ಞಾನವೆಂದರೆ ತತ್ಕಾಲಕ್ಕಾಗುವ ಸುಖದುಃಖಗಳ ಹೇಳಿದುದು ಜ್ಞಾನವೇ? ಅಲ್ಲಲ್ಲ. ಇವೆಲ್ಲ ಸಾಧನೆಯ ಮಾತು. ಅಘೋರಮುಖದಿಂದ ಹುಟ್ಟಿದ ಮಂತ್ರಗಳೆಲ್ಲ ಜಪಿಸಿದಲ್ಲಿ ಮಹತ್ವಗಳಾದವು. ಸೂಕ್ಷ್ಮ

ತಂತ್ರ ಗಣಿಸಿದಲ್ಲಿ ಸ್ವರ್ಗದ ವಾರ್ತೆಯ ಹೇಳಿದನು. ಪ್ರಸಂಗ ಚಿಂತಾ ಮಣಿಯ ನೋಡಿ ಸುಖದುಃಖಂಗಳ ಹೇಳಿದನು. ಇವೆಲ್ಲ ಪರಸಾಧನೆಯಯ್ಯ. ನಿನ್ನರಿವು ಕೈಕರಣವಾಗಿರೆ ದೇಹ ವಳಿದರೇನು, ದೇಹ ಧರಿಸಿ ಬಂದರೇನು ಎಲೆ ಅಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೨೪೮. ವಾಕ್ಸಿದ್ಧಿಯುಳ್ಳವರು ಕೋಟಾನುಕೋಟಿ. ಮನೋರಥ ಸಿದ್ಧಿಯುಳ್ಳವರು ಕೋಟಾನುಕೋಟಿ. ಭಾವಸಿದ್ಧಿಯುಳ್ಳವರು ಕೋಟಾನುಕೋಟಿ. ನಿಮ್ಮ ಸಿದ್ಧಿಯುಳ್ಳವರು ಇಲ್ಲ ಕಂಡಯ್ಯ ಕಪಿಲಸಿದ್ಧಮಲ್ಲಿ ಕಾರ್ಜುನಾ.

೨೪೯. ವಾಕ್ಸಿದ್ಧಿಯಿಂದ ದೋಷ ಉಂಟು. ವಾಕ್ಸಿದ್ಧಿಯಿಂದ ಪುಣ್ಯ ಉಂಟು. ದೋಷದಿಂದ ಭವಕ್ಕೆ ಬೀಜ. ಪುಣ್ಯದಿಂದ ಪದಕ್ಕೆ ಬೀಜ. ಇವೆಲ್ಲ ಪ್ರಳಯದಲ್ಲಿ ನಿತ್ಯ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೫೦. ಚರಿತ್ರಗಳೋದುವದೇ ವಾಕ್ಸಿದ್ಧಿ. ಭವವಳಿದು ಭಾಷಣೆಯ ಮಾಡುವುದೇ ವಾಕ್ಸಿದ್ಧಿ. ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಪಾದೋದಕ ಪ್ರಸಾದವ ಸ್ವೀಕರಿಸುವದದೆ ವಾಕ್ಸಿದ್ಧಿ ಕಂಡಯ್ಯ ಅಣ್ಣ ಮಡಿವಾಳ ಮಾಚಯ್ಯ.

೨೫೧. ಆತನ ಸುಖದುಃಖವೀತಗೇನು? ಈತನ ಸುಖದುಃಖವಾತಗೇನು? ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಅರುವ ಸಂತೈಸಿಕೊಳ್ಳಿ. ರಂಭೆ ಎಂದರೆ ನಿನ್ನಂಗನೆಯಾಗಲಿಲ್ಲವು. ಒಂದು ದಿನ ಸ್ವಪ್ನದಲ್ಲಾದರೂ ರತಿಸಲಿಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೫೨. ಕಲ್ಪವೃಕ್ಷಕ್ಕೆ ಸಮ ಮಾಡಿ ಹೇಳಿದೆನಯ್ಯ. ಕರಸ್ಥಲದ ಮಹಾಲಿಂಗ ಮೂರ್ತಿಗೆ ಅಲ್ಲಲ್ಲಿ ಕಲ್ಪಿಸಿ ಬೇಡಿದರೆ ಕೊಡುವದದು ಸುರಾಮೃತವ. ಮೃತ ಬೇಡಿದಡೆ ಕೊಡುವದಯ್ಯ ಭವದ ಗೋಳಾಟ ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೫೩. ನುಡಿದ ನಡೆ ಸಮನಿಸಿತ್ತಯ್ಯ ಸಂಗನಬಸವಣ್ಣಂಗೆ. ನುಡಿದ ನಡೆ ಸಮನಿಸಿತ್ತಯ್ಯ ಪ್ರಭುವಿಂಗೆ. ನಡಿಸಿದ ನಡೆ ಸಮನಿಸದಯ್ಯ ನಿಮ್ಮಾತ್ರಂಗಲ್ಲದೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೫೪. ಬ್ರಹ್ಮನ ಪೂಜಿಸಿ ಸೃಷ್ಟಿಗೊಳಗಾಗುವದು ಬಲ್ಲೆ. ರುದ್ರನ ಪೂಜಿಸಿ ಲಯಕ್ಕೊಳಗಾಗುವದ ಬಲ್ಲೆ. ನಮ್ಮಿಷ್ಟಲಿಂಗ ಮೂರ್ತಿಯ

ಪೂಜಿಸಿ ಲಿಂಗವಾಗಿ ಸರ್ವವಳಿವುದ ಬಲ್ಲೆ ನೋಡಯ್ಯ ಕಪಿಲಸಿದ್ಧಮ ಲ್ಲಿಕಾರ್ಜುನಾ.

೨೫೫. ನಾಲ್ಕು ಯುಗಂಗಳು ಸಹಸ್ರ ವೇಳೆ ತಿರುಗಿದರೆ ಬ್ರಹ್ಮ ಗೊಂದು ದಿನ. ಬ್ರಹ್ಮನಂದು ಸಹಸ್ರ ವೇಳೆ ತಿರುಗಿದರೆ ವಿಷ್ಣುವಿಂ ಗೊಂದು ಗಳಿಗೆ. ವಿಷ್ಣು ತಾನು ಹನ್ನೆರಡು ಲಕ್ಷ ತಿರುಗಿದರೆ ಮಹೇಶ್ವ ರನಿಗೊಂದು ನಿಮಿಷ. ಅಂತಪ್ಪ ಮಹೇಶ್ವರರನೇಕ ಲೀಲೆ ಧರಿಸಿದಲ್ಲಿ ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಪೂಜೆ ಸಮಾಪ್ತಿ ನೋಡಯ್ಯ ಬಾಚರಸರೆ.

೨೫೬. ಹಸಿವು ತೃಷೆಯಳಿದಡೇನು? ಭಕ್ತನಪ್ಪನೆ? ಅಲ್ಲಲ್ಲ. ಅಷ್ಟ ಮಹಾ ಸಿದ್ಧಿಯುಳ್ಳಡೇನು? ಭಕ್ತನಪ್ಪನೆ? ಅಲ್ಲಲ್ಲ. ತನು ಬಯಲಾಗಿ ಚತುರ್ವಿಧ ಪದಸ್ಥನಾಗಿ ಕೈಲಾಸದಲ್ಲಿದ್ದಡೇನು? ಭಕ್ತನಪ್ಪನೆ? ಅಲ್ಲಲ್ಲ. ಗಿಡಗಳ ತಿಂದ ಬಳಿಕ ಹಸಿವು ತೃಷೆದೋರದು. ಯೋಗವಂಗವಾದ ಬಳಿಕ ಸ್ವೇಚ್ಛಾಚಾರ ಬಿಡದು. ಅಘೋರ ತಪ ಮಾಡಿದ ಬಳಿಕ ಮಹಾ ಸಿದ್ಧಿಗಳು ಬಿಡವು. ಒಂದೊಂದರಿಂದೊಂದು ಸಿದ್ಧಿ. ಅಂಗ ಮೂರರಲ್ಲಿ ಲಿಂಗ ಸಂಬಂಧವಾಗಿ ಲಿಂಗ ಮೂರರಲ್ಲಿ ವಸ್ತುತ್ರಯವ ಪೂಜಿಸಿ ತತ್ಪ್ರ ಸಾದ ಗ್ರಾಹಕ ಭಕ್ತನಲ್ಲದೆ ಬಾಲಬ್ರಹ್ಮಿಗೆ ಭಕ್ತನೆನ್ನಬಹುದೇನಯ್ಯ ಕಪಿ ಲಸಿದ್ಧಮಲ್ಲಿಕಾರ್ಜುನಾ?

೨೫೭. ತನು ಕೊಡುವಡೆ ಗುರುವಿನದು. ಮನ ಕೊಡುವಡೆ ಲಿಂಗದ್ದು. ಧನ ಕೊಡುವಡೆ ಜಂಗಮದ್ದು. ಅವರ ಪದಾರ್ಥವ ಅವರಿಗೆ ಕೊಟ್ಟು ಭಕ್ತನಾದೆವೆಂಬವರ ಹಿರಿಯತನದ ಕೇಡು ನೋಡಯ್ಯ ಕಪಿಲ ಸಿದ್ಧಮಲ್ಲಿಕಾರ್ಜುನಾ.

೨೫೮. ತನು ಕೊಟ್ಟು ಬಳಿಕ ದೇಹವೆಲ್ಲಿಹದೊ? ಧನ ಕೊಟ್ಟು ಬಳಿಕ ಭೋಗಗಳೆಲ್ಲಿಹವೊ? ಇವೆಲ್ಲ ಬರಿಯ ಭ್ರಮೆ. ಕೊಟ್ಟೆವೆಂ ಬವರ ಮುಖವ ನೋಡಲಾಗದು. ಕೊಟ್ಟು ಭಕ್ತನಾದೆನೆಂಬ ನುಡಿ ಸಮನಿಸದಯ್ಯ ಗುರುವೆ ನಿಮ್ಮ ಶರಣರ ಬುದ್ಧಿಗೆ ಕಪಿಲಸಿದ್ಧಮಲ್ಲಿಕಾ ರ್ಜುನಾ.

೨೫೯. ಜಲದಲ್ಲಿ ನೊರೆ ತೆರೆ ಬುದ್ಬುದವಿದ್ದಂತೆ, ಕನಕದಲ್ಲಿ ಅಲಂಕಾ ರವಿದ್ದಂತೆ ಬೀಜದಲ್ಲಿ ಎಲೆ ಶಾಖೆ ಬೀಜವಿದ್ದಂತೆ ಒಂದೇ ವಸ್ತುವಿನಲ್ಲಿ ಗುಣತ್ರಯವಾದವು. ಗುಣತ್ರಯದಿಂದ ಮಲತ್ರಯಂಗಳಾದವು. ಮಲ

ತ್ರಯಂಗಳಿಂದೆ ಲೋಕ ರಚನೆ ಹೆಚ್ಚಿತ್ತು. ಲೋಕ ರಚನೆ ಹೆಚ್ಚಿದಲ್ಲಿ ಪಾಪ ಪುಣ್ಯಗಳಾದವು. ಪಾಪ ಪುಣ್ಯಗಳಿಂದೆ ಸ್ವರ್ಗ ನರಕವೆಂದಾಯಿತ್ತು. ಸ್ವರ್ಗ ನರಕದಿಂದ ಬೇಧವಾಗಿ ಕೆಟ್ಟ ಕೇಡು ನೋಡಿ ತನ್ನ ಮಾಯೆ ಸೆಳೆದನು. ಸೆಳೆವಲ್ಲಿ ಸರ್ವವು ಲಯುವಾಗಿ ನೀನೊಬ್ಬನೆ ಉಳಿದೆ. ಉಳಿದೆ ಎಂಬುದು ಶಾಸ್ತ್ರಪ್ರಸಿದ್ಧ. ಸಮುದ್ರದ ನೀರು ಮೇಘವಾಗಿ ಮೇಘದ ನೀರು ಹಳ್ಳ ಕೊಳ್ಳವಾಗಿ ಮತ್ತೆ ಸಮುದ್ರವಾದಂತೆ ನೀನಾದರೂ ಅದರಂತೆ ಒಂದೇ ಸ್ಥಲದಲ್ಲಿ ನಿಂತು ನೋಡಲೊಲ್ಲದೆ ಅನೇಕ ಸ್ಥಾನಗಳ ಧರಿಸಿ ಹೋಗುವುದದು ಉಚಿತವಲ್ಲ, ಎಲೆ ಜೀವನೆ ಎಂದು ಬೋಧಿಸಿದ ಸದ್ಗುರು ಚನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೬೦. ನಿನ್ನ ದೇಹ ನೋಡುವಡೆ ಪಂಚ ಭೌತಿಕ. ನೀ ನೋಡುವಡೆ ಜೀವಾಂಶಿಕ. ನಿನ್ನ ಧನ ನೋಡುವಡೆ ಕುಬೇರನದು. ನಿನ್ನ ಮನ ನೋಡುವಡೆ ವಾಯುವ ಕೂಡಿದ್ದು ವಿಚಾರಿಸಿ ನೋಡಿದರೆ ಬ್ರಹ್ಮನದು. ನಾ ಮಾಡುವೆನೆಂದಡೆ ಅದು ಆದಿಶಕ್ತಿ ಚೈತನ್ಯ. ನಾ ತಿಳಿದಿಹೆನೆಂದಡೆ ಅದು ಜ್ಞಾನದ ಬಲ. ಆ ಜ್ಞಾನವು ನಾ ಎಂದಡೆ ಇದಿರಿಟ್ಟು ತೋರುತ್ತಿದೆ. ತೋರುವ ಆನಂದ ಮೂರ್ತಿ ನಾ ಎಂದಡೆ ಅದು ಸಾಕ್ಷಿಯಾಗಿ ನಿಂದಿತ್ತು. ಸಾಕ್ಷಿ ಎಂಬುದದು ತಿಳಿದು ತಿಳಿಯದೆಂಬುದಕ್ಕೆ ಬಯಲಾದ ನಮ್ಮ ಕಪಿಲ ಸಿದ್ಧಮಲ್ಲಿಕಾರ್ಜುನ ತಂದೆ.

೨೬೧. ತಿಳಿದು ತಿಳಿದು ಸಾಕ್ಷಿಯಾದರೆ ತಾ ಉಳಿಯಲಿಲ್ಲ ನೋಡಯ್ಯ. ಉಳಿಯಲಿಲ್ಲ ಉಳಿಯಲಿಲ್ಲವೆಂದಡೆ ಈ ಶಬ್ದವೆಲ್ಲಿಹುದಯ್ಯ? ವಿಚಾರದಿಂದೊಳಗಾಗುವದು ಅವಿವೇಕದಿಂದ ದೂರಾಗುವದು. ಸರ್ವ ಜಗದ್ರೂಪು ನಿಮ್ಮದೆಂದು ನಂಬಿ ಸಕಲ ಲೋಕಾಲೋಕಕ್ಕೆ ಕೈ ಮುಗಿದೆ ನೋಡಾ ಕಪಿಲಸಿದ್ಧಮಕಾರ್ಜುನಾ.

೨೬೨. ಉಪದೇಶ ಮಾಡಿದಲ್ಲಿ ಗುರುವೆನಿಸಿದನು. ಕಾಮಿತ ಫಲಂಗಳ ಕೊಟ್ಟಲ್ಲಿ ಲಿಂಗಮೂರ್ತಿ ಎನಿಸಿದನು. ನಿತ್ಯ ನಿರ್ವಾಣದ ಸಕೀಲವ ತೋರಿದಲ್ಲಿ ಜಂಗಮವೆನಿಸಿದನಯ್ಯ, ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೨೬೩. ಲಿಂಗ ನೋಡಿದಡೆ ಮೈಗೊಟ್ಟುದಯ್ಯ ಷೋಡಶೋಪಚಾರಗಳಿಗೆ. ಜಂಗಮ ನೋಡುವಡೆ ಮೈಗೊಟ್ಟನಯ್ಯ ನಿರಾಕಾರಕ್ಕೆ. ಗುರು

ನೋಡುವಡೆ ಭವದ ಬೇರು ಅಳಿಯಬೇಕೆಂದು ಸಾಕಾರವಾಗಿ ನಿಂದು ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೨೬೪. ಗುರುವಿನಿಂದ ಲಿಂಗವ ಕಂಡೆನಲ್ಲದೆ ಲಿಂಗದಿಂದ ಲಿಂಗವ ಕಾಣಲಿಲ್ಲಯ್ಯ. ಲಿಂಗದಿಂದ ಫಲಪದವಿಗಳ ಕಂಡೆನಲ್ಲದೆ ಫಲಪದಂಗಳಿಂದೆ ಫಲಪದವಿಗಳ ಕಾಣಲಿಲ್ಲವಯ್ಯ. ಜಂಗಮದಿಂದ ಮೋಕ್ಷವ ಕಂಡೆನಲ್ಲದೆ ಮೋಕ್ಷದಿಂದ ಮೋಕ್ಷವ ಕಾಣಲಿಲ್ಲಯ್ಯ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೬೫. ಕೆರೆಯ ನೀರು ಮರದಲ್ಲಿಯ ಪುಷ್ಪವ ಧರಿಸಿದರೇನು ಅಯ್ಯ? ಆಗುವದೆ ಆಗುವದೇ ಲಿಂಗಾರ್ಚನೆ? ನೀರನೆರಿಯಲಿಕ್ಕಾತನೇನು ಬಿಸಿಲಿಸಿಂದ ಬಳಲಿದನೆ? ಪುಷ್ಪದಿಂದ ಧರಿಸಲಿಕ್ಕಾತನೇನು ವಿಟರಾಜನೆ? ನಿನ್ನ ಮನವೆಂಬ ನೀರಿಂದ ಜ್ಞಾನವೆಂಬ ಪುಷ್ಪದಿಂದ ಪೂಜಿಸಬಲ್ಲರೆ ಭಕ್ತನೆಂಬೆ ಮಹೇಶ್ವರನೆಂಬೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೬೬. ದೇಹ ಕಂದಿದರೇನು? ದೇಹ ಇಂದುವಿನಂತಾದರೇನು? ದೇಹ ಬಾತುಬಿದ್ದರೇನು? ದೇಹ ಇದ್ದ ಯೋಗ್ಯತೆಗೆ ವೈಗೊಟ್ಟರೇನಯ್ಯ? ಅಂತರಂಗ ಶುದ್ಧವಾದ ಬಳಿಕ ಹೇಗಿದ್ದರೇನಯ್ಯ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೬೭. ದೇಹ ನಿರ್ದೇಹಿಗೊಪ್ಪಿಸಿದಲ್ಲಿ ದೇಹ ನಿರ್ದೇಹವಾಯಿತ್ತು. ಮನ ಲಿಂಗಕ್ಕರ್ಪಿಸಿದಲ್ಲಿ ಮನ ಲಿಂಗವಾಗಿ ಮನ ಲಯವಾಯಿತ್ತು. ಭಾವ ತೃಪ್ತಿಗರ್ಪಿಸಿ ಭಾವ ಬಯಲವಾಯಿತ್ತಯ್ಯ. ದೇಹ ಮನ ಭಾವವಳಿದಲ್ಲಿ ಕಾರಣ ಕಾಯ ಅಕಾಯವಾಯಿತ್ತು. ಎನ್ನ ದೇಹದ ಸುಖವ ಲಿಂಗ ಭೋಗಿಸುವದಾಗಿ ಶರಣ ಸತಿ ಲಿಂಗ ಪತಿ ಎಂಬ ಭಾವ ಅಳವಟ್ಟಿತ್ತಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನ.

೨೬೮. ಗಂಧ ವೃಕ್ಷವ ಕಡಿದಲ್ಲಿ ನೊಂದೆನೆಂದು ಗಂಧವ ಬಿಟ್ಟಿತ್ತೆ ಅಯ್ಯ? ಚಂದ ಸುವರ್ಣವ ತಂದು ಕಾಸಿಬಡಿದೊಡೆ ನೊಂದೆನೆಂದು ಕಳಂಕ ಹಿಡಿಯಿತ್ತೆ ಅಯ್ಯ? ಸಂದು ಸಂದು ಕಡಿದ ಕಬ್ಬು ಯಂತ್ರದಲ್ಲಿಟ್ಟು ತಿರುಹಿ ಕಾಸಿದರೆ ನೊಂದೆನೆಂದು ಸಿಹಿಯಾಗುವದ ಬಿಟ್ಟಿತ್ತೆ ಅಯ್ಯ? ತಂದು ತಂದು ಭವಕಟ್ಟೆ ಬಿಟ್ಟರೆ ನಿಮ್ಮರಿವು ಬಿಟ್ಟನೆ ಅಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೨೬೯. ಎಂದಿಪ್ಪೆನಯ್ಯ ಲಿಂಗ ಪೂಜೆಯ ಮಾಡುತ್ತ ಎಂದಿಪ್ಪೆನಯ್ಯ ಜಂಗಮವನರ್ಚಿಸುತ್ತ ಎಂದಿಪ್ಪೆನಯ್ಯ? ಪ್ರಮಥ ಭೋಜನ ಪಂಕ್ತಿಯಲ್ಲಿ ಎಂದಿಪ್ಪೆನಯ್ಯ ನಮ್ಮ ಚನ್ನಬಸವಣ್ಣನ ಪಾದೋದಕ ಪ್ರಸಾದವ ಸೇವಿಸುತ್ತ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ?

ಪ್ರಭುದೇವರು ಸಿದ್ಧರಾಮದೇವರನು ಕಲ್ಯಾಣಕ್ಕೆ ಕರಕೊಂಡು ಹೋಗಿ ಕೆಲವು ವಚನಗಳಿಂದ ತಾನು ಸಿದ್ಧರಾಮೇಶ್ವರನಿಗೆ ಲಿಂಗ ವಿರಹಿತ ಅಂಗಕ್ಕೆ ಮೋಕ್ಷವಿಲ್ಲೆಂದು ಹೇಳಿ ಬಸವಣ್ಣ ಚನ್ನಬಸವಣ್ಣ ಮಡಿವಾಳ ಮಾಚಿ ಮೊದಲಾದ ಶರಣರಿಂ ಧಿಕ್ಕರಿಸಿ ನುಡಿಸಿದಲ್ಲಿ ಸಿದ್ಧರಾಮೇಶ್ವರ ದೇವರು ತಮ್ಮ ಜ್ಞಾನದೃಷ್ಟಿಯಿಂದರಿದರಿದು ಅವರೊಡನೆ ಎನಗೆ ಇಷ್ಟಲಿಂಗವ ಸಂಬಂಧವ ಮಾಡಬೇಕೆಂದು ಹಾಡಿದ ವಚನಗಳು ಅದೆಂತೆಂದೊಡೆ

೨೭೦. ಸ್ಥೂಲವಾದಡೇನು ಸೂಕ್ಷ್ಮವಿಲ್ಲದನ್ನಕ್ಕರ? ಕಳೆಯುಳ್ಳವರಾದರೇನು ಕುಲವಿಲ್ಲದನ್ನಕ್ಕರ? ಜಲವಾದರೇನು ಸ್ಥಲ ಯೋಗ್ಯವಲ್ಲದನ್ನಕ್ಕರ? ಆ ಕಲಿ ಮಹಿಮನಾದರೇನು ಕಲಾಮೂರ್ತಿ ಇಷ್ಟಲಿಂಗವಿಲ್ಲದನ್ನಕ್ಕರ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೨೭೧. ಎಂದಿಪ್ಪೆನಯ್ಯ ಲಿಂಗ ಪೂಜೆಯ ಮಾಡುತ್ತ? ಎಂದಿಪ್ಪೆನಯ್ಯ ಜಂಗಮವನರ್ಚಿಸುತ್ತ? ಎಂದಿಪ್ಪೆನಯ್ಯ ಪ್ರಮಥ ಸಹಭೋಜನ ಪಂಕ್ತಿಯಲ್ಲಿ? ಎಂದಿಪ್ಪೆನಯ್ಯ ನಮ್ಮ ಚನ್ನಬಸವಣ್ಣನ ಪಾದೋದಕ ಪ್ರಸಾದವ ಸೇವಿಸುತ್ತ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

ಸಿದ್ಧರಾಮೇಶ್ವರನ ಭಕ್ತಿಭಾವಕ್ಕೆ ಮೆಚ್ಚಿ ಸರ್ವರೂಪಾಗಿ ನಿಂದ ಚನ್ನಬಸವಣ್ಣ ತಾನು ಉಪದೇಶಮಾಡಿ ದೀಕ್ಷಾತ್ರಯಂಗಳಿಂ ಲಿಂಗಧಾರಣ ಮಾಡಲಾ ಸಮಯದೊಳು ಹಾಡಿದ ವಚನ.

೨೭೨. ನಂಬಿದೆನಯ್ಯ ಲಿಂಗವ ನೋಡಿ. ನಂಬಿದೆನಯ್ಯ ಲಿಂಗದೊಡಗೂಡಿ. ನಂಬಿದೆನಯ್ಯಾ ನಾನೆ ಚನ್ನಬಸವಣ್ಣನೆಂದು ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೭೩. ಇನ್ನು ಹೊಗಳುವೆನಯ್ಯ ಲಿಂಗದ ಕುಲಾವಳಿಗಳನೆತ್ತಿ. ಇನ್ನು ಹೊಗಳುವೆನಯ್ಯ ಜಂಗಮದ ಜ್ಞಾನವ ಕಂಡು. ಇನ್ನು ಹೊಗ

ಳುವೆನಯ್ಯ ಚನ್ನಬಸವಣ್ಣನೆಂಬ ಪರಾತ್ಪರ ಗುರು ಮೂರ್ತಿಯ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೭೪. ಮಾಡಬೇಕು ಮಾಡಬೇಕು ಮನ ಒಲಿದು ಲಿಂಗಪೂಜೆಯ. ನೋಡಬೇಕು ನೋಡಬೇಕು ಮನ ಒಲಿದು ಲಿಂಗ ಸಂಭ್ರಮವ. ಹಾಡಬೇಕು ಹಾಡಬೇಕು ಮನ ಒಲಿದು ಲಿಂಗಸ್ತೋತ್ರವ. ಕೂಡಬೇಕು ಕೂಡಬೇಕು ಕಪಿಲಸಿದ್ಧ ಮಲ್ಲಕಾರ್ಜುನ ಎನ್ನ ಗುರು ಚನ್ನಬಸವಣ್ಣ ಕೊಟ್ಟ ಇಷ್ಟಲಿಂಗದ ಅಡಿಯಲ್ಲಿ.

೨೭೫. ಮಾಡುವೆನಯ್ಯ ಪೂಜೆಗೆಂದು ದ್ರವ್ಯನಾಶವನು. ನೋಡುವೆನಯ್ಯ ಲಿಂಗ ಸಂಭ್ರಮಕೆಂದು ಪೂದೋಟಗಳ. ಹಾಡುವೆನಯ್ಯ ನಾಟ ರಚನೆಗೆಂದು ಗಾನವ. ಕೂಡುವೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ ಇಷ್ಟಲಿಂಗದಲ್ಲಿ.

೨೭೬. ಮದ್ದು ತಿಂದ ಮನುಜನಂತೆ ವ್ಯರ್ಥ ಹೋಗದಿರಾ ಮನವೆ. ವರ್ಷದಲಾದರೂ ಒಂದು ದಿವಸ ಶಿವರಾತ್ರಿಯ ಮಾಡು ಮನವೆ ಕಪಿಲಸಿದ್ಧಮಲ್ಲೇಶನೆಂಬ ಇಷ್ಟಲಿಂಗಕ್ಕೆ

೨೭೭. ಲೋಕದಲ್ಲಿ ಸಾರ್ವಭೌಮರು ತಮ್ಮ ರಾಣಿಯರಿಗೆ ವೈಗೊಟ್ಟರಲ್ಲದೆ ಮೂಲೋಕದರಸ ಎನ್ನ ಕಪಿಲಸಿದ್ಧಮಲ್ಲೇಶನೆಂಬ ಇಷ್ಟಲಿಂಗಕ್ಕೆ ವೈಗೊಡದೆ ಭವಕ್ಕೀಡಾದರು ಮನವೇ ತಿಳಿ ನೀನು ಕಂಡ್ಯಾ.

೨೭೮. ನೋಡಯ್ಯ ನೋಡಯ್ಯ ಲಿಂಗದ ಮಹಿಮೆಯ. ತಾನು ಸೋಂಕಿ ಎನ್ನ ಕಳೆದ. ಎನ್ನ ಸೋಂಕಿ ತಾನೆ ಉಳಿದ ನೋಡಯ್ಯ. ನೋಡಯ್ಯ ಲಿಂಗದ ಮಹಿಮೆಯ. ತಾನೆಂಬುದನುಳುಹದೆ ನಿಃಶೂನ್ಯನಾಗಿ ನಿಂದ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೨೭೯. ಲೋಕದಲ್ಲಿ ವಿಟರೆಲ್ಲ ವಾರಾಂಗನೆಯ ನೋಡಿದರಲ್ಲದೆ ನಮ್ಮ ವಾರಾಂಗನನೊಬ್ಬರು ನೋಡಲಿಲ್ಲಯ್ಯ. ಲೋಕದಲ್ಲಿಹ ಕುಶಲರೆಲ್ಲ ಜಂಗಮದೊಂದಿಗೆ ನುಡಿದರಲ್ಲದೆ ಎಮ್ಮ ಲಿಂಗನನೊಂದಿ ಒಬ್ಬರು ನುಡಿದವರಿಲ್ಲ ಕಂಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನ ನಾನೊಬ್ಬನೆ ಪ್ರಮಥರ ಮುಂದೆ.

೨೮೦. ಲಿಂಗಾರ್ಚನಾತ್ಪರಂ ಪೂಜ್ಯಮೆಂಬ ಶಾಖೆಯು ಇಂದನು ಭವಕ್ಕೆ ಬಂದಿತ್ತಯ್ಯ. ಲಿಂಗಾಗೀ ಪರಮೋ ಶುಚಿಃ ಎಂಬ ಸಾಮವೇದ

ಶಾಖೆ ಸಮನಿಸಿತ್ತಯ್ಯ. ಮುನ್ನ ಮಾಡಿದ್ದೇ ಮಾಡಿದೆ ಹೋಮವನಿನ್ನು ಮಾಡಿದಡೆ ತಲೆದಂಡ ಕಪಿಲಸಿದ್ಧಮಲ್ಲಿಕಾರ್ಜುನಾ.

೨೮೧. ಲಿಂಗಬಂದು ಲಿಂಗಗಳಳಿಯಿತ್ತಯ್ಯ. ಲಿಂಗವೆ ಲಿಂಗ ಬಂದು ಲಿಂಗಗಳೀಡಾಡಿತ್ತಯ್ಯ. ಲಿಂಗವೆ ಲಿಂಗಬಂದು ಲಿಂಗ ಉಳಿಯಿತ್ತಯ್ಯ ಲಿಂಗವೆ ಗುರು ಲಿಂಗವೆ ಜಂಗಮ ಲಿಂಗವೆ ನಾನು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೮೨. ದರ್ಪಣದಲ್ಲಿ ಮುಖವ ನೋಡುವರಲ್ಲದೆ ದರ್ಪಹರನಲ್ಲಿ ಮುಖವ ನೋಡುವರೊಬ್ಬರು ಇಲ್ಲ ನೋಡಯ್ಯ. ನ್ಯಾಯದಲ್ಲಿ ದ್ರವ್ಯವ ಕೊಡುವರಲ್ಲವೆ ನ್ಯಾಯಾತೀತನ ಪೂಜೆಗೆ ಒಬ್ಬ ಭಂಡಾರವೀಡಾಡಲಿಲ್ಲ ಕಪಿಲಸಿದ್ಧ ಮಲ್ಲಿಕಾರ್ಜುನಗಳ್ಳರೂ.

೨೮೩. ಪುಣ್ಯಪಾಪಗಳೆಂಬುವ ದಾರಿಗರಿಕೆಯುಂಟಯ್ಯ? ಪುಣ್ಯವಂತಿರಲಿ, ಪಾಪವಂತಿರಲಿ, ಪೂಜಿಸಿ ಪಡೆವುದದು ಪುಸಿಯಲ್ಲ. ಇದು ಕಾಕು ಭಾಷೆ ಎಂದಲ್ಲಿ ಪೂಜಿಸಿದವಂಗೆ ಸಂಪದಾದಿಶಕ್ತಿ ಮುಕ್ತಿ ಬರುವದೇನಿಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೮೪. ಆಗುವದಾದರೆ ನಿನ್ನ ಪೂಜೆಯದೇಕೊ ಲಿಂಗ ಲಿಂಗಯ್ಯ? ಯಥಾ ಭಾವಸ್ತಥಾ ದೇವ ಎಂಬ ಭಾವವಿದ್ದೆಡೆಯಲ್ಲಿ ಆದಂತಾಗಲಿ ಹೋದಂತೆ ಹೋಗಲಿ. ನಿಮಗೆ ಪೂಜಿಸಿದವರಿಗೆ ಸಂಪದಾದಿ ಮಹದೈಶ್ವರ್ಯ ತಪ್ಪದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೮೫. ಅಂಗಕ್ಕೆ ಕೊಡುವ ಭೋಗಂಗಳ ಲಿಂಗಕ್ಕೆ ಕೊಟ್ಟು ನೋಡಿರಯ್ಯ. ಲಿಂಗಕ್ಕೆ ಕೊಟ್ಟ ಭೋಗಂಗಳು ಅಂಗಂಗಳಾದವು. ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ ಎನ್ನ ಭೋಗಂಗಳು ಲಿಂಗಭೋಗಂಗಳು.

೨೮೬. ಅಂಗವೆಂದರೆ ಅಜ್ಞಾನ, ಲಿಂಗವೆಂದರೆ ಸುಜ್ಞಾನ. ಲಿಂಗ ವಿಡಿದು ಆಚರಿಸುವದಲ್ಲದೆ ಅಂಗವಿಡಿದು ಆಚರಿಸಬಾರದು ಬಸವಾದಿ ಪ್ರಮಥರು.

೨೮೭. ಲಿಂಗದಲ್ಲಿ ಬೆರೆದಲ್ಲಿ ಬೆರೆದ ಬಳಿಕ ಅಂಗದಲ್ಲಿ ಬೆರೆಯಲುಂಟೆ ದೇವಾ? ಎಲೆ ಅಲ್ಲಲ್ಲ. ಅಂಗದಲ್ಲಿ ಬೆರೆದ ಬಳಿಕ ಲಿಂಗ ಬೆರೆಯಲುಂಟೆ

ದೇವಾ ಕಪಿಲಸಿದ್ಧಮಲ್ಲಿಕಾರ್ಜುನಾ ನಿಮ್ಮ ಪೂಜಿಸಿದ ಫಲ ಪಕ್ವವಾಗದನ್ನಕ್ಕ?

ಪ್ರಭುದೇವರ ಸನ್ನಿಧಿಯಲ್ಲಿ ಬಿನ್ನೈಸಿದ ವಚನ.

೨೮೮. ಭೂಮಿ ಒಂದಾದರೆ ಬೆಳೆವ ವೃಕ್ಷ ಹಲವು ತೆರನುಂಟು. ಉದಕ ಒಂದಾದಡೆ ಸವಿ ಸಾರ ಸಂಪದ ಬೇರುಂಟು. ನಿನ್ನೊಳಗೆ ನಾನಾದಡೆ ತಾಮಸದ ರಾಗ ವಿರಾಗವಾಗದು. ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವೆಂಬ ಪುರುಷ ರತಿ ಕೂಟಸ್ಥವಿಲ್ಲ.

ಕಲ್ಯಾಣದ ಮಹಾ ಮನೆಯಲ್ಲಿ ಹಾಡಿದ ವಚನ॥

೨೮೯. ಎಲೆ ದೇವಾ ಒಂದು ಹೋಗಿ ಎರಡಾದುದು, ಎರಡು ಹೋಗಿ ಮೂರಾದುದು, ಮೂರು ಹೋಗಿ ಮೂವತ್ತಾರಾದುದು, ಮೂವತ್ತಾರಾಗಿ ಮೂರರಲ್ಲಿ ಆಡಿದುದು ಆಡಿ ಆಡಿ ಅರೆ ಲಿಂಗವಾಯಿತ್ತು. ನಮ್ಮ ಗುರು ಚನ್ನಬಸವಣ್ಣನೊಂದು ಕೊಟ್ಟಲ್ಲಿ ಎಲ್ಲ ಒಂದೇ ಆಯಿತ್ತು ಕಪಿಲಸಿದ್ಧಮಲ್ಲಿಕಾರ್ಜುನಾ.

೨೯೦. ಅಂಗ ಒಂದಾದ ಬಳಿಕ ಲಿಂಗೇಂದ್ರಿಯಂಗಳಾಚರಿಸಲಾಗದು. ಅಂಗೇಂದ್ರಿಯಂಗಳು ಹೋಗಿ ಲಿಂಗೇಂದ್ರಿಯಂಗಳಾಗಿ ಆಚರಿಸುವದು. ಘೃತೋ ಭೂತ್ವಾ ಕಥಂ ಕ್ಷೀರಂ ಭವತ್ಯೇವಂ ವರಾನನೆ ಎಂಬಾಗಮೋಕ್ತ ಪುಸಿಯಾಯಿತ್ತೆ ಆಗಿ ಆಚರಿಸಿದರೆ ಭವ ಹಿಂಗದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೯೧. ವೀರನಾದರೆ ವೈರಿಗಳ ಕಾಟ ಬಹಳವಯ್ಯಾ. ದಾನ ಶೂರನಾದರೆ ಯಾಚಕರ ಗೋಳು ಬಹಳವಯ್ಯಾ. ಅತಿ ರೂಪನಾದರೆ ಅಂಗನೆಯರ ಕಾಟ ವಿಶೇಷವಯ್ಯಾ. ಮೂರರಲ್ಲಿ ನಿಂತರೆ ಮಲತ್ರಯಂಗಳ ಘೋರ ಹೆಚ್ಚಾಯಿತ್ತಯ್ಯಾ. ಅಂಗದಲ್ಲಿ ಲಿಂಗಸಂಬಂಧವಾಗಬಾರದು. ಆದ ಬಳಿಕ ವೀರನಾಗಿ ವಿಷಯಗಳಳಿವುದು ಬಹುಘೋರವು ಬಹು ಘೋರವು ನೋಡಯ್ಯ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೯೨. ವರ್ಮವನರಿಯದವರಿಗೆ ನಿಮ್ಮವರು ಸುಲಭವೇ ಅಯ್ಯಾ? ಲೋಕದಲ್ಲಿ ಲಿಂಗಭಕ್ತಿ ಜಂಗಮಭಕ್ತಿ, ಗುರುಭಕ್ತಿ ಸುಲಭವೇ ಅಯ್ಯಾ? ಲಿಂಗಭಕ್ತ ಪ್ರಭುದೇವರು ಜಂಗಮ ಭಕ್ತ ಬಸವಣ್ಣ ಗುರು ಮೊದ

ಲಾದ ಸರ್ವ ಪ್ರಸಾದಕ್ಕೆ ಅನುಭಾವಿ ಚನ್ನಬಸವಣ್ಣ ಕಪಿಲಸಿದ್ಧ ಮಲ್ಲಿಕಾರ್ಜುನ ನಿಮ್ಮವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

೨೯೩. ಇಂತೀ ಭಕ್ತಿಸ್ಥಲದ ಮರ್ಮವನು ಲೋಕಕ್ಕೆ ನಿಶ್ಚಿಂತವಮಾಡಿ ತೋರಿದ ತನ್ನ ಪದದುನ್ನತವಹ ಏಕೈಕ ಸದ್ಭಾವರಿಗಿತ್ತ ಎನ್ನ ಗುರು ಚನ್ನಬಸವಣ್ಣನು ಬಸವ ಚನ್ನಬಸವನೆಂಬ ಮಹಾ ಸಮುದ್ರದೊಳಗೆ ಹರುಷಿತನಾದೆನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೨೯೪. ಮೂರಕ್ಕೆ ಮೂರಾಗಿ ಮೂರು ತನ್ನಯ ಸೀಮೆ ಮೂರೊಂದಾದನಯ್ಯ ಬಸವಣ್ಣನು. ಅರಮನೆಯಲ್ಲಿದ್ದು ಆರರ ಮೇಲೆ ಮೀರಿಪ್ಪ ಭಕ್ತಿಯಲ್ಲಿ ತೋರಿಪ್ಪುದೀಗ ತನ್ನಯ ರೂಪು. ರೂಪಾರೂಪಂ ಚನ್ನಬಸವಣ್ಣನಿಂದ ಆನು ನೀನಾದೆನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೨೯೫. ಗುರುಲಿಂಗ ಬಸವಣ್ಣ ಚರಲಿಂಗ ಬಸವಣ್ಣ ಕರುಣಾಕರ ಚನ್ನಬಸವಣ್ಣ ಆ ಬಸವಣ್ಣನ ಕೃಪೆಯಿಂದ ಆದಿ ಅಕ್ಷರವರಿದು ಭೇದಿಸಿದೆ ನಿಮ್ಮುವನು ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೨೯೬. ಯೋಗ ಭೂಷಣ ನಿಮ್ಮ ಆದಿ ಅಕ್ಷರ ಭೇದ ಆದಿ ಆಧಾರಗಳಿಲ್ಲದಂದು ಆನಂದಸ್ಥಾನದಲ್ಲಿಪ್ಪ ಗುರು ಬಸವಣ್ಣ ತಾನೆನ್ನ ಕರುಣದಿಂ ನಿತ್ಯನೆನಿಸಿ ಯೋಗ ಸಿದ್ಧಾಂಗದಲ್ಲಿ ಆದ ಪಂಚಬ್ರಹ್ಮದಿಂದ ಆಗೊರೆದೆನಯ್ಯ ಚನ್ನಬಸವ ತಂದೆ ಯೋಗ ಮೂರುತಿ ನೀನೆನ್ನ ಗುರುವಾಗಿ ಶಿವಯೋಗಿಯಾನಾದೆನಯ್ಯ. ನಿನ್ನವರ ಹೊರಗೆಯ್ದಿದೆ ಯೋಗಿ ಗುರು ಪ್ರಭುರಾಯ ನಾ ನಿಮ್ಮ ಕರುಣದಿಂದ ಶಿವಯೋಗಮುದ್ರೆಯ ನೆನೆದು ಸುಖಿಯಾದೆನು. ಆಗಮಕ್ಕೊಳಗಾದ ಆಗಮಕ್ಕೆ ಹೊರಗಾದ ಆನಂದ ಸ್ಥಾನದಲ್ಲಿ ಸ್ವಯಮಾದನಯ್ಯ ದೇವಾ. ಯೋಗ ಜ್ಞಾನ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯನ ಕರುಣ ನಿಮಗಾಯಿತ್ತಯ್ಯ ಶ್ರೀಗುರು ಚನ್ನ ಬಸವಣ್ಣ ತಂದೆ.

೨೯೭. ಸ್ಫಟಿಕದ ಮಾಟದೊಳಗಿನ ನಿಟಿಲಾಕ್ಷನ ಮಾಟ ಸ್ಫಟಿಕದಲ್ಲಿ ದೀಪ್ತಿಸಿತ್ತಯ್ಯ. ದೇಶಿಯು ದೇಶಿಗಾಗಿಯೂ ಶಿಸುವಿನ ಮಸ್ತಕದಲ್ಲಿ ಒಸರುತ್ತಿರ್ದುದು ಭಕ್ತಿಸ್ಥಲ. ದೆಸೆದೆಸೆಯಲ್ಲಿ ಬಸವಾ ಚನ್ನಬಸವಾ ಎಂದು ದೆಸೆಗೆಟ್ಟೆ ನಾನೀಗ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೨೯೮. ಕುಂಬಾರರೆಲ್ಲರು ಗುಂಡಯ್ಯನಾಗಬಲ್ಲರೆ? ಮಡಿವಾಳರೆಲ್ಲರು ಮಾಚಯ್ಯನಾಗಬಲ್ಲರೇನಯ್ಯ? ಜೇಡರೆಲ್ಲರು ದಾಸಿಮಯ್ಯನಾಗಬಲ್ಲರೆ?

ಎನ್ನ ಗುರು ಕಪಿಲಸಿದ್ಧಮಲ್ಲೇಶ್ವರಯ್ಯ ಪ್ರಾಣಿಗಳ ಕೊಂಮ ಪರಿಹರಿಸಬಲ್ಲರೆ ತೆಲಗು ಜೊಮ್ಮಯ್ಯನಾಗಬಲ್ಲರೆ?

೨೯೯. ಶುದ್ಧ ಗುರು ಬಸವಣ್ಣ, ಸಿದ್ಧ ಗುರು ಚನ್ನಬಸವಣ್ಣ ಪ್ರಸಿದ್ಧ ಗುರು ಪ್ರಭುರಾಯನು. ತನುತ್ರಯ ಮಲತ್ರಯ ಆರನತಿಗಳೆದು ಲಿಂಗತ್ರಯ ಪ್ರಸಾದ ಮೂರನು ಪರಿಭವಿಸಿ ವಶಮಾಡಿ ಎನ್ನ ರಕ್ಷಿಸಿದ ಬಸವಪ್ರಭು ಶರಣೆಂದು ಬದುಕಿದೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೩೦೦. ಆದಿ ಆಧಾರದಲ್ಲಿ ಆದಿ ಇಲ್ಲದ ಮುನ್ನ ಅನಾದಿ ಸಂಸಿದ್ಧನಯ್ಯ ಬಸವಣ್ಣನು. ಲೋಕವೀರೇಳರ ಆಕಾರವಿಲ್ಲದಲ್ಲಿ ಏಕೈಕ ರೂಪನಯ್ಯ ಚನ್ನಬಸವಣ್ಣನು. ಸಾಕಾರದಿಂದಿತ್ತ ನಿರ್ಮಾಯ ಬಂದನು. ಲೋಕಪಾವನ ಮೂರ್ತಿ ಪ್ರಭುರಾಯನು ಇಂತೆನ್ನ ಭವದ ಬೇರು ಹರಿದು ಪದುಳ ಮಾಡಿ ಶರಣರೊಳಗಿರಿಸಿದ ಗುರುವಿಂತು ಮೂವರ್ಹೈ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೩೦೧. ಇರುವರಯ್ಯ ಒಂದು ಲಕ್ಷ ಶೀಲಸಂಪನ್ನರು. ಇರುವರಯ್ಯ ಒಂದು ಲಕ್ಷ ವ್ರತಸಂಪನ್ನರು. ಇರುವರಯ್ಯ ಒಂದು ಲಕ್ಷ ಅರ್ಥಸಂಪನ್ನರು ಪ್ರಾಣಾಭಿಮಾನ ವೈರಾಗ್ಯದಿಂದ ಕೊಟ್ಟವರು. ಇವರೆಲ್ಲರು ಫಲಸಮರ್ಥರಲ್ಲದೆ ಲಿಂಗಸಮರ್ಥರು ಒಬ್ಬರೂ ಇಲ್ಲ ನೋಡಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನ ತಂದೆ

೩೦೨. ಸಿದ್ಧಾಂತಿಯ ಜ್ಞಾನ ಸಾಧನೆಯಲ್ಲಿ ಹೋಯಿತ್ತು. ವೇದಾಂತಿಯ ಜ್ಞಾನ ವಾದದಲ್ಲಿ ಹೋಯಿತ್ತು. ಕ್ರಿಯಾವಂತನ ಜ್ಞಾನ ನುಡಿಯಲ್ಲಿ ಹೋಯಿತ್ತು. ವ್ಯವಹಾರಕನ ಜ್ಞಾನ ದ್ರವ್ಯಾರ್ಜನೆಯಲ್ಲಿ ಹೋಯಿತ್ತು. ಇವೆಲ್ಲ ಭವಕ್ಕೆ ಕಾರಣವಲ್ಲದೆ ಭವ ರಹಿತ ಜ್ಞಾನವು ಸಾಧ್ಯವಾಗುವದು ದುರ್ಲಭವಯ್ಯ. ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೦೩. ಅರಿವೆನೆಂದರೆ ಸತ್ಯಜ್ಞಾನಮನಂತ ಬ್ರಹ್ಮವೆಂಬ ಶ್ರುತಿ ಸಾರುತ್ತಿದೆ. ಮರೆದೆನೆಂದರೆ ಸಾಕ್ಷಾತ್ಸಚ್ಚಿದಾನಂದ ಭವವೆಂಬ ಕರವಲ್ಯುಪನಿಷದ್ಘೋಷಿಸುತ್ತಿದೆ. ಅರಿವು ವಸ್ತುಸ್ವರೂಪ, ಮರವು ಮಾಯಾಸ್ವರೂಪವೆಂದರಾನು ನಿರ್ವಯಲ ಸ್ವರೂಪನಾದೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೦೪. ಒಂದೇ ವಸ್ತು ಭೇದವಾಗಿ ಕಾಡಿತ್ತಯ್ಯ. ಎನ್ನ ದೇಹವಸ್ತುವೆಂದಡೆ ಹಲವು ರೂಪಾಗಿ ತೋರಿತ್ತು. ಕಾರಣ ವಸ್ತುವೆಂದಡೆ

ಸ್ಥೂಲಸೂಕ್ಷ್ಮ ತಿಳಿಯದೆ ಹೋಯಿತ್ತು ಕಾರಣಾತೀತವೆಂದಡೆ ಸಾಕ್ಷಿಯಾಗಿ ಕ್ರಿಯಂಗಳ ಮಾಡಿಸಿತ್ತು. ಸಾಕ್ಷಿಯಾಗಿ ನಿಂದರುವೆ ವಸ್ತುವೆಂದರೆ ಚೇತನವಾಗಿ ನಿಂದಿತ್ತು. ಇದಿರಿರವು ಬಲ್ಲಾತನೆ ಭಕ್ತ. ನೋಡಿ ಬಯಲಾದಾತನೆ ಜಂಗಮ ಬಯಲಾಗಿ ರೂಪಕ್ಕೆ ಬಂದಾತನೆ ಪ್ರಾಣಲಿಂಗಿ ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೩೦೫. ತನು ಕೊಟ್ಟು ಭಕ್ತನಾಗಿಹೆನೆಂದರೆ ತನು ಮಲ ಭಾಂಡವಯ್ಯ. ಮನ ಕೊಟ್ಟು ಭಕ್ತನಾಗಬೇಕೆಂದರೆ, ಮನ ವಾಯುಮಿತ್ರನಯ್ಯ. ಧನ ಕೊಟ್ಟು ಭಕ್ತನಾಗಿಹೆನೆಂದರೆ ಎನ್ನ ಬಂಧುಗಳ ಭಾವ ಆದರಲ್ಲಯ್ಯ. ಇವೆಲ್ಲ ಅಶುದ್ಧ ಪದಾರ್ಥಗಳ ಕೊಟ್ಟು ಭಕ್ತನಾಗುವೆನೆ? ಆಗಲರಿಯೆನು. ಮಾಡಿ ಮಾಡಿ ಭಕ್ತನಾಗಿಹೆನೆಂಬವರಿಗೆ ಕೊಟ್ಟು ಭಕ್ತನಾಗುವೆನೆಂದರೆ, ನೀನೆಯಾಗಿ ನಿಂದಲ್ಲಿ ಕೂಡಲಿಕ್ಕಿಂಬಿಲ್ಲ. ತೆಗೆದುಕೊಂಬುವರೆ ಹಸ್ತವಿಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ ತಂದೆ.

೩೦೬. ಭೂಷಣವುಳ್ಳ ಜಂಗಮವ ಭೂಪಾಲ ಪೂಜಿಸುವ. ವೇಷವುಳ್ಳ ಜಂಗಮವ ವೇಶಿ ಪೂಜಿಸುವಳು. ವೇಷಧಾರಿ ಜಂಗಮವ ಲೋಕವೆಲ್ಲ ಪೂಜಿಸುವುದು. ಜ್ಞಾನವುಳ್ಳ ಜಂಗಮವನಾರು ಪೂಜಿಸರು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ?

೩೦೭. ಗುಣವ ನೋಡದೆ ಹೊಗಳುವ ಜಂಗಮವು ಬ್ರಹ್ಮನ ಸಂತತಿ, ಕಾಡಿ ಬೇಡುವ ಜಂಗಮವು ನಾರಾಯಣನ ಸಂತತಿ, ವ್ಯಾಪಾರಿಕ ಜಂಗಮ ಈಶ್ವರನ ಸಂತತಿ, ಹೊಗಳದೆ ಕಾಡದೆ ಬೇಡಿ ಬಲಾತ್ಕಾರದಿಂದುಣ್ಣದೆ ವ್ಯವಹರಿಸದೆ ಭಿಕ್ಷ ಮುಖದಿಂದುಂಬ ಜಂಗಮವ ನೋಡಿ ಎನ್ನ ಮನ ನೀವೆಂದು ನಂಬಿತ್ತಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೩೦೮. ವೇಷಧಾರಿ ಜಂಗಮರನಂತರುಂಟು. ವೇಷವಳಿನವರನೊಬ್ಬರನು ಕಾಣೆ. ಬಿಂದು ನಿಗ್ರಹದ ಜಂಗಮರನಂತರುಂಟು, ಬಿಂದು ರಹಿತ ಜಂಗಮವನೊಬ್ಬರನು ಕಾಣೆ. ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ ಜಂಗಮವೆನ್ನಬೇಕು ಪ್ರಭುವೇ, ಜಂಗಮವೆನ್ನಬೇಕು. ವೇಷಧಾರಿ ಎಂದು ಇನ್ನುಳಿದವರೊಪ್ಪಚ್ಚಿ ಅಳವಡೆಂದರೆ ಅಳವಡದು ನೋಡಾ ನಿನ್ನ ಮುಂದೆ.

೩೦೯. ಸುವರ್ಣಕ್ಕೆ ಅಲಂಕಾರಕ್ಕೆ ಭೇದ ಉಂಟೆ ಅಯ್ಯ? ಜ್ಯೋತಿಗೆ ಪ್ರಕಾಶಕ್ಕೆ ಭೇದ ಉಂಟೆ ಅಯ್ಯ? ನೂಲಿಂಗೆ ಪಟಕ್ಕೆ ಭೇದ ಉಂಟೇ

ಅಯ್ಯ? ಎಲೆ ಕಪಿಲಸಿದ್ಧಮಲ್ಲಿಕಾರ್ಜುನ ಚನ್ನಬಸವಣ್ಣಂಗೆ ನನಗೆ ಭೇದ ಉಂಟೆ ಅಯ್ಯ? ಇಲ್ಲ ನೋಡಾ ಪ್ರಭುವೆ.

೩೧೦. ಜನನ ಮರಣ ದೇಹ ಧರ್ಮಕ್ಕಲ್ಲದೆ ಜಂಗಮಕ್ಕೆಲ್ಲಿಹದೊ? ಕ್ಷುಧಾತೃಷೆ ಪ್ರಾಣ ಧರ್ಮವಲ್ಲದೆ ಜಂಗಮಕ್ಕೆಲ್ಲಿಹದೊ? ಸುಖದುಃಖ ಮನೋಧರ್ಮವಲ್ಲದೆ ಜಂಗಮಕ್ಕೆಲ್ಲಿಹದೊ? ಜ್ಞಾನಾಜ್ಞಾನಂಗಳು ಮುಮುಕ್ಷುವಿಂಗಲ್ಲದೆ ನಿಮ್ಮಲ್ಲಿ ಸಮರಸವಾದ ಸಚ್ಚಿದಾನಂದ ಶಿವಯೋಗಿ ಜಂಗಮಕ್ಕೆಲ್ಲಿಹದೊ ಕಪಿಲಸಿದ್ಧಮಲ್ಲಿಕಾರ್ಜುನಾ?

೩೧೧. ಜಂಗಮವ ಪೂಜಿಸುವಡೆ ಜಗದ್ಭರಿತ ನೋಡಾ. ನೋಡುವಡೆ ಏಕದೇಶಿ ನೋಡಯ್ಯ. ಲಿಂಗವ ಪೂಜಿಸುವಡೆ "ಲಿಂಗಮಧ್ಯೆಜಗತ್ಸರ್ವಂ" ಎಂಬ ಶೃತಿ ಸಾರುತ್ತದೆ. ಗುರುವ ಪೂಜಿಸುವಡೆ ಶಿರತ್ಯಾಜ್ಞಾಂ ಗುರು ಎಂಬ ಸಮಾಸವಿರುತ್ತದೆ. ಇವೆಲ್ಲ ನನಗೆ ಅಸಾಧ್ಯ ನೋಡಾ. ನಿನ್ನ ಪೂಜಿಸಿ ನಿನ್ನ ಕೈಕೊಂಬ ಪರಿಯು ಹೇಳಾ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೩೧೨. ಉದಕದಿಂದ ಅಭಿಷೇಕಂಗೈವಡೆ ಒದವಿದವು ನೋಡಾ ನಿನ್ನುತ್ತಮಾಂಗದಲ್ಲಿ ಅರುವತ್ತೆಂಟು ಕೋಟಿ ನದಿಗಳು. ಪುಷ್ಪವ ಧರಿಸುವಡೆ ಚಂದ್ರಕಲಾ ಪ್ರಕಾಶ ಉಂಟು ನೋಡಾ ಜಟಾಗ್ರದಲ್ಲಿ. ನೀರಾಜನವೆತ್ತುವರೆ ಸೂರ್ಯ ಚಂದ್ರಾಗ್ನಿ ನೇತ್ರ ನೋಡಾ. ಸ್ತೋತ್ರವ ಮಾಡುವಡೆ ವೇದಗಳು ಹೊಗಳಿ ಹೊಗಳಿ ಮೂಗುವಟ್ಟವು ನೋಡಾ. ನಿನ್ನಮುಂಭಾಗದಲ್ಲಿ ನಾಟ್ಯವನಾಡುವಡೆ ಅದುರಿದವು ನೋಡಾ ಅಜಾಂಡಗಳು ನಿನ್ನ ಪಾದಸ್ಪರ್ಶನದಿಂದ. ಚಾಮರ ಬೀಸುವಡೆ ನೋಡಾ ಹನ್ನೊಂದುಕೋಟಿ ರುದ್ರಗರ್ಣಿಕೆಯರ ಕೈತಾಳ ಧ್ವನಿಯು. ಚಂದನ ಧರಿಸುವಡೆ ನೋಡಾ ಮಲಯಾಚಲ ನಿವಾಸಿ. ವಸ್ತ್ರವ ಧರಿಸುವಡೆ ನೋಡಾ ವ್ಯಾಘ್ರಾಸುರ ಗಜಾಸುರ ಚರ್ಮವಾಸಿ. ಭಸ್ಮವ ಧರಿಸುವಡೆ ನೋಡಾ ಕಾಮನ ಸುಟ್ಟ ಭಸ್ಮ. ಅಂಗದಲ್ಲಿ ಅಕ್ಷತಿಯು ಧರಿಸುವಡೆ ನೋಡಾ ಅಜಾಂಡಂಗಳ ದಾಟಿದ ಮಸ್ತಕ ನೋಡಾ. ಅಂತಪ್ಪ ವಿಗ್ರಹವ ಪೂಜಿಸುವಡೆನ್ನೊಳವೆ? ಶರಣನ ಮುಖದಿಂದ ಬಂದ ಪದಾರ್ಥ ಕೈಕೊಂಡು ಪೂಜಾಪ್ರೀತನಾಗಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೩೧೩. ನೀ ಒಲಿವ ಮುಖ ತಿಳಿಯದು ನೋಡಯ್ಯ ಆರಿಂಗೆ. ಬ್ರಾಹ್ಮಣನ ಮೃಷ್ಟಾನ್ನವ ಬಿಟ್ಟು ಬೇಡನ ಮಾಂಸಕ್ಕೊಲಿದೆ ದೇವಾ.

ಸೌಂದರ ಚೋಳನ ನೈವೇದ್ಯವನೊಲ್ಲದೆ ಚೋಳಿಯಕ್ಕನ ಉಚ್ಛಿಷ್ಟಕ್ಕೆ ವೈಗೊಟ್ಟೆ ದೇವಾ. ಚೋಳನ ಭೋಜನವನೊಲ್ಲದೆ ಚನ್ನಯ್ಯನ ಕೂಡ ಜಾತಿಗೆಟ್ಟು ವೈಗೊಟ್ಟು ಒಲಿದೆ ದೇವಾ. ಒಲಿಸಿಹೆನೆಂದರೆ ಅಸಾಧ್ಯ. ಒಲಿಯುನೆಂದರೆ ಒಂದರ ಗಳಿಗೆ ಶ್ವೇತಗೆ ಪದವ ಕೊಟ್ಟೆ ದೇವಾ ಎಲೆ ಕಪಿಲಸಿದ್ಧಮಲ್ಲಿಕಾರ್ಜುನ ದೇವಾ.

೩೧೪. ಒಲಿದು ಮೋಕ್ಷವ ಕೊಡಲಿ. ಕೊಡದೆ ಭವಕ್ಕೆ ಬೀಜವಾಡಲಿ. ಬಿಡೆ ಬಿಡೆನಯ್ಯ ನಿಮ್ಮ ಪೂಜೆಯ. ಬಿಡೆ ಬಿಡೆನಯ್ಯ ನಿಮ್ಮ ದಾಸೋಹವ. ಅದರ ಮಾನಾಪಮಾನವು ನಿಮ್ಮದು ನೋಡಯ್ಯ. ಎಲೆ ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಪರಮ ಪವಿತ್ರ ಇಷ್ಟಲಿಂಗವೆ.

೩೧೫. ಮಾಡದೆ ಮೋಕ್ಷವ ಪಡೆದು ಹೋದವರೆಂಬ ವಾರ್ತೆಯ ಕೇಳಿರೇನಯ್ಯ. ಇಲ್ಲ ಇಲ್ಲವು. ಮಾಡಿದರೆ ತಪ್ಪದು. ಮಾಡಲೊಲ್ಲದೆ ಹೋದರೆ ಬರುವದದು ಪಾರಾಗದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೧೬. ವಾಯು ಮಿತ್ರನಾಗುವದದು ಲೇಸು. ಮನವೆ ಬೇಡ ಬೇಡ. ಹೋದ ಹೋದಲ್ಲಿ ವಸ್ತು ರೂಪಾಗುವದದು ಅದು ಲೇಸೆ ಮನವೇ ಅಲ್ಲಲ್ಲ. ವಾಯು ಬಿಟ್ಟು ವಾಯು ವೈರಿಯಾದರೆ ವಾಯುವೆ ಮನವೆ ನಿನ್ನ ಸಾಹಸ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೧೭. ಸರ್ವ ಶಿವಮಯಂ ಜಗತ್ತೆಂಬ ವಾಕ್ಯವನರಿಯದೆ ಹೋಗದಿರಾ ಮನವೆ. ಪಂಚ ತತ್ವಸ್ವರೂಪಾಯ ಎಂಬ ಶ್ರುತಿಶಾಖೆಯನರಿಯದೆಯಲ್ಲ ಮನವೆ. ಲಿಂಗ ಮಧ್ಯೆ ಜಗತ್ಸರ್ವಂ ಎಂಬ ಮಹಾವಾಕ್ಯವ ಮರೆದೆಯಲ್ಲ ಮನವೆ. ಸರ್ಪರಜ್ಜುವೆಂದು ನಂಬಿ ಕಪಿಲಸಿದ್ಧಮಲ್ಲಿಕಾರ್ಜುನಂಗೆ ಬೇರೆಯಾದೆಯಲ್ಲ ಮನವೆ.

೩೧೮. ಮನದಲ್ಲಿ ಸಂಕಲ್ಪ ವಿಕಲ್ಪಂಗಳ ನೋಡಯ್ಯ. ಮನಸಿನ ಕಾರ್ಯವೆ ಪುಣ್ಯ ಪಾಪ ನೋಡಯ್ಯ. ಮನೋಕಾರ್ಯಂ ಜಗದ್ಭೇದವೆಂಬುದು ಭೇದವಲ್ಲ ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೩೧೯. ಮನದಲ್ಲಿ ಭೇದ. ವಸ್ತುವಿನಲ್ಲಿ ಭೇದವಿಲ್ಲವಯ್ಯ. ಕ್ರಿಯೆ ಕ್ರಿಯೆಯಲ್ಲಿ ಭೇದವಲ್ಲದೆ ಜ್ಞಾನದಲ್ಲಿ ಭೇದವಿಲ್ಲವಯ್ಯ. ರೂಪ ರೂಪದಲ್ಲಿ ಭೇದವಲ್ಲದೆ ಚೈತನ್ಯದಲ್ಲಿ ಭೇದವಿಲ್ಲನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೨೦. ದೇಹ ನಾಸೆಂದು ನಂಬಿದೆ ಎಲೆ ಮನವೆ. ದೇಹದಲ್ಲಿಹ ಗುಣಂಗಳು ನಿನ್ನಲ್ಲಿ ಕಂಡಯ್ಯಾ ಮನವೆ. ಪೃಥ್ವಿಯ ಗುಣ ಶಾಂತಿ ಉದಕದ ಗುಣ ಸ್ವಾದ ಅಗ್ನಿಯ ಗುಣ ಸರ್ವಭಕ್ಷಣ ವಾಯುವಿನ ಗುಣ ನಿರ್ಮಲತ್ವ ಆಕಾಶದ ಗುಣ ನಿರ್ಭಯಲು ಈ ಪಂಚತತ್ವದ ಗುಣ ನಿನ್ನಲ್ಲಿರಲು ನೀನೆ ಪಂಚಮುಖ ನೋಡಾ ಮನವೆ ಕಪಿಲಸಿದ್ಧಮ.ಲ್ಲಿ ಕಾರ್ಜುನಾ.

೩೨೧. ಲಿಂಗವೇ ಅಂಗವಾಗಿಹೆನೆಂಬವನ ಭಾವ ಇದರಲ್ಲೆ ನಿಶ್ಚಯ ನೋಡಾ. ಮನವೆ ನಿಂದಾಸ್ತುತಿಗಳಲ್ಲಿ ಹರ್ಷರೋಷಗಳಿಲ್ಲದಿರಬೇಕು. ನೀಚಾ ನೀಚ ಗುಣವ ನೋಡದೆ ನಮ್ರ ಭಾಷಾವಂತನಾಗಬೇಕು. ಸರ್ವ ಜೀವಿಗಳ ತನ್ನಂತೆ ತಿಳಿದು ನೋಡಬೇಕು. ಸಂಶಯಾಸಂಶಯವಳಿದು ನಿಶ್ಚಿಂತನಾಗಬೇಕು. ಆಕಾಶದ ಬೆಳಗಿನ ಬೆಳಗು ನೋಡಿ ಬೆಳಗು ಮಯ ನಾಗಬೇಕು ನೋಡಾ ಎಲೆ ಮನವೆ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ.

೩೨೨. ಲಿಂಗ ಘನವೆಂಬೆನೆ? ಕಲ್ಲಿನ ಮಗ. ಪಾದೋದಕ ಘನ ವೆಂಬೆನೆ? ಇಂದ್ರನ ಮಗ. ಪ್ರಸಾದ ಘನವೆಂಬೆನೆ? ಶೂದ್ರನ ಮಗ. ವಿಭೂತಿ ಘನವೆಂಬೆನೆ? ಗೋವಿನ ಮಗಳು. ಇವೆಲ್ಲ ಒಂದೊಂದರಿಂದ ಜನನವಾಯಿತ್ತು. ನೀವಾರಿಂದ ಜನನವನ್ನೈದಿದಿರಿ ನಿರೂಪಿಸಾ ಕಪಿಲ ಸಿದ್ಧಮಲ್ಲಿಕಾರ್ಜುನಾ?

೩೨೩. ಕಲು ಘನವೆಂಬೆನೆ? ಲಿಂಗದ ಪೂಜ್ಯತ್ವ ಕಲ್ಲಿಗೆ ಬಂದಿ ತೇನಯ್ಯ? ನೀರು ಘನವೆಂದರೆ ಪಾದೋದಕ್ಕೆ ಸರಿ ಬಂದಿತೇನಯ್ಯ? ಶೂದ್ರ ಘನವೆಂದರೆ ಪ್ರಸಾದಿಯಾದನೇನಯ್ಯ? ಗೋವು ಘನವೆಂದರೆ ಅಷ್ಟೈಶ್ವರ್ಯ ಕೊಟ್ಟಿತೇನಯ್ಯ? ಘನಕ್ಕೆ ಘನವು ನಿಮ್ಮಷ್ಟಾವರಣಂಗಳು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೨೪. ಕಟಿದ ಕಲ್ಲು ಲಿಂಗವೆಂದೆನಿಸಿತ್ತು. ಕಟೆಯದ ಕಲ್ಲು ಕಲ್ಲೆ ನಿಸಿತ್ತು. ಪೂಜಿಸಿದ ಮಾನವ ಭಕ್ತನೆನಿಸಿದನು. ಪೂಜಿಸದ ಮಾನವ ಮಾನವನೆನಿಸಿದನು. ಕಲ್ಲಾದರೇನು? ಪೂಜೆಗೆ ಫಲವಾಯಿತ್ತು. ಮಾನ ವನಾದರೇನು? ಭಕ್ತಿಗೆ ಕಾರಣಿಕನಾದನು. ಕಲ್ಲು ಲಿಂಗವಲ್ಲ ಲಿಂಗ ಕಲ್ಲಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೨೫. ಅನುಭವವಾಗಲೆಂದು ಒಂದು ಘನವಾಗಿ ಒಂದು ಕಿರಿ ದಾಗಿ ಹೇಳಿದೆನಲ್ಲದೆ ಲಿಂಗವು ಕಿರಿದಾಗಿ ಹೇಳಿದೆನೇ ಅಯ್ಯ? ನೀರ

ಲ್ಲಿದ್ದ ತೆರೆಗಳೆಲ್ಲ ನೀರಲ್ಲವೆ? ಲಿಂಗಮಧ್ಯೇ ಜಗತ್ಸರ್ವಂ ಎಂದಬಳಿಕ ಪಾಷಾಣಂಗಳೆಲ್ಲ ಲಿಂಗಂಗಳು, ಲಿಂಗಂಗಳೆಲ್ಲ ಪಾಷಾಣಂಗಳು. ಶ್ರೀಶೈಲೆ ವಸತಿ ಶಿಲಾ ಶಿವಮಯಿನಾ ಸತ್ಯಂ ಶಿವೆ ಎಂಬ ಶಿವವಾಕ್ಯವದು ಹುಸಿ ಏನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ?

೩೨೬. ಭಾವ ಬಲಿದಲ್ಲಿ ಲಿಂಗವೆನಿಸಿತ್ತು. ಭಾವ ವಿಭಾವವಾದಲ್ಲಿ ಪಾಷಾಣವೆನಿಸಿತ್ತು. ಭಾವ ನಿರ್ಭಾವವಾದಲ್ಲಿ ಏನೆಂದೆನಿಸದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೨೭. ಲಿಂಗ ಜಂಗಮ ಒಂದಾದ ಬಳಿಕ ಲಿಂಗಾರ್ಚನೆ ಸಲ್ಲದು ಜಂಗಮಂಗೆ. ಲಿಂಗಾರ್ಚನೆ ಬೇಕು ಭಕ್ತಂಗೆ. ಲಿಂಗಾರ್ಚನ ವಿರಹಿತ ಭಕ್ತನ ಮುಖ ನೋಡಲಾಗದು ನುಡಿಸಲಾಗದು ಅವನ ಹೊರೆಯಲ್ಲಿರಲಾಗದಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೨೮. ಭಕ್ತಂಗೆ ಭಕ್ತಿಯೆ ಲಿಂಗಾರ್ಚನೆ. ಮಹೇಶಂಗೆ ಜ್ಞಾನ ವೈರಾಗ್ಯವೆ ಲಿಂಗಾರ್ಚನೆ. ಪ್ರಸಾದಿಗೆ ಸಮದೃಷ್ಟಿಯೆ ಲಿಂಗಾರ್ಚನೆ. ಪ್ರಾಣಲಿಂಗಿಗೆ ಪಂಚಪ್ರಾಣಾಃ ಪರಶಿವ ಎಂಬುದು ಲಿಂಗಾರ್ಚನೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೨೯. ನಿಂದಿಸಿದಲ್ಲಿ ಕುಂದುವನಲ್ಲ ಜಂಗಮನು. ಒಂದಿಸಿದಲ್ಲಿ ಆನಂದಮಯನಲ್ಲ ಜಂಗಮನು. ಬಂದುಪಚಾರದಲ್ಲಿ ಸಂದುಗೊಳ್ಳುವವನಲ್ಲ ಜಂಗಮ. ಜಂಗಮನು ಬಂದಲ್ಲಿ ನೀಡಿದರೆ ಕ್ರೋಧನಲ್ಲ ಜಂಗಮನು ಇಂದುಧರ ಕಪಿಲಸಿದ್ಧಮಲ್ಲನೆಂಬೆ ಇಂತಪ್ಪ ಜಂಗಮನು.

೩೩೦. ಸೋಹಂ ಎಂಬುದದು ಅಂತರಂಗದ ಮದ ನೋಡಯ್ಯ. ಶಿವೋಹಂ ಎಂಬುದು ಬಹಿರಂಗದ ಮದ ನೋಡಯ್ಯ. ಈ ದ್ವಂದ್ವವ ನಳಿದು ದಾಸೋಹಂ ಎಂದೆನಿಸಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೩೧. ಪತ್ರೆಯ ನೇಮದವರು ಒಂದು ಕೋಟಿ. ಲಿಂಗಾರ್ಚನೆಯ ನೇಮದವರು ಒಂದು ಕೋಟಿ. ಜಂಗಮ ತೃಪ್ತಿಯವರು ಒಂದು ಒಂದು ಕೋಟಿ. ತನ್ನ ತಾ ತಿಳಿಯುವ ನೇಮದವರು ಒಬ್ಬರು ಇಲ್ಲವಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೩೨. ಪತ್ರೆಯ ನೇಮದವರು ನೋಡಯ್ಯ ಪಶು ಆಡುಗಳು. ಲಿಂಗಾರ್ಚನೆಯ ನೇಮದವರು ನೋಡಯ್ಯ ಚತುರ್ವರ್ಣದವರು. ಜಂಗಮ

ಸಂತೃಪ್ತಿಯುವರು ನೋಡಯ್ಯ ಭಕ್ತರು. ತನ್ನ ತಾ ತಿಳಿವ ನೇಮದವರು ನೋಡಯ್ಯ ವೀರಶೈವಾಗ್ರಗಣ್ಯರು ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೩೩. ಪತ್ರಿಯ ತಿಂದಾಡು ಮುಕ್ತಿಯಾದುದೆಂಬುದು ಬಲ್ಲರೆ ಹೇಳಿರಯ್ಯ? ಲಿಂಗವ ಪೂಜಿಸಿದ ವರ್ಣಿಕ ಲಿಂಗವಾದನೆಂಬುದ ಬಲ್ಲರೆ ಹೇಳಿರಯ್ಯ? ಜಂಗಮ ಸಂತೃಪ್ತಿ ಪಡಿಸಿದ ಭಕ್ತ ಭವ ವಿರಹಿತವಾದುದು ಬಲ್ಲರೆ ಹೇಳಿರಯ್ಯ? ಇವೆಲ್ಲ ಚತುರ್ವಿಧ ಪದಕ್ಕೆ ಒಳಗು. ತನ್ನ ತಿಳಿದ ವೀರಶೈವ ಭವಕ್ಕೆ ಬಂದನೆಂಬ ದ್ವಿರುಕ್ತಿಯನು ಬಲ್ಲರೆ ಹೇಳಿರಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನನ ಸಾಕ್ಷಿಯಾಗಿ?

೩೩೪. ತಪವ ಮಾಡಿ ಸ್ವರ್ಗವ ಪಡೆದಿಹೆನೆಂಬವನ ಮುಖವ ನೋಡಲಾಗದು. ಮಾದಿಗ ಡೋಹರ ಶ್ವಪಚರು ಹೋಹುದೆಲ್ಲ ಸ್ವರ್ಗವೇನಯ್ಯ? ಲಿಂಗದ ಕುರುಹ ತಿಳಿದ ಅಂಗಗುಣ ನೇತಿಗಳೆದು ಲಿಂಗವಾದುದೆ ಸ್ವರ್ಗ ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೩೫. ಕೈಲಾಸ ಕೈಲಾಸವೆಂದು ಬಡಿದಾಡುವ ಅಣ್ಣಗಳಿರಾ ಕೇಳಿರಯ್ಯ. ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳು ಬೆಟ್ಟ. ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು. ಅಲ್ಲಿರ್ದ ಚಂದ್ರಶೇಖರನು ಬಹು ಎಡ್ಡ. ಇದರಾಡಂಬರವೇಕಯ್ಯ? ಎಮ್ಮ ಪುರಾತರಿಗೆ ಸದಾಚಾರದಿಂದ ವರ್ತಿಸಿ ಲಿಂಗಾಂಗ ಸಾಮರಸ್ಯವ ತಿಳಿದು ನಿಮ್ಮ ಪಾದಪದ್ಮದೊಳು ಬಯಲಾದ ಪದವಿಯೇ ಕೈಲಾಸವಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೩೬. ವಿಧಿ ನಿಷೇಧಗಳಿಲ್ಲದನಾದಿ ನೀ ನೋಡಯ್ಯ. ಜಪತಪವಿಲ್ಲದ ಮಹಾಮುನಿ ನೋಡಯ್ಯ. ಇಹಪರ ಸುಖ ದುಃಖಾತೀತನಯ್ಯ ನಿಮ್ಮ ಶರಣ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೩೭ ಪದ ನಾಲ್ಕು ರತ್ನವೆಂಬುವದು ಸುರಾಸುರರೆಲ್ಲರು ಬಲ್ಲರು. ಮೂರಾರು ರತ್ನವನಾರು ಅರಿಯರಯ್ಯ. ಮೂರಾರು ರತ್ನವೆಂಬುದು ಬಲ್ಲರು ದಿವ್ಯಮುನಿಗಳು. ಮೂರೆರಡು ರತ್ನವರಿಯರು ತ್ರಿಲೋಕದವರು. ಮೂರೆರಡು ರತ್ನವ ಬಲ್ಲವರು ಮಹಾ ಪ್ರಮಥರು. ಒಂದು ರತ್ನವನಾರು ಅರಿಯರು. ಒಂದು ರತ್ನವ ಬಲ್ಲವರು ನಿಮ್ಮ ಶರಣ ಮಹಾಲಿಂಗ ಮೂರ್ತಿ ಚನ್ನಬಸವಣ್ಣ ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೩೮. ರತ್ನ ಪರೀಕ್ಷೆಯ ಮಾಡುವ ಅಣ್ಣಗಳೆಲ್ಲ ದಿಮ್ಮದರಯ್ಯ. ಬಲ್ಲಿದ ಬೇಲಿ ಎಂದರೆ ಹಲ್ಲು ಕಡ್ಡಿಯೊಳ್ಳೈತೆ? ಬೇಲಿ ಇಲ್ಲದುದೆಂದರೆ ಬಲ್ಲ

ವರ ಮುಂದುಗೆಡಿಸುತ್ತೈದೆ. ಇದರ ಬೇಲಿಯ ಬಲ್ಲ ನಮ್ಮ ಬಸವಣ್ಣನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೩೩೯. ಗುದ್ದ್ಯಾಟ ರತ್ನವ ಕದ್ದು ಒಯ್ಯಬಲ್ಲರೆ ಭಕ್ತನೆಂಬೆ. ಮುದ್ದುಳ್ಳವ ಮುದ್ದು ಬಲ್ಲರೆ ಮಹೇಶನೆಂಬೆ. ಜದ್ದಿನ ಭಕ್ತಿಯು ಗೆದ್ದು ಒಯ್ದರೆ ಕಪಿಲಸಿದ್ಧ ಮಲ್ಲನ ಮನೆಯ ಮುದ್ದು ಕುಮಾರನೆಂಬೆ ನೋಡಾ ಮಡಿವಾಳ ಮಾಚಣ್ಣನೆ.

೩೪೦ ಅಯ್ಯಗಳು ಬಂದಿಹರೆಂದು ಅಯ್ಯ ಅಯ್ಯ ಎಂದು ಬೆಂಬತ್ತುವನಲ್ಲ ನಾನು. ಅಯ್ಯಗಳೆಂದರೆ ಅಯ್ಯತನವೇರಿತ್ತೆ ದೇವಾ? ಗೋವಿನ ಹಾಲು ಎಂದರೆ ಹಿಂಡಲಿಲ್ಲ ರುಚಿಸಲಿಲ್ಲ. ತನ್ನ ಹಸ್ತ ಮುಟ್ಟದಲ್ಲಿ ರುಚಿಸಿತ್ತಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೪೧. ಅಯ್ಯಗಳನುಭವಕಲ್ಲದೆ ನಿನ್ನ ಪಾಪಕ್ಕೆ ಅವರು ಅಯ್ಯಗಳೆ? ಅಯ್ಯಗಳನುಭಾವ ನಿನ್ನ ಮನೋಭಾವ ಏಕವಾದರೆ ಅಯ್ಯತನುವೇರಿತ್ತಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೪೨. ಬಂದಲ್ಲುಪಚರಿಸುವದಲ್ಲದೆ ನಿಂದಸಿಂದಲ್ಲುಪಚರಿಸುವದು ಭಕ್ತಿಯ ಕೊಂಕು ನೋಡಯ್ಯ. ಉಪಚಾರಕ್ಕೆ ಬಂದಾತ ಜಂಗಮನಲ್ಲ ನೋಡಯ್ಯ. ಉಪಚರಿಸಿದವ ಭಕ್ತನಲ್ಲ. ಅನುಭವಕ್ಕೆ ಬಂದಿಹನಯ್ಯ ಜಂಗಮ. ಅನುಭವಕ್ಕೆ ಮಾಡುವನಯ್ಯ ಉಪಚಾರವ ಭಕ್ತ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೪೩ ಬಂದ ಮಹೇಶ ಬಂದಂತೆ ಪೋಪನಲ್ಲ ನೋಡಯ್ಯ. ಬಂದ ಬರವು ಭವಕ್ಕೆ ಆಗರ. ಸಿಂದ ಒರವು ಜ್ಞಾನಕ್ಕೆ ಆಗರ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೪೪. ಕುಂಡಲಿ ಬಂದು ಕೀಡಿಯನು ಕುಂಡಲಿಯ ಮಾಡಿತ್ತಯ್ಯ. ಅಗ್ನಿ ಬಂದು ಕಾಷ್ಠವ ಅಗ್ನಿಯ ಮಾಡಿತ್ತಯ್ಯ. ಮಹೇಶ ಬಂದು ಭಕ್ತನ ಮಹೇಶನ ಮಾಡಿ ಗಮಿಸಿದನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೪೫. ಅಗ್ನಿಯು ಮುಟ್ಟಿದ ಕಾಷ್ಠ ಇದ್ದಲಿಯಾಯಿತ್ತು. ಇದ್ದಲಿಯದು ಕಾಷ್ಠವಾಗದು. ಭಕ್ತ ತಾನು ವಿರಕ್ತನಾದನು. ವಿರಕ್ತ ತಾನು ಭಕ್ತನಾಗನು. ಇದರಿರವ ಗುರು ಚನ್ನಬಸವಣ್ಣ ತೋರಿದನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೪೬. ಕಾಷ್ಠದಿಂ ಮುಟ್ಟಿದ ನೀರು ತಾ ಮುಟ್ಟನೆಂಬಂತೆ, ಬಿಸಿಲಿನಿಂದ ಬಳಲಿ ಕಾಯ ತಾನಲ್ಲೆಂಬಂತೆ, ಮನ ಮುಟ್ಟಿದ ವಿಷಯ ತಾ ಮುಟ್ಟನೆಂಬ ವೇದಾಂತಿಯ ಹಲ್ಲುದೋರಿ ಮೂಗಕೊಯ್ಯುವನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನನವರ.

೩೪೭. ಬಿಸಲಿನಿಂದ ಬಳಲಿ ಕಾಯ ತಾನಲ್ಲೆಂಬಂತೆ ಕಾಷ್ಠ ಕಲಕಿಸಿತೆಂಬಲ್ಲಿ ಕಾಷ್ಠಕ್ಕೆ ಭೀಯೋ ನಿನಗೆ ಭೀಯೊ? ದೇಹ ಬಳಲಿತ್ತೆಂಬಲ್ಲಿ ನಿನಗೆ ಉಪಚಾರವೋ ದೇಹಕ್ಕೆ ಉಪಚಾರವೋ? ಮನ ಮುಟ್ಟಿತೆಂಬಲ್ಲಿ ನಿನಗೆ ಭಯವೋ ಹೇಳಾ ಮನವೆ ಕಪಿಲಸ್ಧಿ ಮಲ್ಲೇಂದ್ರನ ಸಾನ್ನಿಧ್ಯದಲ್ಲಿ?

೩೪೮. ಸಾಕ್ಷಿ ಎಂಬುದೆಲ್ಲ ವೃತ್ತಿಯಲ್ಲದೆ ನಿವೃತ್ತಿಯಲ್ಲಹುದೆ ಅಯ್ಯ? ರುಚಿ ಎಂಬುವದದು ಪದಾರ್ಥದಲ್ಲಲ್ಲದೆ ನಿಷ್ಪದಾರ್ಥದಲ್ಲಿಹುದೆ ಅಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೩೪೯. ಕರ್ಮ ಸಾಕ್ಷಿ ತಾನಾದಲ್ಲಿ ಅಸ್ತಮಾನೋದಯಕ್ಕೆ ಒಳಗಾದನಯ್ಯ ಸೂರ್ಯನು. ಕರ್ಮಸಾಕ್ಷಿ ತಾನಾಗಿ ಆಚರಿಸದಲ್ಲಿ ಜನನ ಮರಣಕ್ಕೆ ಒಳಗಾದೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೫೦. ಸಾಕ್ಷಿ ತಾನೆಂದರೆ ಶಮನ ಕಾರ್ಯಕ್ಕೆ ಶುಭದವಾಯಿತ್ತಯ್ಯ. ಸಾಕ್ಷಿ ತಾನಲ್ಲೆಂದರೆ ಯಮನ ಕಾರ್ಯ ಬೀಳಾಯಿತ್ತಯ್ಯ. ಸಾಕ್ಷಿ ಎಂಬುದು ವೃತ್ತಿಯಲ್ಲಿ. ಒಲ್ಲರೀ ಮಹಿಮರು. ನಿವೃತ್ತಿಯಲ್ಲದೆಂತಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ?

೩೫೧. ವೃತ್ತಿ ನಿವೃತ್ತಿ ಎಂಬುದು ಕಲ್ಪನಾರಚನೆ. ವೃತ್ತಿಯಲ್ಲಿಯು ಸಾಕ್ಷಿ ವೃತ್ತಿಗೆ ಅಟ್ಟಿತ್ತು. ನಿವೃತ್ತಿಯಲ್ಲಿಯು ಸಾಕ್ಷಿ ನಿವೃತ್ತಿಯಾಗದೆ ವೃತ್ತಿಗೆಯ್ತಂದಿತ್ತಯ್ಯ. ಕರ್ಮ ಸಾಕ್ಷಿಎಂಬ ವೇದಾಂತಿಯ ಪಳೆ ವಾಕ್ಯ ಸಮನಿಸದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೫೨. ಸಾಕ್ಷಿ ತಾನಾಗುವರೆ ಕರಣಾದಿಗಳ ಮಿತ್ರತ್ವವೇನಯ್ಯ? ಅವರ ಮಿತ್ರತ್ವವೆಂಬುದು ಜನ್ಮ ತರುಲವಿತ್ರವೆ ಆಗಬಾರದು ಸಾಕ್ಷಿಯು ಆಗಬೇಕು ಮಾಡೆನೆಂಬುವದಕ್ಕೆ ಕಪಿಲಸಿದ್ಧಮಲ್ಲಿಕಾರ್ಜುನಾ.

೩೫೩. ಸತ್ಯಕ್ಕೆ ಸಾಕ್ಷಿಯಲ್ಲದೆ ಮಿಥ್ಯಕ್ಕೆ ಸಾಕ್ಷಿಯೇ ಅಯ್ಯ? ಸತ್ಪಾತ್ರಾಪಿ ಯೋ ಸಾಕ್ಷಿ ಸ ನರೋ ಹಂಸದಾ ಶಿವೆ ಎಂಬ ನಿನ್ನ ವಾಕ್ಯ ಹುಸಿಯಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೫೪ ಮನದಲ್ಲಿದ್ದು ಕಾಯದಲಿಲ್ಲದವ ಶತಜನ್ಮಕ್ಕೆ ಮೋಕ್ಷ. ಕಾಯದಲಿದ್ದು ಮನದಲ್ಲಿಲ್ಲದವ ಮೂರು ಜನ್ಮಕ್ಕೆ ಮೋಕ್ಷ. ಕಾಯ ಮನೋಯುಗವಲಿಲ್ಲದವ ಮೋಕ್ಷ ರೂಪು ನೋಡಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೫೫. ಕಾಯ ಮುನ್ನವೊ ಕಾಯದಲಿಪ್ಪ ಮನ ಮುನ್ನವೊ? ಮನ ಮುನ್ನವೋ ಮನದಲ್ಲಿಪ್ಪ ಚೈತನ್ಯ ಮುನ್ನವೋ? ಚೈತನ್ಯ ಮುನ್ನವೋ ಚೈತನ್ಯಾತ್ಮಕ ಮಾಯೆ ಮುನ್ನವೋ? ಅವು ಮುನ್ನವಲ್ಲ, ಮುನ್ನವಲ್ಲ. ನಿನ್ನ ನಿರಾಳ ನಿಜದ ನಿರ್ಣಯುಲಿನ ಶೂನ್ಯಾಶೂನ್ಯವೇ ಮುನ್ನ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೫೬. ತಾ ಮುನ್ನೊ ತನ್ನ ಮನ ಮುನ್ನೊ? ತನ್ನ ಕಾಯ ಮುನ್ನೊ ತಾ ಮುನ್ನವೋ ಅಯ್ಯಾ? ಮುನ್ನೆಂಬಲ್ಲಿ ತಿಳಿಯದೆ ಹೋಯಿತ್ತು. ಮನೋ ಮುನ್ನೆಂಬಲ್ಲಿ ಕಾಯಕ್ಕೊಳಗಾಯಿತ್ತು. ಕಾಯ ಮುನ್ನೆಂಬಲ್ಲಿ ಜಡಮಯ ಪ್ರಳಯಕ್ಕೊಳಗಾಯಿತ್ತು. ತಾ ಮುನ್ನಲ್ಲ ತನ್ನ ಮನ ಮುನ್ನಲ್ಲ. ತಿಳಿದಾಗಲೀ ಮುನ್ನ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೫೭. ಕಾಯ ಧರಿಸಿದವ ನವನೀತ ರೋಮದಂತಿರಬೇಕು. ಮುಕುರದಲ್ಲಿಯ ಪ್ರತಿಬಿಂಬದಂತಿರಬೇಕು. ಬೆಟ್ಟದಲ್ಲಿಯ ಕಾಡಗಿಚ್ಚಿನಂತಿರಬೇಕು. ಆಷಾಢದಲ್ಲಿಯ ಚಂಡಮಾರುತನಂತಿರಬೇಕು. ಸರ್ವರಲ್ಲಿ ಸರ್ವರಂತಾಗಿರಬೇಕು ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೫೮. ಜಲದಲ್ಲಿಯ ಚಂದ್ರನ ಚಲನೆ ಜಲದಲ್ಲಲ್ಲದೆ ನಿಜ ಚಂದ್ರನಲ್ಲಿಲ್ಲವಯ್ಯಾ. ಘಟದಲ್ಲಿಯ ಬಿಂಬಗಳು ಘಟದಲ್ಲಲ್ಲದೆ ಬಿಂಬದಲ್ಲಿಲ್ಲ ನೋಡಯ್ಯಾ. ಜಲದಲ್ಲಿಯ ಚಲನೆ ಘಟದಲ್ಲಿಯ ಬಿಂಬ ನಿಜವಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೫೯. ಜಲದಲ್ಲಿ ಚಂದ್ರನಿಲ್ಲ ಜಲವಿಲ್ಲ. ಮಾಯಾತ್ಮಕ ವಸ್ತುವಿಲ್ಲ. ವಸ್ತುವಾತ್ಮಕ ಮಾಯೆಯಿಲ್ಲ. ಉಪಾಧಿಯಿಂದ ತೋರ್ಪುದುದೆಲ್ಲ ನಿಜವೆ ಅಯ್ಯಾ? ಸ್ಥಾಣುಚೋರ ನ್ಯಾಯದಂತೆ ಶುಕ್ತಿ ರಜತ ನ್ಯಾಯದಂತೆ ರಜ್ಜು ಸರ್ಪ ನ್ಯಾಯದಂತೆ ಅಧ್ಯಾರೋಪವಾದ ಅವಿದ್ಯೆಯಲ್ಲಿ ಲೇಸಂಟೇ ಕಪಿಲಸಿದ್ಧಮಲ್ಲಿಕಾರ್ಜುನಾ?

೩೬೦. ವಸ್ತು ಒಂದರಲ್ಲಿ ಕಲ್ಪಿತದ್ವಯವಾದವು ನೋಡಾ. ಹಗ್ಗಲ್ಲ ಸರ್ಪವೆಂಬುದೆ ಅಪವಾದ. ಸರ್ಪವಲ್ಲ ಹಗ್ಗವೆಂಬುವುದೆ ಅಧ್ಯಾರೋಪ. ವಸ್ತುವಲ್ಲ ಮಾಯೆ ಎಂಬುದೆ ಅವಿದ್ಯೆ ಮಾಯೆ. ಅಲ್ಲಿ ವಸ್ತುವೆಂಬುದೆ ವಿದ್ಯೆಯಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೩೬೧. ಜಡ ಸತ್ಯ ಸುಖ ದುಃಖ ನಿತ್ಯ ಖಂಡಿತವೆಂಬೈದು ಲಕ್ಷಣ ಮಾಯಾತ್ಮಕವಯ್ಯಾ. ಮೃಗದಲ್ಲಿಲ್ಲದ ಶಶವಿಷಾಣಾದಿಕವೆ ಅಸತ್ಯವಯ್ಯಾ. ಮೂಢಮಯ ಕಲ್ಲು ಮೊದಲಾದವೆ ಜಡದೃಶ್ಯ ನೋಡಯ್ಯಾ. ರಜೋಗುಣಿಯ ಸಹ್ಯ ವೃತ್ತಿ ದುಃಖ ಕಂಡಯ್ಯಾ. ತೋರಿ ಕೆಡುವ ದೇಹಾದಿಕವೆ ಅನಿತ್ಯ ಕಂಡಯ್ಯಾ. ಕಾಲ ಪರಿಚ್ಛೇದಾದಿಕವೆ ಖಂಡಿತ ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೩೬೨. ತೋರಿ ಕೆಡುವ ದೇಹ ನಾನೆಂದು ನಂಬದಿರಾ ಮನವೆ. ತೋರುವ ಅರಿವು ನಾನೆಂದು ನಂಬು ಕಂಡ್ಯಾ ಮನವೆ. ತೋರಿ ಕೆಡುವುದು ಮಾಯಾತ್ಮಕವು ಮನವೆ. ತೋರಿ ತೋರುವದದು ನಿರುಪಾಧಿಕ ನಿಜಾನಂದ ಕಪಿಲಸಿದ್ಧಮಲ್ಲಿಕಾರ್ಜುನ ಕಂಡ್ಯಾ ಮನವೆ.

೩೬೩. ಕಾಯ ನಾನೆಂದರೆ ಕರ್ಮಕಾಂಡಿ. ಸಕಲ ಕ್ರಿಯೆ ಈಶಾರ್ಪಣವೆಂದರೆ ಭಕ್ತಿಕಾಂಡಿ. ಸಕಲ ಕರ್ಮ ಸಾಕ್ಷಿ ಎಂದರೆ ಜ್ಞಾನಕಾಂಡಿ. ಕಾಂಡತ್ರಯವಿಲ್ಲದಖಂಡನ ತೋರಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೬೪. ಕರ್ಮಿಯ ಕರ್ಮ ನಿಃಕರ್ಮವಲ್ಲೆಂದು ನಂಬಬಾರದಯ್ಯಾ. ಮುಮುಕ್ಷುವಿನ ಮೋಕ್ಷ ಮೂರರಲ್ಲೆಂದು ನಂಬಬಾರದಯ್ಯಾ. ಅಭ್ಯಾಸಿಯ ಮೋಕ್ಷ ಜನ್ಮದ್ವಯದಲ್ಲೆಂದು ನಂಬಬಾರದಯ್ಯಾ. ಅನುಭಾವಿಯ ಜನ್ಮ ಒಂದರಲ್ಲೆಂದು ನಂಬಬಹುದೇ ಅಯ್ಯಾ? ಆರೂಢನ ಜನ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ಜನ್ಮವೆಂದು ನಂಬಲೇಬೇಕು ಹಾವಿನಹಾಳ ಕಲ್ಲಯ್ಯಾ.

೩೬೫. ಮೂರ್ಖತ್ವೇನ ಸ್ವಕೀಯಾನಿ ಕರ್ಮಾಣಿ ಚ ದಿನೆ ದಿನೆ ಯಃ ಕರೋತಿ ಸ ಮೂಢಸ್ತು ಶತಜನ್ಮ ವಿಮೋಚಕಃ। ಎಂಬವನು ಕರ್ಮಿಯಯ್ಯಾ. “ಜಗತ್ಸತ್ಯಂ ಮತ್ವಾ ಜಗತಿ ನಿರತೊ ಕರ್ಮ ಕುಶಲಃ ತೃತೀಯೇನ ಪ್ರಾಪ್ತಿಃ ಪರಮಂ ಪದಂ ಶಾಂಕರೀ ಶಿವೆ” ಎಂಬವ ಮುಮುಕ್ಷು ಕಂಡಯ್ಯಾ. “ಪ್ರಪಂಚೆ ಸ್ವಪ್ನವತ್ಮತ್ವಾ ಧ್ಯಾನ ಕರ್ಮ ಪರಾಯಣಃದ್ವಿಜನ್ಮನಸಮಾ ಕ್ಷೋಚ ಯಯಾತಿ ಗಿರಿನಂದನೆ” ಎಂಬವ ಅಭ್ಯಾ

ಸಿಯು ಕಂಡಯ್ಯಾ. "ವ್ಯವಹಾರಾನ್ನಮಸ್ತಾಂಶ್ಚ ಉಪೇಕ್ಷ್ಯ ಪರಮೇಶ್ವರಿ ವಿವೇಕ ತತ್ಪರೋ ಭೂತ್ವಾ ಏಕ ಜನ್ಮ ವಿಮೋಚಕಃ" ಎಂಬುವ ಅನುಭಾವಿ ನೋಡಯ್ಯಾ. "ಅದೃಷ್ಟ್ವಾ ವಿಶ್ವ ವಿಕೃತಿಂ ಸ್ವಾತ್ಮ ಜ್ಞಾನೇನ ಯೋ ನರಃ ಭೂತಿತಸ್ಯ ಮಹಾದೇವಿ ವಿದೇಹಂ ವಪುರೀರಿತಂ" ಎಂಬುವ ಆರೂಢ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೬೬. ಒಂದು ಮಣಿ ಪರೀಕ್ಷೆಗೆ ಮೂವತ್ತಾರು ಮಣಿ ನೋಡಿದೆಯಯ್ಯಾ. ಮೂವತ್ತಾರು ಮಣಿ ಕೂಡಿ ಒಂದು ಮಣಿ ಪರೀಕ್ಷಿಸಿದರೆ ಮೂವತ್ತಾರು ಮಣಿ ಇಲ್ಲ ನೋಡಯ್ಯಾ. ಪರೀಕ್ಷೆಯಾಗದಿರೆ ಆ ಮಣಿಗಳು ಮಣಿಮಣಿಗಳಿಗೆ ಸೇರ್ಪಡೆಯಾದವಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೬೭. ಭಕ್ತನಾಗಿ ಭಕ್ತಿಯ ಮಾಡುವದದು ಲೇಸಯ್ಯಾ. ಶಕ್ತಿ ಇಲ್ಲದಿರೆ ತಮ್ಮ ಪಾದ ಕೃಪೆ ಇಷ್ಟವೆಂಬದದು ಬಹು ಲೇಸಯ್ಯಾ. ಮಹೇಶನಾಗಿ ಮಲತ್ರಯಃವಳಿವುದು ದುರ್ಲಭ ಕಂಡಯ್ಯಾ. ಚರಿಸಿ ಚರಿಸಿ ಜಗದುದ್ಧರಿಸುವದು ಬಹು ದುರ್ಲಭ ಕಂಡಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೬೮. ಜಗವಾಧರಿಸಿದ ಕಣ್ಣು ತನ್ನ ತಗುಳ್ವ ಕಾಯ ಕಾಣದು. ತಿಳಿವ ಅರಿವು ತನ್ನ ತಗಳ್ವ ಭವದ ಮೊನೆಯ ಕಾಣದು. ವಿವೇಕ ಪರನಾದರೆ ಕಾಣದದು ಕಾಣುವದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೬೯. ಕುಲಮದ ಪೊತ್ತಲ್ಲಿ ಚಂಡಾಲಗಿತ್ತಿಯಾಗಿ ಕೆಡಿಸಿತ್ತು ಮಾಯೆ ಮಯೂರ ನೃಪಗೆ. ಛಲಮದ ಪೊತ್ತಲ್ಲಿ ಮಾಂಸ ಭೋಗಿಸಿತ್ತು ಮಾಯೆ ವೀರ ವಿಕ್ರಮಗೆ. ಧನಮದ ಪೊತ್ತಲ್ಲಿ ದರಿದ್ರನಾಗಿ ಕಾಡಿತ್ತು ಮಾಯೆ ಹರಿಶ್ಚಂದ್ರಂಗೆ. ರೂಪ ಮದ ಪೊತ್ತಲ್ಲಿ ಕುರೂಪನ ಮಾಡಿತ್ತು ನಳಂಗೆ. ಯವ್ವನ ಮದ ಪೊತ್ತಲ್ಲಿ ಹಿಂಡಿಂಬಿಯಾಗಿ ಕಾಡಿತ್ತು ಮಾಯೆ ಭೀಮಂಗೆ. ವಿದ್ಯಾಮದ ಪೊತ್ತಲ್ಲಿ ಅಜ್ಞಾನವಾಗಿ ಕಾಡಿತ್ತು ಮಾಯೆ ಅಂದು ಪರ್ವತದಲ್ಲಿ ಕವಿ ವಾದಿಶೇಖರಂಗೆ. ರಾಜ ಮದ ಪೊತ್ತಲ್ಲಿ ರಾಕ್ಷಸನ ಮಾಡಿತ್ತು ಮಾಯೆ ಮುಮ್ಮಡಿ ಸಿಂಗನೃಪಂಗೆ. ತಪೋಮದ ಪೊತ್ತಲ್ಲಿ ಹಲವು ಆಗಿ ಕಾಡಿತ್ತು ಮಾಯೆ ವಿಶ್ವಾಮಿತ್ರಂಗೆ. ಇಂತಿಷ್ಟಮದವಳಿದು ಅಷ್ಟಾವರಣವ ಧರಿಸಿಪ್ಪ ಮಹಾಗಣಂಗಳು ಲಯವಿಲ್ಲದ ರಾಜಯೋಗವ ಪಡೆದಿಹರಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೭೦. ಸತ್ಕುಲ ದುಷ್ಕುಲವೆಂಬುದದು ಜಗತ್ಪ್ರಸಿದ್ಧವಯ್ಯಾ. ಕುಲ ಸತ್ಕುಲ ನಡೆ ವಿಪರೀತವಾದಡೆ ದುಷ್ಕುಲ ನೋಡಯ್ಯಾ. ಮಧುಮಕ್ಷಕ

ಎಂಜಲ ಕುಲ ರುಚಿಯಾದರಲ್ಲದೆ ಚಂದ್ರಧರ ಕಪಿಲಸಿದ್ಧಮಲ್ಲಿಕಾರ್ಜುನ ತನ್ನ ಪೂಜೆಗೆಂದು ನೇಮಿಸಿದನು ಬ್ರೊಮ್ಮಣ್ಣನಾ.

೩೭೧. ಕುಲವೆಂದು ಹೋರಾಡುವ ಅಣ್ಣಗಳಿರಾ ಕೇಳಿರೋ. ಕುಲವೇ ಡೋಹರನ? ಕುಲವೇ ಮಾದಾರನ? ಕುಲವೇ ದೂರ್ವಾಸನ? ಕುಲವೇ ವ್ಯಾಸನ? ಕುಲವೇ ವಾಲ್ಮೀಕನ? ಕುಲವೆ ಕೌಂಡಿಲ್ಯನ? ಕುಲವ ನೋಳ್ಪರೆ ಹುರುಳಿಲ್ಲ. ಅವರ ನಡೆ ನೋಳ್ಪರೆ ನಡೆಯುವವರು ತ್ರಿಲೋಕದಲ್ಲಿಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೭೨. ವಾಲ್ಮೀಕನ ಶೇಷ ಪ್ರಸಾದವೆಲ್ಲ ಸಂಸ್ಕೃತಮಯವಾಯಿತ್ತು ಮರ್ತ್ಯಕ್ಕೆ. ದೂರ್ವಾಸನ ಉಪದೇಶವೆಲ್ಲ ಚಂಡಾಲರ ಮುನಿಗಳ ಮಾಡಿತ್ತು. ಸ್ವರ್ಗಕ್ಕೆ ಕುಲವೆಂದರೆ ಮಲತ್ರಯವು ಬಿಡವು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೭೩. ಕುಲಾಕುಲ ಅನುಭವಕ್ಕಲ್ಲದೆ ಸಮರಸಕ್ಕೇನೋ ಅಯ್ಯ? ವಾದ ವಿವಾದವೆಂಬುದು ಶಾಸ್ತ್ರದಲ್ಲಲ್ಲದೆ ಸಭೆಯಲ್ಲೇನೋ ಅಯ್ಯ? ಹಾಸ್ಯಾಹಾಸ್ಯ ನುಡಿ ಗಡಣದಲ್ಲಲ್ಲದೆ ನುಡಿಯುವ ಕಾಯದಲ್ಲೇನೋ ಅಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

ಭಕ್ತನ ಕರ್ಣಕಠೋರ ವಚನ ॥

೩೭೪. ಕಟೆದ ಕಲ್ಲು ಲಿಂಗವ ಮಾಡಿ ಕೊಟ್ಟಾತ ಗುರುವೆಂಬರು. ಆ ಲಿಂಗವ ಧರಿಸಿದಾತ ಶಿಷ್ಯನೆಂಬರು. ಕೊಟ್ಟ ಗುರು ದೇಶಪಾಲಾದ. ಕೊಟ್ಟ ಕಲ್ಲು ಲಿಂಗವೊ? ಕಲ್ಲಿನ ಕಲ್ಲು ಕಲ್ಲೆಂಬರೆ ಲಿಂಗವ ಮಾಡಿಕೊಟ್ಟ ಲಿಂಗವೆಂದರೆ ಪೂಜಾ ವಿರಹಿತವಾಯಿತ್ತು. ಪೂಜೆ ಇಲ್ಲದ ಲಿಂಗ ಪಾಷಾಣ ಹೋದ ಗುರುವಿನ ಲಿಂಗ ಪಾಷಾಣ ಭೇದಿ ಭೇದಿಸಿದರೆ ಹುರುಳಿಲ್ಲ. ನದಿಯ ದಾಟುವಲ್ಲಿ ಭೈತ್ರವ ಹಿಡಿದು ದಾಂಟಿದಂತ್ಯದಲ್ಲಿ ಬಿಟ್ಟುಹೋದರು. ಬಿಟ್ಟ ನಾವೆ ಮತ್ತೊಬ್ಬರಿಗೆ ಲೇಸು. ಈ ಲಿಂಗವು ಬರದು ಆರಿಂಗೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೭೫. ಅಂಗಲಿಂಗವಂದೆಂದ ಬಳಿಕ ಅಂಗ ಕೆಟ್ಟು ಲಿಂಗ ಉಳಿಯಿತ್ತು ನೋಡಾ. ಅಂಗ ನಿರ್ವಯಲಾದಲ್ಲಿ ಲಿಂಗ ಭವಿಯಾದುದು ನೋಡಾ. ಅಂಗಲಿಂಗ ನಿರ್ವಯಲಲ್ಲಡಗಿಸಬಲ್ಲರೆ ಭಕ್ತನೆಂಬೆ ಮಹೇಶನೆಂಬೆ ಕಪಿಲಸಿದ್ಧಮಲ್ಲಿಕಾರ್ಜುನನವನೆ ಎಂಬೆ ನೋಡಾ ಅಮುಗಿದೇವಾ.

೩೭೬. ಲಿಂಗ ಹೋಯಿತ್ತೆಂದು ಅಂಗವ ಬಿಡುವವನ ನೋಡಿ ಎನ್ನಂಗ ನಡುಗಿತ್ತಯ್ಯ. ಲಿಂಗ ಹೋದರೆ ನಿನ್ನ ಪ್ರಾಣಂಗಳುಳಿವವೆ? ಲಿಂಗ ಪ್ರಾಣ ಪ್ರಾಣ ಲಿಂಗ ಎಂಬುದದು ಹುಸಿಯೆ ಅಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ ?

೩೭೭. ಸೂತ್ರವ ಬಿಟ್ಟಿತೆಂದು ಸಂದೇಹಗೊಳ್ಳದಿರಾ ಮರುಳು ಮನುಜರಿರಾ. ಸೂತ್ರವಿದ್ದಲ್ಲಿ ನಿಮ್ಮಂಗಕ್ಕೆ ಸೂತ್ರವಾದನಯ್ಯ ಲಿಂಗಮೂರ್ತಿಯು. ಸೂತ್ರ ತಪ್ಪಿತ್ತೆಂಬಲ್ಲಿ ಸೂತ್ರ ತಪ್ಪಿಲ್ಲ. ನಿಮ್ಮ ಮನೋ ಸೂತ್ರವೇ ಭಿನ್ನವಾಯಿತ್ತಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೩೭೮. ಗುರುವಿಂಗೆ ಗುರುವಿಲ್ಲ. ಲಿಂಗಕ್ಕೆ ಲಿಂಗವಿಲ್ಲ. ಜಂಗಮಕ್ಕೆ ಜಂಗಮವಿಲ್ಲ. ನನಗೆ ನಾನಿಲ್ಲ. ಕಣ್ದೆರೆದು ನೋಡುವಡೆ ಆರಿಗೆ ಆರು ಇಲ್ಲ ಕಪಿಲಸಿದ್ಧಮಲ್ಲಿಕಾರ್ಜುನಾ.

೩೭೯. ತನುವಿನೊಳಗಾದಾತ ಗುರುವೆ? ಮನಕ್ಕೊಳಗಾದಾತ ಲಿಂಗವೆ? ಧನಕ್ಕೊಳಗಾದಾತ ಜಂಗಮನೇ? ತನು ಮನ ಧನ ತನ್ನ ಮನಕ್ಕಲ್ಲದೆ ಗುರುಲಿಂಗ ಜಂಗಮದಲ್ಲುಂಟೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೩೮೦. ಹಣ್ಣ ಹಿಡಿದ ಬಾಲಕಂಗೆ ಬೆಲ್ಲವ ಕೊಟ್ಟವನು ಹಣ್ಣಾತಾ ಎಂಬಂತೆ ಮಣ್ಣ ಮೂರನು ಹಿಡಿದ ಭಕ್ತಂಗೆ ಮುಕ್ಕಣ್ಣನ ಪದವಿ ಕೊಟ್ಟೆವೆಂಬ ತೆರನಂತೆ ಗುರುಲಿಂಗ ಜಂಗಮರು ಬೇಡುವರಲ್ಲದೆ ತಮ್ಮಿಚ್ಛೆಗೆ ಕೈಯ್ಯಾನ್ವರೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೩೮೧. ಬಾಲಕನ ಹಣ್ಣ ಬಾಲಕಂಗಲ್ಲದೆ ಪಿತಗೇನೊ ಅಯ್ಯ? ಭಕ್ತನ ಸೊಮ್ಮು ಭಕ್ತಂಗಲ್ಲದೆ ನಿರವಯ ನಿರಾಳ ಗುರುಲಿಂಗ ಜಂಗಮಕ್ಕೇನೋ ಅಯ್ಯ? ತನು ಮನ ಧನದೊಳಗಾಯಿತ್ತೆಂಬವನ ಬೆನ್ನ ಬಾರನೆತ್ತದೆ ಬಿಡುವನೆ ಕಪಿಲಸಿದ್ಧಮಲ್ಲಿಕಾರ್ಜುನಾ?

೩೮೨. ಲಗ್ನಕ್ಕೆ ವಿಘ್ನ ಬಾರದೆಂದು ಜ್ಯೋತಿಷ್ಯ ಕೇಳುವ ಅಣ್ಣಗಳಿರಾ ಕೇಳಿರಯ್ಯ. ಅಂದೇಕೆ ವೀರಭದ್ರನ ಸತಿಯು ಸೆರಗು ಸುಟ್ಟಿತ್ತು? ಅಂದೇಕೆ ಮಹಾದೇವಿಯರ ಬಲಭುಜ ಹಾರಿತ್ತು? ಇಂದೇಕೆ ಎನ್ನ ವಾಮ ನೇತ್ರ ಚಲಿಸಿತ್ತು ಕಪಿಲಸಿದ್ಧ ಮಲ್ಲಿಕಾರ್ಜುನಾ?

೩೮೩. ಶುಭಕ್ಕೆ ವಿಘ್ನವಲ್ಲದೆ ಅಶುಭಕ್ಕೆ ವಿಘ್ನವೇ ಅಯ್ಯ? ಅಭಿಮಾನಿಗೆ ಅಂಜಿಕೆಯಲ್ಲದೆ ಅಪಮಾನಿಗೆ ಅಂಜಿಕೆಯೆ ಅಯ್ಯ? ಶುಭಾ

ಶುಭ ಶಿವಾರ್ಪಣವೆಂದು ನಂಬು. ಮನವೇ ಕಪಿಲಸಿದ್ಧಮಲ್ಲೇಂದ್ರ ನಾಲಯದಲ್ಲಿ.

೩೮೪. ಜ್ಯೋತಿಷ್ಯವದು ಜ್ಯೋತಿಯಂತಯ್ಯ. ಕೂಡುವ ಕಾಲಕ್ಕೆ ಪ್ರಕಾಶಮಯವು. ಕೂಡದ ಕಾಲಕ್ಕೆ ದಗ್ಧಮಯವು. ಇದರಂತುವನರಿದವರ ರುಚಿಯಲ್ಲದೆ ಮತ್ತೊರ್ವನ ಕಾಣೆ ಕಪಿಲಸಿದ್ಧಮಲ್ಲಿಕಾರ್ಜುನಾ.

೩೮೫. ನೋಡುವದದು ನೋಡಲೆಬೇಕು. ಮಾಡುವದದು ಮಾಡಲೆಬೇಕು. ನೋಡಿ ಮಾಡಿ ಮನದಲ್ಲಿ ಲೀಢವಾಗಿರಬಾರದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೮೬. ಭಕ್ತಂಗೆ ಲಿಂಗಪೂಜೆ ಜಂಗಮ ದಾಸೋಹ ವಿಘ್ನವಯ್ಯ. ಮಹೇಶಂಗೆ ವಿಷಯಂಗಳಳಿವುದೆ ವಿಘ್ನವಯ್ಯ. ಪ್ರಸಾದಿಗೆ ನಿರ್ಮಲ ಮನಸ್ಸಾಗುವದೇ ವಿಘ್ನವಯ್ಯ. ನಿರ್ವಿಘ್ನನೋರ್ವರನು ಕಾಣೆ. ನಿರ್ಮಲ ನಿಜಾನಂದರುಹಿನ ಕುರುಹ ಬಿಟ್ಟು ಕಪಿಲಸಿದ್ಧಮಲ್ಲಿಕಾರ್ಜುನ ಮಹಾದೇವನಲ್ಲಿ.

೩೮೭. ಶಾಸ್ತ್ರವೆಂಬುದು ಮನ್ಮಥ ಶಸ್ತ್ರವಯ್ಯ. ವೇದಾಂತವೆಂಬುದು ಮೂಲ ಮನೋ ವ್ಯಾಧಿಯಯ್ಯ. ಪುರಾಣವೆಂಬುದು ಮೃತವಾದವರ ಗಿರಾಣವಯ್ಯ ತರ್ಕವೆಂಬುದು ಮರ್ಕಟಾಟವಯ್ಯ. ಆಗಮವೆಂಬುದು ಯೋಗದ ಘೋರವಯ್ಯ. ಇತಿಹಾಸವೆಂಬುದದು ರಾಜರ ಕಥಾಭಾಗವಯ್ಯ. ಸ್ಮೃತಿ ಎಂಬುದದು ಪಾಪಪುಣ್ಯ ವಿಚಾರವಯ್ಯ. ಆದ್ಯರ ವಚನವೆಂಬುದದು ಬಹುವೇದ್ಯವಯ್ಯ ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ತಿಳಿಯಲಿಕ್ಕೆ.

೩೮೮. ಕಟ್ಟಿದ ಲಿಂಗವ ಬಿಟ್ಟು ನಟ್ಟದ ಲಿಂಗವನಟ್ಟೆ ಮೊಟ್ಟೆ ಮೊಟ್ಟೆ ಬೆಟ್ಟದಾವರೆಯ ಮೊದಲಾದ ಪುಷ್ಪವ ಧರಿಸುವಾತನಿರವು ಚಂಡಾಲನ ಇರವು ನೋಡಾ. ಆತನ ಸಂಗ ಮಾದಿಗರ ಸಂಗ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೮೯. ಧರಿಸಿದ ಲಿಂಗವ ಮರಿಸಬಲ್ಲಡೆ ಗಿರಿಜೆಯ ಅರಸನೆಂಬೆ. ಸ್ಥಾವರವ ಪೂಜಿಸಿದವರ ಉಮಾವರನೆಂಬವನ ಗಾವಿಲನೆಂಬೆನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೩೯೦. ಸಂತೆಯೊಳಿದ್ದ ಕಲ್ಲುಗಳೆಲ್ಲ ಲಿಂಗವೇನೋ ಅಯ್ಯ? ಪರ್ವತವಾರಣಾಸಿ ಬದರಿಕಾ ಕ್ಷೇತ್ರಗಳಲ್ಲಿದ್ದ ಕಲ್ಲುಗಳೆಲ್ಲ ಲಿಂಗವೇನೋ ಅಯ್ಯ?

ಅಂತಕಾಂತಕ ಶ್ರೀಗುರು ಮೂರ್ತಿಯು ತನ್ನರುಹಿನ ರೂಪುಮಿಂತೆಂದು ತೋರಿದ ನಿಜ ಕಲ್ಲೆ ನಿಜಲಿಂಗ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೯೧. ದುಡ್ಡಿನ ಲಿಂಗವು ಮೋಕ್ಷವ ಕೊಡಬಲ್ಲರೆ ಅಡ್ಡಬೀಳುವ ದೇಕಯ್ಯ? ಗುರುವಿಗೆ ಜಡ್ಡವಳಿವ ಭಕ್ತಂಗೆ ಭಕ್ತಿಯು ಜಡ್ಡು ಏಕಯ್ಯ? ಗುರುವೆ ಮಡ್ಡು ದಿಂಡಿಮು ನಾದ ಪ್ರಿಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೯೨. ಲಿಂಗವ ಧರಿಸಿ ಭವಿಯಂಗನೆಯ ಬಲ್ಲರೆ ಷಟ್‌ಸ್ಥಲದವ ರೆಂಬೆನೆ? ಲಿಂಗವ ಧರಿಸಿ ಅಂಗಜನ ಸ್ನೇಹವ ಕಟ್ಟಬಲ್ಲರೆ ಜಂಗಮು ಮರ್ದಕ. ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವೆಂದು ಕಾಂಬೆ.

೩೯೩. ಮಾಡಿ ಮಾಡದವ ಭಕ್ತನೆ ಅಯ್ಯ? ಮುಟ್ಟಿ ಮುಟ್ಟದವ ಮಹೇಶನೆ ಅಯ್ಯ? ಗೆಲವು ಸೋಲು ಒಂದೇ ವೇಳೆ ನೋಡಾ ಕಪಿಲ ಸಿದ್ಧ ಮಲ್ಲಿಕಾರ್ಜುನಾ.

೩೯೪. ಗೆದ್ದವರ ಗರುಡಿಕಾರನಲ್ಲದೆ ಬಿದ್ದು ಗೆದ್ದವ ಗರುಡಿಕಾರನೆ ಅಯ್ಯ? ಎದ್ದವ ಜಂಗಮನಲ್ಲದೆ ಬಿದ್ದು ಎದ್ದವ ಜಂಗಮನೇ ಅಯ್ಯ? ಬೀಳಲಾಗದು ಜಂಗಮು, ಏಳಲಾಗದು ಭಕ್ತ. ಕೇಳಲಾಗದು ಜಗದ ಹಿರಿಯರು ಅಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೯೫. ಭಕ್ತರಿಪ್ಪರು ಮೂಲೋಕದಲ್ಲಿ. ಮಹೇಶರಿಪ್ಪರು ಎಮ್ಮ ಪ್ರಮಥರಲ್ಲಿ. ಮಹಾಶಾಂತರಿಲ್ಲ ನೋಡಾ ಕಲಿಕಿಲ್ಮಿಷದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನಾ

೩೯೬. ಬೇಡಿ ಉಂಡವ ಬೇಡದುದ ಬೇಡನೆ ಅಯ್ಯ? ಬೇಡಲಾ ರದವ ಬೇಡದುದ ಬೇಡನಯ್ಯ. ಕಾಡಿದ ಜಂಗಮು ಈಡಾಡಿದನಯ್ಯ ಭಕ್ತನ. ಬೇಡದ ಜಂಗಮು ಭಕ್ತನ ಕೂಡಿಕೊಂಡ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೩೯೭. ಬೇಡಲಾಗದು ಜಂಗಮು. ಬೇಡಿಸಲಾಗದು ಭಕ್ತ. ಬೇಡಿ ದವ ನೋಡದಿರೆ ಬೇಡ ಬೇಡ ಭಕ್ತಿಯು ಆಡಂಬರವ ವೃಡಮೂರ್ತಿ ಕಪಿ ಲಸಿದ್ಧಮಲ್ಲಿಕಾರ್ಜುನಾ.

# ಐಕ್ಯಾತೀತಸ್ಥಲ.

೩೯೮. ಲಿಂಗವ ಪೂಜಿಸಿ ಅಂಗವ ನಿರ್ವಯಲ ಮಾಡಿಹೆನೆಂಬವನ ಮುಖವ ನೋಡಲಾಗದು. ಕುರುಹಿಟ್ಟು ಪೂಜಿಸುವ ಲಿಂಗ ತಾನುಳಿವುದು ಭೂಮಿಯಲ್ಲಿ. ಲಿಂಗವ ಧರಿಸಿದ ದೇಹ ನಿರ್ವಯಲಹುದು. ಲಿಂಗಪೂಜೆಯಲ್ಲಿ ಹುರುಳಿಲ್ಲ ಹುರುಳಿಲ್ಲ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೩೯೯. ಮುನ್ನ ಮಾಡಿದ ದೇಹ ನಿರ್ವಯಲಾದಡೆ ಧರಿಸುವದೇಕೊ ಕಲ್ಲು ಲಿಂಗವ ಎಲೆ ಅಯ್ಯ? ಅಂಗಗುಣ ಲಿಂಗಕ್ಕಾಯಿತ್ತು. ಲಿಂಗಗುಣ ಅಂಗಕ್ಕಾಯಿತ್ತು. ಇವೆಲ್ಲ ಭಾವ ಸಂಕಲ್ಪ ವಿಕಲ್ಪವು. ಅಂಗ ಲಿಂಗವೆಂಬುದು ಪಳಿಮಾತು. ಲಿಂಗಮಧ್ಯೆ ಜಗತ್ಸರ್ವಂ ಎಂಬುದೇ ಅಖಂಡ ಲಿಂಗ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೦೦. ಗಟ್ಟಿ ಹಿಡಿದು ಗೊತ್ತಮುಟ್ಟಬಾರದಯ್ಯ. ನೀರಲ್ಲಿಯ ಕ್ರೀಡೆ ಕುಂಬಳಗಾಯಿಗಲ್ಲದೆ ದೊಡ್ಡಬಂಡೆಗುಂಟೇನಯ್ಯ? ಚರಿಸುವ ಜೀವಿಗೆ ನಿರ್ವಯಲ ಪರವಸ್ತು ಲಿಂಗವಲ್ಲದೆ ಪಾಷಾಣಮಯ ಲಿಂಗವೆ ಅಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೪೦೧. ಕಲ್ಲು ಹಿಡಿದು ಅಲ್ಲಮನ ನೋಡುವೆವೆಂಬವರ ಖುಲ್ಲ ಮನುಜರೆಂಬೆ. ಕಲ್ಲು ಹಿಡಿದವರೆಲ್ಲ ಅಲ್ಲಮನಾಗಲು ಭವಬೀಜ ಇನ್ನೆಲ್ಲಿಯದಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೪೦೨. ಗುಣನೋಡುವಡೆ ಕೀಳ ಗುಣವಯ್ಯ. ಧೇನುವಿನಲ್ಲಿ ನಿಂದಿಸುವ ಬಂದ ಭಕ್ತರ ದಾಂಟಿ ಹೋಗುವ. ಕುಂದುವಡೆಯುವೆ ಮಲತ್ರಯ ಪೊಂದದ ಸಚ್ಚಿದಾನಂದ ಗುಣ ಉಂಟಯ್ಯ ಮಹೇಶನಲ್ಲಿ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೦೩. ಗುಣ ನೋಡಿ ಬಿಟ್ಟವ ಕ್ಷೀರ ಘೃತವಕಾಣದೆ ಹೋದನಯ್ಯ. ಗುಣ ನೋಡಿ ಹಳಿದವ ಅರುಹಿನ ಕುರುಹು ಅರಿಯದೆ ಹೋದನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೪೦೪. ಕೀಳಾಗಿ ಹೋದಂತೆ ಆಳ್ದಂಗೆ ಅಮೃತ ಕೊಟ್ಟಿತ್ತಯ್ಯ. ಆಳಾಗಿ ನಡೆದಂತೆ ಮೋಕ್ಷವ ಕೊಟ್ಟನಯ್ಯ ಮಹೇಶನು ಕೀಳಾಳು ಬಹು ಲೇಸು ಕಂಡಯ್ಯ ಲೋಕದ ಪ್ರಾಣಿಗಳಿಗೆ ಕಪಿಲಸಿದ್ಧಮಲ್ಲಿಕಾರ್ಜುನಾ.

೪೦೫. "ತತ್ಪ್ರಜಾಲ್ಲಭತೆ ಮುಕ್ತಿಸ್ತತ್ಪ್ರಜಾಲ್ಲಭತೆ ಧನಂ" ಎಂಬಾಗಮ ಹುಸಿಯಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೦೬. ಭಕ್ತಿಯ ಮಾಡುವದು ಮಲತ್ರಯದೊಳಗಲ್ಲ ಮಹೇಶನು ಮುಕ್ತಿಯ ಪಡೆವಡೆ ಜಡಜೀವಿಯಲ್ಲ ನೋಡಾ ಭಕ್ತನು ಭಕ್ತಿ ಮುಕ್ತಿ ಎಂಬುವ ಯುಕ್ತಿ ಸೊಗಸದಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೦೭. ಚರ್ಮವ ಧರಿಸಿಪ್ಪನೆಂಬರದು ಹುಸಿ ಏನಯ್ಯ? ಪಂಚದೇಹ ಅಂತರ್ಯಾಮಿ ಎಂಬುದು ಶೃತಿ ಸಿದ್ಧ. ಕೃತ್ತಿವಾಸಿನೆ ನಮಃ। ಜಗದಂತರ್ಯಾಮಿನೆ. ನಮಃ. ಬ್ರಹ್ಮ ಕಪಾಲವ ಧರಿಸಿ ತೃಪ್ತಿಯುಪ್ಪನೆಂಬರದು ಹುಸಿ ಏನಯ್ಯ? ಸರ್ವ ಮುಖದಲ್ಲಿ ಭೋಜಿಸುವದಾಗಿ ಮಹಾದೇವಿಯ ಚರಣಾಂಚ ಮುಖೇನಾಸ್ವಾದನಂ ಚಿರಂ ಕರೋಮಿ ಪ್ರಮುದಾನೇಹ್ಯಂ ಚೋಹ್ಯಂ ಭಿಕ್ಷಾದಿಕಂ ಮಹತ್ ಎಂಬುದು ಆಗಮ ಸಿದ್ಧ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೦೮. ಒಂದಿಲ್ಲದಿರೆ ಪರ್ವತ ಸಂಧಿಯದೇಕಯ್ಯ ಯತಿಗೆ? ಅಂದಾಶ್ರೈಸಿದ ಮಯೂರ ಛಂದಾಯಿತೇನಯ್ಯ? ಇವೆಲ್ಲ ಬರಿಯ ಭ್ರಮೆಯ ಸಂದಳಿದು ಇಂದುಧರ ತಾನಾಗಬಲ್ಲಡೆ ಗಿರಿ ಗ್ರಾಮ ವನವಾಸದ ಗೊಂದಿ ಏಕಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ?

೪೦೯. ತಿಳಿದ ಮಹೇಶ ತೀಳಿನೀರಿನಿಂತಿಪ್ಪವ ನೋಡಾ. ಎಲ್ಲರಲ್ಲಿ ತಿಳಿಯ ನೋಡಾ ತಿಳಿ ಜ್ಞಾನ ತಿಳಿದವ ತಿಳಿಗೊಳನೇನು ತಿಂಗಳ ಸೂಡಿದ ಹಳೆ ಮಲ್ಲಿಕಾರ್ಜುನನ ಮಠವೇನೊ?

೪೧೦. ಊರಲ್ಲಿರುವ ವಸ್ತು ಅದೆ ನೋಡಯ್ಯ. ವನದಲ್ಲಿರುವ ವಸ್ತು ಅದೆ ನೋಡಯ್ಯ. ಚರಿಸಿಚರಿಸಿ ಜಗದುದ್ಧರಿಸುವ ವಸ್ತು ಅದೆ ನೋಡಯ್ಯ. ಮೂಲೋಕದೆರೆಯ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಪರವಸ್ತು ಅದೆ ನೋಡಯ್ಯ ಕೇದಾರಾಧ್ಯನೆ.

೪೧೧. ಒಂದಾದವಂಗೆ ಬಂದ ಸುಖದುಃಖಂಗಳ ಭಂಗೇನಯ್ಯ? ಒಂದಾದವಂಗೆ ಇಂದುಧರ ನೊಲವೇನಯ್ಯ? ಒಂದಾದವಂಗೆ ಕನಕ ಲೋಷ್ಟವೆಂಬುವದೇನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ?

೪೧೨. ಅಂದಿನಪರಿ ಇಂದಿನ ಪರಿ ಬೇರೆ ಕಂಡ್ಯಾ ಮನವೆ. ಅಂದಿನ ವಿಷದಿಂದಮೃತವಾಯಿತ್ತು ಕಂಡ್ಯಾ ಮನವೇ. ಅಂದಿನ ದೇವಾಂಗನೆ

ಇಂದು ನಿಮಗೆ ಚಿಕ್ಕ್ಯಕ್ತ್ರಿಯಾಯಿತ್ತು ಕಂಡ್ಯಾ ಮನವೇ. ಅಂದಿನವ ನೀನಿಂದು ಕಪಿಲಸಿದ್ಧಮಲ್ಲಿಕಾರ್ಜುನನೆಂದು ನಂಬು ಕಂಡ್ಯಾ ಮನವೆ.

೪೧೩. ಅಂದಿನವರು ನಡೆದ ದಾರಿ ಇಂದಿನವರು ನಡೆಯರು. ಇಂದಿನವರು ನಡೆದ ದಾರಿ ಅಂದಿನವರು ಕಾಣರು. ಅಂದಿಂದು ಎಂಬ ದ್ವಂದ್ವ ಭೇದವನೆಂದೆಂದು ಕಾಣೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೧೪. ಅಲ್ಲದಯ್ಯಗಳು ಇಲ್ಲದಾಟಕ್ಕೆ ಮೈಗೊಟ್ಟ ಕೇಡು ನೋಡಾ. ಇಲ್ಲದಯ್ಯಗಳು ಅಲ್ಲದಾಟಕ್ಕೆ ಮೈಗೊಡರು ನೋಡಾ. ಇಂದೆಲ್ಲ ಅಲ್ಲಮನ ಬಲ್ಲ ಬೋಧೆಯಿಂದ ಸಲ್ಲೀಲೆಯಾಯಿತ್ತು ವಲ್ಲಭ ಶಿವ ಕಪಿಲಸಿದ್ಧಮಲ್ಲಿಕಾರ್ಜುನ ದೇವಾ.

೪೧೫. ಪಿಟ ಬಂದಾನೆಂದು ನಟನೆಗಾರ್ತಿ ತಾ ದಿಟ ಸಂಪನ್ನೆಯಾವಳಪ್ಪ. ಪಿಟ ಬಾರದಿದ್ದರೆ ತಾ ಸಿಡಿಮಿಡಿಗೊಂಡಿಬ್ಬರ ನೋಡವ್ವಾ. ಇವರ ತೋಟಿಯು ಕಳೆಯು ಬಂದರೆ ನಿನ್ನ ತೋಟಿ ಕೆಟ್ಟಿತ್ತಿಲಗವ್ವಾ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಜಾರನಲ್ಲಿ.

೪೧೬. ಜಾರನೆಂಬುವ ನಾಮ ಮಾರಹರಂಗೆ ಸಲುವಳಿಯಯ್ಯಾ. ಜಾರನು ಜಾರನು ಕಪಿಲಸಿದ್ಧಮಲ್ಲಿಕಾರ್ಜುನನ ಶರಣರ ಮನೋ ಮನೆಯ ಕೊನೆಯಲ್ಲಿ.

೪೧೭. ಜಾರನು ಜಾರನು ಭವದಲ್ಲಿ ನೋಡಾ ಮನವೆ. ಜಾರನು ಜಾರನು ಸತ್ಯದಲ್ಲಿ ನೋಡಾ ಮನವೆ. ಜಾರನು ಜಾರನು ನಿನ್ನಲ್ಲಿ ನೋಡಾ ಮನವೆ. ಜಾರನು ಜಾರನು ಕಪಿಲಸಿದ್ಧ ಮಲ್ಲಿಕಾರ್ಜುನನ ಪಾದಯುಗಪ ನೋಡಾ ಮನವೆ.

೪೧೮. ಜಾರನಾದರೆ ಗೋಪಾಲ ಮೂರ್ತಿಯಂತಿರಬೇಕು. ಜಾರನಾದರೆ ಹಾದರದ ಬೊಮ್ಮಯ್ಯನಂತಿರಬೇಕು. ಜಾರನಾದರೆ ಕಪಿಲಸಿದ್ಧ ಮಲ್ಲಿಕಾರ್ಜುನನ ಯೋಗಿಯಂತಿರಬೇಕು ನೋಡಿರೋ ಕಿರಿಯರಿರಾ.

೪೧೯. ಜಾರನಲ್ಲವೆ ಭವ ಭವದಲ್ಲಿ ಸೌಂದರ ನಂಬಿ? ಜಾರಿಯಲ್ಲವೆ ಭವ ಭವದಲ್ಲಿ ಸೂಳೆ ಪದ್ಮಲದೇವಿ? ಜಾರನಾಗಿ ಜಾರಿಯಾಗಿ ಜಾರಿದರಂದು ಜನನ ಭವಣೆಯಲ್ಲಿ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೨೦. ಕಲ್ಮಡಿಗನ ಕೈಯ್ಯಲ್ಲಿ ಕಲ್ಲುಳಿ ಕೊಟ್ಟರೆ ಕೊಟ್ಟಂತಲ್ಲದೆ ಕಲ್ಲು ರೂಪಾಗಿ ಬಾರದಯ್ಯಾ. ಆದ್ಯರ ವಚನ ಅವಿದ್ಯಾವಂತನ ಜಿಹ್ವೆ

ಯಲ್ಲಿದ್ದರೆ ಇದ್ದಂತೆ ಅಲ್ಲದೆ ವಿದ್ಯಾಮಯು ಕೀರ್ತಿಯಾಗನಯ್ಯ ಕಪಿಲ ಸಿದ್ಧ ಮಲ್ಲಿಕಾರ್ಜುನಾ.

೪೨೧. ಕುಳಿಗಾಳಿಯೊಳು ಕುಳಿತಂತಲ್ಲದೆ ಉದರದ ಕುಳಿ ತಂಪಾಗುವದೆ ಅಯ್ಯ? ಕುಳಿರ್ವಕ್ರೆವಿದ್ಯೆಯು ನೋಡಿದಂತಲ್ಲದೆ ಭವದ ಕುಳಿ ತಪ್ಪುವುದೆ ಅಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೪೨೨. ಕೃಸರ ಪದಾರ್ಥ ಕೃಷೀವಲರುಂಡರೆಂದರೆ ಆಶ್ಚರ್ಯವೇನಯ್ಯ? ನೃಪನುಂಡನೆಂದರೆ ಆಶ್ಚರ್ಯ. ಚರ್ಯಾತೀತ ಉಂಡನೆಂದರೆ ಬಹು ಆಶ್ಚರ್ಯ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೨೩. ಭೂಪಾಲನೇರುವ ಕುದುರೆ ಗೋಪಾಲನೇರಬಹುದೆ ಅಯ್ಯ? ಗೋಪಾಲನೇರುವ ಕುದುರೆ ಭೂಪಾಲನೇರಬಹುದೆ ಅಯ್ಯ? ಗೋಪಾಲಂಗೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೨೪. ಭೂಪಾಲನ ಕುದುರೆ ಗೋಪಾಲನೇರಿದರೆ ಮನ್ನಣೆಯಲ್ಲದೆ ಅಮನ್ನಣೆ ಏನಯ್ಯ? ಗೋಪಾಲನ ಕುದುರೆಯ ಭೂಪಾಲನೇರಿದರೆ ಅಮನ್ನಣೆಯಲ್ಲದೆ ಮನ್ನಣೆ ಏನಯ್ಯ? ಭೂಪನ ವೇಷ ಗೋಪಂಗಾದುದು. ಗೋಪನ ವೇಷ ಭೂಪಂಗಾದುದು ಪಾಪದ ಕೇಡು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೨೫. ಗೋಪಾಲನ ಭಕ್ತಿ ಗೋಪಾಲಂಗಲ್ಲದೆ ಗೋಪಾಳಿಗೆಲ್ಲಿಹುದಯ್ಯ? ಗೋಪಾಲನ ಡೊಂಕು ಭೂಪಂಗಲ್ಲದೆ ಗೋಪಾಳಿಗೆಲ್ಲಿಹುದಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ?

೪೨೬. ಭೂಪಾಲನ ಡೊಂಕು ಗೋಪಾಲಂಗಲ್ಲದೆ ಗೋಪಾಳಿಗೆಲ್ಲಿಹುದಯ್ಯ? ಗೋಕುಲದ ಡೊಂಕು ಗೋಪಾಲಂಗಲ್ಲದೆ ಗೋಪಾಳಿಗೆಲ್ಲಿಹುದಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ?

೪೨೭. ಆದ್ಯರ ನುಡಿ ಆದ್ಯರಿಗಲ್ಲದೆ ವೇದ್ಯಂಗೆ ಸಾಧ್ಯವಾಗದೆಂಬ ನುಡಿ ಹೊಲ್ಲ. ಈ ತಆದ್ಯನೊ, ಮಧ್ಯದಲ್ಲಿಂದ ಬಂದಾತನೋ ಅಯ್ಯ? ತಿಳಿದು ನೋಡುವಡೆ ಸ್ವಯಂ ವೇದ್ಯ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೨೮. ವಾಗ್ರಚನೆ ಎಂಬುದು ಕರ್ನಾಟವಯ್ಯ. ಆದ್ಯರಾಜ್ಞೆ ಎಂಬುದು ಈಶ್ವರಗೆ ಜ್ಯೋತಿಯಯ್ಯ. ಅಗಿದು ಅಗಿದು ನೋಡುವದದು ಶುಕ ತೆಂಗು ತಿಂದಂತೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೨೯. ಆದಿ ಉತ್ಪತ್ತ್ಯಹಂಕಾರದಿಂದ ಅಹಂಕಾರದ ಕೇಡು. ಅರುಹಿನಿಂದ ಅರುಹಿನ ಕೇಡು ತಾ ಬಯಲಾದಿಂದ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೩೦. ದೇಹದ ಗುಣ ದೇಹ ಇರುವಂದಿಗೆ ತಪ್ಪದು ನೋಡಾ ಎಂಬಲ್ಲಿ ಕ್ಷುಧೆ ತೃಷೆಗಳಿಗಲ್ಲದೆ ದುರ್ಗುಣಕ್ಕುಂಟೇನೊ ಅಯ್ಯಾ? ಕ್ಷುಧೆ ತೃಷೆ ಇಲ್ಲದಿರೆ ದೇಹ ಬೀಯುವಾಗುವುದು. ದುರ್ಗುಣವಿಲ್ಲದೆ ಬೀಯುವಾಗದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೩೧. ಮರದೆಲೆಯ ತಂದು ಕುರುಹ ಇಡಬಾರದ ಪರಮ ಅರುಹ ಪೂಜಿಸಿದ ಮರುಳರ ನೋಡಿ ಬೆರಗಾದೆನಯ್ಯಾ. ಕುರುಹ ಪೂಜೆ ಅರುಹು ಆದಾಗಲಿ ಮರವೆಯ ಕೇಡು. ಮರವೆಯ ಮುಂದಿಟ್ಟರೆ ಸಿರಿಗರ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ.

೪೩೨. ಅಂಗೈಯ್ಯೊಳಗಣ ಲಿಂಗಮೂರ್ತಿಯ ಕಂಗಳಲ್ಲಿಂಗಗೊಟ್ಟರೆ ತಿಂಗಳನೊಡನಾದೆ ನೋಡಾ ಅಯ್ಯಾ. ಮಂಗಳಮೂರ್ತಿಗಂಗಾಜೂಟಾಂಗಮಯ ಕಪಿಲಸಿದ್ಧಮಲ್ಲಿಕಾರ್ಜುನನ ಲಿಂಗ ಬೇರೆಂದು ಅರಿಯಲಿಲ್ಲ ನೋಡಾ ನಿಜದ ನಿರ್ವಯಲಲ್ಲಯ್ಯನೆ.

೪೩೩. ಭೂಪ ಗೋಪನ ನೆನದರೆ ಗೋಪನಾಗಬಲ್ಲನೆ? ಅಂದಿನ ಗಣಂಗಳ ಕಂಡು ಇಂದಿನ ಜೀವಿಗಳು ನೆನೆನೆನೆದು ಧನ್ಯರಾದೆವೆಂಬ ಪರಿಯ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೩೪. ನೆನೆದರಾಗದು ಸಾಧಿಸದನ್ನಕ್ಕ. ಸಾಧಿಸಿದರಾಗದು ತಿಳಿಯುದನ್ನಕ್ಕ. ತಿಳಿಯುದರಾಗದು ಎಳೆ ಭಾಲಚಂದ್ರಧರ ಕಪಿಲಸಿದ್ಧ ಮಲ್ಲಿಕಾರ್ಜುನನ ಕೈವಲ್ಯಪದವು.

೪೩೫. ಹುಟ್ಟಿ ಹುಟ್ಟಿಹೋಗುವದದು ಬಹು ಕಷ್ಟವಯ್ಯಾ. ಕೆಟ್ಟು ಕೆಟ್ಟುಹೋಗುವದದು ಬೆಟ್ಟದ ಸಾಮರ್ಥ್ಯವಯ್ಯಾ. ಹುಟ್ಟಿಹೋದವರು ಕೋಟಾನುಕೋಟಿ. ಕೆಟ್ಟುಹೋದವರು ಒಬ್ಬರೂ ಇಲ್ಲ ಕಪಿಲಸಿದ್ಧಮಲ್ಲಿಕಾರ್ಜುನಾ.

೪೩೬. ಹುಟ್ಟಿದ ಕಲ್ಲು ಲಿಂಗವಾಯಿತ್ತು. ಹುಟ್ಟಿದ ಕಲ್ಲು ದೇವಾಲಯವಾಯಿತ್ತು. ಹುಟ್ಟಿದ ಪಶು ಹೊಲಕ್ಕೆ ಬಂದಿತ್ತು. ಹುಟ್ಟಿದ

ಮರ ಕಟ್ಟಳೆಯಾದವು. ಹುಟ್ಟಿ ಕೀರ್ತಿಯ ಮೆಟ್ಟಿದವ ಇಟ್ಟಿ ಇಟ್ಟಿ ಹುಳಿಯನ್ನದಂತೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೩೭. ಕಸವಿದ್ದು ಕೃಷೀವಲನಿಲ್ಲದೆ ಆಸವಾಕ್ಷವಲನಿಲ್ಲದೆ ಆಸವಾಕ್ಷಗುಣವಿರೆ ಈ ಕಸಗುಣದ ಕೇಡು ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೩೮. ಕೋಡಗಗೆ ನಾಲ್ಕರ ಚೇಳ ಚೇಳ ಕಡಿಯಿತ್ತು ನೋಡಾ. ಚೇಳೊಂದರ ಮುಲಿಕೆ ಹಾಳು ಮಾಡಿತ್ತು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೩೯. ಒಂದು ಮುಳ್ಳು ಮೂರು ಲೋಕದ ಜನರಿಗೆ ನಟ್ಟಿತ್ತು. ಆ ನಟ್ಟ ಮುಳ್ಳು ಮುರಿಯಬೇಕೆಂದಾರರಿಯರು. ಆ ಮುಳ್ಳು ಮುರಿದವ ಮೂಲೋಕರಸು ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ ಹಾವಿನಹಾಳ ಕಲ್ಲಿನಾಥಾ.

೪೪೦. ಮುಳ್ಳು ಮೂರರ ಮೇಲೆ ಕಳ್ಳ ಮೂರತಿ ತಿರುಗುತ್ತಿಹ ನೋಡಾ. ಒಳ್ಳೇ ಗುಣಗಳ್ಳರಿಗೆ ತನ್ನ ತಳ್ಳಿ ತೋರಿಸುವ ನೋಡಾ. ಜಳ್ಳು ಜೀವಗಳ್ಳರಿಗೆ ಸಾಧ್ಯವದು ಎಳ್ಳೆನಿತಿಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೪೧. ನಿತ್ಯನಿತ್ಯವ ಕೋಣವ ತಿನಬಲ್ಲರೆ ಸದಾಚಾರಿ ಜಂಗಮವೆಂಬೆ. ನಿತ್ಯನಿತ್ಯ ಕೋಡಗ ಹಿಡಿದು ಅಡುಗಳ ತಿನಬಲ್ಲರೆ ಪ್ರಾಣಲಿಂಗಿ ಎಂಬೆ ಕಪಿಲಸಿದ್ಧಮಲ್ಲಿಕಾರ್ಜುನ.

೪೪೨. ಬಂದ ದಾರಿ ಬಿಟ್ಟವನೇ ಜೀವನ್ಮುಕ್ತ. ಬಂದ ದಾರಿ ಮೆಟ್ಟಿದವನೆ ಜೀವನ್ಮುಕ್ತ. ಬಂದ ದಾರಿಯನರಿಯದವನೆ ಸಕಲ ಸಾಮ್ರಾಜ್ಯ ಪದಸ್ಥನು ಕಪಿಲಸಿದ್ಧ ಮಲ್ಲಿಕಾರ್ಜುನನವನು.

೪೪೩. ವಚನಾನುಭವ ವಾಗ್ರಚನೆಯಲ್ಲ ಮನವೆ. ವಚನಾನುಭವ ವಾಗ್ರಚನೆಯಲ್ಲ ಮನವೆ. "ವಚನಾನುಭವ ವಚೋ ನ ಎಂಬುದದು ಶೃತಿ ಸಿದ್ಧ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೪೪. ಪ್ರಸಾದ ಪ್ರಸಾದವೆಂದು ಆಡಂಬರಿಸುವ ಅಣ್ಣಗಳ ಪಥ ನೋಡಿ ಕೈ ಬಡೆದು ನಕ್ಕಂತಾಯಿತ್ತಯ್ಯ. ಪ್ರಸಾದವಿಲ್ಲದಿರೆ ಲೋಕರಂಜನೆಯೋ ಪ್ರಸಾದವೊ? ಬಹು ವರ್ತಂತೆ ಪ್ರಾಣಿನೊ ಬಹುಶಃ ಶಿವೆ ಎಂಬ

ವೀರತಂತ್ರ ಪುಸಿ ಏನಯ್ಯಾ? ಪ್ರಸಾದ ಪ್ರಸಾದವೆಂದು ಮುಖದೋರದೆ ಮೂಗಮುಚ್ಚಿ ನುಂಗುವರ ಕಂಡು ಹೊಟ್ಟೆಯು ಜೋಲಾಡುವಂತೆ ನಕ್ಕ ಕರುಣಾಕರ ಕಪಿಲಸಿದ್ಧ ಮಲ್ಲಿಕಾರ್ಜುನ ದೇವನು.

೪೪೫. ಅಂಬುವದದು ಜೀವಕ್ಕೆ ಪ್ರಸಾದವಲ್ಲದೆ ನಿರ್ಜೀವಕ್ಕೇನೊ ಅಯ್ಯಾ? ಜೀವ ಭಾವವಳಿದು ಜನನ ಭಾವವಡಗಿ ಜಗದಂತರ್ಯಾಮಿ ತಾನೆಂಬುದದು ಮಹಾ ಪ್ರಸಾದ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೪೬. ಅಟ್ಟುಂಬುವದದು ಪ್ರಸಾದವಾದರೆ ಇದ್ದ ಪ್ರಾಣಿಗಳೆಲ್ಲ ಮೋಕ್ಷವಂತರಾಗಬಾರದೇನೋ ಅಯ್ಯಾ? ಅಡದೆ ಉಣದೆ ನಿಜವಡಗಿದ ರೂಹು ಅರಿಯಬಲ್ಲಡೆ ಅದು ಮಹಾ ಪ್ರಸಾದ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೪೭. ಗುರು ಮುಟ್ಟಿ ಬಂದ ಶುದ್ಧಪ್ರಸಾದಿಯಾದರೆ ವಾತಪಿತ್ತ ಶ್ಲೇಷ್ಮವಳಿದಿರಬೇಕು. ಲಿಂಗ ಮುಟ್ಟಿ ಬಂದ ಪ್ರಸಿದ್ಧ ಪ್ರಸಾದವಾದರೆ ಆಧಿ ವ್ಯಾಧಿಗಳಿಲ್ಲದಿರಬೇಕು. ಮೂರರ ಅರುಹು ಗಟ್ಟಿಗೊಳ್ಳುವ ಮಹಾ ಪ್ರಸಾದಿಯಾದರೆ ಮರಣವಿಲ್ಲದಿರಬೇಕು. ಪ್ರಸಾದ ಪ್ರಸಾದವೆಂದು ತ್ರಿವಿಧ ಪ್ರಸಾದವ ಸೇವಿಸಿ ಸರ್ವರಂತೆ ಮಲತ್ರಯಗೊಳಗಾಗುವವರು ಪ್ರಸಾದಿಗಳೆಂದು ನಂಬದಿರಾ ಕಪಿಲಸಿದ್ಧಮಲ್ಲಿಕಾರ್ಜುನನ ಸಾಕ್ಷಿಯಾಗಿ ಕಬ್ಬಿಲರಿರಾ.

೪೪೮. ಕರಣಾದಿಗಳೆಲ್ಲ ಪರಶಿವನೆಂದ ಬಳಿಕ ಆ ಕರಣಾದಿಗಳ ಭೋಜನ ಕೊಳ್ಳು ಎನಬಾರದೆಂದು ಪರಶಿವ ಪ್ರಸಾದವೆಂಬ ನಾಮವಿಟ್ಟನಯ್ಯಾ ಶ್ರೀಗುರುವು. ಆ ಕಾರಣ ಬಂದ ಪ್ರಸಾದವೆಲ್ಲ ಶಿವಪ್ರಸಾದವೆಂದು ಭುಂಜಿಸಬೇಕಲ್ಲದೆ ಕಟು ಆಮ್ಲ ತಿಕ್ತವೆಂದು ಭೋಗಿಸಿದರೆ ಭವ ತಪ್ಪದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೪೯. ಮಜ್ಜಿಗೆ ಹುಳಿ ಎಂದರೆ ಅದು ಗೊಜ್ಜಿನ ಹಾದಿ ನೋಡಾ. ಮನವೆ ಸಜ್ಜಿಕ ಬಹು ಸ್ವಾದೆಂದರೆ ಕಜ್ಜಿಯ ತಿಂಡಿಯಂತೆ ಕಾಣಾ. ಮನವೆ ಸ್ವಾದ ಹುಳಿ ಶಿವ ಸ್ವರೂಪವೆಂದರೆ ಮಹಾಪ್ರಸಾದವಾಯಿತ್ತು ಎಮ್ಮ ಗುರು ಚನ್ನಬಸವಣ್ಣಂಗೆ ಕಾಣಾ ಮನವೆ ಕಪಿಲಸಿದ್ಧಮಲ್ಲಿಕಾರ್ಜುನಾ.

೪೫೦. ಜ್ಞಾನವದು ದುರ್ಲಭವಲ್ಲ. ಅದರ ಭಾವ ದುರ್ಲಭವಯ್ಯಾ ಭಾವದದು ದುರ್ಲಭವಲ್ಲ. ಆದರ ಏಕತ್ವವದು ದುರ್ಲಭ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ.

೪೫೧. ನೆಲೆಗೊಳ್ಳದು ಎಂದು ಬಿಡಬಾರದಯ್ಯ. ನೆಲೆಯದು ನೆಲೆಯದು ಎಂದು ಅನುಭವಿಸಬೇಕಯ್ಯ. ನೆಲೆ ಇಲ್ಲದದು ನೆಲೆಯಲ್ಲಿಹುದಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೪೫೨. ಕಲ್ಲು ನೀರಲ್ಲಿದ್ದಂತಲ್ಲದೆ ಕಲ್ಲು ನೀರ ನುಂಗಿ ನೀರಾಗಬಹುದೆ ಅಯ್ಯ? ಅಗ್ನಿ ನೀರಲ್ಲಿದ್ದಂತಲ್ಲದೆ ನೀರ ನುಂಗಿ ನೀರಾಗಬಹುದೆ ಅಯ್ಯ? ಪ್ರಸಾದಿ ಭವದಲ್ಲಿದ್ದಂತಲ್ಲದೆ ಭವ ನುಂಗಿ ಭವಿಯಾಗಬಹನೆ ಅಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ?

೪೫೩. "ವಿಕಾರಿಯಾಸ್ತಸ್ಯಾಂ" ಎಂಬ ಶೃತಿ ಪ್ರಸಿದ್ಧವು. ವಿಕಾರ ಪ್ರಕೃತಿಯಲ್ಲಲ್ಲದೆ ಪುರುಷನಲ್ಲಿಲ್ಲವಯ್ಯ. ಪುರುಷನಿಲ್ಲದಿರೆ ಪ್ರಕೃತಿಯ ಕರ್ಮ ನಡೆಯದಯ್ಯ. ತೂರ್ಯ ಕಿರಣದಿಂದಾದ ಜಲದಲ್ಲಿ ಸೂರ್ಯ ಬಿಂಬವಿರೆ ನಿಜ ಸೂರ್ಯನರುಹು ಕೆಡದಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೪೫೪. ಒಂದೇ ವಸ್ತು ಅವಸ್ಥಾತ್ರಯ ಕಿಂಚಿಜ್ಞತ್ವ ಹೊಂದಿ ಜೀವನೆನಿಸಿತ್ತಯ್ಯ. ಆ ಜೀವಕ್ಕೆ ಕರ್ತೃಭೋಕ್ತೃತ್ವಕ್ಕೆ ಒಳಗಾಗಿ ದೇಹ ನಾನೆಂದಿತ್ತಯ್ಯ. ದೇಹ ನಾನೆಂಬುವ ವಾಸನೆಯೊಳಗಾಗಿ ಕಾಲತ್ರಯಕ್ಕೊಳಗಾಗಿ ಅಸ್ವತಂತ್ರನಾಗಿ ನೆಲಸಿತ್ತು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೫೫. ದೇಹ ನಾನಲ್ಲ. ಜೀವ ನಾನಲ್ಲವೆಂಬುವದದು ಶಿವನೆನಿಸಿತ್ತು. ಶಿವಜೀವಂಗೆ ಭೇದವೆಂಬುವದು ಇಲ್ಲ ಕಾಣಾ. ಉದಕವಿದ್ದೆಡೆಯಲ್ಲಿ ಗಗನ ಪರಿಪೂರ್ಣದಲ್ಲಿ ರವಿ ತಾರೆ ಮೇಘವಾದಂತೆ ಪರಿಪೂರ್ಣ ವಸ್ತುವೆ ಚಿದಾಕಾಶದಲ್ಲಿ ಶಿವ ಜೀವ ಮಾಯಾ ಪ್ರಕೃತಿ ಎನಿಸಿತ್ತಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೪೫೬. ಗುಣಿತ ಒಂದಕ್ಕೆ ಪೂಜೆ ಒಂದೆರಡು ಮೂರಾದಲ್ಲಿ ಹತ್ತು ಶತ ಸಹಸ್ರವೆನಿಸಿತ್ತಯ್ಯ. ಪರಾತ್ಪರ ವಸ್ತು ಉಪಾಧಿ ವಶದಿಂದೀಶತ್ವ ಜೀವತ್ವ ಪ್ರಕೃತಿ ಮೊದಲಾದ ಇಂದ್ರಜಾಲವಾಯಿತ್ತು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೫೭. ಎಲ್ಲ ಪುರಾಣಕ್ಕೆ ಹೆಸರುಂಟು. ನಮ್ಮ ಪುರಾಣಕ್ಕೆ ಹೆಸರಿಲ್ಲ ನೋಡಯ್ಯ. ಲಿಂಗದ ಮಹತ್ವ ಕೇಳಿದಲ್ಲಿ ಲಿಂಗ ಪುರಾಣವೆನಿಸಿತ್ತು. ಷಣ್ಮುಖನ ಮಹತ್ಮೆ ಹೇಳಿದಲ್ಲಿ ಸ್ಕಂದ ಪುರಾಣವೆನಿಸಿತ್ತು. ವೀರಭದ್ರನ ಮಹತ್ಮೆ ಹೇಳಿದಲ್ಲಿ ದಕ್ಷಖಂಡವೆನಿಸಿತ್ತು. ಶಿವನ ಮಹಿಮೆ ಕಾಶೀ

ಮಹಿಮೆ ಹೇಳಿದಲ್ಲಿ ಶಿವಪುರಾಣ ಕಾಶೀಖಂಡವೆನಿಸಿತ್ತು. ಪಾರ್ವತಿಯ ಮಹಿಮೆ ಹೇಳಿದಲ್ಲಿ ಕಾಳೀ ಪುರಾಣವೆನಿಸಿತ್ತು. ನಮ್ಮ ಪುರಾಣ ಹೆಸರಿಡಬೇಕೆಂದರೆ ನಿಃಶಬ್ದ ನಿರವಯುಲ ಪುರಾಣ ತಾನೆಯಾಗಿತ್ತು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೫೮. ಪುರಾಣವ ಹೇಳಿದವರೆಲ್ಲ ಪುರಾಣಿಕರು ನೋಡಾ. ಭವ ಭವದ ಶಾಸ್ತ್ರವ ಹೇಳಿದವರೆಲ್ಲ ಶಾಸ್ತ್ರಿಗಳು ನೋಡಾ. ವೇದಾಂತವ ಹೇಳಿದವರೆಲ್ಲ ವೇದಾಂತಿಗಳು ನೋಡಾ. ಭವ ಭವದಲ್ಲಿ ಆದ್ಯರ ವಚನವ ಹೇಳಿದವರೆಲ್ಲ ಪುರಾತರು ನೋಡಾ ಭವ ಭವದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೫೯. ಅಲ್ಲಯ್ಯಗಳ ವಚನ ಎರಡೆಂಬತ್ತು ಕೋಟಿ. ಅಪ್ಪಯ್ಯಗಳ ವಚನ ನಾಲ್ಕು ಲಕ್ಷದ ಮೂವತ್ತಾರು ಸಾಸಿರ, ಎಮ್ಮಯ್ಯಗಳ ವಚನ ವಚನಕ್ಕೊಂದು, ನೀಲಮ್ಮನ ವಚನ ಲಕ್ಷದ ಹನ್ನೊಂದು ಸಾಸಿರ, ಗಂಗಾಂಬಿಕೆ ವಚನ ಲಕ್ಷದ ಎಂಟು ಸಾಸಿರ, ಎಮ್ಮಕ್ಕ ನಾಗಾಯಿಯ ವಚನ ಮೂರು ಲಕ್ಷದ ತೊಂಬತ್ತಾರು ಸಾಸಿರ, ಮಡಿವಾಳಣ್ಣನ ವಚನ ಮೂರು ಕೋಟಿ ಮುನ್ನೂರು, ಹಡಪದಯ್ಯಗಳ ವಚನ ಹನ್ನೊಂದು ಸಾಸಿರ, ಮರುಳುಸಿದ್ಧನ ವಚನ ಅರವತ್ತೆಂಟು ಸಾಸಿರ. ಇಂತಪ್ಪ ವಚನದ ರಚನೆಯ ಬಿಟ್ಟು ಕುತ್ಸಿತ ಕಾವ್ಯಾಲಂಕಾರ ನೋಡುವರ ನೋಡಿ ಹುಡಿ ಮಣ್ಣು ಹೊಯ್ಯದೆ ಮಾಬನೆ ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನಾ?

೪೬೦. ಎಮ್ಮ ವಚನದೊಂದು ಪಾರಾಯಣಕ್ಕೆ ವ್ಯಾಸನದೊಂದು ಪುರಾಣ ಸಮ ಬಾರದಯ್ಯ. ನಮ್ಮ ವಚನದ ನೂರೆಂಟರಧ್ಯಯನಕ್ಕೆ ಶತರುದ್ರಿಯಾಗಿ ಸಮಬಾರದಯ್ಯ. ಎಮ್ಮ ವಚನದ ಸಾಸಿರ ಪಾರಾಯಣಕ್ಕೆ ಗಾಯತ್ರಿಲಕ್ಷಜಪ ಸಮಬಾರದಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೪೬೧. ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೆ ಇಷ್ಟವಯ್ಯ. ಸ್ಮೃತಿಗಳು ಸಮುದ್ರವಾಗಲಿ. ಶೃತಿಗಳು ವೈಕುಂಠ ಸೇರಲಿ. ಪುರಾಣಗಳು ಅಗ್ನಿಯ ಸೇರಲಿ. ಆಗಮಗಳು ವಾಯುವ ಹೊಂದಲಿ. ಎಮ್ಮ ನುಡಿ ಕಪಿಲಸಿದ್ಧಮಲ್ಲಿಕಾರ್ಜುನ ಮಹಾಲಿಂಗದ ಹೃದಯದೊಳು ಗ್ರಂಥಿಯಾಗಿರಲಿ.

೪೬೨. ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯ. ವಚಿಸಿ ಅನುಭವಿಯಾದವ ಪಂಡಿತನಯ್ಯ. ವಿದ್ಯೆ ಎಂಬುವದು ·ಅಭ್ಯಾಸಿಕನ

ಕ್ಕೆವಶ. ಅವಿದ್ಯೆ ಎಂಬುದು ಸರ್ವರಲ್ಲಿ ವಶ. ವಿದ್ಯೆ ವಿದ್ಯೆವನರಿತು ಜಗದ್ವೇದ್ಯನಾಗಬಲ್ಲರೆ ಮಹಾಪಂಡಿತ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೬೩. ಓದಿದ ಫಲ ಶಿವಲೆಂಕ ಮಂಚಣ್ಣಂಗಾಯಿತ್ತು. ಓದಿದ ಫಲ ಹಲಾಯುಧಂಗಾಯಿತ್ತು. ಓದಿದ ಫಲ ಮಲಯುರಾಜಂಗಾಯಿತ್ತು. ಓದಿದ ಫಲ ಜನ್ಮವಳಿದವಂಗಾಯಿತ್ತು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೬೪. ಓದಿದ ಫಲ ಕೂಚಭಟ್ಟನಂತಾಗಬಾರದು. ಓದಿದ ಫಲ ಪಾರಾಶರನಂತಾಗಬಾರದು. ಓದಿದ ಫಲ ಮಯೂರನಂತಾಗಬಾರದು. ಓದಿದ ಫಲ ನಮ್ಮ ಹಾವಿನ ಹಾಳಕಲ್ಲಯ್ಯನ ಮನೆಯ ಶ್ವಾನನಂತಾಗಬೇಕು ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೬೫. ಓದುವದದು ಸದ್ಗುಣಕ್ಕಲ್ಲದೆ ಕಿವಿಯ ಊದುವದಕ್ಕೇನೊ ಅಯ್ಯ? ಮಾಡುವಭಕ್ತಿ ಮೋಕ್ಷಕ್ಕಲ್ಲದೆ ಡಂಭಾಚಾರಕ್ಕೇನೋ ಅಯ್ಯ? ಆಡುವ ವೇಶಿ ದ್ರವ್ಯಕ್ಕಲ್ಲದೆ ಜನರಾಡಂಬರಕ್ಕೇನೋ ಅಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೪೬೬. ಲೋಕ ತನ್ನೊಳಗಾದ ಬಳಿಕ ಲೋಕದ ಸೊಮ್ಮು ತನಗೇಕಯ್ಯ? ಪರುಷ ತಾನಾದ ಬಳಿಕ ಸುವರ್ಣದ ಸೊಮ್ಮು ತನಗೇಕಯ್ಯ? ಧೇನು ತಾನಾದ ಬಳಿಕ ಅನ್ಯ ಗೋವಿನ ಸೊಮ್ಮು ತನಗೇಕಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೪೬೭. ದರಿದ್ರ ಧನಾಢ್ಯಗಂಜುವನಲ್ಲದೆ ದರಿದ್ರ ಗಂಜುವನೆ? ದೊರೆಯು ಮಹಾ ದೊರೆಗಂಜುವನಲ್ಲದೆ ದೊರೆತನಕ್ಕಂಜುವನೆ? ಪರಶಿವಯೋಗಿ ಅಂತರ್ಯಾಮಿ ಎಂದಂಜುವನಲ್ಲದೆ ಲೋಕದ ಗುಂಗಿಗಳಿ ಗಂಜುವನೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೪೬೮. ಭಾವಕ್ಕಂತರ್ಯಾಮಿಯಲ್ಲದೆ ನಡೆವ ಆಚಾರಕ್ಕೆ ಅಂತರ್ಯಾಮಿ ಏನಯ್ಯ? ಭಾವಕಿ ಹಾವ ಭಾವಕ್ಕನುಕೂಲೆಯಲ್ಲದೆ ನಿರ್ಭಾವಂಗನುಕೂಲೆ ಏನಯ್ಯ? ಭಾವ ಭಕ್ತಿಯಲಲ್ಲದೆ ವೀರಭಕ್ತಿಯಲ್ಲೇನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ?

೪೬೯. ಆಕಾಶ ಪಾಷಾಣ ಮಾಡಬಲ್ಲಾದೊಡೆ ಯೋಗಿ. ಪಾಷಾಣ ಆಕಾಶವ ಮಾಡಬಲ್ಲಾದೊಡೆ ಯೋಗಿ. ಆಕಾಶದಲ್ಲಿಯ ಬಯಲು

ಪಾಷಾಣದಲ್ಲಿಪ್ಪದು ಏಕೀಯುವಾಗಬಲ್ಲೊಡೆ ಶಿವಯೋಗಿ. ಕಪಿಲ ಸಿದ್ಧ ಮಲ್ಲಿಕಾರ್ಜುನ ಆತನೆ ನೋಡಾ.

೪೭೦. ನೀರಿಲ್ಲದ ಭೂಮಿಯಲ್ಲಿ ಮೂರು ಹೇರು ನವಣೆಯ ಬೆಳೆದುದ ಕಂಡೆ. ಆ ನವಣೆ ಅಳೆದು ಕೊಡುವಡೆ ಇಮ್ಮಡಿ ಮುಮ್ಮಡಿಯಾದುದ ಕಂಡೆ. ಕೊಂಡವಂಗೆ ಜನ್ಮ ಜನ್ಮದಲ್ಲಿ ಭೋಗಿಸುವದಕ್ಕೆ ಕಣಜಗಳಾದುದ ಕಂಡೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜನಾ.

೪೭೧. ಸೊಲ್ಲಿಗೆ ಒಂದು ಖಂಡುಗ ನವಣೆ ನುಂಗಿತ್ತಯ್ಯಾ. ಆ ನವಣೆ ಹೊಯ್ದುಳಿಯಬೇಕೆಂದರೆ ಸ್ಥಲ ಸಾಲದಯ್ಯಾ. ಹಲಬರು ಛಲವಿಡಿದು ವಿಡಿದು ಹೊಲಬುಗೇಡಿಯಾದರು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ.

೪೭೨. ಒಂದಾಕಳು ಒಂಭತ್ತೊರಸೋದು ಸವಿಯ ಪೋಪಡೆ ಕೈವಲ್ಯ. ಸೂರೆಯುಲ್ಲಿಹುದಯ್ಯ ಒಂಬತ್ತು ಆಕಳು ಒಬ್ಬ ಸೋದ ಸವಿಗಾರಂಗೆ ಬೇಹುದೇನಯ್ಯ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೪೭೩. ಅರುಹು ತಲೆದೋರಿದಲ್ಲಿ ವಿಷಬೆಲ್ಲವು? ಇಕ್ಷುರಸವಾಯಿತ್ತು. ಕುರುಹು ತಲೆದೋರಿದಲ್ಲಿ ಅಂಬರ ಅವಯವಕ್ಕೆ ಹೊಂದಿತ್ತಯ್ಯಾ. ಅರುಹು ತದ್ದೋರಿದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನನ ಕುರುಹು ನಾನೆಂದು ತಿಳಿಯಬಂದಿತ್ತಯ್ಯಾ ಯೋಗಿನಾಥಾ.

೪೭೪. ಯೋಗಿನಾಥನ ಒಲುಮೆ ಯೋಗಿಯಾದವಂಗಲ್ಲದೆ ಭೋಗಿಯಾದಾತಗಿನ್ನೆಲ್ಲಿಹುದಯ್ಯ? ಪಂಚಮ ಸ್ವರದಾಯತ ಕೋಗಿಲೆಗಲ್ಲದೆ ಕಾಗೆಗೆಲ್ಲಿಹುದೊ ಕಪಿಲಸಿದ್ಧ ಮಲ್ಲಿಕಾರ್ಜುನ ಯೋಗಿನಾಥಾ?

೪೭೫. ಪ್ರಪಂಚದಲ್ಲಿ ಭೂಭಾರಿಯಲ್ಲದೆ ಪಾರಮಾರ್ಥದಲ್ಲಿ ಭೂಭಾರಿ ಏನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೭೬. ವಿದ್ಯೆಯನರಿಯದವ ಗುದ್ಯಾಟಕ್ಕೊಳಗಾದ. ಅವಿದ್ಯೆಯನರಿಯದವ ಪ್ರಪಂಚ ಒದ್ದು ಬಿಟ್ಟನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೭೭. ವಿದ್ಯೆ ಎಂದರೆ ಭಾರತ ರಾಮಾಯಣವಲ್ಲ. ಭಾರತವೆಂದರೆ ಭರತ ದೇಶದಲ್ಲಿ ಜನಿಸಿ ಕಾಮಿನಿಯರ ಸೋಗು ಹಾಕಿ ಆ ದೇಶಕ್ಕಧಿಯಾದ ಕಥೆಯೆ ಭಾರತವಯ್ಯಾ. ರಾಮಾಯಣವೆಂದರೆ ಆದಿನಾ

ರಾಯಣನು ಪೃಥ್ವಿಯೊಳು ಪುಟ್ಟಿ ರಾಮನೆಂಬಭಿಧಾನವ ಧರಿಸಿ ಸರ್ವ ರಂತೆ ಪ್ರಪಂಚ ಮಾಡಿ ರಾಕ್ಷಸರ ಗರ್ವವನಳಿದುದೆ ರಾಮಾಯಣ. ಮಾಡಿ ಉದ್ಘಟವಾದಲ್ಲಿ ಕಾಲಾಂತರದಲ್ಲಾದರೂ ಕುರುಹಿನೊಳಗಾದವಯ್ಯಾ ಕಪಿ ಲಸಿದ್ಧಮಲ್ಲಿಕಾರ್ಜುನಾ.

೪೭೮. ಅವು ಬಯಲಾದಂದಿಂಗೆ ಎಮ್ಮ ಪುರಾಣ ಸಾಗವೇ ನಯ್ಯಾ? ಎಮ್ಮ ಪುರಾಣವಾದಂದಿಂಗೆ ಜನರು ನಾಮವ ಹೊತ್ತು ನಡೆ ಯರೇನಯ್ಯಾ? ಎಮ್ಮ ಪುರಾಣ ಶಿವಪುರಾಣ. ಎನಗೆ ಗುರುಲಿಂಗಜಂ ಗಮತ್ರಯವು ಒಂದೇ ಎಂದು ತಿಳಿವ ಅರುಹಿನ ಜ್ಞಾನ ಪುರಾಣ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೭೯. ಕೆರೆಯ ಅಗಳುವ ಅಣ್ಣಗಳೆಲ್ಲ ಮೂಲೋಕದೆರೆಯನ ಪಾದ ದಲ್ಲಿ ಬಿದ್ದು ಬಿದ್ದು ಹೊರಳಾಡುತ್ತಿರ್ಪರೆ ನೋಡಾ. ದೊರೆಯ ಮಾರಾ ರಿಯನರಿದು ತ್ರಿಪುರಾರಿ ತಾವಾಗರು ನೋಡಾ ಕಪಿಲಸಿದ್ಧಮಲ್ಲಿಕಾ ರ್ಜುನಾ ಯೋಗಿನಾಥಾ.

೪೮೦. ಹಬ್ಬಗಳೆಲ್ಲ ಉಬ್ಬುಬ್ಬಿ ಲಿಂಗದ ಹಬ್ಬಕ್ಕೆ ಬಂದಬ್ಬರವ ನೋಡಾ. ಲಿಂಗದ ಹಬ್ಬ ನಿಮ್ಮ ಬಾಯಿಗೆ ಒಬ್ಬಿಯಲ್ಲದೆ ನಿಮ್ಮ ಜನನಕ್ಕೆ ಹಬ್ಬವೇನೊ ಕಬ್ಬಿಲ ಮಬ್ಬಳ್ಳ ಕೊಬ್ಬಿಗರಿರಾ, ಕಪಿಲಸಿದ್ಧಮಲ್ಲಿಕಾ ರ್ಜುನನೊಬ್ಬನರಿಯದಿರ್ದರೆ.

೪೮೧. ಜ್ಞಾನಾಭ್ಯಾಸವಲ್ಲಿ ವಟಮೂಲಿಕೆಯ ಬೀಜದಂತಿರಬಲ್ಲಡೆ ಭಕ್ತನಯ್ಯಾ. ಅಜ್ಞಾನದಲ್ಲಿ ಅಗ್ನಿಯಂತಿರಬಲ್ಲಡೆ ಭಕ್ತನಯ್ಯಾ. ಭಕ್ತನು ಭಕ್ತನು ಎಂದು ಬೆಳೆದ ಧಾನ್ಯಗಳನಟ್ಟು ಬೆಟ್ಟಬಿಲ್ಲಯ್ಯನ ರೂಹಕ್ಕೆ ಒಟ್ಟೆ ಭಕ್ತನಾದನೆಂಬುವನ ಯುಕ್ತಿಮುಳಲೊಟ್ಟೆಯಂತೆ ನೋಡಾ ಕಪಿ ಲಸಿದ್ಧ ಮಲ್ಲಿಕಾರ್ಜುನಾ.

೪೮೨. ಅಟ್ಟ ನೀಡುವ ಭಕ್ತನ ಒಟ್ಟೆಯದಿಚ್ಛೆಗೆ ಬಂದಾತನಲ್ಲ ನೋಡಾ ಮಹೇಶನು. ನೆಟ್ಟನೆನಿಪ ಪರವಸ್ತುವೆಂಬ ಜ್ಞಾನನೋಡುವದಕ್ಕೆ ಬಂದಾತ ಮಹೇಶನು ನೋಡಲಿಲ್ಲ ಕಂಡ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೮೩. ಮಹೇಶನಾದೆನೆಂಬ ಬಿಂಕವು ಮನದರುಹಿನಲ್ಲಿ ಅಡಗಿರ ಬೇಕು. ಭಕ್ತನಾದೆನೆಂಬ ಬಿಂಕವು ಸೈರಣೆಯ ರೂಹಿನಲ್ಲಿ ಮನೆ ಮಾಡಿ ಕೊಂಡಿರಬೇಕು. ಮಹೇಶನಾದವ ಒಬ್ಬನು ತೋರಲಿಲ್ಲ. ಭಕ್ತನಾದವ ಅಂದಿಂಗೆ ನೋಡಲಿಲ್ಲ ಕಂಡ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೮೪. ಬಹಿರಂಗದಲ್ಲಿ ಬಿಟ್ಟ ಮಹೇಶರು ಬ್ರಹ್ಮನ ವಂಶದವರು. ಅಂತರಂಗದಲ್ಲಿ ಬಿಟ್ಟ ಮಹೇಶರು ವಿಷ್ಣುವಿನ ವಂಶದವರು. ಎರಡರಲ್ಲಿ ಬಿಟ್ಟ ಮಹೇಶರು ಕಪಿಲಸಿದ್ಧ ಮಲ್ಲಿಕಾರ್ಜುನ ಮಹದೇವಿಯ ಸಂಗದಿಂದ ಹುಟ್ಟಿದವರು ಕಾಣಾ ಯೋಗಿನಾಥಾ.

೪೮೫. ಬಿಟ್ಟ ಮಹೇಶನಾದೆನೆಂಬುವದು ಅರುಹಿನ ಕೇಡು. ಹಿಡಿದು ಭಕ್ತನಾದೆನೆಂಬುವದು ನಿಜದ ಕೇಡು. ಬಿಡುವುದು ಹಿಡಿವುದು ಮನೋಕಲ್ಪಿತವಲ್ಲದೆ ಕಲ್ಪನಾರಹಿತ ಭಕ್ತ ಮಹೇಶನಲ್ಲಿಪ್ಪುದೇನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ?

೪೮೬. ಹಲವರಿರ್ಪರು ನೋಡಾ ಮೂಲೋಕದಲ್ಲಿ ಲಿಂಗಭಕ್ತರು. ಕೆಲವರಿರ್ಪರು ನೋಡಾ ಮೂಲೋಕದಲ್ಲಿ. ಸ್ಥಾವರ ಭಕ್ತರ ಸಲುಗೆಯುಳ್ಳವರಿಪ್ಪರು ನೋಡಾ ಅನೇಕ ಕೋಟಿ ದ್ವಿಭಕ್ತರು ಒಬ್ಬರೂ ಇಲ್ಲ ನೋಡಾ ಅಜಾಂಡಕಾಂಡದಲ್ಲಿ ಜಂಗಮ ಭಕ್ತರು ಕಪಿಲಸಿದ್ಧಮಲ್ಲಿಕಾರ್ಜುನಾ.

೪೮೭. ಇಂದ್ರಿಯ ನಿಗ್ರಹ ಮಾಡಿದರೇನಯ್ಯ? ಚಂದ್ರಧಾರಿಯಾಗಬಲ್ಲನೆ? ಇಂದ್ರಿಯ ಕಟ್ಟಿದ ಕುದುರೆ ಇಂದ್ರನ ಉಚ್ಚೈಶ್ರವವಹುದೆ ಅಯ್ಯ? ಇಂದ್ರಿಯಂಗಳೆಂಬುವದು ಮಾಯಾಜಾಲವು. "ತಾನೇನ ಸತಿ" ಎಂಬ ಶೃತಿಯದು ಪ್ರಸಿದ್ಧ. ಲಿಂಗವೆಂಬುದು ತಿಳಿಯಬಲ್ಲಾತನೆ ಜಗದ್ವಂದ್ಯ ಜಂಗಮನೆಂಬೆ. ಕಪಿಲಸಿದ್ಧಮಲ್ಲಿಕಾರ್ಜುನಾ.

೪೮೮. ಕುಲಸೂತಕವಿಲ್ಲದ ಜಂಗಮ ಕೋಟಾನು ಕೋಟಿ. ಮಲಮುಟ್ಟಿದ ಜಂಗಮ ಕೋಟಾನು ಕೋಟಿ. ಶೀಲಸತ್ಯ ಸದಾಚಾರ ಜಂಗಮ ಕೋಟಾನು ಕೋಟಿ. ಹಲವು ಹೊಳೆಯಬಾರದ ಜಂಗಮ ಸುಳುಹಿನ ಕಳೆದೋರಿಸಾ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ ಮಹಾಮಹಿಮನು.

೪೮೯. ಕುಲವಿಲ್ಲದ ಶಿಸುವು ಹಲವು ಮಣಿಗಳಲ್ಲಿ ನವಲಿಂಗಕಲಾ ಜಪಿಸುವುದಕ್ಕೆ ಬರ್ಪುದೇನಯ್ಯ? ಮಲ ಮುಟ್ಟಿದ ಹುಡುಗ ಕಡುವೃಡನಾಡಂಬರಕ್ಕೆ ಬರ್ಪದೇನಯ್ಯ ಯೋಗಿನಾಥಾ?

೪೯೦. ಆಡಂಬರದಯ್ಯಗಳ ಕಂಡರೆ ಆಡಬೇಡ ಅವರ ಪಾದೋದಕ ಪ್ರಸಾದ ಸ್ವೀಕಾರದಲ್ಲಿ ಆಡು ಆಡುವರ ಕುಲ ಛಲ ಶೀಲ ಜ್ಞಾನ

ವಿಡಿದಾಡಿ ಆಡದೆ ಆಡಿದರೆ ಆಡಿಸುವೆ ಭವದ ಕುಳಿಯಲ್ಲಿ ಕಡುಜಾಣ ಕಪಿಲಸಿದ್ಧಮಲ್ಲಿಕಾರ್ಜುನ ಯೋಗಿನಾಥ.

೪೯೧. ಅಂಗೈಯ್ಯೊಳಗಣ ಅಂಗಜಾರಿಗೆ ಅಂಗಜನ ಸ್ನೇಹಿತರ ಪಾದಾಂಬುವನೆರೆಯುವನ ಅಂಗವು ಚಾಂಡಾಲನಂಗ. ಆತನಗೃಹ ಶ್ವಪಚನ ಮನೆ ಆತನ ಸತಿ ಮಾದಗಿತ್ತಿ ಆತನ ಸಂಗ ಮದ್ಯಪಾನ ಸಂಗ ಆತನವಾಕ್ಯ ಸಿಶಿತಾಸ್ತ್ರ ಅವನ ಹೊದ್ದರುವೆ ಸತ್ತನಾಯಿ ಕೊಳಿದೊಗಲು ಆತನ ಗುರು ನರ ಆತನ ಲಿಂಗ ಶಿಲೆ ಆತನ ಅಧಿದೈವ ಪಿಶಾಚಿ ಅವನ ವಿದ್ಯೆ ರಾಕ್ಷಸವಿದ್ಯೆ ಇದು ತಪ್ಪದು ಇದು ತಪ್ಪದು 'ಇದು ತಪ್ಪೆನ್ನದು.' ಇಂದು ಪುಸಿಯಾದರೆ ಮೂಗ ಕೊಯ್ಯಬಾರಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೯೨. ಮುಳುಗುವಾತ ಮುಳುಗುವನೆತ್ತಬಲ್ಲನೆ? ತಾ ಮಾಯೆಯೊಳಗಾಗಿ ಮಾಯೆಕರ ತನ್ನ ಪಾದಾಂಬುಜವಂ ಪರಿಹರಿಪೆನೆಂಬುವ ತೆಗೆದುಕೊಂಬುವ ಇವರೀರ್ವರು ಮುಳುಗಿ ಯಮಪಾಶಕ್ಕೊಳಗಾದರು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೯೩. ಪಾಕಾರಂ ಪಾವನಂ ಜ್ಞಾನಂ, ದೋಕಾರಂ ದೋಷನಾಶನಂ, ದಕಾರಂತು ದಯಾಕಾರಂ ಕಕಾರಂ ಕರ್ಮನಾಶನಂ ಎಂಬುದು ಪುಸಿ ಏನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೪೯೪. ಅಂತವರಂಘ್ರಿ ಸಲಿಲ ಇಂತವರಿಗೆ ನೋಡಾ. ಅಂತಿರಿತಿಂತು ಕಾಂತಿಸಿದರೆ ಕಂತುಹರ ಕಪಿಲಸಿದ್ಧ ಮಲ್ಲಿಕಾರ್ಜುನಾ ಅಂತಕರಿಗಾಜ್ಞೆಯ ಮಾಡನೆ ಕಲ್ಲಯ್ಯ?

೪೯೫. ಸರ್ವರೂ ದ್ರವ್ಯವಂತರು. ಅವರು ಅವರಲ್ಲಿ ಆಸೆಯೆ ಅಯ್ಯ? ಮಾಯಾವಿರಹಿತ ಮಾಯಾ ಕೋಲಾಹಲ ಪಾದವಿಪ್ಪುದಕವೆ? ಪಾದೋದಕ ಮೋಕ್ಷದಾಯಕ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೯೬. ಭಕ್ತರು ಭಕ್ತಿಯ ಹಿಡಿದು ಆಚರಿಸಲಿ· ಅವು ಒಳ್ಳೆವಯ್ಯ. ಆತನ ಭಕ್ತಿ ನೈಷ್ಠೆ ಆತ ನಡೆದುದು ಜಗತ್ಪಾವನ. ಆತ ನಡಿಸಿದದು ಜಗಜ್ಜನನ ನೋಡಾ. ಇದು ಪುಸಿಯಾದರೆ ಹಲ್ಲುದೋರಿ ಮೂಗ ಕೊಯ್ಯಿ ಕಪಿಲಸಿದ್ಧಮಲ್ಲಯ್ಯ.

೪೯೭. ಬಂಜೆಯ ಪಶು ತಿಂದಂತಲ್ಲದೆ ತಿಂದು ದಂದುಗ ಮಾಡದು ನೋಡಾ. ಮನೆಯ ಮಂದಿಯು ಅಂದವರಿಯದಯ್ಯಗಳು ಉಂಡಂತಲ್ಲದೆ ಉಂಡು ಪರೋಪಕಾರ ತೀರ್ಚರು ನೋಡಾ ಜಗದ ಜೀವಿಗಳು ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೯೮. ಆ ಪಶುವೆಂದರೆ ಪಶುವಲ್ಲ ನೋಡಾ. ಪಶುಪತಿ ಸತಿಯಯ್ಯ. ಆ ಅಯ್ಯ ಹೇಳಿದನೆಂದರೆ ಅಯ್ಯ ಅಲ್ಲ ನೋಡಾ. ಜಗದಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಹುದು.

೪೯೯. ಅವನಾದರೇನು? ಮೂರಳಿದವನೆ ಮೂರು ಕೋಣೆಯ ದಾಟುವನಯ್ಯ. ಆಸೆ ಇಹುದೊ ಇಲ್ಲವೊ ಎಂದು ಮನಸೆಳೆವುದಕ್ಕೆ ಗುರು ಚನ್ನಬಸವಣ್ಣನಾದನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೫೦೦. ಗ್ರಹಸ್ನಾನಂ ಕನಿಷ್ಠಂಚ ಕೂಪಸ್ನಾನಂತು ಮಧ್ಯಮಂ ಉತ್ತಮಂ ನದೀಸ್ನಾನಂ ಸತ್ಯಂ ಪರ್ವತ ನಂದನೆಯುಂಬುದಂತಿರಲಿ. ಎಮ್ಮ ಮನಸಿನ ಕಿಲ್ಮಿಷವಳಿದುದೆ ಮಹಾಸ್ನಾನ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೫೦೧. ಮನವೆಂಬುದು ಬೇರಿಲ್ಲ. ಮಹಾದೇವನ ಮಹಾ ಅರುಹು ನೋಡಾ ಸಂಕಲ್ಪ ವಿಕಲ್ಪಂಗಳ ಧರಿಸಿದಲ್ಲಿ ಮನನೆನಿಸಿತ್ತು. ಅದು ಅಳಿದಲ್ಲಿ ಮಹಾಜ್ಞಾನವೆನಿಸಿತ್ತು. ಅಳಿದ ಭಾವ ತಲೆದೋರಿದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನೆನಿಸಿತ್ತು.

೫೦೨. ಮನ ಬುದ್ಧಿ ಚಿತ್ತ ಅಹಂಕಾರ ಜ್ಞಾನವೆಂಬ ಪಂಚಕರಣಗಳಿರವ ಹೇಳಿಹೆ ಕೇಳಿರಯ್ಯ. ಮನವೆಂಬುದು ಸಂಕಲ್ಪ ವಿಕಲ್ಪಕ್ಕೊಳಗಾಯಿತ್ತು. ಇಲ್ಲದುದ ಕಲ್ಪಿಸುವದೇ ಸಂಕಲ್ಪ. ಇದ್ದುದ ಅರಿಯದುದೆ ವಿಕಲ್ಪ. ಕಲ್ಪಿಸಿ ರಚಿಸುವದೇ ಬುದ್ಧಿಯಯ್ಯ. ಕಲ್ಪಿಸಿ ಮಾಡುವದದು ಚಿತ್ತವಯ್ಯ. ಮಾಡಿದಕ್ಕೆ ನಾನೆಂಬುವದು ಅಹಂಕಾರವಯ್ಯ. ಮಾಡುವ ನೀಡುವ ಭಾವ ಶಿವಕೃತ್ಯವೆಂದರೆ ಜ್ಞಾನ ವೈರಾಗ್ಯವಯ್ಯ. ಅರಿಯದ ಅರಿವು ಮಹಾಜ್ಞಾನ ಮೋಕ್ಷದ ಇರವು ನೋಡಾ. ಕಪಿಲಸಿದ್ಧಮಲ್ಲಿಕಾರ್ಜುನನ ಕೂಡುವದಕ್ಕೆ ಯೋಗ ನೋಡಾ ಯೋಗಿನಾಥ.

೫೦೩. ಒಂದನೆಯ ಬೀಜವ ಬಿತ್ತಿ ಬೆಳೆಯದಲೆ ಬೆಳೆಯಿತ್ತು. ಮೂರನೆಯ ಬೀಜ ಅಲ್ಲಲ್ಲಿ ಜನಿಸಿತ್ತು. ನಾಲ್ಕನೆಯ ಬೀಜ ಮರ್ತ್ಯದಲ್ಲಿ ಜನಸಿ ಅಂಕುರಿಸಿತ್ತು. ಐದನೆಯ ಬೀಜ ಇದ್ದು ಅಂಕುರಿಸದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವೆ.

೫೦೪. ಮೂರನೆಯ ಬೀಜ ಐದನೆಯ ಬೀಜ ಒಂದೇ ನೋಡಯ್ಯ. ಅದೇನು ಕಾರಣ ? ತಂದೆಯೆಂದರೆ ಅರಿಯದೆ ಬೆರೆಯದು ಉಭಯ ಕರ್ಮದಲ್ಲಿ. ಇದರನುಭವ ಅರಿದು ಬೆರೆಯದವ ಬರಿಯ ಅರುಹಿನ ಕುರುಹು ಕಪಿಲಸಿದ್ಧ ಮಲ್ಲಿಕಾರ್ಜುನನೆಂದು ಕಾಂಬೆ.

೫೦೫. ಬೀಜ ಒಂದರಲ್ಲಿ ಐದು ಬೀಜಗಳ ಕಂಡೆ. ಐದನೆಯ ಬೀಜದಿಂದಾರೈಯ್ಯಲು ಬೀಜ ಒಂದೇ ಕಂಡೆ. ಮತ್ತೈದನೆಯ ಬೀಜದಿಂದಾರಯ್ಯಲು ಐದು ಬೀಜವ ಕಂಡೆ. ಇದರಂದವನರುಹಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಕಾಲಜ್ಞಾನದ ವಚನ ॥

೫೦೬. ನಾನಾವ್ರತ ನೇಮಂಗಳಾದವು. ಸತ್ಯ ಶುದ್ಧ ಕಾಯಕ ನೇಮಂಗಳಾದವು. ಖಂಡಿತ ಕಾಯಕ ಅಖಂಡಿತ ಕಾಯಕದವರ ಕಂಡೆವು. ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಲ್ಲಿ ಅಂದಿಂಗೆ ನೂರು ತುಂಬಲು ಒಮ್ಮೆ ಪುರಾತನರ ಕಂಡೆವು.

೫೦೭. ಹೇಮಾಭಿದಾನವದು ಮಂದರಾದ್ರಿಯಯ್ಯ. ಸಿದ್ಧರವರು ಪರಿಚಾರಕರಯ್ಯ. ನಿಮ್ಮ ರಾಣಿವಾಸದ ಜನನವಯ್ಯ. ಈತ ಲೋಕದಲ್ಲಿ ಅಂದಿಗಯ್ಯ ಸಮಾಧಿಯ ಬಿಜುಗಡೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೦೮. ಬಸವ ಬಾರನು ಬಯಲಳಿದು ಬಯಲಿಗೆ. ಚನ್ನಬಸವಬಾರನು ಬಯಲಳಿದು ಬಯಲಿಗೆ. ನಾ ಬಾರದೆ ಅಯ್ಯ ನಾನೆ ಜಂಗಮ ನನ್ನ ಗುರುವೆ ಭಕ್ತ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೦೯. ಕಾಮಿಯ ಕಾಮಿನಿಯು ನೋಡಿದಳೆಂಬಂತೆ ಉಪಾಧಿಯ ನಿರುಪಾಧಿಕ ಲಿಂಗದ ಕೃಪೆಯಾಯಿತ್ತೆಂಬಂತೆ ನುಡಿವರಯ್ಯ. ಕಾಮಿನಿಯ ದೃಷ್ಟಿ ಕಾಮಿನಿಯಲ್ಲಿರಲು ಕಾಮಿಯೇ ಅಯ್ಯ ? ಲಿಂಗದೃಷ್ಟಿ ಅಂಗಗುಣದವನಲ್ಲಿರಲು ಆತ ಲಿಂಗಗುಣಿಯೇ ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ?

೫೧೦. ಮನ ಮುಂದಿಟ್ಟು ಮಹಾದೇವ ಒಲಿದನೆಂಬುದು ಪುಸಿಯಯ್ಯಾ. ಮನವಿಲ್ಲದಿರೆ ಮಹಿಮನ ಒಲುಮೆ ನೋಡಯ್ಯಾ. ಮನದಲ್ಲಿಹ ಮಹಾದೇವನ ಮುಂದಿಟ್ಟು ತೋರುವ ಉಭಯ ಭ್ರಷ್ಟರ ಮೆಚ್ಚುವನೆ ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನ?

೫೧೧. ಮನವಿದ್ದಲ್ಲಿ ಮಹಾದೇವನಿಪ್ಪ. ಮನವಿದ್ದಲ್ಲಿ ಮಹದೇವನಿಲ್ಲವೋ ಅಯ್ಯಾ. ಯಾತ್ರಾರ್ಥವಾಗಿ ಬಂದವರು ಬಯಲಲ್ಲಿ ಬಯಲ ಬಿಟ್ಟು ಬಯಲಾರಿಸುವಂತೆ ಮನೋವ್ಯಾಪಾರಕ್ಕದರಂತೆ ಇಪ್ಪ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೫೧೨. ಘಟ ಮಾಡಿದವ ಘಟದಲ್ಲಿರದಂತೆ ಭೂಷಣ ಮಾಡಿದವ ಭೂಷಣದಲ್ಲಿರದಂತೆ ಕೃಷಿ ಮಾಡಿದವ ಕೃಷಿಯಲ್ಲಿರದಂತೆ ತ್ರೈಲು ತೆಗೆದವ ತ್ರೈಲದಲ್ಲಿರದಂತೆ ಮನೆ ಕಟ್ಟಿದವ ಮನೆಯಲ್ಲಿರದಂತೆ ಪಿಂಡವ ಮಾಡಿದವ ಪಿಂಡದೊಳಿರದಂತೆ ಬ್ರಹ್ಮಾಂಡವ ರಚಿಸಿದವ ಬ್ರಹ್ಮಾಂಡದೊಳಿರದಂತೆ ಅರಿಯದ ಮನುಜರ ಅರುಹಿನ ಮನೆಯೊಳಿಪ್ಪ ನೋಡಾ ಕಪಿಲಸಿದ್ಧಮಲ್ಲೇಂದ್ರನೆಲೆ ಮಲ್ಲಶೆಟ್ಟಿ.

೫೧೩. ಜಲದಲ್ಲಿಪ್ಪ ಜಲವ ನೋಡಾ. ಮನೆಯಲ್ಲಿಪ್ಪ ಮನೆಯ ನೋಡಾ. ಅಹಂಕಾರದಲ್ಲಿಪ್ಪ ಅಹಂಕಾರವ ನೋಡಾ. ಇವೆಲ್ಲ ಬಯಲಲ್ಲಿ ಸಿಂಗರೆ ತೋರ್ಪವು. ಬಯಲಲ್ಲಿ ನಿಂದು ಬಯಲ ಬಯಲ ಮಹಾಬೆಳಗಿನ ಬೆಳಗು ನೋಡಬಲ್ಲರೆ ಶರಣ ಕಪಿಲಸಿದ್ಧಮಲ್ಲಿಕಾರ್ಜುನಾ.

೫೧೪. "ರೂಪಾದನುಭವಂ" ಎಂಬುದು ಸಟೆ ಏನಯ್ಯಾ? "ಸಗುಣಂ ನಿರ್ಗುಣಾತ್ಮಂ ನ" ಎಂಬುದು ಸಟೆಯೆ ಕಪಿಲಸಿದ್ಧಮಲ್ಲಿಕಾರ್ಜುನ ಮಹಾಲಿಂಗವೆ?

೫೧೫. ಅನುಭವತ್ರಯ ಒಂದಾದುದದು ಅನುಭವವಯ್ಯಾ. ಒಂದಕ್ಕೆ ಮೂರೆಂಬುದು ಶೃತಿಸಿದ್ಧ. "ತ್ರೀಣಿ ತ್ರಿಗುಣಾನಿ ತ್ರೀಣಿ ವಪೂಂಷಿ ಕಪಿಲಸಿದ್ಧಮಲ್ಲಿಕಾರ್ಜುನನ ಮಹಾಕೇಲಿನಲ್ಲಿ.

೫೧೬. ಸೂಕ್ಷ್ಮವದು ಮೊದಲಲ್ಲೆ ನಿರ್ಮಯಲವಯ್ಯಾ. ಸ್ಥೂಲವದು ಅಂದಂದಿಂಗೆ ನಿರ್ಮಲ ನೋಡಯ್ಯಾ. ಆರು ವೇಷ ತಿರುಗುವ ಊರ ತೊಳೆಯಲಿಬೇಕು. ಅಂತರಂಗ ಬಹಿರಂಗದಲ್ಲಿ ನಿರ್ಮಲ ಸದಾಚರಣೆಯೇ ಬೇಕು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೧೭. ನಿರ್ಮಲ ಕರ್ಮವದು ಸದ್ಗತಿಗೆ ಸಾಧ್ಯ ನೋಡಾ. ನಿರ್ಮಲ ಕರ್ಮವದು ಜ್ಞಾನಕ್ಕೆ ವರ್ಧನ ನೋಡಾ ನಿರ್ಮಲ ಕರ್ಮವದು ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡುವ ಕೂಟ ನೋಡಾ.

೫೧೮. "ಸರ್ವಂ ಶಿವಮಯಂ ಜಗತ್" ಎಂದ ಬಳಿಕ ತನ್ನ ದೇಹ ನಿರ್ಮಲಕ್ಕಿಕ್ಕಬಹುದೆ ಅಯ್ಯ? "ಸರ್ವಂ ಖಲ್ವಿದಂ ಬ್ರಹ್ಮ" ಎಂದ ಬಳಿಕ ಕರಣಂಗಳಾವರಣಕ್ಕೆ ಸಿಲ್ಕಿಸ ಬಹುದೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೫೧೯. ನಿರ್ಮಲ ಕರ್ಮವದು ನವರಂಧ್ರ ಪ್ರಕ್ಷಾಲನಂ. ನಿರ್ಮಲ ಕರ್ಮವದು ವಸ್ತ್ರ ನಿರ್ಮಲತ್ವಂ. ನಿರ್ಮಲ ಕರ್ಮವದು ಕಪಿಲಸಿದ್ಧ ಮಲ್ಲಿಕಾರ್ಜುನನ ಮನೋ ಇಷ್ಟಂ.

೫೨೦. ಎಲ್ಲರಿಗೆರಡು ಕಣ್ಣೆಂಬುದು ಲೋಕವೆಲ್ಲ ಬಲ್ಲದು. ಎನಗೆ ಮೂರು ಕಣ್ಣೆಂಬುದು ಲೋಕವೆಲ್ಲ ಬಲ್ಲದು. ಎರಡು ಕಣ್ಣಿನವನಲ್ಲ ಮೂರು ಕಣ್ಣಿನವನಲ್ಲ. ಒಂದೇಕಣ್ಣು ನೋಡಾ ಅಲ್ಲಮ ಕಪಿಲಸಿದ್ಧಮಲ್ಲಿಕಾರ್ಜುನಾ.

೫೨೧. ಕಣ್ಣೊಂದರಲ್ಲಿ ಮುಕ್ಕಣ್ಣನ ಬಣ್ಣ ಅಡಗಿಹುದು. ಆ ಬಣ್ಣದಲ್ಲಿ ಚಿನ್ನಣ್ಣ ಚಿತ್ರಗಳಾದವು. ಆ ಚಿತ್ರಗಳಿರವ ಚನ್ನಬಸವಣ್ಣನೆ ಬಲ್ಲನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೨೨. ಗುರು ಮುಖದಿಂದಾಗಲಿ ಶಾಸ್ತ್ರ ಮುಖದಿಂದಾಗಲಿ ಮತ್ತಾವ ಮುಖದಿಂದಾಗಲಿ ತಿಳಿದನುಭಾವಿಯೆ ಸಂಸ್ಕಾರಿ ನೋಡಾ. ಆತನೆ ಪರಮ ವೀರಶೈವ ನೋಡಾ. ಆತನೇ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ ಕಲ್ಲಯ್ಯ.

೫೨೩. ತಿಳಿದು ತಿಳದು ವಿಷಯಕ್ಕೆ ವೈಗೊಟ್ಟರೆ ಅನುಭಾವಿಯೋ ಅಯ್ಯ? ಅಳಿದು ಅಳಿದು ಆನಂದಕ್ಕೆ ವೈಗೊಟ್ಟರೆ ಅಜ್ಞಾನಿಯೆ ಅಯ್ಯ? ತಿಳಿದ ಬಳಿಕ ವಿಷಯಗಳಳಿಯಬೇಕು. ಅಳಿದ ಬಳಿಕ ಎಳೆಯ ಚಂದ್ರಧರ ಕಪಿಲಸಿದ್ಧ ಮಲ್ಲಿಕಾರ್ಜುನನಾಗಲೆಬೇಕು.

೫೨೪. ಉಟ್ಟರೇನು ತೊಟ್ಟರೇನು ಮಲಮೂರು ಮುಟ್ಟದನ್ನಕ್ಕ? ಉಟ್ಟು ತೊಟ್ಟು ಬಿಟ್ಟುಣಿಗಿ ಕಟ್ಟಳೆ ಷಟ್ಸ್ಥಲ ಗುರುವರ್ಯ ಚನ್ನಬಸವಣ್ಣ ಮರೆಯಲಿಲ್ಲವೆ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವೆ?

೫೩೫. ಎನ್ನ ಪಾದ ವಿಡಿದು ಮಧ್ಯ ತನಕಾ ಪ್ರಭುವು ನೊಡಾ! ಮಧ್ಯವಿಡಿದು ಹೃದಯ ಪರಿಯಂತರ ಬಸವಣ್ಣ ನೋಡಾ! ಹೃದಯ ವಿಡಿದು ಕಂಠ ಪರಿಯಂತರ ಮಡಿವಾಳ ನೋಡಾ! ಕಂಠವಿಡಿದು ಕೇಶಾಂತ ತನಕ ಚನ್ನಬಸವಣ್ಣ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೩೬. ಹಸ್ತವದು ಬಸವಣ್ಣ; ಜಿಹ್ವೆಯದು ಚನ್ನಬಸವಣ್ಣ: ಉದ ರತ್ರಪ್ತಿಯದು ಅಲ್ಲಮ ನೋಡಾ. ಎನ್ನ ನಲ್ಲ ಕಪಿಲಸಿದ್ಧ ಮಲ್ಲೇಶನೆ.

೫೩೭. ಕ್ರಿಯೆ ಅದು ಚನ್ನಬಸವಣ್ಣನ ಎಡಪಾದ. ಜ್ಞಾನವದು ಚನ್ನಬಸವಣ್ಣನ ಬಲಪಾದ. ನಾನು ಅವರ ಚಮ್ಮಾವುಗೆ. ನೀನು ಅವನ ಮನೆಯ ದಾಸನು ನೋಡೈ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೩೮. ಕ್ರಿಯೆ ಎಂಬುದು ಪಿಪ್ಪಲೀಕನ ಗುಣ. ಜ್ಞಾನವೆಂಬುದು ವಿಹಂಗದ ಗುಣ. ಮೆಲ್ಲನೆ ಮೆಲ್ಲನೆ ತಿಳಿದಲ್ಲಿ ಕ್ರಿಯೆ ಎನಿಸಿತ್ತು. ಏಕಕಾಲ ಕ್ಕಳವಟ್ಟಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನ ಮನೆ ಸೂರೆಗೊಂಬ ತಸ್ಕರ ಜ್ಞಾನವೆನಿಸಿತ್ತು ಮರುಳ ಶಂಕರಯ್ಯಾ.

೫೩೯. ಕ್ರಿಯೆಗಳಲ್ಲಿ ಭೇದವಲ್ಲದೆ ಜ್ಞಾನದಲ್ಲಿ ಭೇದವಿಲ್ಲಯ್ಯಾ. "ಕ್ರಿಯೋಷು ಶತಶೋಭೇದಜ್ಞಾನೇನ್ಯೈಕೊ ವಿರಾಜತೆ ಫಲ ಸುರುಚಿನಿ ಪದಾ ರ್ಥಾನಿ ಜಿಹ್ವಾಯ ತ್ವೈವ ರಾಜತೆ" ಎಂಬ ಉಪನಿಷತ್ತು ಪುಸಿಯಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೫೪೦. ಕ್ರಿಯಾಜ್ಞಾನವೆಂಬುದಕ್ಕೆ ಭೇದ ತಿಲಾಂಶವಿಲ್ಲ ನೋಡಾ. "ದ್ವಂದ್ವೇನ ಭೇದೆ" ಎಂಬ ಅಥರ್ವಣ ಶಾಖೆಯದು ಸರಿಯೆ? ಸೂಕ್ಷ್ಮೇಂದ್ರಿ ಯನಿಗ್ರಹದಲ್ಲಿ ಜ್ಞಾನವೆನಿಸಿತ್ತು. ಜ್ಞಾನಂ ವಿನಾ ಕ್ರಿಯಾ ನೊ ಭಾತಿ ಕ್ರಿಯಾಂ ವಿನಾ ನೊ ಭಾತಿ ತತ್ ಎಲೈ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೪೧. ದೇಹಿ ಎಂಬುದು ಅವಿದ್ಯಾ ಎಂಬುವರು. ಅದೆಂತಯ್ಯ? ದೇಹ ತಾನಿಲ್ಲದಿರೆ ಆಶ್ರಯಿಸುವ ಪರಿ ಎಂತಯ್ಯಾ? ಅರಿದರೆ ಆಶ್ರಯಿಸ. ಮರೆ ದರೆ ಆಶ್ರಯಿಸುವ. ಅಜ್ಞಾನದ ಘೋಷಲತಿ ಎಂಬುದು ಅರಿದೆನಯ್ಯಾ. ದೇಹ ವದು ಜಡಸಾಕ್ಷಿ. ಅಜಡವೆಂಬ ಭಾವ ವಚನದಲ್ಲಲ್ಲದೆ ಅನುಭವದಲ್ಲಿಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೩೨. ಶರಣ ಸತಿ ಲಿಂಗ ಪತಿ ಎಂದ ಬಳಿಕ ಲಿಂಗದ ರಾಣಿವಾಸ ನೋಡಾ! ಅವು ಎಮ್ಮಕ್ಕ ಮಹಾದೇವಿ, ಎಮ್ಮಕ್ಕ ಹಿರಿಯಕ್ಕ ಗಂಗಾದೇವಿ, ಹಿರಿಯಕ್ಕ ಚಿಕ್ಕಕ್ಕ ಎಂದರೆ ವಿರೋಧ. ವಿರೋಧಿಸಿದರೇನು ನಾನು ಚಿಕ್ಕಾಕಿ ಕಪಿಲಸಿದ್ಧ ಮಲ್ಲಿಕಾರ್ಜುನಂಗೆ.

೫೩೩. ಅಯ್ಯಾ ನಿಮ್ಮನರಿದವನ ಮಂದಿರ ಮಹಾದೇವಿಯರ ಮನೆಯಯ್ಯಾ. ಅಯ್ಯಾ ನಿಮ್ಮನರಿದವನ ನಿರೀಕ್ಷಣೆಯಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

೫೩೪. ವಾಯು ಪುತ್ರನಾಗುವದದು ಲೇಸೆ? ಮನವೆ ಬೇಡ ಬೇಡ. ಹೋದ ಹೋದಲ್ಲಿ ವಸ್ತು ರೂಪಾಗುವದದು ಅತಿಶಯವು ಮನವೆ ಅಲ್ಲಲ್ಲ. ವಾಯು ಬಟ್ಟ ವಾಯು ವೈರಿಯಾದರೆ ಮನವೆ ನಿನ್ನ ಸಾಹಸ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ.

೫೩೫. "ಸರ್ವಂ ಶಿವಮಯಂ ಜಗತ್" ಎಂಬ ವಾಕ್ಯವರಿಯದೆ ಹೋಗದಿರಾ ಮನವೆ. "ಪಂಚತತ್ವ ರೂಪಾಯ" ಎಂಬ ಶೃತಿವಾಕ್ಯ ಮರೆದೆಯಲ್ಲ. ಮನವೆ "ಲಿಂಗಮಧ್ಯೆ ಜಗತ್ಸರ್ವಂ" ಎಂಬ ಮಹಾವಾಕ್ಯ ಮರೆದೆಯಲ್ಲ ಮನವೆ. ರಜ್ಜು ಸರ್ಪ ನ್ಯಾಯ. ಸರ್ಪ ರಜ್ಜುವೆಂದು ನಂಬಿ ಕಪಿಲಸಿದ್ಧಂಗೆ ಬೇರೆಯಾದೆಯಲ್ಲ ಮನವೆ.

೫೩೬. ಮನದಲ್ಲಿ ಸಂಕಲ್ಪ ವಿಕಲ್ಪಂಗಳು ನೋಡಯ್ಯಾ! ಮನಸಿನ ಕಾರ್ಯವೆ ಪುಣ್ಯ ಪಾಪ ನೋಡಯ್ಯಾ! ಮನೋ ಕಾರ್ಯಂ ಜಗದ್ಭೇದಂ ಎಂಬುದು ಭೇದವಲ್ಲ ನೋಡಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

೫೩೭. ಮನದಲ್ಲಿ ಭೇದವಲ್ಲದೆ ವಸ್ತುವಿನಲ್ಲಿ ಭೇದವಿಲ್ಲಯ್ಯಾ! ಕ್ರಿಯಾಕ್ರಿಯೆಯಲ್ಲಿ ಭೇದವಲ್ಲದೆ ಜ್ಞಾನರೂಪು ರೂಪದಲ್ಲಿ ಭೇದವೇನಯ್ಯಾ ಚೈತನ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೫೩೮. ದೇಹ ನಾನೆಂದು ನಂಬಿದೆ ಎಲೆ ಮನವೆ. ದೇಹದಲ್ಲಿಯ ಗುಣಗಳು ನಿನ್ನಲ್ಲಿಲ್ಲ ಕಂಡಯ್ಯಾ! ಪೃಥ್ವಿಯ ಗುಣ ಶಾಂತಿ, ಉದಕದ ಗುಣ ಸ್ವಾದ, ಅಗ್ನಿಯ ಗುಣ ಸರ್ವಭಕ್ಷಣ! ವಾಯುವಿನ ಗುಣ ನಿರ್ಮಲತ್ವ ಆಕಾಶದ ಗುಣ ನಿರ್ವಯಲು ಪಂಚತತ್ವದ ಗುಣ ನಿನ್ನಲ್ಲಿರಲು ನೀನೆ ಪಂಚಮುಖ ನೋಡಾ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೩೯. ಲಿಂಗವೆ ಅಂಗವಾಗಿಹೆನೆಂಬವನ ಭಾವ ಇದರಲ್ಲಿ ನಿಶ್ಚಯ ನೋಡಾ ಮನವೆ. ನಿಂದಾಸ್ತುತಿಗಳಲ್ಲಿ ಹರ್ಷರೋಷಾದಿಗಳಿಲ್ಲದಿರಬೇಕು. ನೀಚಗುಣವ ನೋಡದೆ ಮೃದುಃಭಾಷಾವಂತನಾಗಬೇಕು. ಸರ್ವಜೀವಿಗಳ ತನ್ನಂತೆ ತಿಳಿದು ನೋಡಬೇಕು. ಸಂಶಯಾಸಂಶಯವಳಿದು ನಿಶ್ಚಿಂತಮಯನಾಗಬೇಕು. ಆಕಾಶದ ಬೆಳಗಿನ ಬೆಳಗು ನೋಡಿ ಬೆಳಗುಮಯ ತಾನಾಗಬೇಕು ನೋಡಾ ಮನವೆ ಕಪಿಲ ಸಿದ್ಧಮಲ್ಲಿಕಾರ್ಜುನಾ.

೫೪೦. ಜಡಕ್ಕೆ ಜಡವ ಕಟ್ಟಿ ಅಜಡನಾದೆನೆಂಬ ಜಡನನಲ್ಲವೆ ದೇವಾ. ಜಡಪೂಜೆ ಸಂಪದಾದಿ ಜಾಡ್ಯಕ್ಕೆ ಒಳಗು ಅಲ್ಲವೆ ದೇವಾ. ಅಜಡ ಪೂಜೆ ಮೋಕ್ಷಕ್ಕೆ ಒಳಗು ಅಲ್ಲವೆ ದೇವಾ. ಜಡಾಜಡವೆಂದೆನಿಸದು ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನದೇವಾ.

೫೪೧. ಪೂಜೆಯ ಪರಿಯನೊರೆವೆ ಆಲಿಸಾ ದೇವಾ. "ಮನೋನಿರ್ಮಲ ಮಭಿಷೇಕಂ ತಸ್ಯ ನಾಹಂ ಜಡೆತಿ ಭಸ್ಮ ಧಾರಣಂ ನಾಹಂ ಸಾಕ್ಷಿತ್ವಮಲ ಬಿಲ್ವಂ ತನ್ಮಸ್ತಕೆ" ಇಂತಪ್ಪ ಪೂಜೆಯ ಮಾಡದೆ ಮರೆದೆ. ಎಲೆ ಮರೆಯ ನೀರಸುಟ್ಟ ಬೂದಿಯುದಂ ಪೂಜಿಸಿ ಸಿದ್ಧಿಗಳ ಗುದ್ಯಾಟಕ್ಕೊಳಗಾದವರ ಕಡೆಮುಟ್ಟಿ ಬಿಟ್ಟಿಪ್ಪನೆ ಬಿಟ್ಟಜ ಪತಿ ದಿಟ್ಟ ಕಪಿಲಸಿದ್ಧ ಮಲ್ಲಿಕಾರ್ಜುನಾ?

೫೪೨. ನಾನಿಲ್ಲದಿರೆ ನೀನೆಲ್ಲಿಯವನಯ್ಯಾ? ಬಾಣನ ಮನದಲ್ಲಿ ಸಿಲ್ಕಿ ಬಾಗಿಲಕಾಯ್ದಿರಿ ಅಣ್ಣಾ. ಸಿಂಧು ಬಲ್ಲಾಳನ ವಧುವಿನಲ್ಲಿ ಸಿಲ್ಕಿ ಸ್ವಯಂಭು ಆಳಿದಿರಿ. ಚೋಳಿಯಕ್ಕನ ಭಕ್ತಿಯಲ್ಲಿ ಸಿಲ್ಕಿ ಮಾಜಿದಿರಿ ಅಮ್ಮನವರಿಗೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೪೩. ಇಕ್ಷುವಿನ ವನದಲ್ಲಿಪ್ಪ ಕುಟಿಲ ಕೇಸರಿಯ ರೂಪಕ್ಕಂಜುವದಲ್ಲದೆ ರಾಗ ರಂಜನೆಗಂಜುವೆನಯ್ಯಾ. ಸ್ಥಲದಲ್ಲಿಪ್ಪ ವೇಷಧಾರಿಯ ರೂಪಕ್ಕಂಜುವರಲ್ಲದೆ ವಿಷಯ ಗುಣರಂಜನೆಗಂಜುವರೇನಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನ ನಿಮ್ಮ ಶರಣರೆಂಬ ಮದದಾನೆಗಳು?

೫೪೪. ಅರಿಷಡ್ವರ್ಗಗಳಳಿದವ ಶರಣರೆಂಬರು ಅದೆಂತಯ್ಯಾ? ಕಾಮವದು ಲಿಂಗಾರ್ಚನೆಯಲ್ಲಿ. ಕ್ರೋಧವದು ಷಣ್ಮತ ನಾಶನದಲ್ಲಿ. ಲೋಭವದು ಸಮ್ಯಜ್ಞಾನದಲ್ಲಿ. ಮೋಹವದು ಮುಕ್ತ್ಯಾಂಗನೆಯಲ್ಲಿ. ಮದವದು

ಮನದಲ್ಲಿ. ಮತ್ಸರವದು ಶಮೆಯಲ್ಲಿ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೪೫. ಶಿಶುವಿನ ಕ್ರೀಡೆ ತಾಯಿಗಲ್ಲದೆ ಅನ್ಯರಿಗುಂಟೆ? ಪಶುವಿನ ತಪ್ಪು ಪಶುಪತಿಯಾದವಂಗಲ್ಲದೆ ಅನ್ಯರಿಗುಂಟೆ? ಎನ್ನ ಅಹಂಕಾರ ನಿಮಗಲ್ಲದೆ ಜಗದ ಜಡರಿಗುಂಟೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೫೪೬. ಜನನಕ್ಕೆ ಜಂಗಮನಲ್ಲದೆ ಎನ್ನ ಮನಕ್ಕೆ ಜಂಗಮನಲ್ಲ ನೋಡಾ! ಎನ್ನ ಮನಕ್ಕೆ ಜಂಗಮನಲ್ಲದೆ ಎಮ್ಮ ಪುರಾತರಿಗೆ ಜಂಗಮನಲ್ಲ ನೋಡಾ! ಎಮ್ಮ ಪುರಾತರಿಗೆ ಜಂಗಮನಲ್ಲದೆ ಚನ್ನ ಬಸವಣ್ಣಂಗೆ ಜಂಗಮನಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೪೭. "ಜಂಗಮೋಪಿ ಜಗತ್ಪೂಜ್ಯೋ ಜಂಗಮಸ್ತು ಸದಾಶಿವಃ। ಕ್ರೋಧಾಲ್ಲೋಕಂ ನಾಶಯತೆ ಮೋಹಾಲ್ಲೋಕಂ ವಿವರ್ಧತೆ" ಇಂತಪ್ಪ ಪರಮ ಜಂಗಮನ ಪಾದಕ್ಕೆ ನಮೋ ನಮೋ ಎಂಬೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೪೮. ಕರಿಕೆಯ ಕಂಡು ಪಶುಗಳಾಶ್ರಯಿಸುವವು. ಔತಣ ಕಂಡು ದ್ವಿಜರಾಶ್ರಯಿಸುವರು. ಯುದ್ಧವ ಕಂಡು ಶೂರರಾಶ್ರಯಿಸುವರು. ಸಭೆಯ ಕಂಡು ವಿದ್ವಾಂಸರಾಶ್ರಯಿಸುವರು. ಇವರೆಲ್ಲ ಮಾಯಾ ಮೂಲಕರಲ್ಲದೆ ಮಾಯಾರಹಿತರಲ್ಲಯ್ಯ. ಕಂಡು ಕಂಡು ಕಣ್ದೆರೆದು ನೋಡದ ಮಹಾಮಹಿಮ ಜಂಗಮನ ಪಾದಕ್ಕೆ ನಮೋ ನಮೋ ಎಂಬೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೪೯. ಜಲಪ್ರಳಯದಲ್ಲಿ ಸುಳಿಯಬಹುದನೇಕ ಯುಗ ಜುಗಂಗಳಲ್ಲಿ. ನಿಮ್ಮ ಶರಣರ ಚಿತ್ತ ಬೇಸರವಾದಲ್ಲಿ ಸುಳಿಯಬಾರದೊಂದು ನಿಮಿಷ ನೋಡೈ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೫೦. ಬಿಟ್ಟ ಪದವಿಯ ಬಟ್ಟೆಗೆ ಪೋಪಾತನಲ್ಲ ನೋಡಾ ಶರಣನು. ಬಿಟ್ಟು ಬಿಟ್ಟು ಬಯಲಿಟ್ಟ ಆಟ್ಟೆ ಬಟ್ಟೆಗೊಂಡರು ಭವಕ್ಕೆ ಹಿಡಿದು ಹಿಡಿದು ಭವಕ್ಕೆ ಬಾರದೆ ಭವವಿರತರಾದರು ಕಂಡ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನ ನಿಮ್ಮ ಮಹಾ ಮಹಿಮ ಶರಣರು.

೫೫೧. ಮನುಜರ ಮನ್ನಣೆಯದು ಮಸೆದಲಗಿನ ಘಾಯ ನೋಡಾ. ಮನುಜರ ಮನ್ನಣೆಯದು ಪರಿಮಳ ಪುಷ್ಪದ ಸೋಂಕು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೫೨. ತಿಳಿದು ನುಡಿ ಕೊಡಬೇಕಲ್ಲದೆ ತಿಳಿಯದ ನುಡಿಯದು ಅಪಭ್ರಂಶವಯ್ಯಾ. ನುಡಿ ಎರಡೊಂದಾದಡೆ ವೃಡ ಮೂರ್ತಿ ಕಪಿಲಸಿದ್ಧ ಮಲ್ಲಿಕಾರ್ಜುನ ನುಡಿಗೊಮ್ಮೆ ನುಡಿವ ನೋಡಾ ಬೊಮ್ಮಣ್ಣಾ.

೫೫೩. ಮಾನವಿಲ್ಲದ ಭೋಜನವದು ಶ್ವಾನನ ಮಾಂಸವಯ್ಯಾ. ಜ್ಞಾನವಿಲ್ಲದ ಕ್ರಿಯೆಯದು ಸಿದ್ಧಿಗಳಿಗೀಡವಯ್ಯಾ. ಧ್ಯಾನವಿಲ್ಲದ ಪೂಜೆಯದು ಕಾನನ ಜ್ಯೋತಿಯಯ್ಯಾ. ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನ ನೀನಿಲ್ಲದ ಭಕ್ತಿಯದು ಚಾಂಡಾಲ ಪಾಕವಯ್ಯಾ.

೫೫೪. ಲಿಂಗವ ಪೂಜಿಸಿ ಫಲವೇನಯ್ಯಾ ಅಂಗನೆಯರೊಲುಮೆಯಾಗದನ್ನಕ್ಕ? ಜಂಗಮವ ಪೂಜಿಸಿ ಫಲವೇನಯ್ಯಾ ಮೋಕ್ಷಾಂಗನೆ ವೈಗೊಡದನ್ನಕ್ಕ? ಅಂಗಜ ಬಂದು ಫಲವೇನಯ್ಯಾ ನಾ ಮನ ಒಲಿದು ರತಿಗೊಲಿಯದನ್ನಕ್ಕ? ಶರಣ ಸತಿ ಲಿಂಗ ಪತಿ ಎಂಬ ವೀರತ್ವ ಕೆಟ್ಟಿತೆನ್ನೊಳೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೫೫. ಚತುರ್ವರ್ಣವಾದರೇನು? ಚತುರ್ವರ್ಣಾತೀತನೆ ವೀರಶೈವ ನೋಡಾ! ಚತುರ್ವೇದಿಯಾದರೇನು? ಚರ್ಮ ದೇಹವಳಿಯದವನೆ ಚಾಂಡಾಲ ನೋಡಾ! ಚತುರಂಗ ಬಲಯುಕ್ತನಾದರೇನು? ಚತುರ ಗುಣವಿಲ್ಲದಿದ್ದರೆ ದೇಶವನಾಳ್ವ ಪರಿಯು ನೋಡಾ. ಚರ್ಮದೇಹಿಯಾದರೇನು? ಗಜ ಚರ್ಮಧರ ಕಪಿಲಸಿದ್ಧಮಲ್ಲಿಕಾರ್ಜುನ ಪ್ರಸನ್ನವಾಗದನ್ನಕ್ಕಾ ಬಾಳುವೆ ನೋಡಾ.

೫೫೬. ಸಂಪಿಗೆಗಂಧವ ಸೇವಿಸಿದಲ್ಲಿ ಭ್ರಮರ ಜನ್ಮ ಈಡಾಡಿತ್ತು. ಕೇಸರಿ ತನ್ನ ಗಂಧಕ್ಕಾಗಿ ತನ್ನ ಜನ್ಮ ಈಡಾಡಿತ್ತು. ಶರಣನ ಬೋಧೆ ಸೇವಿಸಿದಲ್ಲಿ ಎನ್ನ ಜನ್ಮ ಈಡಾಡಿತ್ತು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೫೭. ಬೋಧವೆಂದರೆ ಕರ್ಣವನೂದಿ ಮಂತ್ರವ ಹೇಳಿದ್ದು ಬೋಧವೆ? ಅಲ್ಲಲ್ಲ. ಬೋಧವೆಂದರೆ ತನುತ್ರಯ ಸಾಕ್ಷಿ ನೀನೆ ಪರವಸ್ತು ಎಂಬುವದದೆ ನಿಜಬೋಧ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೫೫೮. ಹೇಳಿದ ಬೋಧೆ ಶಿಲಾಲಿಪಿ ಎಂತಾದರೆ ಶಿಲಾ ಸದೃಶ ನೋಡಾ. ಭವಕ್ಕೆ ಹೇಳಿದ ಬೋಧೆ ಜಲಲಿಪಿಯಾದರೆ ಜಲ ಸದೃಶ

ನೋಡಾ! ಭವಕ್ಕೆ ಹೇಳಿದ ಬೋಧೆ ಗಟ್ಟಿಗೊಂಡರಾಳುವದೆತ್ತ ನಿನ್ನ ಮಾಯಾಜಾಲವನೆಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೫೫೯. ಮಂತ್ರವ ಜಪಿಸಿ ಫಲವೇನಯ್ಯ ಮಂತ್ರ ಮೂರ್ತಿ ಕಾಣದನ್ನಕ್ಕ? ಯಂತ್ರವ ಧರಿಸಿ ಫಲವೇನಯ್ಯ ಅಂತರ ರೋಗ ಪರಿಹಾರವಾಗದನ್ನಕ್ಕ? ತಂತ್ರವನೋದಿ ಫಲವೇನಯ್ಯ ಅದರಂತರ ಪೈಗೊಡದನ್ನಕ್ಕ? ಶರಣನಾಗಿ ಫಲವೇನಯ್ಯ ಲಿಂಗ ಜಂಗಮ ಪೂಜಿಸಿ ಮೋಕ್ಷ ಪಡೆಯದನ್ನಕ್ಕ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೫೬೦. ಲಿಂಗವ ಪೂಜಿಸಿದ ಫಲ ನೀಲಲೋಚನೆಗಾಯಿತ್ತು. ಜಂಗಮವ ಫ಼ೂಜಿಸಿದ ಫಲ ಬಸವಣ್ಣಂಗಾಯಿತ್ತು. ಮಂತ್ರವ ಪೂಜಿಸಿದ ಫಲ ಅಜಗಣ್ಣಂಗಾಯಿತ್ತು. ಯೋಗವ ಪೂಜಿಸಿದ ಫಲ ಶಿವಯೋಗಿ ಸಿದ್ಧರಾಮಂಗಾಯಿತ್ತು ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ.

೫೬೧. ಪೂಜಾಫಲವಂತಿಂತಲ್ಲ. ಪೂಜಾಫಲಂ ಫಲಂ ಮನ್ಯೆ ತವ ಪಾಣಿಹಂ ಶಿವೆ. ಪೂಜಾಫಲವಂತಿತಲ್ಲ. ಪೂಜಾಫಲಂ ಫಲಂ ಮನ್ಯೆ ಮಧ್ಯಾನ್ಹಾಸಕ್ತಪುರುಷ ಎಂದು ನೀ ಹೇಳಿದ ವಾಕ್ಯ ಹುಸಿ ಏನಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ?

೫೬೨. ಲಿಂಗಾಂಗಿಯಾದ ಬಳಿಕ ಭವಿಸಂಗಮಾಡಲಾಗದು. ಭವಿಗೆ ದಾನವ ಕೊಡಲಾಗದು. ಭವವಿರಹಿತ ಕಾರ್ಯವನೈದಿ ಭವ ಬೀಜದ ನೆಲೆಯನಾಶ್ರಯಿಸಿದರೆ ಭವ ತಪ್ಪದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೫೬೩. ಭವಿ ಎಂದರೆ ಲಿಂಗವಿಲ್ಲದ ಭವಿಯೋ? ಅಲ್ಲಲ್ಲ. ಭವಿ ಎಂದರೆ ವೇದವೇದಾಂತವನೋದಿ ಲಿಂಗವ ಧರಿಸದವ ಭವಿಯೆ? ಅಲ್ಲಲ್ಲ. ಅಂಗದ ಸ್ಥಿತಿಯನರಿದಡೇನಾಯಿತ್ತು? ಗುಣ ತಿಳಿದು ಲಿಂಗವ ಕೊಡುವ ಗುರುವಿಲ್ಲ. ಬಹಿರಂಗದಲ್ಲಿ ಲಿಂಗ ವಿರಹಿತ ಅಂತರಂಗದಲ್ಲಿ ಲಿಂಗ ಶೋಲುಪ್ತ ಹೊಲಬುಳ್ಳವನಾದರೇನು ತಿಳಿಯದವರಿಲ್ಲದನ್ನಕ್ಕ? ಸತ್ಕ್ರಿಯಾಸಾಮರಸ್ಯಕ್ಕೆ ಭವಿಯಲ್ಲದೆ ಅನುಭವ ಗೋಷ್ಠಿಗೆ ಭವಿಯೆ? ಅಲ್ಲಲ್ಲ. ಭವಿ ಎಂದರೆ ಮದ್ಯಪಾನ, ಮಾಂಸ ಭಕ್ಷಣ, ಪರ ಸ್ತ್ರೀ ಸಂಗ, ಪರ ಧನ ಚೋರತ್ವ, ನಿಜವಸ್ತು ಅಂತರತ್ವವಿದ್ದವನೆ ಭವಿಯಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೬೪. ಎಲ್ಲ ದೇವರಂತಲ್ಲ ನೋಡವ್ವಾ ಈ ದೇವಾ! ಮಲಿಯ ನಂಬಿಯ ನಂಬಿಯಣ್ಣಂಗೆ ಮುದ್ದ್ವ ಕುಂಟಣಿಗನಾದ. ಎಲ್ಲ ದೇವರಂತಲ್ಲ ನೋಡವ್ವಾ ಈ ದೇವಾ. ಸರಳಿಲೆ ಹೋದ ಪಾಂಡವಂಗೆ ಪಾಶುಪತಾಸ್ತ್ರವನಿತ್ತೆಯಲ್ಲದೆ. ಎಲ್ಲ ದೇವರಂತಲ್ಲ ನೋಡವ್ವಾ ಈ ದೇವಾ. ಕಲ್ಲಿಲಿಟ್ಟ ಶಂಖಿಯಂಗೆ ಕೈವಲ್ಯ ಪದವಿಯ ಕೊಟ್ಟನಂದು. ಎಲ್ಲರಂತಲ್ಲ ನೋಡವ್ವಾ ಈ ದೇವಾ. ಒಬ್ಬ ಬಲ್ಲೇಶಯ್ಯನಿಂದ ಸಹಸ್ರ ಕಂಡುಗ ಕಪಿಲೆ ಘೃತವ ಕೈಕೊಂಡ ನೋಡವ್ವಾ ಕಪಿಲಸಿದ್ದ ಮಲ್ಲಿಕಾರ್ಜುನಾ.

೫೬೫. ಲಿಂಗ ಹೋದರೇನು ? ಗುರು ಉಂಟೆಂಬ ಬಾಲ ಭಾಷೆಯ ಕೇಳಲಾಗದು. ಕೇಳಿದವನ ಸಂಗ ಸಿಂಗಿ ಕಾಳಕೂಟ ವಿಷವು. ಆತನ ಸಂಗದಲ್ಲಿರಲು ಪಂಚ ಮಹಾಪಾತಕ ತಪ್ಪದಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೬೬. ಲಿಂಗವ ಧರಿಸಿದ ಯೋಗಿಗೆ ಅಂಗನೆಯರು ಲಿಂಗದ ವಾಣಿವಾಸ. ಲಿಂಗವ ಧರಿಸಿದ ಭೋಗಿಗೆ ಕಾಷಾಯಾಂಬರಧಾರಿಗಳು ರುದ್ರಗಣಂಗಳು. ಲಿಂಗವ ಧರಿಸಿದ ಜೀವ ಜಾಲವು ಕಪಿಲಸಿದ್ಧ ಮಲ್ಲಿಕಾರ್ಜುನನೆಂದು ನಂಬಿದೆ ನೋಡಾ ಗುರುವೆ ಚನ್ನಬಸವಣ್ಣನೆ.

೫೬೭. ಉದಕವೆಲ್ಲ ಒಂದೆ ಈಚಲಾಶ್ರಯಿಸಿ ಮದ್ಯಪಾನವೆನಿಸಿತ್ತು. ಸುರತರುವಾಶ್ರಯಿಸಿ ಅಮೃತವೆನಿಸಿತ್ತು. ದೇಹವೆಲ್ಲ ಒಂದೆ ಅಂಗನೆಯರಾಶ್ರಯಿಸಿ ಭವಕ್ಕೆ ಬೀಜವಾಯಿತ್ತು. ಲಿಂಗವಾಶ್ರಯಿಸಿ ಭವಾರಣ್ಯಕ್ಕೆ ದಾವಾನಲವಾಯಿತ್ತು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೫೬೮. ಬಂದ ಪದಾರ್ಥವ ನೋಡಿ ಹಿಗ್ಗುವನಲ್ಲ ಶರಣ. ಬಾರದ ಪದಾರ್ಥವ ನಿಶ್ಚಯಿಸಿ ಕುಗ್ಗುವನಲ್ಲ ಶರಣ. ಶರಣರ ನಡೆಯೆ ಲಿಂಗರೂಪು. ಶರಣನ ನುಡಿಯೆ ಲಿಂಗಪ್ರಸಾದ. ಪೂಜಿಸಿದರೆ ಹರ್ಷನಾಗನು. ಪೂಜಿಸದಿರೆ ಕ್ರೋಧನಾಗನು. ಬೆಳೆಯುವ ಹೊಲ ಪ್ರಾಣಿ ಮಾತ್ರಕ್ಕಲ್ಲದೆ ತನ್ನೊಳಗಿಲ್ಲ. ಪೂಜಿಸಿದ ಫಲ ಭಕ್ತಂಗಲ್ಲದೆ ಲಿಂಗಕ್ಕಿಲ್ಲ. ಬಂದ ಪದಾರ್ಥ ಲಿಂಗವೆಂದನಲ್ಲದೆ ಪದಾರ್ಥವೆಂದು ಭಾವಿಸಲಿಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ ನಿಮ್ಮ ಶರಣನು.

೫೬೯. ಶರಣನೆಂಬುವ ಶಬ್ದವಂತಿಂತಲ್ಲದೆ ಪಣ್ಯತ್ವವೆಂಬ ಸೂತ್ರದಿಂದ ಶರಣನೆನಿಸಿದನು. ಶರ ಎಂದರೆ ಬಾಣ, ಣನವೆಂದರೆ ಅಂಥ ಮನ್ಮಥಬಾಣವಿಲ್ಲದವನೆ ಶರಣ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ

೫೭೦. ಭಸ್ಮವ ಹೂಸಿದಲ್ಲಿ ಶರಣನೆ? ಅಲ್ಲಲ್ಲ. ಮಾಡುವ ಕ್ರಿಯೆ ಭಸ್ಮವಾದರೆ ಶರಣ. ನೋಡುವ ಕೃತ್ಯ ರುದ್ರಾಕ್ಷಿಯಾದರೆ ಶರಣ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೫೭೧. ಶರಣನ ಸಂಭ್ರಮ ಲಿಂಗ ಪೂಜೆ ಜಂಗಮ ದಾಸೋಹ ನೋಡಯ್ಯ. ಶರಣನ ಸಂಭ್ರಮ ಅನುಭವ ಓದಿ ಭವ ಗೆಲಿಯುವ ದದೆ ಸಂಭ್ರಮ ಕಾರ್ಯ ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೫೭೨. ಶರಣನಜಾಗ್ರತೆಯೆ ಶಿವರಾತ್ರಿ ಕಂಡಾ ಮನವೆ. ಶರಣನ ನಿದ್ರೆಯೆ ಶಿವಯೋಗ ಸಮಾಧಿ ಕಂಡಾ ಮನವೆ. ಶರಣನ ನುಡಿಯೆ ಶ್ರೀರುದ್ರ ಪಂಚ ಬ್ರಹ್ಮೋಪನಿಷತ್ತು ಕಂಡಾ ಮನವೆ. ಶರಣನ ನಡೆಯೆ ಮುಕ್ತಿ ಸೋಪಾನ ಕಂಡಾ ಮನವೆ. ಶರಣನ ಭೋಜನವೆ ಕಪಿಲಸಿದ್ಧ ಮಲ್ಲಿಕಾರ್ಜುನನರ್ಪಣ ಕಂಡಾ ಮನವೆ.

೫೭೩. ಶರಣನ ಇರವ ನೆನೆನೆನೆದು ಶರಣನಾದೆನಯ್ಯ. ಇನ್ನು ಮರೆದೆನಾದರೆ ನಿಮ್ಮ ಶರಣ ಚನ್ನಬಸವಣ್ಣನಾಣೆ. ಇನ್ನು ಈ ಭವಕ್ಕೆ ಬಂದೆನಾದರೆ ಹಲ್ಲುದೋರಿ ಮೂಗ ಕೊಯ್ಯಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೭೪. ಆಕಾಶದಲ್ಲಿಯ ಕಪ್ಪು ಅಂಗೈ ತಿನ್ನೆಂದರೆ ತಿಂಬುವುದೆ ಅಯ್ಯ? ಮರೀಚಿಯ ನೀರು ಮಡಿಯ ಕ್ರಿಯಕ್ಕೆ ಬಾ ಎಂದರೆ ಬರುವದೇನೊ ಅಯ್ಯ ಎಲೆ ಲಿಂಗಮೂರ್ತಿ ಕಪಿಲಸಿದ್ಧ ಮಲ್ಲಿಕಾರ್ಜುನಾ?

೫೭೫. ಶರಣನ ನೋಟ ಭವದ ಕಾಟ ನೋಡಯ್ಯ! ಶರಣನ ದೃಷ್ಟಿ ಶಿವ ದೃಷ್ಟಿ ನೊಡಯ್ಯ! ಶರಣನ ದೇಹ ಶಿವ ದೇಹ ನೋಡಯ್ಯ! ಶನಣನ ಪಾದುಕೆ ಎಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ಚಮ್ಮಾವುಗೆ ನೋಡಾ ಮಡಿವಾಳ ಮಾಚಣ್ಣಾ.

೫೭೬. ಶರಣನ ನಡೆ ಅಂತಿಂತೆನ ಬೇಡ. ಶರಣ ಮಾದರ ಚನ್ನಯ್ಯನ ನಡೆಯಾವ ಆಗಮದಲ್ಲಿ ಹೇಳಿತ್ತು? ಶರಣ ಡೋಹರ ಕಕ್ಕಯ್ಯನ ನಡೆಯಾವ ವೇದದಲ್ಲಿ ಹೇಳಿತ್ತು? ನಡೆದ ಆಚರಣೆಯೆ ಸತ್ಶೀಲ ನುಡಿದ ವಾಕ್ಯವೆ ಮೋಕ್ಷಪ್ರದಾಯಕ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೭೭. ಸ್ಥಲವಿಡಿದಾಚರಿಸಬೇಕೆಂಬವನ ಭಾಷೆ ಬಾಲಭಾಷೆ. ಭಕ್ತನಾಗಿ ಭಕ್ತಸ್ಥಲವಾಚರಿಸುವದದು ಯೋಗ್ಯವಯ್ಯ. ಭಕ್ತನಾಗಿ ಮಹೇಶ

ಸ್ಥಲ ಅಳವಡಬಾರದೇನಯ್ಯಾ? ಭಕ್ತನಾಗಿ ಮಹೇಶ ಪ್ರಸಾದಿ ಪ್ರಾಣ ಲಿಂಗಿ ಶರಣ ಐಕ್ಯ ಸ್ಥಲವಳವಡಬಾರದೇನಯ್ಯಾ? ಮನೆಯಲ್ಲಿದ್ದ ಲಿತ್ತಿಗಳು ಮನೆಯ ಮೀರಿ ಮೀರಿ ಹಾರಬಾರದೇನಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ?

೫೭೮. ಷಟ್ಸ್ಥಲವೆಂಬ ಷಣ್ಮುಖ ಮುದ್ರೆಯೊಳು ನವ ವಿಧ ಭಕ್ತಿ ಎಂಬ ನವ ನಾದ ಕೇಳದವ ಶರಣನೇ ಅಯ್ಯಾ? ಷಟ್ಸ್ಥಲವೆಂಬ ಷಣ್ಮುಖ ಮುದ್ರೆಯೊಳು ಷಡಕ್ಷರವೆಂಬ ಮಂತ್ರವ ಜಪಿಸಿ ಷಡ್ವಿಧಲಿಂಗ ಪೂಜಿಸದವ ಶರಣನೆ ಅಯ್ಯಾ? ಷಟ್ಸ್ಥಲವೆಂಬ ಷಣ್ಮುಖ ಮುದ್ರೆಯೊಳು ಬೀಜಾಕ್ಷರ ತ್ರಯಂಗಳನೋದಿ ಷಡಕ್ಷರಂಗಳ ಸಾಧಿಸಿ ಷಣ್ಮುಖ ಶಿವನಾಗದವ ನಿಮ್ಮ ಶರಣನೆ ಅಯ್ಯಾ ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೫೭೯. ಶರಣ ಸ್ಥಲ ನೋಡುವಡೆ ಬಹುಸುಲಭ ನೋಡಯ್ಯಾ. ಶರಣನು ತಿಳಿದು ತಿಳಿದು ಆಚರಿಸನು. ಮರೆದು ಮರೆದು ಆಚರಿಸುವ ಜ್ಞಾನದಿಂದ ಭೇದವಿಲ್ಲದೆ ದೇಹದಿಂದ ಭೇದವಿಲ್ಲ ನೋಡಯ್ಯಾ. ಶರಣ ತನ್ನ ದೇಹವೇ ಹಕಾರ ಪ್ರಣವ ಮಾಡಿಟ್ಟ. ನರನು ತನ್ನ ದೇಹವೆ ದೇಹವೆಂದು ಜಡವೆಂದು ಪ್ರಳಯಕ್ಕೊಳಗು ಮಾಡಿಟ್ಟ. ಶರಣನ ದೇಹವೆಲ್ಲ' ಪಂಚಾಕ್ಷರಮಯ ನೋಡಾ. ನಕಾರವೆ ಅಸ್ತಿ, ಮಕಾರವೆ ನಾಡಿ, ಯಕಾರವೆ ರೋಮ, ಮಕಾರವೆ ಮಾಂಸ, ಶಿಕಾರವೆ ತ್ವಕ್ಕು, ಮಕಾರವೆ ರುಧಿರ, ಯಕಾರವೆ ಶ್ಲೇಷ್ಮ, ಶಿಕಾರವೇ ಶುಕ್ಲ, ನಕಾರವೆ ರಸ, ವಕಾರವೆ ಪಿತ್ತ, ಶಿಕಾರವೆ ನಿದ್ರೆ, ನಕಾರವೆ ಕ್ಷುಧೆ, ವಕಾರವೆ ಆಲಸ್ಯ, ಮಕಾರವೆ ತೃಷ್ಣೆ, ಯಕಾರವೆ ಸಂಗ, ಯಶಿನಮ ಎಂಬವು ಮೋಹ ಭಯ ರಾಗ ಲಜ್ಜೆ ದ್ವೇಷಕ್ಕೆ ಸೇರಿಸಿದ ನೋಡಾ! ಕ್ಲಂಕ್ಲೀಂಎಂಬುದಚ್ಚ ಕಠಿಣ ಮೃದುವಿಗೆ ಇಟ್ಟ ನೋಡಾ. ಕ್ಲಂಕ್ಲೀಂಎಂಬುದೂಷ್ಣಚಲನೆಗೆ ಸೇರಿಸಿದ ನೋಡಾ. ಶಿ ಯ ಮ ವ ನ ಎಂಬುದೇ ಸ್ಪರ್ಶಗಂಧರೂಪು ಶಬ್ದ ರಸಕ್ಕೆ ಸೇರಿಸಿದ ನೋಡಾ! ಶಿ ಯ ಮ ಎಂಬುದೆ ಪಾದಪಾ ಗುಹ್ಯ ಪಾಣಿ ಪಾಯುವಿಗೆ ಸಂಬಂಧಿಸಿದ ನೋಡಾ! ಯ ಮ ವ ನ ಶಿ ಎಂಬುದೆ ಶ್ರೋತ್ರ ಜಿಹ್ವೆ ತ್ವಕ್ಕು ನಾಸಿಕ ನೇತ್ರಕ್ಕೆ ಸಂಬಂಧಿಸಿದ ನೋಡಾ! ನ ಶಿ ಯ ಮ ವ ಎಂಬುದೆ ಪ್ರಾಣೋದಾನ ಸಮಾನ ಪಾನ ವ್ಯಾನಕ್ಕೆ ಸಂಬಂಧಿಸಿದ ನೋಡಾ! ಮ ಯ ನ ಶಿ ವ ಯ ಬುದ್ಧಿ ಮನೋ ಚಿತ್ತಹಂಕಾರ ಜ್ಞಾನಕ್ಕೆ ಸಂಬಂಧಿಸಿದ ನೋಡಾ! ಈ ರೀತಿಯಿಂದರಿದು ಶಿವತತ್ವ ತಾನಾಗಿ ನಿಂದ ನೋಡಾ. ಕಪಿಲಸಿದ್ಧಮಲ್ಲಿಕಾರ್ಜುನಾ.

೫೮೦. ಬಂದು ಬಂದು ಹೋಗದಿರಾ ಮನವೆ. ನಿಂದು ನಿಂದು ನಡೆಯದಿರಾ ಮನವೆ. ಬಂದು ಬಂದು ನೀನಿಂದುಧರ ಕಪಿಲಸಿದ್ಧಮಲ್ಲಿಕಾರ್ಜುನನ ಪೂಜಿಸು ಮನವೆ.

೫೮೧ ಬಂದುದದು ಬರಲಿ, ಬಾರದದು ಬರಲಿ. ದೇವ ಬರಬಹುದು ಬರಬಹುದೆ ಬಲ್ಲವನಾದ ಬಳಿಕ ಬರಬಾರದು ಬರಬಾರದು ಬರಬಾರದು ಬಲ್ಲವನಾದ ಬಳಿಕ ಕಪಿಲಸಿದ್ಧಮಲ್ಲನ ಮಾಯೆಯು ಎಡೆಯಾಟಕ್ಕೆ.

೫೮೨. ಅನುಭವವೆಂಬುದದು ಅನುಭಾವಿಕಗಲ್ಲದೆ ಹೊತ್ತಿಗೆಯಲ್ಲಿಲ್ಲ ನೋಡಾ ಮಾನವಾ. ರತ್ನಗಳು ಸಮುದ್ರದಲ್ಲಲ್ಲದೆ ಕೀಳು ಕುಲ್ಯಾದಿಗಳಲ್ಲಿಲ್ಲ ನೋಡಾ ಮಾನವಾ! ನವ ಮಂತ್ರಗಳ ಮರ್ಮವದು ಗುರುಮುಖದಲ್ಲಲ್ಲದೆ ಬರಿಯ ಪುರಾಣಗಳಲ್ಲಿಲ್ಲ ನೋಡಾ ಮಾನವಾ. ಇಂದಿನ ಪ್ರಮಥರು ಮುಂದೆ ಬಂದಿಹರೆಂಬ ಭ್ರಮೆ ಬೇಡ ನೋಡಾ ಮಾನವಾ ನೀನಂದಿಂದೆನ್ನದೆ ಕಪಿಲ ಸಿದ್ಧ ಮಲ್ಲಿಕಾರ್ಜುನನ ನಂಬು ನೋಡಾ ಮಾನವಾ.

೫೮೩. ಎಲ್ಲರಿಗೆರಡು ಕಣ್ಣೆಂಬುದು ಲೋಕವೆಲ್ಲ ಬಲ್ಲುದು. ಎರಡು ಕಣ್ಣಿನವನಲ್ಲ. ಮೂರು ಕಣ್ಣಿನವನಲ್ಲ. ಒಂದೇ ಕಣ್ಣಿನವ ನೋಡಾ ಅಲ್ಲಮ ಕಪಿಲಸಿದ್ಧ ಮಲ್ಲಿಕಾರ್ಜುನನ ವಲ್ಲಭನಲ್ಲಿ ಕಲ್ಲಯ್ಯ.

೫೮೪. ಸರ್ವಂ ಶಿವಮಯಂ ಜಗತ್ತೆಂಬುದ ತಿಳಿಯದೆ ನುಡಿದವರ ನುಡಿಯಂತೆ ನಡೆಯದಿರಾ ಮನವೆ. ಸರ್ವಂ ಶಿವಮಯಂ ಜಗತ್ತೆಂದು ತಿಳಿದು ತಿಳಿದು ಸುಖಿಯಾಗಾ ಮನವೆ. ಪಿಂಡಬ್ರಹ್ಮಾಂಡಕ್ಕೆ ತಿಲಷೋಡಶ ಭಾಗೆ ನ ಭೇದಂ ನಾಸ್ತಿ ವರಾನನೆ ಎಂಬುದು ಪುಸಿಯಲ್ಲ ನೋಡಾ ಮನವೆ. ಈಶ್ವರನ ಪಂಚ ಮುಖದಿಂದ ಪಂಚ ತತ್ವಂಗಳುದಯಿಸಿದವು. ಆ ತತ್ವಂಗಳೊಂದೊಂದು ಕೂಡಿ ತನ್ನ ಚೈತನ್ಯ ಬೆರಿಸಿದಲ್ಲಿ ಪಿಂಡ ಬ್ರಹ್ಮಾಂಡವೆನಿಸಿತ್ತು ನೋಡಾ ಮನವೆ. ತನ್ನ ತಾನರಿದು ನೋಡಿದರೆ ಸರ್ವಂ ಶಿವ ಕಪಿಲಸಿದ್ಧ ಮಲ್ಲಿಕಾರ್ಜುನ ಮಯಂ ಜಗತ್ತೆಂದರಿದು ಬಂದಿತ್ತು ನೋಡಾ ಮನವೆ.

೫೮೫. ಮಣ್ಣೆಲ್ಲ ಮಹಾದೇವನ ಸದ್ಯೋಜಾತ ಮುಖ ನೋಡಾ! ನೀರೆಲ್ಲ ವಾಮದೇವ ಮುಖ ನೋಡಾ! ಪ್ರಳಯಾಗ್ನಿ ಎಲ್ಲ ಮಹಾದೇ

ವನ ಅಘೋರ ಮುಖ ನೋಡಾ! ಮಾರುತವೆಲ್ಲ ಮಹಾದೇವನ ತತ್ಪು ರುಷ ಮುಖ ನೋಡಾ! ಆತ್ಮವೆಲ್ಲ ಮಹಾದೇವನ ಗೋಪ್ಯ ಮುಖ ನೋಡಾ! ಸರ್ವಂ ಶಿವ ಮಯಂ ಜಗತ್ತೆಂಬ ಶೃತಿ ಶಾಖೆ ಪುಸಿಯಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೮೬. ಯದ್ದೃಷ್ಟಂ ತನ್ನಷ್ಟಮೆಂಬ ಶೃತಿ ವಾಕ್ಯವನರ್ಥ ಮಾಡಿ ಮುಳುಗದಿರಾ ಮನವೆ. ಭೇದ ಬುದ್ಧಿಯಿಂದರಿವುದದೆ ನಷ್ಟ ನೋಡಾ ಮನವೆ. ಭೇದವಳಿದು ಭವ ವಿರಹಿತ ಮೂರ್ತಿಯ ಪಂಚ ತತ್ವ ವೆಂದು ನಂಬು ಕಂಡಾ ಮನವೆ. ಸರ್ವಂ ಕಪಿಲಸಿದ್ಧ ಮಲ್ಲಿಕಾರ್ಜುನ ಮಯಂ ಜಗತ್ತೆಂಬುದದು ಪುಸಿಯೆ ಮನವೆ?

೫೮೭. "ತದನುಸರಣಾ ಜನ್ಮ ಜನ್ಮ" ಎಂಬುದು ಹುಸಿಯಲ್ಲ ಹುಸಿ ಯಲ್ಲ ನೋಡಯ್ಯ. ಭೇದಬುದ್ಧಿಯಿಂದಲ್ಲದೆ ಅಭೇದ ಬುದ್ಧಿಗೆ ತೋರ ಬಾರದು. ಸರ್ವಂ ಕಪಿಲಸಿದ್ಧ ಮಲ್ಲಿಕಾರ್ಜುನ ಮಯಂ ಜಗತ್ತೆಂಬು ವದು ನಿಶ್ಚಯ ನೋಡಯ್ಯ ಎಲೈ ಲಿಂಗವೆ.

೫೮೮. ಶರಣನ ವಾಗ್ರಚನ ಪ್ರತಾಪ ಸ್ಥಲ ತರ್ಕಿಸಿದಲ್ಲಿ ವಾದಿಸಿ ಶಿಖಾಮುದ್ರೆ ಸಾಧಿಸುವವರೊಂದು ಕೋಟಿ. ವೇದಾಂತದಲ್ಲಿ ವಾದಿಸಿ ಶಿಖಾಮುದ್ರೆಯ ಸಾಧಿಸುವವರೊಂದು ಕೋಟಿ. ಶರಣನ ವಾದಿಸಿ ಶಿಖಾ ಮುದ್ರೆಯ ಸಾಧಿಸುವದದು ಶರಣನ ಬಟ್ಟ ಶರ ತಾಗಿದವರಲ್ಲೋರ್ವರಿಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೮೯. ತಿಳಿಯದ ಜನರಾವು ಶಿವನಲ್ಲ ಜಡಜೀವಿಗಳೆಂಬುವರು. ಅದೆಂತಯ್ಯ? "ಪಂಚತತ್ವಂ ಮುಖೋದ್ಭೂತಂ" ಎಂಬಾಗಮ ವಾಕ್ಯ ಸಿದ್ಧಿ. ಪಂಚತತ್ವಗಳೆಲ್ಲ ಶಿವನ ಪಂಚ ಮುಖದಿಂದಾದವು. ಆ ಪಂಚ ತತ್ವದಿಂ ಸಕಲ ಚರಾಚರ ಬ್ರಹ್ಮಾಂಡವಾಯಿತ್ತಯ್ಯ ಕಪಿಲಸಿದ್ಧ ಮಲ್ಲಿ ಕಾರ್ಜುನಯ್ಯನ ಲೀಲೆಯಿಂದೆ ಕಲ್ಲಯ್ಯ.

೫೯೦. ಲೀಲೆಯದು ಪರಬೊಮ್ಮದ ಇಚ್ಛೆ. ಇಚ್ಛೆಯದು ಸಕಲ ಜೀವ ಜಾಲೋತ್ಪತ್ತಿ. ಸಕಲ ಜಾಲೋತ್ಪತ್ಯವದು ಜಗದ್ರಚನೆ. ಜಗದ್ರಚ ನೆಯದು ಜಗತ್ಪ್ರಳಯ ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ.

೫೯೧. ಶಿವಂಗೆ ಪಂಚಮುಖವೆಂಬುದು ಮೂಲೋಕವೆಲ್ಲ ಬಲ್ಲುದು. ನರಂಗೆ ಪಂಚಮುಖವೆಂಬುದು ಆರು ಅರಿಯರು. ಮುಂಭಾಗವದು ಸದ್ಯೋ ಜಾತ, ಬಲಭಾಗವದು ತತ್ಪುರುಷ, ಎಡಭಾಗವದು ಅಘೋರ, ಹಿಭಾಂ

ಗವದು ವಾಮದೇವ. ಮಧ್ಯಭಾಗವದು ಕಪಿಲಸಿದ್ಧ ಮಲ್ಲಿಕಾರ್ಜುನನ ಈಶಾನ್ಯ ಮುಖ ನೋಡಾ ಕಲ್ಲಯ್ಯ.

೫೯೨. ಬ್ರಾಹ್ಮಣನ ಉತ್ಪತ್ತಿ ಸದ್ಯೋಜಾತಮುಖದಿಂದಾಯಿತ್ತು. ಕ್ಷತ್ರಿಯನ ಉತ್ಪತ್ತಿ ವಾಮದೇವ ಮುಖದಿಂದಾಯಿತ್ತು. ವೈಶ್ಯನ ಉತ್ಪತ್ತಿ ಅಘೋರ ಮುಖದಿಂದಾಯಿತ್ತು. ಲಿಂಗಾಂಗಿಯ ಉತ್ಪತ್ತಿ ಈಶಾನ್ಯ ಮುಖದಿಂದಾಯಿತ್ತು. ಪ್ರಮಥರ ಉತ್ಪತ್ತಿ ನಿರಂಜನ ಪ್ರಣವದ ಘೋಷವುಳ್ಳ ಕಪಿಲಸಿದ್ಧಮಲ್ಲಿಕಾರ್ಜುನನ ಗೋಪ್ಯ ಮುಖದಿಂದಾಯಿತ್ತು ನೋಡಾ ಕಲ್ಲಯ್ಯ.

೫೯೩. ಜನ್ಮಕ್ಕೊಮ್ಮೆ ಬಂದು ಶಿವಾಯ ನಮಃ ಎಂದರೆ ಸಾಲದೆ? ಜನ್ಮಕ್ಕೊಮ್ಮೆ ಬಂದು ಹರಾಯ ನಮಃ ಎಂದರೆ ಸಾಲದೆ? ಜನ್ಮಕ್ಕೊಮ್ಮೆ ಬಂದು ಬಸವನ ಪ್ರಸಾದವ ತೆಗೆದುಕೊಂಡರೆ ಸಾಲದೆ? ಜನ್ಮಕ್ಕೊಮ್ಮೆ ಬಂದು ಪ್ರಸಾದವ ತೆಗೆದುಕೊಂಡರೆ ಸಾಲದೆ? ಜನ್ಮಕ್ಕೊಮ್ಮೆ ಚನ್ನಬಸವಣ್ಣನ ಪಾದೋದಕ ತೆಗೆದುಕೊಂಡರೆ ಸಾಲದೆ? ಜನ್ಮಕ್ಕೊಮ್ಮೆ ಬಂದು ಪ್ರಭುವಿನ ಪಾದಕ್ಕೊಂದಿಸಿದರೆ ಸಾಲದೆ? ಜನ್ಮಕ್ಕೊಮ್ಮೆ ಬಂದು ಮಡಿವಾಳಣ್ಣನ ಅನುಭವದಲ್ಲಿದ್ದರೆ ಸಾಲದೆ? ಜನ್ಮಕ್ಕೊಮ್ಮೆ ಬಂದು ಕಪಿಲಸಿದ್ಧಮಲ್ಲಿಕಾರ್ಜುನನ ಪೂಜಿಸಿದರೆ ಸಾಲದೇನೋ ಕಲ್ಲಯ್ಯ?

೫೯೪. ಗುರು ಏರಿದ ಮಂಚವನೇರಿದೆನಾದರೆ ಕಾಲ್ಗಳು ಹರಿದು ಹೋಗಲಿ ದೇವಾ! ಗುರು ಹೊದ್ದ ವಸ್ತ್ರವ ಹೊದ್ದೆನಾದರೆ ಚರ್ಮವು ಸುಲಿದು ಹೋಗಲಿ ದೇವಾ! ಗುರು ಮುಟ್ಟಿದ ಪದಾರ್ಥವದು ಮುಟ್ಟಿದೆನಾದರೆ ಪುಳುಗೊಂಡವ ಮಾಡಲಿ ಕಪಿಲಸಿದ್ಧ ಮಲ್ಲಿಕಾರ್ಜುನದೇವಾ.

೫೯೫. ಹೊನ್ನು ಬಿಡದನ್ನಕ್ಕ ಗುರು ಪಾದೋದಕ ಸಲ್ಲದು. ಮಣ್ಣುಬಿಡದನ್ನಕ್ಕ ಲಿಂಗಪಾದೋದಕ ಸಲ್ಲದು. ಹೆಣ್ಣು ಬಿಡದನ್ನಕ್ಕ ಜಂಗಮ ಪಾದೋದಕ ಸಲ್ಲದು. ಈ ಸರ್ವವು ಅಳಿಯದನ್ನಕ್ಕ ಕಪಿಲಸಿದ್ಧಮಲ್ಲಿಕಾರ್ಜುನನಿಂಬುಗೊಂಡನು ಮಹಾ ಬಯಲಲ್ಲಿ ಕಲ್ಲಯ್ಯ?

೫೯೬. ಶರಣನ ಕೂಡ ವಾದ ಸಲ್ಲದು ಸಲ್ಲದು ನೋಡಾ. ಆತನ ನಡೆ ಬೇರೆ ಆತನ ನುಡಿ ಗಡಣ ಬೇರೆ. ಕ್ರಿಯೆ ವಿಡಿದು ವಾದಿಸಿದಲ್ಲಿ ಜ್ಞಾನವಿಡಿದಾಚರಿಸಿದಲ್ಲಿ ಕ್ರಿಯೆವಿಡಿದು ವಾದಿಸುವ ನಿರ್ದ್ವಂದ್ವವಾಗಿ ನಿಂದಲ್ಲಿ ತೋರಿದ ರೂಪು ಕಪಿಲಸಿದ್ಧಮಲ್ಲಿಕಾರ್ಜುನನೆಂದು ಡಂಗುರ ಹೊಯ್ದು ನಾಟ್ಯವನಾಡುವಾ.

# ಮಹೇಶ್ವರಸ್ಥಲ.

ಮಹೇಶ್ವರಸ್ಥಲಕ್ಕೆ ಸೇರಿದ ವಚನಗಳು.

೫೯೭. ಜಂಗಮವಾಗಿ ಫಲವೇನು? ನೋಡಿ ಮನದೆರೆದು ಮಾತನಾಡಿಸಿ ಜನ ಜನನ ವಿಪಿನ ದಾವಾನಲವಾಗದನ್ನಕ್ಕ ಜಂಗಮವಾಗಿ ಫಲವೇನು? ಭಕ್ತ ತನು ತಾಪತ್ರಯವ ನೋಡಿ ಮನದೆರೆದು ಮಾತಾಡಿಸಿ ಮರುಗದನ್ನಕ್ಕ ಜಂಗಮವಾಗಿ ಫಲವೇನು? ಭಕ್ತನ ವಾಂಛಿತಾರ್ಥಂಗಳನರಿದು ಪೂಜಾಮುಖದಿಂ ಭೂತಿಯ ಕೊಟ್ಟು ಆತನ ಪ್ರಪಂಚ ಸಂಭ್ರಮ ನೋಡದನ್ನಕ್ಕ ಜಂಗಮವಾಗಿ ಫಲವೇನಯ್ಯ? ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಕೂಡಿ ಸುಭಕ್ತರ ಹಸ್ತದಲ್ಲಿ ಕೊಟ್ಟು ಮೋಹ ಮಾಡದನ್ನಕ್ಕ?

೫೯೮. ಆ ದೇವ ಬಂದರೆ ಈ ದೇವಿಯು ಸಂಭ್ರಮ ನೋಡಾ. ಈ ದೇವಿ ಹೋದರೆ ಆ ದೇವನ ಮನೋವ್ಯಾಕುಲ ನೋಡಾ. ಈ ದೇವಿ ಇಲ್ಲದಿದ್ದರೆ ಆ ದೇವ ಸೈರಿಸನು. ಆ ದೇವನಿಲ್ಲದಿರೆ ಈ ದೇವಿ ಸೈರಿಸಳು. ಒಂದರಲ್ಲಲ್ಲದೆ ಎರಡರ್ಥದಲ್ಲಿ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೫೯೯. ಮುಟ್ಟಿಹರೆಂದು ಬಿಟ್ಟಯನುಲ್ಲಂಘಿಸುವರ ನೋಡಾ. ನೋಡಿ ನೋಡಿ ನಾಚಿತ್ತಯ್ಯ ಎನ್ನ ಮನ. ಮುಟ್ಟಿದ ಪರುಷ ಪಾಷಾಣವಾಗುವದೆ ಅಯ್ಯ? ಮಾಡಬಾರದೆಂದು ಸಂದೇಹವುಳ್ಳರೆ ಮಹೇಶಸ್ಥಲವೆಂತಯ್ಯ? ಮುಟ್ಟಬಾರದು ಮುಟ್ಟಬಾರದು. ಮಲತ್ರಯಂಗಳ ಮುಟ್ಟದ ಬಟ್ಟ ಬಯಲು ಘಟ್ಟಗೊಂಡಚ್ಚ ಮಹೇಶನ ತೋರಿಸಾ ಕಪಿಲಸಿದ್ಧಮಲ್ಲಿಕಾರ್ಜುನಾ.

೬೦೦. ಮುಟ್ಟದರೆಂದು ಶಿರೊ ಮಟ್ಟೆ ನೀರು ಮುಟ್ಟದ ಬಳಿಕ ಬಟ್ಟ ಬಯಲಾದೆ ಏನಯ್ಯನೆ ಮನವೆ? ಮುಟ್ಟಬಾರದೆಂದು ಸಂಶಯ ತೋರ್ಪಡೆ ಮುಟ್ಟದ ಎಲ್ಲ ದುರ್ಮಲ ಭಾಂಡ ಮನವೆ ಸಂಕಲ್ಪ ವಿಕಲ್ಪಗಳಳಿದು ಬೆಟ್ಟಜಪತಿ ಕಪಿಲಸಿದ್ಧಮಲ್ಲಿಕಾರ್ಜುನನಾಗಿ ಬದುಕು ಮನವೆ.

೬೦೧. ಶಿಷ್ಯನಿಲ್ಲದಿರೆ ಗುರು ಎಲ್ಲಿಹನಯ್ಯ? ಪೂಜಕನಿಲ್ಲದಿರೆ ಲಿಂಗವೆಲ್ಲಿಹದಯ್ಯ? ಭಕ್ತನಿಲ್ಲದಿರೆ ಜಂಗಮವೆಲ್ಲಿಹನಯ್ಯ? ಜಲವಿಲ್ಲದಿರೆ ಪಾದೋದಕವೆಲ್ಲಿಹದಯ್ಯ? ಧಾನ್ಯವಿಲ್ಲದಿರೆ ಪ್ರಸಾದವೆಲ್ಲಿಹದಯ್ಯ? ಧೇನುವಿಲ್ಲದಿರೆ ಭೂತಿ ಎಲ್ಲಿಹದಯ್ಯ? ತ್ರಿಪುರವಿಲ್ಲದಿರೆ ರುದ್ರಾಕ್ಷಿಗಳೆಲ್ಲಿಹವಯ್ಯ? ವರ್ಣಗಳಿಲ್ಲದಿರೆ ಮಂತ್ರಗಳೆಲ್ಲಿಹವಯ್ಯ? ನಾನಿಲ್ಲದಿರೆ ನೀನೆಲ್ಲಿಯುವನಯ್ಯ?

ಇವೆಲ್ಲ ಭಾವ ಭ್ರಮೆಯಲ್ಲದೆ ನಿರ್ಭಾವ ನಿಜಾನಂದ ತೂರ್ಯಾತೀತ ಪರವಸ್ತುವಿನ ಕೂಟದಲ್ಲಾನು ನೀನೆಂಬುಭಯ ಭಾವ ಇದ್ದರೆ ತೋರ ಬಾರಾ ಮಾರಹರ ಧೀರ ಗಂಭೀರ ಕಪಿಲಸಿದ್ಧಮಲ್ಲಿಕಾರ್ಜುನ ವೀರ.

೬೦೨. ಬಲ್ಲಿದ ಬಾಣನ ಬಾಗಿಲ ಕಾಯ್ವರವರು ಭೂತಿಗಳೇ ನಯ್ಯ? ಅಪ್ಪ ರೇವಣಸಿದ್ಧ ನೀರು ಹೊತ್ತನೆಂಬರು. ನಮ್ಮ ನೀರು ಹೊರುವವರವರು ಕೂಲಿಕಾರರೇನಯ್ಯ? ಸರ್ವೇಷಾಂ ಹೃದಿಸ್ಥ ಚಂದ್ರ ಮೌಲೀ ಎಂಬ ಶೃತಿ ವಾಕ್ಯವ ನಂಬು ನಂಬು ಕಪಿಲಸಿದ್ಧಮಲ್ಲಿಕಾರ್ಜು ನಯ್ಯನ ಮುಂದೆ ಎಲ್ಲೈ ಮನವೆ.

೬೦೩. ಮಾಡಬಾರದು ಮಾಡಬಾರದು ಪರಸ್ತ್ರೀ ಸಂಗವ. ನೋಡ ಬಾರದು ನೋಡಬಾರದು ದೃಷ್ಟಿಯನೆತ್ತಿ ಪರರ ದ್ರವ್ಯವ. ಕೂಡಬಾರದು ಕೂಡಬಾರದು ಕುಲವಿಲ್ಲದವನಲ್ಲಿ. ಆಡಬಾರದು ಆಡಬಾರದು ದುರ್ವಿ ಷಯಗಳಲ್ಲಿ. ಆಡಿ ಮಾಡಿ ನೋಡಿ ಕೂಡಿ ಆಡಿದರೆ ಈಡ ನೋಡಾ. ಯಮ ಮಾಡಿದ ಫುಳಗೊಂಡಕ್ಕೆ ಎಲೆ ಬಲ್ಲೇಶ ಕಪಿಲಸಿದ್ಧಮಲ್ಲಿಕಾರ್ಜು ನಾರ್ಯನ ಸಾನ್ನಿಧ್ಯದಲ್ಲಿ ಕೇದಾರ ಗುರು ಸಾಕ್ಷಿಯಾಗಿ.

೬೦೪. ನಿನ್ನ ನೀ ತಿಳಿದು ನೋಡಿದರೆ ಶಿವಮಯ ಜಗತ್ತು ನೋಡಾ! ಓಂಕಾರ ಪ್ರಣಮವೆ ಪ್ರಕೃತಿಯಾಗಿ ನಿಂದಿತ್ತು. ನಕಾರ ಪ್ರಣಮವೆ ಪೃಥ್ವಿಯಾಗಿ ನಿಂದಿತ್ತು. ಮಕಾರ ಪ್ರಣಮವೆ ಉದಕವಾಗಿ ನಿಂದಿತ್ತು. ಶಿಕಾರ ಪ್ರಣಮವೆ ಅಗ್ನಿಯಾಗಿ ನಿಂದಿತ್ತು. ವಕಾರ ಪ್ರಣಮವೆ ವಾಯುವಾಗಿ ನಿಂದಿತ್ತು. ಯಕಾರ ಪ್ರಣಮವೆ ಸರ್ವವಸ್ತು ಆಚರಿಸು ವದಕ್ಕೆ ಆಕಾಶವಾಗಿ ನಿಂದಿತ್ತು. ನೆನೆನೆನೆದು ಸುಖಿಯಾದೆ ನೋಡಾ ಕಪಿ ಲಸಿದ್ಧಮಲ್ಲಿಕಾರ್ಜುನ ಲಿಂಗವೆ.

೬೦೫. ಅನಿರ್ವಾಚ್ಯವೆ ವಾಚ್ಯ ಪ್ರಣಮವಾಗಿ ನಿಂದಿತ್ತು. ವಾಚ್ಯವೆ ರಚಿಸುವದಕ್ಕೆ ಮೂಲಪ್ರಣಮವಾಯಿತ್ತು. ಮೂಲವೆ ಭೂತ್ಯಂಗ ಪಂಚಾ ಕ್ಷರವಾಯಿತ್ತು. ಪಂಚಾಕ್ಷರವೆ ಪಂಚಮುಖವಾಯಿತ್ತು. ಪಂಚಮುಖಗಳೆ ಪಂಚಕರಣಗಳಾಯಿತ್ತು. ಪಂಚಕರಣಗಳೆ ಪಂಚವರ್ಣವಾಯಿತ್ತು. ಪಂಚವರ್ಣವೆ ಪ್ರಪಂಚ ರಚನೆ ನಿಮಿರಿತ್ತು. ನಿಮಿರಿ ನಿಮಿರಿದ ರಚನೆ ನೋಡಿ ಎನ್ನ ಚಿತ್ತ ಚಂಚಲವಾಯಿತ್ತಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ.

೬೦೬. ಬಗೆಬಗೆದು ನೋಡಿದ ದೇಹವೆಲ್ಲ ಮೂರು ಮಾತ್ರೆಯಿಂದಾ ದವಯ್ಯ. ಸ್ಥೂಲದೇಹ ಅಕಾರಪ್ರಣವು. ಸೂಕ್ಷ್ಮದೇಹವದು ಉಕಾರ

ಪ್ರಣವು, ಕಾರಣ ದೇಹ ಮಕಾರ ಪ್ರಣವು. ಮೂರು ಮಾತ್ರೆ ಏಕಾಥದಲ್ಲಿ ಓಂಕಾರವಾಯಿತ್ತು. ತತ್ಪ್ರಣವುಕ್ಕೆ ಸಾಕ್ಷಿಯಾಗಿ ನಿಂದೆ. ನಿಂದೆನೆಂಬುದಕ್ಕೆ ಅನಿರ್ವಾಚ್ಯ ಪ್ರಣವುವಾದೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೦೭. ಮಣ್ಣು ಕೊಟ್ಟು ಪುಣ್ಯವ ಪಡೆವೆನೆಂಬವನ ಭಾಷೆ ಹೊಲ್ಲ ಹೊಲ್ಲ. ಮಣ್ಣಿನ ಪುಣ್ಯ ಮುಕ್ಕಣ್ಣನ ಮುಖಕ್ಕೆ ಬಂದಿತ್ತು. ನೀರನೆರೆದು ಪುಣ್ಯವ ಪಡೆವೆನೆಂಬವರ ಭಾಷೆ ಹೊಲ್ಲಹೊಲ್ಲ. ನೀರಿನ ಪುಣ್ಯ ನಿರಂಜನ ಮುಖಕ್ಕೆ ನಿಮಿರಿತು. ಜ್ಯೋತಿಯ ಬೆಳಗಿ ಪಾಪವ ಕಳೆವೆನೆಂಬವರ ಭಾಷೆ ಹೊಲ್ಲಹೊಲ್ಲ. ಚಾಮರ ಪುಣ್ಯ ಚಾಮರಾಧೀಶನ ಮುಖಕ್ಕೆ ಅಮರಗೊಂಡಿತ್ತು ದೇವಾಲಯುವ ಕಟ್ಟಿ ದೇವತ್ವ ಪಡೆವೆವೆಂಬವರ ಭಾಷೆ ಹೊಲ್ಲಹೊಲ್ಲ. ದೇವಾಲಯುದ ಪುಣ್ಯ ಅಧೋಮುಖಂಗೆ ಸೇರಿತ್ತು ಕೊಟ್ಟ ಭಕ್ತರನಾರನು ಕಾಣೆ. ಕೈಕೊಂಡ ಜಂಗಮರೆಂದು ಕಾಣೆ ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೬೦೮. ಮಗನ ಕೊಟ್ಟು ಮನೆಯ ಸೇರಿದೆನೆಂಬ ಬಿಂಕ ಬೇಡ ಬೇಡ. ಸ್ತ್ರೀಯಳ ಕೊಟ್ಟುಕೊಟ್ಟು ತ್ರಿನೇತ್ರನಾದೆನೆಂಬ ಬಿಂಕ ಬೇಡ ಬೇಡ. ರುಂಡವ ಕೊಟ್ಟು ಬ್ರಹ್ಮಾಂಡಶೇಖರನಾದೆನೆಂಬ ಬಿಂಕ ಬೇಡ ಬೇಡ. ಶಿವೋ ದಾತಾ ಶಿವೋ ಭೋಕ್ತಾ ಎಂಬ ಶೃತಿವಾಕ್ಯವ ನಂಬಿ ನಂಬಿ ನಡೆಯಿರಾ ಕಪಿಲಸಿದ್ಧ ಮಲ್ಲಿಕಾರ್ಜುನನ ಮಂದಿರದಲ್ಲಿ.

೬೦೯. ಬಂದಯ್ಯಗಳಿಗನ್ನವ ಕೊಟ್ಟೆನೆಂಬುವನ ಮುಖವ ನೋಡಲಾಗದು. ಕೊಡಲಿಕ್ಕೀತನೇನು ಅನಾದಿ ಬಸವನೊ? ತೆಗೆದುಕೊಳ್ಳಲಿಕ್ಕಾತನೇನು ಅನಾದಿ ಪ್ರಭುವೊ? ಹೊಳೆದು ಬರುವದೆಲ್ಲ ಹೊಲೆಪದಾರ್ಥ. ನಿರುಪಾಧಿಯಿಂದ ಬಂದ ಪದಾರ್ಥ ಶಿವಪ್ರಸಾದ. ಆ ಪ್ರಸಾದವೆ ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಂಗೆ ಮಹಾರೋಗಣೆಯಾಯಿತ್ತು.

೬೧೦. ಪಶುಗಳೆಲ್ಲ ಬಾಲದಲ್ಲಿ ಪೃಷ್ಟವಿದ್ದರೆ ಮಾಡುವೆನೆಂಬವನ ಮುಖದಲ್ಲಿ ಬಾಲ ನೋಡಾ. ಪಶುಗಳಿಗೆಲ್ಲ ಮಸ್ತಕದಲ್ಲಿ ಶೃಂಗವಿದ್ದರೆ ಮಾಡಿದ ಪೂಜೆ ಕೈಕೊಂಡೆನೆಂಬವನ ಮನದ ಕೊನೆಯ ಮೇಲೆ ಶೃಂಗ ನೋಡಾ. ಮಾಡಿದೆನೆಂಬವುಳ್ಳನ್ನಕ್ಕ ಭಕ್ತನೆಂಬೆನೆಯ್ಯ? ಮಾಡಿಸಿಕೊಂಡೆನೆಂಬವರ ಉಳ್ಳನ್ನಕ್ಕ ನಿರುಪಾಧಿ ನಿರಂಜನ ಜಂಗಮವೆಂಬೆನೆ ಅಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ?

೬೧೧. ದೇಹ ಮುಟ್ಟಿದವರು ನಿರ್ದೇಹಿ ಮುಟ್ಟುವದದು ದುರ್ಲಭವಯ್ಯಾ. ನಿರ್ದೇಹ ಮುಟ್ಟಿದವರು ದೇಹ ಮುಟ್ಟರು ನೋಡಯ್ಯಾ. ಮುಟ್ಟಿದವ ಕ್ಷಣಿಕ ಸುಖ ಕಂಡ. ಮುಟ್ಟದವ ನಿಜಾನಂದ ಸುಖಿ ಕಂಡ ನೋಡಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ.

೬೧೨. ಮಾನಾಪಮಾನವೆಂಬುದು ಮನದ ಭ್ರಮೆ ನೋಡಯ್ಯಾ. ಮೇಲಕ್ಕೆ ಕರೆದರೆ ಮಾನವೆಂಬುದೀ ಲೋಕ. ಮೂಗೊಟ್ಟರೆ ಅಪಮಾನವೆಂಬುದೀ ಲೋಕ. ತಿರುಗುವ ಭೂಮಿ ಎಲ್ಲ ನಕಾರ ಪ್ರಣವಮಾಯಿತ್ತು. ಏಕೈಕವಾದ ಭೂಮಿಯಲ್ಲಿ ಪೀಠವ ಕೊಟ್ಟು ಮನ್ನಿಸುವ ಅಣ್ಣಗಳ ಬಾಯಲ್ಲಿ ಹುಡಿ ಮಣ್ಣ ಹೊಯ್ಯದೆ ಮಾಬನೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೬೧೩. ಮಾಡಬಾರದ ನೇಮವ ಮಾಡಿ ಕೆಡದಿರಾ ಮನವೆ. ಮಾಡುವ ನೇಮ ಮಾಡಬಾರದ ನೇಮಗಳವು ಭೂತ ಭವಿಷ್ಯ ವರ್ತಮಾನಗಳವು. ಮಾಡುವ ನೇಮಗಳು ನಿತ್ಯ ಲಿಂಗಾರ್ಚನೆ ಜಂಗಮದಾಸೋಹವೆಂಬುದು ಕಪಿಲಸಿದ್ಧಮಲ್ಲಿಕಾರ್ಜುನನ ವಚನ ಮನವೆ.

೬೧೪. ಭೂತ ಭವಿಷ್ಯ ವರ್ತಮಾನಗಳಿರುವಿಕೆಯದು ಭೂತಪ್ರಾಣಿಗಳಿಗೆ ರಂಜನೆಯಲ್ಲದೆ ಭೂತೇಶನ ಮನೋರಂಜನೆಯಾಗದು ನೋಡಾ ಮನವೆ! ನಿತ್ಯಲಿಂಗಾರ್ಚನೆ ನಿತ್ಯಾನುಷ್ಠಾನ ನಿತ್ಯ ಮಂತ್ರವಿಚಾರ ನಿತ್ಯ ಪಾದೋದಕ ಪ್ರಸಾದ ಸ್ವೀಕಾರವದು ಕಪಿಲಸಿದ್ಧ ಮಲ್ಲಿಕಾರ್ಜುನನ ಮನೋಕಿಂಜಲ್ಕವಿಕಸನ ನೋಡಾ ಮನೋಭ್ರಮರವೆ.

೬೧೫. ದೇವರಿಗೆ ಕೃಷಿಯ ನೇಮಕ ಮಾಡುವರಲ್ಲದೆ ದೇವರ ಪ್ರಥಮ ಮುಖ ಭೂಮಿ ಎಂದರಿಯರೀ ಲೋಕ. ದೇವರಿಗೆ ನದಿಯ ಜಲವೆರೆಯಬೇಕೆಂಬ ನೇಮಕವ ಮಾಡುವರಲ್ಲದೆ ದೇವರ ದ್ವಿತೀಯ ಮುಖ ಜಲವೆಂದರಿಯರೀ ಲೋಕ. ದೇವರಿಗೆ ದೀವಿಗೆಯ ನೇಮಕ ಮಾಡುವರಲ್ಲದೆ ದೇವರ ತೃತೀಯ ಮುಖ ಜ್ಯೋತಿ ಎಂಬುದರಿಯರೀ ಲೋಕ. ದೇವರಿಗೆ ತಾಲವೃಂತದ ನೇಮಕ ಮಾಡುವರಲ್ಲದೆ ದೇವರ ಚತುರ್ಮುಖವೆ ವಾಯುವೆಂದರಿಯರೀಲೋಕ ದೇವರಿಗೆ ಆಶ್ರಯ ಮಾಡಬೇಕೆಂಬ ನೇಮಕವ ಮಾಡುವರಲ್ಲದೆ ದೇವರ ಪಂಚಮುಖವೆ ಆಕಾಶವೆಂಬುದರಿಯರೀ ಲೋಕ. ದೇವರಿಗೆ ಪ್ರಾಣಪ್ರತಿಷ್ಠೆಯ ಮಂತ್ರ ಹೇಳುವರಲ್ಲದೆ ದೇವರ ಆರನೆ ಮುಖ ಆತ್ಮ ಪ್ರಾಣವೆಂಬುದರಿಯರೀ ಲೋಕ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೬೧೬. ತನ್ನಿಚ್ಛೆಗೆ ಬಂದ ಪದಾರ್ಥ ಲಿಂಗ ಮೂರ್ತಿ ಇಚ್ಛೆ ಎಂಬರು. ತನ್ನಿಚ್ಛೆಗೆ ಬರದ ಪದಾರ್ಥ ಲಿಂಗದಿಚ್ಛೆ ಇಲ್ಲವೆಂಬರು. ಹೋದ ವಾಕ್ಕು ಶಿವಾಜ್ಞೆ ಎಂಬರು. ಇದ್ದ ಮಾತು ತನ್ನಾಜ್ಞೆ ಎಂಬರು. ಇದೆಂತಯ್ಯ? ಇಚ್ಛೆಗೆ ಒಳಗಾಗುವನಲ್ಲಯ್ಯ ಲಿಂಗವು. ಶಿವೋದಾತಾ ಶಿವೋ ಭೋಕ್ತಾ ಎಂಬುದು ತಿಳಿದು ಲಿಂಗ ಮುಖದಿಂದ ಬಂದ ಪದಾರ್ಥ ಕೈಕೊಂಬರೆ ಅಚ್ಚ ಲಿಂಗೈಕ್ಯನೆಂಬೆ ನೋಡಾ ಕಪಿಲಸಿದ್ಧ ಮಲ್ಲಿಕಾ ರ್ಜುನಾ.

೬೧೭. ಕರ್ಮತ್ರಯಂಗಳ ಭೋಗಿಸಿದಲ್ಲದೆ ಬಿಡದೆಂಬುವ ಶೃತಿ ಗೇಳಿ ಮನದೆರೆದು ಮಾತಾಡನಯ್ಯ. ದುಃಖದಿಂ ಭೋಗಿಸಿದ ಕರ್ಮತ್ರಯ ದೊಳಗಯ್ಯ ಆದ ಭೋಗ ಸುಖವಾದರೆ ಮುಂದೆ ಭವಕ್ಕೆ ಈಡಯ್ಯ. ಸುಖ ದುಃಖಂಗಳು ಸಮಾನಂಗೊಂಡವಂಗೆ ವಿಧಿತ್ರಯಂಗಳಿನ್ನೆಲ್ಲಿಹವಯ್ಯ ಕಪಿ ಲಸಿದ್ಧ ಮಲ್ಲಿಕಾರ್ಜುನಾ?

೬೧೮. ಕ್ಷೀರ ಶರಧಿಯೊಳಿರುವ ಹಂಸಿಂಗೆ ಅನ್ಯ ಕ್ಷೀರದ ಹಂಗುಂ ಟೇನಯ್ಯ? ಸುಗಂಧಮಯ ಪುಷ್ಪದಲ್ಲಿರುವ ಭೃಂಗಂಗೆ ಅನ್ಯ ಪರಿಮ ಳದ ಹಂಗುಂಟೇನಯ್ಯ? ಸಮುದ್ರದೊಳಿರುವ ಮಂಡುಕಂಗೆ ಅಂಬುವಿನ ಹಂಗುಂಟೇನಯ್ಯ? ಮೊಲೆಯನುಣ್ಣುವ ಶಿಸುವಿಂಗೆ ಅನ್ಯ ಕ್ಷೀರ ನೀರಿನ ಹಂಗುಂಟೇನಯ್ಯ? ಸಕಲ ಪ್ರದಾಯಕ ಲಿಂಗದೊಳಿದ್ದ ಶರಣಂಗೆ ಅನ್ಯ ಪದದಾಸೆಯ ಹಂಗುಂಟೇ ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ?

೬೧೯. ಸಮತೆ ಎಂಬ ಕಂಥೆ ಧರಿಸಿಪ್ಪ ನೋಡಾ ಜಂಗಮನು. ಅಮಿತವೆಂಬ ಭಸ್ಮ ಧರಿಸಿಪ್ಪ ನೋಡಾ ಜಂಗಮನು. ಲಿಂಗವೆಂಬ ಖರ್ಪರ ಕರಸ್ಥಲದಲ್ಲಿ ಧರಿಸಿಪ್ಪ ನೋಡಾ ಜಂಗಮನು. ಸರ್ವ ಜೀವ ದಯಾಪಾರಿ ಎಂಬ ವಿಮಲ ರುದ್ರಾಕ್ಷಿ ಧರಿಸಿಪ್ಪ ನೋಡಾ ಜಂಗಮನು. ನಿರ್ಮೋಹವೆಂಬ ಕೌಪೀನ ಧರಿಸಿಪ್ಪ ನೋಡಾ ಜಂಗಮನು. ನಿಸ್ಸಂಗ ವೆಂಬ ಮೇಖಲಾ ಪರಿಪೂರ್ಣ ನೋಡಾ ಜಂಗಮನು. ಸುಮ್ಮಾನವೆ ಕಿರೀಟವಾಗಿ ಶುದ್ಧ ಜ್ಞಪ್ತಿಯೆ ಮಕುಟವಾಗಿ ನಿರಹಂಕರವೆ ಬಹಿರ್ವಾಸಿ ಯಾಗಿ ದುರ್ವ್ಯಸನ ದುರ್ಭ್ರಮೆ ಹೃಷೀಕೋತ್ಪಾತ ವಿಜಯ ಶಿವ ಯೋಗ ಮಾಗಿ ಚರಿಸುವ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಮಹಾ ಜಂಗಮನು.

೬೨೦. ಪರ ರಾಣಿಯರ ನೋಡುವಲ್ಲಿ ಅಂಧಕನಾಗಿಪ್ಪ ನೋಡಾ ಜಂಗಮನು. ಪರಧನವ ಕಂಡಲ್ಲಿ ಹುಲಿಯು ಕಂಡ ಹುಲ್ಲೆಯಂತೆ ಭೀತಿಬಡುವ ನೋಡಾ ಜಂಗಮನು. ದುರ್ನರರ ಸಂಭಾಷಣೆಯ ಕೇಳುವಲ್ಲಿ ಅತಿ ಮೂರ್ಖನಾಗಿಪ್ಪ ನೋಡಾ ಜಂಗಮನು. ದುಷ್ಕರ್ಮ ಪಥದೊಳರಸುವಲ್ಲಿ ಕಡು ಜಡ ಪೆಳವ ನೋಡಾ ಜಂಗಮನು. ಅಕ್ಷಾಂಗ ವಿಷಯಗಳೊಳು ನಿಃಕರುಣಿಯಾಗಿಪ್ಪ ನೋಡಾ ಜಂಗಮನು. ಶಿವನಿಂದಕರ ಸ್ವರಗೇಳುವಲ್ಲಿ ಬಧಿರನಾಗಿಪ್ಪ ನೋಡಾ ಜಂಗಮನು. ದುರಾತ್ಮರಿಗೆ ಜ್ಞಾನ ದ್ರವ್ಯ ಕೊಡುವಲ್ಲಿ ಲೋಭಿಯಾಗಿಪ್ಪ ನೋಡಾ ಜಂಗಮನೆಂಬ ಕಪಿಲಸಿದ್ಧ ಮಲ್ಲಿಕಾರ್ಜುನನು.

೬೨೧. ಸಕಲ ಪರಿಪೂರ್ಣನಾದುದರಿಂ ಬಾಲಕನಂತೆ ತೋರುವನಯ್ಯ! ವಿಧಿ ನಿಷೇಧಗಳಿಲ್ಲದರಿಂದೆ ಉನ್ಮತ್ತನಂತೆ ತೋರುವನಯ್ಯ! ಜನರಂಜನ ಲಾಂಛನವಿಲ್ಲದಿರೆ ಪೈಶಾಚಿಯಂತೆ ತೋರುವನಯ್ಯ. ನಿಃಶಬ್ದ ಬ್ರಹ್ಮವೇದ್ಯನಾದುದರಿಂ ಮೂಕನಂತೆ ತೋರುವನಯ್ಯ. ಸಕಲಾಗಮದ ಮೂರ್ತಿ ತಾನಾದುದರಿಂದ ವಿದ್ವಾಂಸರೊಳ್ ಚರಿಸುವ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಮಹಾ ಮೂರ್ತಿ ಜಂಗಮನು.

೬೨೨. ತಲೆಗೆ ಮೂರು ಚಿಪ್ಪು. ಅಂಗಕ್ಕೆ ಆರು ಚಿಪ್ಪು. ಮಿಕ್ಕಾದ ಸರ್ವಾಂಗಕ್ಕೆಲ್ಲ ಒಂದೆ ಚಿಪ್ಪಿನ ಕುಪ್ಪಸ. ಇದರಂಗದ ಆಚರಣೆಯ ಬಲ್ಲವ ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವ ಬಲ್ಲವ.

೬೨೩. ಹೊರ ಕಣ್ಣ ಮುಚ್ಚಿ ಒಳ ಕಣ್ಣ ತೆರೆದು ಮನದೊಡೆಯ ಬಂದಾನೆಂದು ಕಿವಿಯೊಡ್ಡಿ ಕೇಳುತ್ತಿರ್ದೆನಯ್ಯ. ಅದತ್ತಣಿಂದ ಬಂದು ನಿಜ ರೂಪು ಸುಳಿಯಿತ್ತೆಂದರಿಯೆ. ಪರಮನ ಪ್ರತಿಬಿಂಬ ಹೊಳೆದೊಡೆ ಕಣ್ಣ ತುಂಬ ಕಂಡು ಕರ ತುಂಬ ಹಿಡಿದು ಮನಮುಟ್ಟಿ ನೆರೆದನು ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೯೨೪. ಒಂದೇ ವಸ್ತು ತನ್ನ ವಿಚಿತ್ರ ಮಹಿಮೆಯ ಕೇಳುವಲ್ಲಿ ಕರ್ಣವಾಗಿ, ನೋಡುವಲ್ಲಿ ನೇತ್ರನಾಗಿ, ರುಚಿಸುವಲ್ಲಿ ರಸನೆಯಾಗಿ, ಪರಿಮಳಿಸುವಲ್ಲಿ ಘ್ರಾಣವಾಗಿ, ಸ್ಪರ್ಶಿಸುವಲ್ಲಿ ತ್ವಕ್ಕುವಾಗಿ, ನಿಂದೆ ನೀ ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೨೫. ಪೂಜಾರ್ಥವಾಗಿ ಎನ್ನ ಹಸ್ತಕ್ಕೆ ಇಷ್ಟಲಿಂಗವಾಗಿ ಬಂದೆಯಯ್ಯ. ಪೂಜಿಸುವಲ್ಲಿ ಭಕ್ತನಾಗಿ ನಿಂದೆಯಯ್ಯ. ಜನ್ಮವಳಿವಲ್ಲಿ ಜಂಗ

ಮವಾಗಿ ಬಂದು ಪಾದೋದಕ ಪ್ರಸಾದವ ಕೊಟ್ಟ ಪೂಜಾ ಫಲ ತೀರ್ಗಡೆ ಮಾಡಬೇಕೆಂದು ಎನ್ನ ಮನ ಭಾಂಡಾರವ ನೋಡ ಬಂದೆಯಯ್ಯಾ. ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವೆ.

೬೨೬. ಕೆರೆಯುಲ್ಲಿಯು ತೀರ್ಥ ಮನದಲ್ಲಿಯು ಸರ್ವ ಜೀವ ದಯಾ ಪರತ್ವ ವೈದೆಗೆದಡೆ ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ. ನಮ್ಮೀ ವರ್ಗರ ಮುಂದೆ ಕೇದಾರ ಗುರುಗಳೆ ಸಾಕ್ಷಿ ನೋಡಾ ಕಪಿಲಸಿದ್ಧಮಲ್ಲಿ ಕಾರ್ಜುನಾ.

೬೨೭. ನಾ ಮಾಡಿದ ಪೂಜಾಫಲ ಅಂತಿಂತಲ್ಲ. ಬಾಣ ಪೂಜಿ ಸಿದ ಫಲ ಬಾಗಿಲ ಕಾಯ್ದಲ್ಲಿ ಹೋಯಿತ್ತು. ಮಯೂರ ಪೂಜಿಸಿದ ಫಲ ವಿದ್ಯಾದಾನದಲ್ಲಿ ಹೋಯಿತ್ತು. ಹನುಮಂತ ಪೂಜಿಸಿದ ಫಲ ವಜ್ರದೇಹದಲ್ಲಿ ಹೋಯಿತ್ತು. ನಾ ಪೂಜಿಸಿದ ಫಲ ಕೊಟ್ಟು ಕೊಟ್ಟು ತೀರದೆ ನಿಂದಿತ್ತು ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ.

೬೨೮. ಶರಣನ ಪೂಜೆಯದು ಮರಣದ ಕೇಡು ನೋಡಿರಯ್ಯಾ! ಶರಣನ ಪೂಜೆಯದು ಶಿವನ ಕರುಣಾ ರಸ ನೋಡಿರಯ್ಯಾ! ಶರಣನ ಪೂಜೆಯದು ಕಪಿಲ ಸಿದ್ಧಮಲ್ಲಿಕಾರ್ಜುನನ ಪೂಜೆ ನೋಡಿರಯ್ಯಾ.

೬೨೯. ಅಲ್ಲಮನ ಲಕ್ಷ ವೈರಾಗ್ಯದಲ್ಲಿ. ಚೆನ್ನಬಸವನ ಲಕ್ಷ ಕ್ರಿಯಾ ಜ್ಞಾನದಲ್ಲಿ. ಬಸವನ ಲಕ್ಷ ಭಕ್ತಿಯಲ್ಲಿ. ಮಡಿವಾಳನ ಲಕ್ಷ ಅಹಂ ಕಾರ ನಾಶದಲ್ಲಿ. ಸಕಳೇಶಯ್ಯನ ಲಕ್ಷ ಸಮತೆಯಲ್ಲಿ. ಶಿವಯೋಗಿ ಸಿದ್ಧ ರಾಮನೆಂಬ ಬಾಲಕನ ಲಕ್ಷ ಲಿಂಗಪೂಜೆಯಲ್ಲಿ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವೆ.

೬೩೦. ಅವರವರ ಲಕ್ಷ ಭಿನ್ನವಾದಲ್ಲಿ ಫಲವೇನಯ್ಯ? "ತ್ರಿಷು ಲೋಕೇಷು ದೇವೇಶಿ। ವೈರಾಗ್ಯಂ ಪೂಜ್ಯಮೇವ ಚ। ತದ್ವೈರಾಗ್ಯಂ ಲಿಂಗ ಪೂಜಾ ಪ್ರೋಕ್ತಃ ಪರಮಪಾವನೀ॥ ಜ್ಞಾನಲಿಂಗಮಿತಿ ಪ್ರೋಕ್ತಾ ಕ್ರಿಯ ಯಾ ವಿಧಿರುಚ್ಯತೆ। ದ್ವಯೋಃಸಂಯೋಗ ಮಾಪ್ನೋತಿ ಲಿಂಗ ಪೂಜಾ ಪ್ರಕೀರ್ತಿತಂ। ಅನೇಕ ಜನ್ಮನಃ ಪುಣ್ಯಾತ್ಸರ್ವಸ್ಮಿನ್ ಭಕ್ತಿರುಚ್ಯತೆ॥ ಸಾಭ ಕ್ತಿಃಪ್ರಥಮಾಪೂಜಾ ಲಿಂಗಾರ್ಚನಮಥೋಚ್ಯತೆ ॥ ಯೋ ರುಗ್ಣತ್ಯರಿಷಡ್ವ ರ್ಗಂ ತದೇವಂ ಲಿಂಗಸಂಭ್ರಮಂ। ಸಮ ಭಾವಸ್ತು ಪೂಜಯಾ ವ

ದಂತಿ ಮಮ ಕಿಂಕರಾಃ ॥ ಲಿಂಗಾರ್ಚನಂ ತು ದೇವೇಶೀತ್ವಂ ಕರೋಷಿ ದಿನೇದಿನೆ" ಎಂಬುದದು ಸುಪ್ರಭೇದ ಋಸಿ ಏನಯ್ಯಾ ಕಪಿಲಸಿದ್ಧಮಲ್ಲಿ ಕಾರ್ಜುನಾ.

೬೩೧. ಲಿಂಗ ಲೀಲೆ ಹೇಳುವಡೆನಗಸಾಧ್ಯ ನೋಡಾ ಅಯ್ಯಾ! ಭಕ್ತನ ಹಸ್ತದಲ್ಲಿ ಜಂಗಮವಾಗಿ ನೆಲಸಿದನಯ್ಯಾ ಲಿಂಗ ಮೂರ್ತಿಯು. ಜಂಗಮನ ಹಸ್ತದಲ್ಲಿ ಭಕ್ತನಾಗಿ ನೆಲಸಿದನಯ್ಯಾ ಲಿಂಗಮೂರ್ತಿಯು. ಜಂಗಮ ಪೂಜಿಸಿದ ಫಲ ಸಂಪದಾದಿ ಮೋಕ್ಷ ಕೊಟ್ಟಿತ್ತು ಭಕ್ತಂಗೆ. ಭಕ್ತ ಪೂಜಿಸಿದ ಫಲ, ಜ್ಞಾನ ಸಂಪದಾದಿ ವೈರಾಗ್ಯ ಕೊಟ್ಟಿತ್ತು ಜಂಗ ಮಂಗೆ. ಇಂತಪ್ಪ ಲಿಂಗ ಮೂರ್ತಿಯ ನೋಡಿ ನೋಡಿ ರೋಮಂಗಳೆಲ್ಲ ನಯನಂಗಳಾದವು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೩೨. ಚರಿಸಿ ಜಂಗಮವೆನಿಸಿತ್ತಯ್ಯಾ ಲಿಂಗವು. ನೆಲಿಸಿ ಲಿಂಗವೆ ನಿಸಿತ್ತಯ್ಯಾ ಲಿಂಗವು. ಇದರಿರವ ಅರುಹದಲ್ಲಿ ಗುರುವೆನಿಸಿತ್ತಯ್ಯಾ ಲಿಂಗವು. ಗುರುಲಿಂಗ ಜಂಗಮಕ್ಕೆ ತಿಲಾಂಶ ಭೇದವಿಲ್ಲ ನೋಡಾ ಎಲೇ ದೇವಾ. ಭೇದಿಸಿದವಗೆ ಭವ ಬಾಧೆ ತಪ್ಪುವದೆ ದೇವರ ದೇವ ಕಪಿಲಸಿದ್ಧ ಮಲ್ಲಿ ಕಾರ್ಜುನ ದೇವಾ?

೬೩೩. ಗೃಹಸ್ಥ ರತ್ನ ಪ್ರಾಯಸ್ತು ಬಾಲಕೋ ಹಿ ವರಾನನೆ ಎಂಬಾ ಗಮ ವಾಕ್ಯವಂತಿರಲಿ. ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ಶರಣರ ಮಹಾ ಮಂದಿರಕ್ಕೆ ಲಿಂಗ ಪೂಜೆಯೆ ರತ್ನ ಪ್ರಾಯ ನೋಡಾ ಹಾವಿನ ಹಾಳ ಕಲ್ಲಯ್ಯಾ.

೬೩೪. "ಏಕ ಜನ್ಮನಿ ಏವ ವಿದ್ಯಾ ಪ್ರಾಪ್ತಿರ್ಭವಿಷ್ಯತಿ" ಎಂಬ ವಾಕ್ಯವದು ಋಸಿ ಏನಯ್ಯಾ? ಶಾಸ್ತ್ರವನೋದಿ ಓದಿ ಪಿಶಾಚಿಯಾಗನೆ? ಅಂದು ಕಾಶಿಯಲ್ಲಿ ಹರಿದತ್ತನು ಓದಿಸಿದಲ್ಲಿ ಫಲವೇನಯ್ಯಾ? ವಾದ ವಾದಿ ಸಬೇಡ. ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವ ಪೂಜಿಸದೆ ವ್ಯರ್ಥ ದಿನಗಳೆಯಬೇಡ.

೬೩೫. ಆಗುವ ಭೋಗಂಗಳಿಗೆ ಮೈಗೊಟ್ಟುದು ಎಂದರೆ ಮೈಗೊ ಡದು ನೋಡಾ ಲಿಂಗಾರ್ಚನ ಫಲ. ಆಗಬಾರದ ಕಾರ್ಯ ಮಾಡೆ ನೆಂದರೆ ಮೈಗೊಡುವುದು ನೋಡಿ ಲಿಂಗಾರ್ಚನೆಯ ಫಲ ದೃಢವಿಡಬೇಕು. ಲಿಂಗಾರ್ಚನೆಯಲ್ಲಿ ದೃಢವಿಲ್ಲದವನ ಹೆಡಗುಡಿಯ ಕಟ್ಟಿ ಎಡಹಿ ಬಿಡುವ ಭವದಡಿಗೆ ಎಮ್ಮ ಮೃಡ ಮೂರ್ತಿ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವು.

೩೩೬. ಪೂಜಾಫಲದಿಂದ ಅರ್ಜುನನ ಬಾಣಗಳೆಲ್ಲ ಅರಳ್ಗಳಾದವಯ್ಯ ನಿನ್ನಂಗಕ್ಕೆ. ಪೂಜಾಫಲದಿಂ ಕನ್ನಯ್ಯನ ಮಾಂಸವೆಲ್ಲ ಪರಮ ಷಡ್ರುಚಿಯಾಯಿತ್ತಯ್ಯ ನಿನ್ನ ರಸೆಗೆ. ಪೂಜಾಫಲದಿಂದ ವಚೋಳಿಯ ರತಿಯು ಪರಮಲೀಲಾನಂದವಾಯಿತ್ತಯ್ಯ ಪೃಷ್ಠಿಗೆ. ಪೂಜಾಫಲದಿಂದಮ್ಮನವರ ಅಪಶಬ್ದಗಳೆಲ್ಲ ಸಾಮ ಗಾನ ತಿರಸ್ಕರಿಸಿತ್ತಯ್ಯ ನಿನ್ನ ಶ್ರೋತ್ರಕ್ಕೆ. ಪೂಜಾಫಲದಿಂದಂದು ಚಂದ್ರ ಚೂಡಿಯ ಕೈಯ್ಯಲ್ಲಿಯ ಮದುಗುಣಿಕೆಯ ಪುಷ್ಪ ಗಂಧಮಯವಾಗಿ ಮಸ್ತಕಕ್ಕಲಂಕಾರವಾಯಿತ್ತಯ್ಯ. ಪೂಜಾಫಲ ಅಂತಿಂತಲ್ಲ. ಪೂಜಾಫಲ ಸ್ವಾಧೀನವಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೬೩೭. ಅಗ್ನಿಯ ಸೋಂಕಿದಲ್ಲಿ ಕನಕದ ಕಲಂಕು ಹೋಯಿತ್ತು. ಜಲವ ಸೋಂಕಿದಲ್ಲಿ ದೇಹದ ಕಲಂಕು ಹೋಯಿತ್ತು. ಭಾಗೀರಥಿಯು ಸೋಂಕಿದಲ್ಲಿ ದೋಷ ದಗ್ಧವಾಗಿ ಹೋಯಿತ್ತು. ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಲಿಂಗವ ಸೋಂಕಿದಲ್ಲಿ ಪ್ರಾರಬ್ಧತ್ರಯ ನಿವಾರಣವಾಗಿ ಹೋಯಿತ್ತು ಕಂಡ್ಯಾ ಬಾಚರಸಯ್ಯ.

೬೩೮. ಶ್ವಾನನ ಗುಣ ನೋಡದು ನೋಡಾ ಮದಗಜವು. ಕಾನನ ಗುಣ ನೋಡದು ಕಂಡಾ ಮಹದಗ್ನಿಯು. ಕಾವಳಗುಣ ನೋಡದು ನೋಡಾ ಮಹತ್ಪ್ರಕಾಶವು. ಜನನದ ಗುಣವ ನೋಡದು ನೋಡಾ ಶಿವಾನುಭಾವಜ್ಞಾನವು. ಎನ್ನ ಗುಣ ನೋಡದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನನ ಪೂಜಿಸಿದ ಫಲವು.

೬೩೯. ಅಂಗೈಯ್ಯಲ್ಲಿ ಪೂಜಿಸಿದ ಫಲ ಲಿಂಗಯ್ಯ ಕೊಡನೆಂದು ಮರುಗದಿರಾ ಮನವೆ. ಅಂಗೈಯ್ಯಲ್ಲಿ ಫಲ ಅಂಗ ಲಿಂಗ ನೋಡಿದಂತೆ ನೋಡಾ ಮನವೆ. ಅಂಗೈ ಫಲ ಅಂಗೈಗಾಗದಿರೆ ಪೂಜಿಸುವರೆ ಪ್ರಮಥರು ನೋಡಾ ಮನವೆ? ಕಪಿಲಸಿದ್ಧಮಲ್ಲಿಕಾರ್ಜುನನ ಪೂಜಿಸಿ ಪೂಜಿಸಿ ಬದುಕು ಮನವೆ.

೩೪೦. ಆರಾಧನೆಯ ಮಾಡಿ ಫಲವೇನಯ್ಯ ಸಂತೃಪ್ತಿನಡೆಯದನ್ನಕ್ಕ? ಲಗ್ನವಾಗಿ ಫಲವೇನಯ್ಯ ಮೋಹದ ವಿಘ್ನಗಳಾಗದನ್ನಕ್ಕ? ಭಕ್ತನಾಗಿ ಫಲವೇನಯ್ಯ ಲಿಂಗಪೂಜೆ ಮಾಡದನ್ನಕ್ಕ? ಲಿಂಗವ ಪೂಜಿಸಿ ಫಲವೇನಯ್ಯ ಮೋಕ್ಷ ಹಡೆಯದನ್ನಕ್ಕ? ಮೋಕ್ಷ ಮಾದ ಫಲವೇನಯ್ಯ

ಕಪಿಲಸಿದ್ಧಮಲ್ಲಿಕಾರ್ಜುನನೆಂಬ ನಾಮಧೇಯವಳಿಯದನ್ನಕ್ಕ ಕೇದಾರ ಗುರುದೇವಾ?

೬೪೧. ಇಲ್ಲಿರುವ ಕೊಂಟೆಗಳೆಲ್ಲ ಅಲ್ಲಿಹ ರುದ್ರಗಣಂಗಳ ಮಂದಿರವಯ್ಯಾ! ಇಲ್ಲಿರುವ ಗುಡ್ಡರೆಲ್ಲ ಅಲ್ಲಿಹ ಮಹಗಣಂಗಳಯ್ಯಾ! ಇಲ್ಲಿರುವ ಭಾಮಿನಿಯರೆಲ್ಲ ಅಲ್ಲಿರುವ ರುದ್ರಕನ್ನಿಕೆಯರಯ್ಯಾ! ಇಲ್ಲಿರುವ ತಟಾಕಗಳು ಅಲ್ಲಿಯ ದೇವ ಗಂಗೆಯಯ್ಯಾ! ಇಲ್ಲಿರುವ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿಹ ಪಂಚಮುಖ ಶತಮುಖ ಸಹಸ್ರಮುಖ ಅನಂತಮುಖ ಪಾರ್ವತೀಪ್ರಿಯ ಮಹಾದೇವ ನೋಡಾ ಕೇದಾರ ಗುರುದೇವಾ.

೬೪೨. ಇಂದ್ರ ನೋಡುವಡೆ ಭಗದೇಹಿ. ಚಂದ್ರ ನೋಡುವಡೆ ಗುರುಪತ್ನಿಗಮನಿ. ಉಪೇಂದ್ರ ನೋಡುವಡೆ ಬಾರದ ಭವದಲ್ಲಿ ಬಂದ ಅವತಾರಿ. ಬ್ರಹ್ಮನ ನೋಡುವಡೆ ಸ್ವಪುತ್ರೀಪತಿ. ಮುನಿಗಣ ನೋಡುವಡೆ ಕುಲಹೀನರು. ಗಣಪತಿ ನೋಡುವಡೆ ಗಜಾನನ. ವೀರಭದ್ರ ನೋಡುವಡೆ ಮಹತ್ಪ್ರಳಯಾಗ್ನಿ ಸಮಕ್ರೋಧಿ. ಷಣ್ಮುಖ ನೋಡುವಡೆ ತಾರಕಧ್ವಂಸಿ. ಇವರೆಲ್ಲರು ಎಮ್ಮ ಪೂಜೆಗೆ ಬಾರರು. ನೀ ನೋಡುವಡೆ ಸ್ಮಶಾನವಾಸಿ. ರುಂಡಮಾಲಾದ್ಯಲಂಕಾರ. ನಿನ್ನ ವಾಹನ ಚಿದಂಗ ಆದಿ ವೃಷಭ. ನಿರೂಪಿಸಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೪೩. ಆಕಾಶದಲ್ಲಿಯ ತಾರೆಗಳು ಕಾಣಲಾರದೆಂಬ ಯೋಚನೆಯುಳ್ಳೊಡೆ ಸೂರ್ಯೋದಯಕ್ಕಯ್ಯಾ! ಆಕಾಶದಲ್ಲಿಯ ತಾರೆಗಳು ಕಾಣಬೇಕೆಂಬ ಯೋಚನೆಯುಳ್ಳೊಡೆ ಸೂರ್ಯಾಸ್ತಮಾನಕ್ಕಯ್ಯಾ. ಕಾಣಬಾರದು ಕಾಣಬಾರದು. ಜ್ಞಾನದಲ್ಲಿ ಆ ಆನಂದ ಆನಂದವು ಕಾಣಬಹುದು ಕಾಣಬಹುದು. ಅಜ್ಞಾನದಲ್ಲಿ ಸುಖದುಃಖೋಭಯ ದ್ವಂದ್ವ ಭೋ ಭೋ ಕಪಿಲಸಿದ್ಧಮಲ್ಲಿಕಾರ್ಜುನ ಭೋ.

೬೪೪. ಶಿವಾಂಶಿಕ ಭಕ್ತನ ಸೊಮ್ಮು ಶಿವಜಂಗಮಂಗೆ ಸಲ್ಲುವದಲ್ಲದೆ ಶಿವೆ ಬಸವೆಯರೆಂಬ ವಾರಾಂಗನೆಗೆ ಸಲ್ಲುವದೆ ಅಯ್ಯಾ? ಡಾಂಭಿಕ ಭಕ್ತನ ಸೊಮ್ಮು ಡಾಂಭಿಕಯ್ಯಗಳಿಗೆ ಸಲ್ಲುವದಲ್ಲದೆ ಡಂಭ ವಿರಹಿತಂಗೆ ಸಲ್ಲುವದೆ ಅಯ್ಯಾ? ಎಮ್ಮ ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಷಟ್ಸ್ಥಲ ಬ್ರಹ್ಮಿ ಚನ್ನಬಸವನ ಜಿಹ್ವೆ ಶೇಷ ಸೊಮ್ಮು ಎನಗೆ ಸಲ್ಲುವದಲ್ಲದೆ ಜಗದ ಭಂಡಯ್ಯಗಳಿಗೆ ಸಲ್ಲುವದೇನಯ್ಯಾ?

೬೪೫. ಭಕ್ತನಾದ ಬಳಿಕ ವಿರಕ್ತಿಯ ನೋಡಿ ಆಚರಿಸುವದಲ್ಲದೆ ಭಕ್ತಿ ಲಕ್ಷಕ್ಕೆ ವೈಗೊಡುವುದೆಂತಯ್ಯ? ಭಕ್ತನಾದರೆ ವಸ್ತ್ರಾನ್ನಕ್ಕೆ ಭಕ್ತನಲ್ಲದೆ ಸಾಮರಸ್ಯಕ್ಕೆ ಭಕ್ತನೆ ಅಯ್ಯ? ಭಕ್ತಿ ಸಂಪನ್ನ ಭಕ್ತೋಪಿ ದೃಷ್ಟ್ವಾವ ಗುಣಗಣಾನಿ ವೈ ಸ್ವೀಕಾರಯೋಜ್ಜಂಗಮಸ್ಯ ಪಾದೋದಕ ಮಹರ್ನಿಶಂ ಎಂಬ ವಾಕ್ಯವದು ಅಬದ್ಧವೇನಯ್ಯ ಕಪಿಲಸಿದ್ಧಮಲ್ಲಿಕಾರ್ಜುನ.

೬೪೬. ಭಕ್ತೇಭ್ಯಸ್ತು ಚರ ಶ್ರೇಷ್ಠೋ ಚರೇಭ್ಯಸ್ತು ಪರಾತ್ಪರಂ। ವಸ್ತುನೋ ಭಾತಿ ದೇವೇಶಿ ತಂ ತ್ಯಕ್ತ್ವಾ ಅಲ್ಲಮ ಪ್ರಭುವೆಂಬ ಮಕುಟಾಗಮ ವಾಕ್ಯ ವಿಚಾರಿಸಿದಲ್ಲಿಂದಚ್ಯೊತ್ತಿಹುದಯ್ಯ ಎನ್ನ ಮನಕ್ಕೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೪೭. ಭಕ್ತನಾಗಿ ಮಲತ್ರಯಗಳೊಳಾಳುವದು ಲೇಸು ಕಂಡಾ ಮನವೆ! ಜಂಗಮನಾಗಿ ಮಲತ್ರಯಗಳಳಿವುದು ದುರ್ಲಭ ಕಂಡಾ ಮನವೆ! ಭಕ್ತ ಮಹೇಶ ಪ್ರಸಾದಿ ಸ್ಥಲತ್ರಯಂಗಳ ಮೀರಿ ಪ್ರಾಣಲಿಂಗಿ ಸ್ಥಲದಲ್ಲಿ ನಿಂದೆಯಲ್ಲಾ ಮನವೆ. ಇನ್ನು ವೈದೆಗೆದು ತಿರಿದುಂಡರೆ ಬೆನ್ನ ಬಾರನೆತ್ತುವ ನೋಡಾ ಮನವೆ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಭೂಪಾಲನು.

೬೪೮. ಒಂದು ಜೋಳಿಗೆಯೊಳಗೆರಡು ಗೋವುಗಳಾಡುತ್ತೈದಾವೆ ನೋಡಾ. ಒಂದು ಗೋವು ಅದು ಬಹು ಮೋಹನದು. ಒಂದು ಗೋವು ಅದು ಬಹು ಕ್ರೂರ ಸ್ವಭಾವದು. ಒಂದು ಗೋವಿನ ಸಾಧನೆಯದು ಕೀಳ ಭವಕ್ಕೆ ಲೇಸು. ಒಂದು ಗೋವಿನ ಸಾಧನೆಯದು ಕಪಿಲಸಿದ್ಧ ಮಲ್ಲಿಕಾರ್ಜುನನ ಮಂದಿರದ ಸಾಧನೆ ಲೇಸು ನೋಡಾ ಕೇದಾರ ಗುರುದೇವಾ.

೬೪೯. ಶೃತಿಯಲ್ಲಿ ಕೂಗಿಡುವದದು ಪರಾತ್ಪರ ಪಂಚಾಕ್ಷರ ಎಂಬುದಾಲಿಸಯ್ಯ. ಎನ್ನ ಮತಿಯಲ್ಲಿ ತೋರುವದದು ಪರಾತ್ಪರಂ ಪರಮಾಷ್ಟಾವರಣಂ ಓಂ ಚನ್ನಬಸವಾಯ ನಮಃ ಎಂಬುದಾಲಿಸಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೫೦. ತಿಳಿಯದೆ ಜಪಿಸಿದ ಮಂತ್ರ ನಿಷ್ಫಲವಾದುದು ನೋಡಾ ಗುರುವೆ. ಪ್ರಣವ ಪಲ್ಲವಗಳರಿದು ಜಪಿಸುವದದು ಫಲ ನೋಡಾ ಗುರುವೆ. ಇದರಂದವ ತೋರಿದ ಎನ್ನ ಗುರು ಚನ್ನಬಸವ ನೋಡಾ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನ ಗುರುವೆ.

೬೫೧. ಜಪವೆಂಬುದು ಪಾಪಕ್ಕೆ ಬಹು ತಾಪ ನೋಡಯ್ಯ! ಜಪವೆಂಬುದು ಪುಣ್ಯದ ನಾಣ್ಯ ನೋಡಯ್ಯ! ಜಪವೆಂಬುದು ಚನ್ನಬಸವನ ಪಾದದಲ್ಲಿ ಐಕ್ಯ ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೬೫೨. ಜಪಿಸಬಾರದು ಜಪಿಸಬಾರದು ಕುಮಂತ್ರಗಳ. ಜಪಿಸಬಾರದು ಜಪಿಸಬಾರದು ಮೋಹನದ ಮಂತ್ರಂಗಳ. ಜಪಿಸಬಾರದು ಜಪಿಸಬಾರದು ಮಾರಣ ಮಂತ್ರಂಗಳ. ಜಪಿಸಬೇಕು ಜಪಿಸಬೇಕು ಕಪಿಲಸಿದ್ಧ ಮಲ್ಲಿಕಾರ್ಜುನಾಯ ನಮಃ ಎಂದು ಕೇಳಾ ಕೇದಾರ ಗುರು ದೇವಾ.

೬೫೩. ಜಪಿಸಬೇಕು ಜಪಿಸಬೇಕು ಸತ್ಯಶೀಲವ. ಜಪಿಸಬೇಕು ಜಪಿಸಬೇಕು ಪರಹಿತವ. ಜಪಿಸಬೇಕು ಜಪಿಸಬೇಕು ಪರಸ್ತ್ರೀ ಪರಧನವನೊಲ್ಲೆನೆಂಬುದ. ಜಪಿಸಬೇಕು ಜಪಿಸಬೇಕು ಗುರುಲಿಂಗಜಂಗಮ ದಾಸೋಹವ. ಜಪಿಸಬೇಕು ಜಪಿಸಬೇಕು ಕಪಿಲಸಿದ್ಧಮಲ್ಲಿಕಾರ್ಜುನಾಯನಮಃ ಎಂದು ಕೇಳಾ ಕೇದಾರ ಗುರುದೇವಾ.

೬೫೪. ಜಪಿಸಬೇಕು ಜಪಿಸಬೇಕು ದೇಹ ನಾನಲ್ಲೆಂಬ. ಜಪಿಸಬೇಕು ಜಪಿಸಬೇಕು ಜಿವಾತ್ಮ ಸಾಕ್ಷಿ ಅಲ್ಲೆಂಬ. ಜಪಿಸಬೇಕು ಜಪಿಸಬೇಕು ನಾ ಚನ್ನಬಸವನೆಂಬ. ಜಪಿಸಬೇಕು ಜಪಿಸಬೇಕು ಕಪಿಲಸಿದ್ಧ ಮಲ್ಲಿಕಾರ್ಜುನ ಪಾದ ಪದ್ಮ ಭ್ರಮರವೆಂಬ.

೬೫೫. ಮಂತ್ರ ದೇಹಿ ತಾನಾದ ಬಳಿಕ ಮಲತ್ರಯಕ್ಕೆ ಒಳಗಾಗಬಹುದೇನಯ್ಯ? ಸರ್ವ ದೇಹ ಅಂತರ್ಯಾಮಿ ತಾನೆಂದರಿದ ಬಳಿಕ ಕೊಲ್ಲುವದಕ್ಕೆ ಒಳಗಾಗಬಹುದೇನಯ್ಯ ಕೇದಾರ ಗುರುದೇವಯ್ಯ?

೬೫೬. ನರಜನ್ಮಕ್ಕೊಮ್ಮೆ ಬಂದ ಬಳಿಕ ಗುರುವಿನ ಕುರುಹ ಕಾಣಬೇಕು. ಗುರುವಿನ ಕುರುಹ ತಾ ಕಂಡ ಬಳಿಕ ಶಿಷ್ಯನಾಗಿ ಗುರು ಕರಜಾತನಾಗಬೇಕು. ಗುರು ಕರಜಾತನಾದ ಬಳಿಕ ಗುರು ಸ್ವರೂಪಾಗಿ ಕಪಿಲ ಸಿದ್ಧ ಮಲ್ಲಿಕಾರ್ಜುನನ ಪಾದಪದ್ಮದಲ್ಲಿ ಐಕ್ಯವ ಗಳಿಸಬೇಕು ಘಟ್ಟಿವಾಳಯ್ಯ.

೬೫೭. ಜನರಿಲ್ಲದ ಘಟ್ಟದೊಳು ಘನವಿಲ್ಲದೊಂದು ಪಟ್ಟಣವಿದೆ ನೋಡಾ. ಪಟ್ಟಣಒಂದರೊಳು ಮೂರು ಕಟ್ಟಿಗೆಯುವೆ ನೋಡಾ. ಮೂರರಲ್ಲಿ ಮೂಲೋಕ ಮುಟ್ಟಿ ಮುಟ್ಟಿ ಕಪಿಲ ಸಿದ್ಧಮಲ್ಲಿಕಾರ್ಜುನನ ನೆಟ್ಟನೆ ಘಟ್ಟಗೊಳ್ಳವು ನೋಡಾ ದಿಟ್ಟ ನಿಜ ನಟ್ಟ ಘಟ್ಟಿವಾಳ.

೬೫೮. ವನ ಒಂದರಲ್ಲಿ ಘನ ಕಾಸಾರ ಬೆಳೆದುದ ಕಂಡೆ. ಆ ಘನ ಕಾಸಾರದಲ್ಲಿ ಮೂರು ಹೂವುಗಳ ಕಂಡೆ. ಆ ಮೂರು ಹೂವುಗಳಲ್ಲಿ ಮೂರು ಮೂರ್ತಿಯ ಕಂಡೆ. ಆ ಮೂರು ಮೂರ್ತಿಯರಲ್ಲಿ ಮೂಲೋಕದರಸ ಕಪಿಲಸಿದ್ಧಮಲ್ಲಿಕಾರ್ಜುನನ ಕಂಡು ಕಣ್ದೆರೆದು ಕಂಡೆ ಕಂಡೆ ಕಂಡ್ಯಾ ಕೇದಾರಗುರುವೆ.

೬೫೯. ಮನದಲ್ಲಿಯ ಘನವ ನೆನೆಯಬಾರದು. ತೀರಲದು ಮಾಯಾ ಜಾಲವೆನಬಾರದು. ಅಂದರದು ಕಪಿಲಸಿದ್ಧ ಮಲ್ಲಿಕಾರ್ಜುನನ ಮುಟ್ಟಲುಬಾರದು.

೬೬೦. ಅರಿದ ಬಳಿಕ ಬ್ರಹ್ಮವೆಂಬುದು ಮೃಗಜಲ ನೋಡಾ. ಅರಿದ ಬಳಿಕ ಬ್ರಹ್ಮವೆಂಬುದು ವಂಧ್ಯಾ ಪುತ್ರ ನೋಡಾ. ಅರಿದ ಬಳಿಕ ಬ್ರಹ್ಮವೆಂಬುದು ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಶಬ್ದಮುಗ್ಧ ನೋಡಾ ಕಲ್ಲಯ್ಯ.

೬೬೧. ಅರಿಯಲಿ ಅರಿಯದೆ ತಾ ಸಹಜ ಇರಲಿ ಕಡ್ಡಿಯಲ್ಲಿ ಪರಾತ್ಪರ ವಸ್ತು ತಾನೆಂಬುದು ದಿಟ ನೋಡಾ! ಅರಿದ ದಾರಿಯದು ಆರನೆ ಕೇಳದು ಅರಿಯದ ದಾರಿಯದು ನೂರಾರನು ಕೇಳಿ ಕಡೆಗೆ ಕಪಿಲಸಿದ್ಧ ಮಲ್ಲಿಕಾರ್ಜುನ ನಗರ ಸೇರುವದದು ವಾರಿಯಾಗದು ಕೇದಾರ ಗುರುವೆ.

೬೬೨. ಆಕಾಶದಲ್ಲಿಯ ಮೇಘದಂತೆ, ಜಲದಲ್ಲಿಯ ತೆರೆಯಂತೆ ಬರುತ್ತದೆ ನೋಡಾ. ಈ ಘಟ ಬಂದದ್ದರಿಯೆ ಹೋದದ್ದರಿಯೆ. ನಿಂದ ವಸ್ತುವದು ನಿಜವೆಂದರಿದೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೬೩. ಆದಿಯಲ್ಲಿ ಬಯಲು, ಅಂತ್ಯದಲ್ಲಿ ಬಯಲು, ಮಧ್ಯದಲ್ಲಿ ತೋರಿ ಕೆಡುವುದದು ನೋಡಾ. ಈ ಘಟವು ತೋರಿ ತೋರಿ ಕೆಡುವುದಕ್ಕೆ ಈ ಜಗದಲ್ಲಿ ಇದೆ ದೃಷ್ಟ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೬೪. ಪಂಚ ಮುಖ ವರ್ಣಗಳವು ಪಂಚ ಮುಖನಂಘ್ರಿ ರೇಣುವಿಂಗೆ ಯೋಗ್ಯ ನೋಡಾ. ಷಣ್ಮುಖ ವರ್ಣಗಳವು ಅಷ್ಟ ಮೂರ್ತಿಯ ಪದ ಪದ್ಮದ್ವೈಕ್ಯಕ್ಕೆ ಯೋಗ್ಯ ನೋಡಾ ಷಟ್‌ಚಕ್ರ ವರ್ಣಗಳವು ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಐಕ್ಯ ನೋಡಾ ಎಂದರುಹಿದ ಗುರು ಚನ್ನಬಸವಣ್ಣನ ಪಾದವ ನೆನೆ ನೆನೆದು ಮೋಕ್ಷನಾದೆ ನೋಡಾ ಕೇದಾರ ಗುರುದೇವಾ.

೬೬೫. ಮೂರಕ್ಷರದಲ್ಲಿ ಏಳು ಭುವನ ಓಲಾಡುತ್ತದೆ. ಮೂರಕ್ಷರದಲ್ಲೀರಾರು ಪ್ರಣಮಂಗಳಾಡುತ್ತವೆ. ಮೂರಕ್ಷರ ಮೂರು ಮೂರ್ತಿಯ ಕ್ರಿಯೆಯಾಚರಿಸುತ್ತದೆ. ಮೂರಕ್ಷರದಲ್ಲಿ ಪಾರಹರ ಕಪಿಲಸಿದ್ಧ ಮಲ್ಲಿಕಾರ್ಜುನನ ರೂಹು ತೋರುತ್ತದೆ.

೬೬೬. ಆರು ಪ್ರಣಮದ ಕಡೆಯಕ್ಷರ ಚಿದಾಕಾಶದ ಅಂಗ ನೋಡಾ. ಆರು ಪ್ರಣವದ ಮೂಲಕ್ಷರ ಚಿನ್ಮಯ ಮಂದಿರ ನೋಡಾ! ಆರು ಪ್ರಣಮದ ಮಧ್ಯ ನಾಲ್ಕಕ್ಷರ ಶಿವ ಶಕ್ತಿ ರೂಪು ನೋಡಾ! ಆರು ಪ್ರಣವದ ಜಪವದು ಕಪಿಲಸಿದ್ಧಮಲ್ಲಿಕಾರ್ಜುನನ ಒಲುಮೆ ನೋಡಾ.

೬೭೭. ನವಗ್ರವರ್ಣಗಳ ಧ್ಯಾನವೆಂಬುವದು ನವ ಸಹಸ್ರ ಕರ್ಣಿಕೆಯಲ್ಲಿರುವ ಪರಂಜ್ಯೋತಿಯ ರೂಪು ಪ್ರಾಪ್ತಿ ನೋಡಾ. ದ್ವಾದಶಾದಿತ್ಯ ವರ್ಣಗಳ ಧ್ಯಾನವೆಂಬುದು ದ್ವಾದಶಾದಿತ್ಯರ ಪ್ರಭೆ ನುಂಗಿದ ಮಹಾಲಿಂಗ ಮೂರುತಿ ಪ್ರಾಪ್ತಿ ನೋಡಾ. ಷೋಡಶ ಕಲಾ ವರ್ಣಗಳ ಧ್ಯಾನವೆಂಬುದು ಷೋಡಶ ಕಲಾ ಚಂದ್ರಧರ ಕಪಿಲಸಿದ್ಧಮಲ್ಲಿಕಾರ್ಜುನ ತಾನೆ ನೋಡಾ. ಕೇದಾರ ಗುರುದೇವಾ.

೬೬೮. ಅಕಾರವದು ಸತ್ವ, ಉಕಾರವದು ರಜ, ಮಕಾರವದು ತಮ. ಅಕಾರವದು ಬ್ರಹ್ಮಜನಕ, ಉಕಾರವದು ವಿಷ್ಣುವಿನ ಜನಕ, ಮಕಾರವದು ರುದ್ರನ ಜನಕ, ಅಕಾರವದು ಸೃಷ್ಟಿ, ಉಕಾರವದು ಸ್ಥಿತಿ, ಮಕಾರವದು ಲಯ. ಅಕಾರ ವರ್ಣಪೀತ, ಉಕಾರ ವರ್ಣಶ್ಯಾಮ, ಮಕಾರ ವರ್ಣ ಶುಕ್ಲ. ಅಕಾರವದು ವಿಧಿ, ಉಕಾರವದು ವಿಧಾನ, ಮಕಾರವದು ಧ್ಯಾನ. ಅಕಾರವದು ಪಾತಾಳ, ಉಕಾರವದು ಮರ್ತ್ಯ, ಮಕಾರವದು ಸ್ವರ್ಗ. ಅಕಾರ ಉಕಾರ ಮಕಾರ ಮೂರರ ಏಕತ್ವವೆ ಓಂಕಾರ. ಆ ಓಂಕಾರವೆ ಆದಿಶಕ್ತಿಯ ಗದ್ದುಗೆ. ಆ ಗದ್ದುಗೆಯೆ ಕಪಿಲಸಿದ್ಧ ಮಲ್ಲಿಕಾರ್ಜುನನ ಅರಮನೆ ನೋಡಾ ಕೇದಾರಯ್ಯ.

೬೬೯. ಅನಿರ್ವಾಚ್ಯವೆ ವಾಚ್ಯವಾದಲ್ಲಿ ಹಕಾರವೆನಿಸಿತ್ತು, ಆ ಹಕಾರವೆ ವಾಚ್ಯ ಪ್ರಣಮವೆನಿಸಿತ್ತು, ಆ ನಿರಂಜನ ಪ್ರಣಮವೆ ಜಂಗಮಾಕೃತಿ ಜಗದಾಧಾರ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೭೦. ಭಕ್ತ ತಾನಾದ ಬಳಿಕ ಪಂಚ ಮುದ್ರೆಗಳಿಂದಲಂಕೃತನಾಗಿರಬೇಕು. ಅಲಂಕಾರಿ ತಾನಾದ ಬಳಿಕ ಶಿವ ಮುದ್ರೆ ಶಿವ ಭಾವ ಅಚ್ಚೊತ್ತಿರಬೇಕು. ಗುರೌ ಲಿಂಗೆ ಕ್ಷಮಾಲಾಯಾಂ ಮಂತ್ರ ಭಸ್ಮನಿ ಪಂಚಸು॥

ಏತಾನಿ ಸುಶಿವ ಮುದ್ರಾಸು ಶಿವ ಸದ್ಭಕ್ತಿಮಾಚರೇತ್॥ ಎಂದು ವಾತು ಲಾಗಮದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನನ ವಚನ ಉಂಟು ನೋಡಾ ಕೇದಾರಯ್ಯ.

೬೭೧. ತಾ ಶಿವಭಕ್ತನಾಗಿ ತನ್ನ ಬಂಧುಗಳ ಭವಿಯತನದಲ್ಲಿರಿಸಬಾರದಯ್ಯ. ಮಾತಿನಿಂದಾಗಲಿ, ಮನದಿಂದಾಗಲಿ, ಭೀತಿಯಿಂದಾಗಲಿ, ಶಿವಭಕ್ತಿಯುಲ್ಲಿ ಪೂರೈಸುವದಯ್ಯಾ. ಆತ್ಮೀಯಾನ್ವಿಧಾನ್ಭೋಗಾನ್ ಸ್ತ್ರೀ ಪುತ್ರ ಪ್ರಮುಖಾನಪಿ ಸ್ವಾತ್ಮಾನಪಿ ವಿಶೇಷಣ ತೇಷಾಂ ಚವಸಮಾನ ಯೇತ್ ಎಂದು ನುಡಿದ ನೋಡಿದ ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನನದಿ ವಾತುಲದಲ್ಲಿ ಕಲ್ಲಯ್ಯ.

೬೭೨. ಭಕ್ತನಾಗಿ ಭಕ್ತಿ ಇಲ್ಲದವ ಶಿವದ್ರೋಹಿ ನೋಡಾ ಮನವೆ. 'ಯೋ ಭೇದೊ ಭಕ್ತಿಮಾನ್ಕಶ್ಚಿ ತೇಷಾಂ ಮೋಹಾತ್ಪ್ರಕುರ್ವತೆ ॥ ಶಿವ ದ್ರೋಹಿ ಸ ವಿಜ್ಞೇಯಃ ಸರ್ವ ಕರ್ಮ ಬಹಿಷ್ಕೃತಃ" ಎಂಬ ವಾಕ್ಯ ಪಾಲಿಸಿದ ನೋಡಾ ಮನವೆ. ಎನ್ನ ಗುರು ಚನ್ನಬಸವ ಕಪಿಲಸಿದ್ಧಮಲ್ಲಿಕಾರ್ಜುನನಿಂದೆ ಮನವೆ.

೬೭೩. ಕುಲದಲ್ಲಿ ಶೂದ್ರನಾದರೇನು? ಮನದಲ್ಲಿ ಮಹಾದೇವ ನೆಲೆಗೊಂಡವನೇ ವೀರಶೈವ ನೋಡಾ. ಕಾಂಚನಂ ರಜತಂ ತಾಮ್ರಂ ರಸಯೋಗಾತ್ಸುವರ್ಣತಾಂ ॥ ತಥಾ ಶಿವಜ್ಞಾನ ರಸಾಚ್ಛೂದ್ರಾದ್ಯಾಃ ಶಿವತಾಂ ವ್ರಜೇತ್ ಎಂಬುದು ಸಟೆ ಏನ್ನೈ ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವೆ?

೬೭೪. ಜನನವಿಲ್ಲದ ಮೂರ್ತಿ ಮನದ ಮೊನೆಯುಲ್ಲಿ ಚರಿಸುತ್ತಿದೆ ನೋಡವ್ವಾ. ಘನಕ್ಕೆ ನಿಲುಕದ ಮೂರ್ತಿ ಅಣು ರೇಣುವಿನಲ್ಲಿ ಮನೆ ಮಾಡಿ ಚರಿಸುತ್ತಿದೆ ನೋಡವ್ವಾ. ತಿಳಿದಿಹೆ ನಾನೆಂದರೆ ತಿಳಿಯದೆ ದೂರವಾಗಿ ಚರಿಸುತ್ತಿದೆ ನೋಡವ್ವಾ. ಇದರಂದವನರಿದರಿದು ಬೇಸತ್ತು ಬೆಂಬಿದೆನವ್ವಾ ಕಪಿಲಸಿದ್ಧ ಮಲ್ಲಿಕಾರ್ಜುನಂಗೆ.

೬೭೫. ಕರಡಿಗೆಯೊಳೊಬ್ಬ ಕುರುಡ ಮೂರುತಿ ತೋರುತ್ತಾನೆ. ಒಡನೊಡನೆ ನಡೆದರೆ ಮೈಯ್ಯೆಲ್ಲಾ ಚಕ್ಷುವಾಗಿ ತೋರುತ್ತಾನೆ. ನಡೆಯುದಿರ್ದರೆ ಕಪಿಲಸಿದ್ಧ ಮಲ್ಲಿಕಾರ್ಜುನನು ಕುರುಡ ಇವನು ಕುರುಡ ನೋಡಾ ಕೇದಾರ ಗುರುದೇವಾ.

೬೭೬. ಕಣ್ಣೊಳಗೆ ಮೂರು ಬಣ್ಣದ ಚಿತ್ರದಲ್ಲಿ ಚಿನ್ಮಯ ರೂಪು ಹೊಳೆಯುತ್ತಿದೆ ನೋಡಾ. ಕಣ್ಣಾರೆ ನೋಡಿದರೆ ಮುಕ್ಕಣ್ಣನ ರೂಪು ಅದೆ ನೋಡಾ. ನೋಡದಿರೆ ಅವ ಹಾಳು ಮಣ್ಣು ನೋಡಾ ಮೂಲೋಕದೆರೆಯ ಕಪಿಲಸಿದ್ಧ ಮಲ್ಲಿಕಾರ್ಜುನನವ.

೬೭೭. ಗುರು ತೋರಿದರೆ ಕೀಲು ಇಂದರಿದು ಬಂದಿತ್ತೆಲಗವ್ವಾ. ನಾರಿ ಪರರೆಂಬಲ್ಲಿ ನಾರಿಯಾದೆನೆಲಗವ್ವಾ. ಇನ್ನಾರ ನೆರೆಯ ಬೇಕಾದರೆ ಗಂಡ ಕಪಿಲಸಿದ್ಧ ಮಲ್ಲಿಕಾರ್ಜುನ ಬಯಲಿಗೆ ಬಯಲಾಗಿ ಏಕವಾದನೆಲಗವ್ವಾ.

೬೭೮. ಎಲ್ಲರ ವರ್ಣಿಸಬಹುದು. ಎನ್ನ ನಲ್ಲ ಗುರುದೇವನ ವರ್ಣಿಸಬಾರದು. ಅಲ್ಲನ ನುಡಿಸಬಹುದು. ಎನ್ನ ನಲ್ಲ ಕಪಿಲಸಿದ್ಧ ಮಲ್ಲೇಂದ್ರನ ರೂಹು ಚನ್ನಬಸವ ನುಡಿಸಿ ಗೆಲಬಾರದು ಖುಲ್ಲತನದಿಂದಾದರೂ ಕಲ್ಲಯ್ಯ.

೬೭೯. ಬಂದೆನೆಂದು ಹೇಳಿದ ಬಳಿಕ ಬಾರದೆ ಇಪ್ಪನೆ ಹೇಳಾ? ಫಾಳಲೋಚನನು ನಿಂದಿಹನೆಂದು ನಿರೂಪಿಸಿದ ಬಳಿಕ ನಿಂದಿಪ್ಪನೆ? ಇಂದುಧರನು ಬಂದರೆ ಬಹುಲೇಸು, ನಿಂದರೆ ಎರಡು ಲೇಸು. ಬಾರದೆ ಬಾರನಿಂದು ನಿಂದಿರದಿದ್ದರೆ ಇಂದು ಈ ಪೂಜೆ ಸಮಾಪ್ತಿ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೬೮೦. ಸಾಕುವವರು ತಾವಾದ ಬಳಿಕ ನೂಕುವವರು ತಾವಾಗಬಾರದಯ್ಯ! ಹೇಳಿದವರು ತಾವಾದ ಬಳಿಕ ಈ ಪ್ರಪಂಚವಲ್ಲೆನ್ನ ಗೋಳಿಡಿಸಬಾರದಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೬೮೧. ಅಲ್ಲಿರುವಾತನ ರೂಹು ನೀವಲ್ಲೆಂಬರೆ ಅಲ್ಲಿರುವಾತನ ರೂಹು ದೇವಾಲಯವ ತೆಗಿಸರಯ್ಯ! ಅಲ್ಲಿಯ ರೂಹು ಇಲ್ಲಿಯ ರೂಹು ಕಪಿಲಸಿದ್ಧಮಲ್ಲಿಕಾರ್ಜುನನೆಂದು ಕಂಡೆ ನಲ್ಲಮದೇವಾ ಇನ್ನಾದರೂ ಕರುಣಿಸಯ್ಯ.

೬೮೨. ನಿರಾಕಾರ ಮೂರ್ತಿ ನೀನಾಕಾರಕ್ಕೆ ಬಂದೆ ಎನಲಾರೆ. ಆಕಾರದ ಮೂರ್ತಿ ನಿರಾಕಾರಕ್ಕೆ ಹೋಹುದೆಂದೆನಲಾರೆ. ನಿಂತರೆ ನೆರಳಿಲ್ಲ. ನೋಡಿದರೆ ರೂಹು ಇಲ್ಲ. ಮುಟ್ಟಿದರೆ ಸ್ಪರ್ಶವಿಲ್ಲ. ನಡೆದರೆ ಹೆಜ್ಜೆ ಇಲ್ಲ. ನೀ ನೋಡಿಯೇ ಕಪಿಲಸಿದ್ಧಮಲ್ಲಿಕಾರ್ಜುನನಲ್ಲೆನಬಹುದೆ? ಅಲ್ಲಮದೇವಾ ಇನ್ನಾದರೂ ಕರುಣಿಸಯ್ಯ.

೬೮೩. ಬಾಣನವನೊಬ್ಬ ಲಿಂಗ ಪೂಜಕ, ಮಾದಾರ ಚನ್ನಯ್ಯನವನೊಬ್ಬ ಲಿಂಗ ಪೂಜಕ, ಈ ಕಪಿಲಸಿದ್ಧ ಮಲ್ಲಿಕಾರ್ಜುನನ ಮಹಾ ಮಂದಿರದಲ್ಲಿ ನಾನೊಬ್ಬ ಲಿಂಗಪೂಜಕ.

೬೮೪. ಎಲ್ಲರು ಲಿಂಗವ ಪೂಜಿಸಿ ಮಹಾ ಪದಸ್ಥರಾದ ಪರಿಯನೊರೆವೆ ಕೇಳಿ! ಸ್ಫಟಿಕ ಶಿಲಾಮಯ ಲಿಂಗವ ಪೂಜಿಸಿ ಪಡೆದ ಸತ್ಯಲೋಕವ ನೋಡಾ ವಿಧಾತ್ರನು. ಇಂದ್ರನೀಲಮಯ ಲಿಂಗವ ಪೂಜಿಸಿ ವೈಕುಂಠವ ಪಡೆದ ನೋಡಾ ನಾರಾಯಣನು. ಮರಕತ ಲಿಂಗವ ಪೂಜಿಸಿ ಅಮರಾವತಿಯ ಪಡೆದ ನೋಡಾ ಉಪೇಂದ್ರನು. ಚಿಂತಾಮಣಿ ಲಿಂಗವ ಪೂಜಿಸಿ ಅನಂತ ಸ್ತ್ರೀಯರ ಪಡೆದ ನೋಡಾ ಇಂದ್ರನು. ಸುವರ್ಣದ ಲಿಂಗವ ಪೂಜಿಸಿ ಅಳಕಾವತಿ ನವನಿಧಿ ಉಚ್ಚೈಶ್ರವ ಪರಮಾತ್ಮ ಮಿತ್ರತ್ವ ಪಡೆದ ನೋಡಾ ಕುಬೇರನು. ಹಿತ್ತಾಳಿಯ ಲಿಂಗವ ಪೂಜಿಸಿ ಸರ್ವ ಸಖತ್ವ ಸರ್ವ ದ್ರವ್ಯತ್ವ ಶಿವಕರುಣತ್ವ ಪಡೆದ ನೋಡಾ ಪವನನು. ಕಾಂಸ್ಯ ಮಯ ಲಿಂಗವ ಪೂಜಿಸಿ ಅಷ್ಟದಿಕ್ಕುಗಳ ಪಡೆದರು ನೋಡಾ ವಸುಗಳು. ಮೃಣ್ಮಯ ಲಿಂಗವ ಪೂಜಿಸಿ ಪಡೆದರು ಸಂಜೀವನ ಮೊದಲಾದೌಷಧಿಗಳ ಅಶ್ವಿನೀ ಕುಮಾರರು. ಶ್ವೇತ ಶಿಲಾಮಯ ಲಿಂಗವ ಪೂಜಿಸಿ ಮಹತ್ಪ್ರಭೆ ಸಹಸ್ರ ಕಿರಣ ಪಡೆದ ನೋಡಾ ಸೂರ್ಯನು. ಮೌಕ್ತಿಕ ಲಿಂಗವ ಪೂಜಿಸಿ ಸರ್ವ ಸಸಿ ಅಂಕುರತ್ವ ಶಿವಮೌಳಿ ಧಾರಣತ್ವ ಪಡೆದ ನೋಡಾ ಚಂದ್ರನು. ವಿಚಿತ್ರ ವರ್ಣದ ಲಿಂಗವ ಪೂಜಿಸಿ ತಮ್ಮ ತಮ್ಮ ಜನನ ಮಹತ್ವ ಪಡೆದರು ನೋಡಾ ನಕ್ಷತ್ರಂಗಳು. ಪಚ್ಚೆಮಯ ಲಿಂಗವ ಪೂಜಿಸಿ ಸರ್ವ ಶಾಸ್ತ್ರ ಧುರೀಣತ್ವವ ಪಡೆದ ನೋಡಾ ಬುಧನು. ಕಬ್ಬಿಣ ಲಿಂಗವ ಪೂಜಿಸಿ ದೈತ್ಯಾಚಾರ್ಯತ್ವ ಪಡೆದ ನೋಡಾ ಶುಕ್ರನು. ವಿದ್ರುಮ ಲಿಂಗವ ಪೂಜಿಸಿ ಪಡೆದ ನೋಡಾ ರಸಿಕತ್ವ ಮಂಗಳನು. ಮಾಣಿಕ್ಯ ಲಿಂಗವ ಪೂಜಿಸಿ ಸರ್ವ ಮಂತ್ರ ಕುಶಲತ್ವವ ಪಡೆದ ನೋಡಾ ಬೃಹಸ್ಪತಿಯು. ಅಧೋಮಯ ಲಿಂಗವ ಪೂಜಿಸಿ ಸರ್ವರಲ್ಲಿ ಕಷ್ಟತ್ವ ತನ್ನ ಉಪಾಸಕರಲ್ಲಿ ಸಖತ್ವ ಪಡೆದ ನೋಡಾ ಶನಿಯು. ಧೂಮ್ರಮಯ ಲಿಂಗವ ಪೂಜಿಸಿ ಅಮೃತವ ಪಡೆದರು ರಾಹುಕೇತುಗಳು. ಗೋಮಯ ಲಿಂಗವ ಪೂಜಿಸಿ ಕಲ್ಪತರುಗಳ ಪಡೆದರು ನೋಡಾ ನಿರುತಿಯರು. ಕುಶ ಲಿಂಗವ ಪೂಜಿಸಿ ಅನೇಕ ಸಿದ್ಧಿಗಳ ಪಡೆದರು ನೋಡಾ ಸಿದ್ಧರು. ಮೂಲಿಕೆ ಲಿಂಗವ ಪೂಜಿಸಿ ಮರಣ ದೂರತ್ವ ದುಃಖ ಸಮೀ

ಪತ್ವ ಪಡೆದರು ನೋಡಾ ಧನ್ವಂತರಿಗಳು. ಶಂಖ ಲಿಂಗವ ಪೂಜಿಸಿ
ಶಿವಪ್ರಸನ್ನತ್ವ ಪಡೆದ ನೋಡಾ ಮಾರ್ಕಂಡೇಯನು. ಪವಿತ್ರ ಲಿಂಗವ
ಪೂಜಿಸಿ ಅಂತಃಕರುಣತ್ವ ಪಡೆದ ನೋಡಾ ಸರ್ವರಲ್ಲಿ ವಶಿಷ್ಠನು. ದರ್ಭೆ
ಸ್ತಂಭ ಲಿಂಗವ ಪೂಜಿಸಿ ಅರ್ಧಬ್ರಹ್ಮತ್ವವ ಪಡೆದ ನೋಡಾ ವಿಶ್ವಾಮಿ
ತ್ರನು. ಕೂರ್ಚ ಲಿಂಗವ ಪೂಜಿಸಿ ಸರ್ವದೇವತಾ ಶಿಕ್ಷತ್ವ ಪಡೆದ ನೋಡಾ
ವಾಮದೇವನು. ತಮ್ಮ ಜ್ಞಾನ ಸ್ವರೂಪ ಸದಾ ಲಿಂಗವ ಪೂಜಿಸಿ
ಜ್ಞಾನವ ಪಡೆದರು ನೋಡಾ ಸನಕಾದಿ ಮಹಾ ಮುನಿಗಳು. ಶಿರೋ
ರತ್ನ ಲಿಂಗವ ಪೂಜಿಸಿ ದಿವ್ಯ ಸುಂದರತ್ವ ದಿವ್ಯ ಬುದ್ಧಿ ಶಕ್ತಿತ್ವ ಅನೇಕ
ವರ್ಣ ನಿರ್ಜರತ್ವ ಪಡೆದರು ನೋಡಾ ನಾಗರ್ಗಳು. ಕೀಟಾಕೃತಿ ಲಿಂಗವ
ಪೂಜಿಸಿ ಶಿವಸಭಾ ಪ್ರಸನ್ನತ್ವ ಪಡೆದರು ನೋಡಾ ರಾಕ್ಷಸರು. ತ್ರಿಪುರ
ಲಿಂಗವ ಪೂಜಿಸಿ ಅನೇಕ ಪುರಗಮನತ್ವ ಕಿಂಚಿತ್ ಕಿಂಚಿತ್ ಕುಟಿಲತ್ವ
ಪಡೆದ ನೋಡಾ ಬ್ರಹ್ಮರಾಕ್ಷಸ ಪಿಶಾಚಿಗಳು. ತ್ರಿಲೋಹದ ಲಿಂಗವ
ಪೂಜಿಸಿ ಅದೃಶ್ಯತ್ವ ಗೋಪನೀಯ ಕಾರ್ಯತ್ವ ಪಡೆದರು ನೋಡಾ ಗುಹ್ಯಕ
ದೇವತೆಗಳು. ಪಂಚ ಲೋಹದ ಲಿಂಗವ ಪೂಜಿಸಿ ಅನೇಕ ಮಂತ್ರ ಸಿದ್ಧಿತ್ವ
ಪಡೆದರು ನೋಡಾ ಶಾಬರಾದಿ ಮಾಂತ್ರಿಕರು. ವಜ್ರದ ಲಿಂಗವ ಪೂಜಿಸಿ
ನಿತ್ಯ ಶಿವಾಭಿಷೇಕ ಮಾಡುವರು ನೋಡಾ ಸಪ್ತಮಾತೃಕೆಯರು. ಪ್ರಸೂ
ನದ ಲಿಂಗವ ಪೂಜಿಸಿ ಮೂರು ಲೋಕವ ತನ್ನೊಳ್ಮಾಡಿದ ನೋಡಾ
ಮನ್ಮಥನು. ಇಚ್ಛಾ ಲಿಂಗವ ಪೂಜಿಸಿ ಆದಿ ನಾರಾಯಣನ ಪಡೆದಳು
ನೋಡಾ ಲಕ್ಷ್ಮಿಯು. ಕ್ರಿಯಾ ಲಿಂಗವ ಪೂಜಿಸಿ ಬ್ರಹ್ಮನ ಪಡೆದಳು
ನೋಡಾ ಸರಸ್ವತಿಯು. ಪತಿ ಎಂಬ ಲಿಂಗವ ಪೂಜಿಸಿ ಪತಿವ್ರತವ ಪಡೆ
ದರು ನೋಡಾ ಅರುಂಧತಿ, ಅನಸೂಯೆ, ಅನಲಾಯಿ, ಸಾವಿತ್ರಿಯರು.
ಬಿಲ್ವ ಫಲ ಲಿಂಗವ ಪೂಜಿಸಿ ನಮ್ಮ ಪ್ರಥಮ ಪಾದವ ಪಡೆದರು ನೋಡಾ
ಧರ್ಮದೇವತೆಗಳು. ಜಂಬೂ ಫಲ ಲಿಂಗವ ಪೂಜಿಸಿ ಸರ್ವರ ಪ್ರಾಣ
ಆಕರ್ಷಣವ ಪಡೆದಳು ನೋಡಾ ಮೃತ್ಯುದೇವತೆ. ನಿಂಬಫಲ ಲಿಂಗವ
ಪೂಜಿಸಿ ನಿರೋಗ ಆರೋಗ್ಯ ಪಡೆದಳು ನೋಡಾ ಆರೋಗ್ಯದೇವತೆ.
ಆಕಾಶ ಲಿಂಗವ ಪೂಜಿಸಿ ಬಯಲ ಪಡೆದರು ನೋಡಾ ದಿಗಂಬರರು.
ಧ್ವಜ ಲಿಂಗವ ಪೂಜಿಸಿ ಖೇಚರತ್ವ ಪಡೆದರು ನೋಡಾ ಗಗನಚಾರಿಗಳು.
ಮೋಹ ಲಿಂಗವ ಪೂಜಿಸಿ ಸರ್ವಜನವಶ್ಯ ಪಡೆದವು ನೋಡಾ ಪಶುಪ್ರಾ
ಣಿಗಳು. ಬೀಜ ಲಿಂಗವ ಪೂಜಿಸಿ ಸರ್ವಧಾನ್ಯವ ಪಡೆದರು ನೋಡಾ

ಕರ್ಷಕರು. ಇಂತಪ್ಪ ನಾನಾಕೃತಿ ಲಿಂಗವ ಪೂಜಿಸಿ ಹಲಕೆಲವು ಪದ ಸ್ಥರಾದರೈ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗದಲ್ಲಿ.

೬೮೫. ಅಗ್ನಿಲಿಂಗವ ಬ್ರಾಹ್ಮಣ ಪೂಜಿಸಿದ. ಧನಲಿಂಗವ ಕ್ಷತ್ರಿಯು ಪೂಜಿಸಿದ. ಧ್ಯಾನಲಿಂಗವ ವೈಶ್ಯ ಪೂಜಿಸಿದ. ಖಡ್ಗಲಿಂಗವ ರಾಜ ಪೂಜಿಸಿದ. ಧಾನ್ಯ ಲಿಂಗವ ಶೂದ್ರ ಪೂಜಿಸಿದ. ಪರ್ವತ ಲಿಂಗವ ವೀರ ಶೈವ ಪೂಜಿಸಿದ. ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಸಿದ್ಧರಾಮ ಪೂಜಿ ಸಿದ ನೋಡಾ ಕೇದಾರ ಗುರುದೇವಾ.

೬೮೬. ಧರ್ಮವ ಧರಿಸಿದ ಬಳಿಕ ಲಿಂಗಾರ್ಚನೆಯ ಮಾಡಿ ಸಾಯಬಹುದಯ್ಯಾ. ಸತ್ತರೆ ಸಾಯಬಹುದು. ಹೊತ್ತಿಗೊಮ್ಮೆ ಸೂರ್ಯ ನಂತೆ ಬರಬಾರದಯ್ಯ. ಬಂದರೆ ಬರಬಹುದು ತನ್ನಾಯತ ಮರೆದಿರ ಬಾರದಯ್ಯ ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೬೮೭. ಲಿಂಗಾರ್ಚಕನಾದ ಬಳಿಕ ಲಿಂಗವಿಧಿ ವಿಧಾನಗಳರಿದ ರಿದು ಮಾಡಬೇಕು. ಲಿಂಗದೇಹಿ ತಾನಾದ ಬಳಿಕ ಅಲಿಂಗಿಗಳ ಸಂಗ ವಳಿದಿರಬೇಕು. ಲಿಂಗಧ್ಯಾನಿ ತಾನಾದ ಬಳಿಕ ಅಂಗನೆಯರ ನೋಡ ದಿರಬೇಕು. ಲಿಂಗೈಕ್ಯ ತಾನಾದ ಬಳಿಕ ಕರುಣಾಕರ ಅಭಯಕರ ಕಪಿ ಲಸಿದ್ಧಮಲ್ಲಿಕಾರ್ಜುನನ ಕಾರ್ಯದಲ್ಲಿ ಅಭೇದವಿರಬೇಕು ಕಾಣಾ ಕೇದಾ ರಯ್ಯ.

೬೮೮. ಲಿಂಗವ ಪೂಜಿಸಿ ಪಡೆದರು ಫಲಪದವನೆಂದು ಹೇಳ ದಿರಾ! ಅಂದಿನ ವೃತ್ತಾಂತ ನೀನಂದರಿವಡೆ ಮಾಡಿ ಮಾಡಿ ನೋಡಾ ಲಿಂಗಾರ್ಚನೆಯ ಮಾಡದೆ ನೋಡದೆ ನೀಡಾಡದೆ ಅರಿಯಬಾರದು ಕಪಿಲಸಿದ್ಧಮಲ್ಲಿಕಾರ್ಜುನನ ಲೀಲೆಯ ಎಲ್ಲೈ ಕಲ್ಲಯ್ಯ.

೬೮೯. ಶಿವಶಿವಾ ಶಿವಶಿವಾ ಶಿವಶಿವಾ ಎಂದೊಮ್ಮೆ ಶಿವನಾಗಿ ಶಿವನ ಪೂಜಿಸು ಮನವೆ. ಹರಹರಾ ಹರಹರಾ ಹರಹರಾ ಎಂದೊಮ್ಮೆ ಹರನಾಗಿ ಪುರಹರನ ಪೂಜಿಸು ಮನವೆ. ಲಿಂಗವೆ ಲಿಂಗವೆ ಎಂದೊಮ್ಮೆ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಪೂಜಿಸಿ ಲಿಂಗವಾಗು ಮನವೆ.

೬೯೦. ಕಾಮಾರಿ ರೂಪು ಬಂದಾನೊಂದು ಕಾಮಾದ್ಯರಿ ಷಡ್ವ ರ್ಗಗಳು ಮಾಡದಿರು ಮನವೆ ಕಪಿಲಸಿದ್ಧ ಮಲ್ಲಿಕಾರ್ಜುನ ಸಾಕ್ಷಿ ಯಾಗಿ.

೬೯೧. ಒಬ್ಬ ಮೂರ್ತಿ ಹಲವು ರೂಪಾಗಿ ಪೂಜಿಸಿಕೊಂಡ ನೋಡಾ ಮನವೆ. ಆದಿ ಲಿಂಗವಾಗಿ ತುಪ್ಪದ ಅಭಿಷೇಕ ಕೈಕೊಂಡ. ಅಮೃತಲಿಂಗವಾಗಿ ಅಮೃತದಭಿಷೇಕ ಕೈಕೊಂಡ. ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವಾಗಿ ಸರ್ವವಭಿಷೇಕ ಕೈಕೊಂಡ ನೋಡಾ ಮನವೆ.

೬೯೨. ವಿಷ ಉಂಡು ದಣಿಯಲಾರದೆ ವಿಷನೈವೇದ್ಯವ ಮಾಡಿಕೊಂಡ ನೋಡಾ ಈ ದೇವಾ. ತ್ರಿಪುರಾಂತಕ ಕೆರಿಯಗುಳಿ ದಣಿಯಲಾರದೆ ಹಲವು ಗುಡ್ಡ ರೂಪಾಗಿ ಕೆರೆಯಗುಳಿಸಿಕೊಂಡ ನೋಡಾ! ಇದ್ದ ದೇವಾಲಯವಲ್ಲದೆ ಮತ್ತು ದೇವಾಲಯವ ಮಾಡಿಸಿಕೊಂಡ ನೋಡಾ ಈ ದೇವಾ. ತಾನಖಂಡ ಮೂರ್ತಿಯ ರೂಪು ಧರಿಸದೆ ಇಲ್ಲಿ ಲಕ್ಷ ತೊಂಭತ್ತಾರು ಸಾಸಿರ ನೆಲಸಿಪ್ಪ ನೋಡಾ ಈ ದೇವಾ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾ.

೬೯೩. ಇಷ್ಟಲಿಂಗಪೂಜೆಯದು ಅಷ್ಟೈಶ್ವರ್ಯ ಪ್ರದವಾಯಿತ್ತು. ಪ್ರಾಣಲಿಂಗ ಪೂಜೆಯದು ಅಖಂಡ ಚಿದೈಶ್ವರ್ಯ ಪ್ರದವಾಯಿತ್ತು. ಭಾವಲಿಂಗ ಪೂಜೆಯದು ನಿರ್ಭಾವ ಸಿಜಾನಂದ ವಸ್ತು ಸ್ವರೂಪವಾಯಿತ್ತು ಕೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ.

೬೯೪. ಆಕಾರವದು ಇಷ್ಟಲಿಂಗ, ಉಕಾರವದು ಪ್ರಾಣಲಿಂಗ, ಮಕಾರವದು ಭಾವಲಿಂಗ. ಭಕ್ತಂಗಾಗಲಿ, ಷಟ್ಸ್ಥಲಬ್ರಹ್ಮಿಯಾದವಂಗೆ ಆಗಲಿ, ಲಿಂಗತ್ರಯ ಪೂಜೆಯೆ ಬೇಕು. ಲಿಂಗತ್ರಯ ಪೂಜೆಯರಿತು ಮಾಡದವರ ಮನದೆರೆದು ಮಾತಾಡೆನಯ್ಯ ಕಪಿಲ ಸಿದ್ಧಮಲ್ಲಿಕಾರ್ಜುನ ಲಿಂಗವೆ.

೬೯೫. ಎಲ್ಲರಿಗಿಂತಲು ಶಿವಭಕ್ತರಧಿಕರೆಂಬ ಕಾರಣವೇನಯ್ಯ? ನಿತ್ಯ ಲಿಂಗಾರ್ಚನೆ ಮೂರು ವೇಳೆ ಲಿಂಗಾರ್ಚನೆಗೊಮ್ಮೆ ಲಿಂಗತ್ರಯ ಪೂಜೆ ಪೂಜೆಗೊಮ್ಮೆ ಮಹಾಪ್ರಣಮಗಳ ಜಪ ಜಪಕ್ಕೊಮ್ಮೆ ನಿಜ ಧ್ಯಾನ ನಿಜಧ್ಯಾನಕ್ಕೊಮ್ಮೆ ಚಿತ್ತಿನ ಲಯ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೬೯೬. ಅಕಾರ ಪ್ರಣಮದಿಂದ ಸ್ಥೂಲದೇಹ ದಗ್ಧವಾಯಿತ್ತು. ಉಕಾರ ಪ್ರಣಮದಿಂದ ಸೂಕ್ಷ್ಮದೇಹ ನಿರ್ಮಲವಾಯಿತ್ತು. ಮಕಾರ ಪ್ರಣಮದಿಂದ ಕಾರಣದೇಹ ಕರ್ಮವಳಿಯಿತ್ತು. ಅಕಾರದಲ್ಲಿ ಜಾಗ್ರತೆ,

ಉಕಾರದಲ್ಲಿ ಸ್ವಪ್ನ, ಸ್ವಪ್ನದಲ್ಲಿದ್ದ ರೂಹು ಸುಷುಪ್ತಿಯಲ್ಲ ತ್ರಿವಿಧಾವಸ್ಥೆಯಲೊಂದಾಗದ ಮಾತ್ರ ಪ್ರಾಣಲಿಂಗಿ ಆತನಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೯೭. ದೇಹ ಎರಡರಲ್ಲಿ ಭಾವ ಒಂದಾಗದ ಪ್ರಾಣಲಿಂಗಿಯಲ್ಲ. ದೇಹ ಮೂರರಲ್ಲಿ ಸಾಕ್ಷಿ ತಾನಾಗದವ ಪ್ರಾಣಲಿಂಗಿಯಲ್ಲ. ದೇಹ ನಾಲ್ಕರಲ್ಲಿ ನಿರ್ದ್ವಂದ್ವ ಅಸಾಕ್ಷಿಕ ತಾನಾಗದವ ಪ್ರಾಣಲಿಂಗಿಯಲ್ಲ. ಈ ಛಂದವ ನಾನಿಂದೆಯುಂದೆನಾಗಿ ಚನ್ನಬಸವನೆ ಗುರುಮೂರ್ತಿಯಿಂದ ಅತನ ಒಕ್ಕುದ ಮಿಕ್ಕುದ ಕಾಯಿಕೊಂಡಿಪ್ಪಾತನ ಪಾದಕ್ಕೆ ನಮೋ ನಮೋ ಎಂಬೆನಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

ಬಸವೇಶ್ವರನ ಐಕ್ಯವನರಿದು ಹಾಡಿದ ವಚನ.

೧೯೮. ನಿರಾಕಾರದ ಮೂರ್ತಿಯು ಆಕಾರಕ್ಕೆ ತಂದೆಯಲ್ಲ ಬಸವ. ಆಕಾರದ ಮೂರ್ತಿಯು ಹೃದಯಕಂಜದಲ್ಲಿ ವಾಸಗೊಂಡು ತೋರಿದೆಯಲ್ಲ ಬಸವ. ಈ ಆಕಾರಕ್ಕೆ ತಂದು ಭಕ್ತಿಯನನುಗ್ರೈದು ದಿಗದಶದಲ್ಲಿ ಬೆಳಿದೆಯಲ್ಲ. ಇನ್ನಾರವ ನಿರಾಕಾರದಲ್ಲನುಗೊಳಿಸಬೇಕೆಂದು ಕಪಿಲಸಿದ್ಧ ಮಲ್ಲಿಕಾರ್ಜುನನ ಹೃದಯದಲ್ಲಿ ಮರೆಯಾದೆಯಲ್ಲ ಬಸವ.

ಮಡಿವಾಳಪ್ಪನ ಐಕ್ಯವ ತಿಳಿದು ವರ್ಣಿಸಿದ ವಚನ.

೧೯೯. ಮೂರ್ತಿ ಮೂರರಲ್ಲಿ ಮೂರ್ತಿ ಅರಿಯರೆಂದು ಬಂದೆಯಲ್ಲ ಮಡಿವಾಳ. ದೇಹ ಮೂರರಲ್ಲಿ ನಿರ್ದೇಹನಾಗಿ ಬಂದಾಚರಿಸಿದೆಯಲ್ಲ ಮಡಿವಾಳ. ವಾಣಿ ನಾಲ್ಕರಲ್ಲಿ ಆನು ನಾನಲ್ಲೆಂಬ ಭಾವವಳಿದು ಶಬ್ದ ಮುಗ್ಧವಾಗಿ ಕಪಿಲ ಸಿದ್ಧ ಮಲ್ಲಿಕಾರ್ಜುನನಲ್ಲಿ ಚಿದಾಕಾಶವಾಗಿ ಪೋದೆಯಲ್ಲ ಮಡಿವಾಳ.

ಪ್ರಭುದೇವರ ಐಕ್ಯವ ತಿಳಿದು ಹಾಡಿದ ವಚನ.

೨೦೦. ಘನಕ್ಕೆ ಘನವೆಂಬವರ ಮನಕ್ಕೆ ತಂದು ಅನುಗೊಳಿಸಿದೆಯಲ್ಲ ಅಲ್ಲಮದೇವಾ. ಸರ್ವಂ ಖಲ್ವಿದಂ ಬ್ರಹ್ಮವೆಂದು ವಾದಿಸಿದಲ್ಲಿ ಲಿಂಗತ್ರಯದಲ್ಲಿ ಬೋಧ ಗೊಳಿಸಿದೆಯಲ್ಲ ಅಲ್ಲಮದೇವಾ. ಮಾಡಿ ನೀಡುವೆನೆಂಬವರ ರೂಹು ಮಾಡದಂತೆ ಮಾಡಿದೆಯಲ್ಲ ಅಲ್ಲಮದೇವಾ. ದೃಷ್ಟಿಗೆ ಬಿದ್ದವರ ಮಹದೈಶ್ವರ್ಯಕ್ಕೆಟ್ಟು ನೀ ನೆಟ್ಟನೆ ಬಿಟ್ಟದಲ್ಲಿಯು ಬಟ್ಟ

ಬಯಲ ಕದಳಿಯಲಿ ಹೋಗಿ ಬಟ್ಟೆ ಬಯಲಾಗಿ ಜಗದಂತರ್ಯಾಮಿ ಕಪಿಲಸಿದ್ಧ ಮಲ್ಲಿಕಾರ್ಜುನನಾಗಿ ನಿಂದೆಯಲ್ಲ ಅಲ್ಲಮದೇವಾ.

ಅಕ್ಕನಾಗಮ್ಮನ ಐಕ್ಯವನರಿದು ವರ್ಣಿಸಿದ ವಚನ.

೭೦೧. ನಾಗೇಶನ ಕಳಿವೆವೆಂಬರು ಆನಾಗದೆ ಹೋದರು ನಾಗಾಯಿ ನಾಗ ಕುಂಡಲನರಿದೆವೆಂಬರು. ನಾಗ ದೇವತೆಗಳಾದರು. ನಾಗಾಯಿ ನಾಗಾಂಕನ ಅರಿದು ತಾನಾಗದೆ ನಾಗ ಕಂಕಣನಾದ ನಾಗಾಯಿ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ.

ಚನ್ನಬಸವಣ್ಣನ ಐಕ್ಯವ ತಿಳಿದು ವರ್ಣಿಸಿದ ವಚನ ॥

೭೦೨. ಎನ್ನ ಪ್ರಾಣದಲ್ಲಿ ಆಚಾರ ಲಿಂಗವಾಗಿ ಬಂದ ಗುರು ಚನ್ನಬಸವಣ್ಣ. ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿ ಬಂದ ಗುರು ಚನ್ನಬಸವಣ್ಣ. ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ಬಂದ ಗುರು ಚನ್ನಬಸವಣ್ಣ. ಎನ್ನ ಶ್ರೋತ್ರದಲ್ಲಿ ಪ್ರಸಾದಲಿಂಗವಾಗಿ ಬಂದ ಗುರು ಚನ್ನಬಸವಣ್ಣ. ಎನ್ನ ತ್ವಕ್ಕಿನಲ್ಲಿ ಜಂಗಮಲಿಂಗವಾಗಿ ಬಂದ ಗುರು ಚನ್ನಬಸವಣ್ಣ. ಎನ್ನ ಹೃದಯದಲ್ಲಿ ಮಹಲಿಂಗವಾಗಿ ಬಂದ ಗುರು ಚನ್ನಬಸವಣ್ಣ. ಎನ್ನ ಸ್ಥೂಲ ದೇಹದಲ್ಲಿ ಇಷ್ಟಲಿಂಗವಾಗಿ ಬಂದ ಗುರು ಚನ್ನಬಸವಣ್ಣ. ಎನ್ನ ಸೂಕ್ಷ್ಮ ದೇಹದಲ್ಲಿ ಪ್ರಾಣಲಿಂಗವಾಗಿ ಬಂದ ಗುರು ಚನ್ನಬಸವಣ್ಣ. ಎನ್ನ ಕಾರಣ ದೇಹದಲ್ಲಿ ಭಾವಲಿಂಗವಾಗಿ ಬಂದ ಗುರು ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಚನ್ನಬಸವಣ್ಣ.

೭೦೩. ಇಂದ್ರಿಯ ಕಟ್ಟಿದ ದೇಹವದು ಚಂದ್ರನ ಲಕ್ಷಣ ಧರಿಸಿತ್ತು ನೋಡಾ. ಚಂದ್ರನ ಲಕ್ಷಣವದು ಇಂದ್ರಪದಕ್ಕೆ ಈಡಾಡಿತ್ತು ನೋಡಾ. ಇಂದ್ರಪದವದು ಸಾಂದ್ರವಾಗಿ ಭೋಗಿಸುವುದಕ್ಕೆ ವೈಗೊಟ್ಟಿತ್ತು ನೋಡಾ. ಸಾಂದ್ರವಾದುದಕ್ಕೆ ಮಹೀಂದ್ರ ಜಾಲವನೊಡ್ಡಿ ಕಪಿಲಸಿದ್ಧ ಮಲ್ಲೇಂದ್ರನ ಇಂದ್ರಿಯಂಗಳಲ್ಲಿ ತಂದಿಟ್ಟಿತ್ತು ನೋಡಾ ಬಾಚರಸಯ್ಯ.

೭೦೪. ಗರ್ಭವಿದ್ದಂಗನೆಗೆ ಒಮ್ಮೆ ಸಂಭ್ರಮವಲ್ಲದೆ ಗರ್ಭಗರ್ಭಕ್ಕೊಮ್ಮೆ ಸಂಭ್ರಮವಿಲ್ಲ ನೋಡಾ ಗುರುವೆ. ನೀನಿದ್ದ ಭಕ್ತಿಗೆ ಒಮ್ಮೆ ಒರೆದು ನೋಡಬಾರದು ನೋಡಾ ಗುರುವೆ. ನಾನಿದ್ದ ಕೇರಿಯವರೆಲ್ಲರ

ಒಮ್ಮೆ ಲಜ್ಜಿಸಬಹುದಲ್ಲದೆ ಪದೆ ಪದೆ ಲಜ್ಜಿಸುವುದದು ಬೇಡ ಕಪಿಲ ಸಿದ್ಧಮಲ್ಲಿಕಾರ್ಜುನ ಗುರುವೆ.

೭೦೫. ಸಾಕಾರದ ಲಕ್ಷಣವದು ನಿರಾಕಾರದಲ್ಲಿ ಲೀನವಲ್ಲದೆ ಸಾಕಾರದಲ್ಲಿ ಲೀನವಾಗಬಾರದು. ಕೀಟ ಭ್ರಮರ ನ್ಯಾಯದಂತೆ ಚರಿಸಬಲ್ಲಡವನೆ ನಿರ್ದೇಹ ಜೀವನ್ಮುಕ್ತನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೭೦೬. ವಾಙ್ಮನಕ್ಕಗೋಚರ ವಸ್ತುವೆಂದರಿದ ಬಳಿಕ ವಾಕ್ಯದಿಂದಾಗದು. ಮನದಿಂದಾಗದು. ಅರಿದ ಅರುವಿನಿಂದೆ ನೆನೆದು ತಾ ನಿರಾಕಾರ ನಿಜವಸ್ತು ನಿರ್ಮಲ ಶುದ್ಧ ಶಬಲಾಂಶ ತಾನಾಗಬಾರದೇನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೭೦೭. ಪುಣ್ಯದ ಬಲಿಯದು ಪಾಪದಲ್ಲಿ ಪುಣ್ಯ ಬಲಿಯೆ ನೋಡಯ್ಯ. ಪಾಪದ ಬಲಿಯದು ಪುಣ್ಯದಲ್ಲಿ ಪಾಪದ ಬಲಿಯೆ ನೋಡಯ್ಯ. ನಾಗನ ಸ್ವಭಾವವೇ ವಿಷ, ಮಧ್ಯ ಕ್ಷೀರ ಕ್ಷೀರವಾಗದು. ವಿಷವೇ ಸಹಜ ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೦೮. ಯಾವಾದರೂ ತೀರ್ಥಡೆಯಂತ್ಯದಲ್ಲಿ ಜಪ ತಪ ಶಿವಾರಾಧನೆ ಫಲ ಫಲವು ತೀರ್ಥಡೆಯಾದಲ್ಲಿ ಫಲಿಸದು ಫಲಿಸದು. ಪುಣ್ಯ ಪಾಪಗಳವು ದೇಹ ಶುದ್ಧವಾದವಂಗೆ ರಸ ಸಿದ್ಧಿ, ರಸಸಿದ್ಧಿಯಾದವಂಗೆ ದೇಹಶುದ್ಧಿ, ದೇಹ ಶುದ್ಧವಿಲ್ಲದವಂಗೆ ರಸಸಿದ್ಧಿಯಾಗದು. ರೋಗ ಪರಿಹಾರ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೦೯. ಪುಣ್ಯ ಪಾಪಗಳಿಗೆ ದೂರ ಹೇಳುವರಲ್ಲದೆ ಸಮೀಪ ಹೇಳುವವರಾರನು ಕಾಣೆ. ಪುಣ್ಯ ಪಾಪ ಸಂಕೀರ್ತವಾದಲ್ಲಿ ಕುಲಹೀನ ಕೀರ್ತಿವಂತ ಕುಲ ಸತ್ಕುಲ ಅಕೀರ್ಣವಂತ ಇದೆ ಕೀರ್ತಿ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೧೦. ಮಾಡಿದ ಪೂಜೆಯದು ಮಹಾದೇವಂಗಲ್ಲನೆ ಅನ್ಯ ದೈವತವೆಂಬುದು ಹೊಲ್ಲ ನೋಡಾ! ಬೇಡುವ ಕಾಟವದು ದಾನಶೂರಂಗಲ್ಲದೆ ಅನ್ಯ ಲೋಭಿಗದು ಹೊಲ್ಲ ನೋಡಾ! ನೋಡುವ ನೋಟವದು ಪರಸ್ತ್ರೀಯಲ್ಲಿಲ್ಲದೆ ತನ್ನ ಸ್ತ್ರೀಯಲ್ಲಿಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೭೧೧. ಕಾಮಧೇನುವಿನ ವಂಶವಿವು ಎಂದರೆ ಹಿಂಡಲರಿಯವು ನೋಡಾ ಆವುಗಳು. ಕಾಮಾರಿಯ ರೂಪುಗಳಿವರೆಂದರೆ ಅರಿಷಡ್ವರ್ಗಂಗಳಳಿಯ ಪಡಿಯರು ನೋಡಾ ತ್ರಿಶಕ್ತಿಗಳು. ನಾ ನಿನ್ನವನೆಂದರೆ ನಮ್ಮ ಮಹಿಮೆಗಳೆನಗರಿಯಬಾರದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ.

೭೧೨. ಎಲ್ಲರು ಜಪಿಸುವ ಜಪವ ಜಪಿಸಲಾರೆನಯ್ಯಾ! ಕ್ಷಣಕ್ಕೊಮ್ಮೆ ನಮಃ ಶಿವಾಯ ಎಂಬೆ. ಕ್ಷಣಕ್ಕೊಮ್ಮೆ ನಮಶ್ಶಿವಾಯ ಎಂಬೆ. ಕ್ಷಣಕ್ಷಣಕ್ಕೊಮ್ಮೆ ಇದೆ ಮಂತ್ರ ಘನವೆಂದುಸುರುವೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನದೇವ.

೭೧೩ ಮಂತ್ರಗಳ ಭೇದ ಬೃಹಸ್ಪತಿಯೋರ್ವಂಗಲ್ಲದೆ ಉಳಿದ ದೇವದೇವತೆಗಳಿಗದು ದುರ್ಘಟ ನೋಡಾ! ಮಂತ್ರ ಮನ ಒಂದಾದರೆ ಮಂತ್ರ ಮೂರ್ತಿಯಪ್ಪ ಮಹಾದೇವಿಯರ ಅಷ್ಟೈಶ್ವರ್ಯಕ್ಕಧಿಕಾರಿ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೭೧೪. ತಿಳಿದೊಮ್ಮೆ ಜಪಿಸಿದ ಜಪವದು ಜಪಮಾಲಿಕೆ ಪಿಡಿಯನ್ನು ನೋಡಾ. ತಿಳಿದೊಮ್ಮೆ ಜಪಿಸಿದ ಜಪವದು ಜಪದ ರೀತಿಯರುಪುವ ಜಪ ಮಾಲಿಕೆ ಪಿಡಿಯನು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನನ ಶರಣರಿಗೆ.

೭೧೫. ಭಕ್ತನಾದರೇನು? ಮಹೇಶನಾದರೇನು? ಮೊದಲಲ್ಲಿ ಶಕ್ತಿಯ ಜಪವೆ ಜಪ ನೋಡಾ! ಭಕ್ತನಾದರೇನು? ಮಹೇಶನಾದರೇನು? ಕಡೆಯಲ್ಲಿ ಶಿವ ಜಪವೆ ಜಪ ನೋಡಾ! ಜಪ ರೀತಿ ಜಪ ಲಕ್ಷಣ ಜಪ ಪ್ರಣಮಗಳರಿಯದೆ ತಾಪತ್ರಯಕ್ಕೊಳಗಾಗಿ ಭವಕ್ಕೀಡಾದರು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೧೬. ಅವನಾದರೇನು? ಭಾವದಲ್ಲಿ ಪ್ರೀತನಲ್ಲದೆ ನಡೆ ನುಡಿಗಡಣದಲ್ಲಿ ಪ್ರೀತಿಯೆಂಬೆ ದೇವಾ ಅರಸನಾದರೇನು? ಆಳುವಲ್ಲಿ ಅಧಿಕಾರಿಯಲ್ಲದೆ ಅಳಿವಲ್ಲ ಅಧಿಕಾರಿಯುಂಟೆ ದೇವಾ? ಭಕ್ತನಾದರೇನು? ಭಕ್ತಿಯಲ್ಲಿ ಸಲುಗೆಯಲ್ಲದೆ ಮಹೇಶನಲ್ಲಿ ಸಲುಗೆಯುಂಟೇನಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾ?

೭೧೭. ಭಕ್ತನಾದ ಬಳಿಕ ಭಕ್ತಿವಿಡಿದಾಚರಿಸುವದೆಂತಯ್ಯಾ? ಭಕ್ತ ತಾನಾದ ಬಳಿಕ ಭಕ್ತಿಯ ಹೊಲಬನರಿಯಬೇಕು. ಭಕ್ತ ತಾನಾದ

ಬ ಕ ಜ್ಞಾನ ಕ್ರಿಯೆ ವಿವರ ವಿಚಾರಿಸಿ ನೋಡಬೇಕು. ಭಕ್ತ ತಾನಾದ ಬಳಿಕ ಅರುಹಿನ ಕುರುಹವಿಡಿದು ಆಚರಿಸಬೇಕು. ಭಕ್ತ ತಾನಾದ ಬಳಿಕ ತಾಪತ್ರಯಕ್ಕೊಳಗಾಗದೆ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಐಕ್ಯ ಹೊಂದಲೇಬೇಕು.

೨೧೮. ಕುರಿಯ ಹೆಸರು ಒಂದೆ ಅಗ್ನಿಯ ಹೆಸರು ಒಂದೆ ಆದಲ್ಲಿ ಅಗ್ನಿಯ ಸಾಮರ್ಥ್ಯ ಕುರಿಗೆ ಬಂದೀತೇನಯ್ಯ? ಕಪ್ಪೆಯ ಹೆಸರು ಹಾವಿನ ಹೆಸರು ಒಂದಾದರೆ ಹಾವಿನ ಸಾಮರ್ಥ್ಯ ಕಪ್ಪೆಗೆ ಬಂದೀತೇನಯ್ಯ? ನನ್ನ ಹೆಸರು ನಮ್ಮ ಶಿವಶರಣರ ಹೆಸರು ಒಂದೆ ಆದಲ್ಲಿ ಅವರ ಸಾಮರ್ಥ್ಯ ಎನಗೆ ಬಂದೀತೇನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ?

೨೧೯. ಪರ್ವತದ ಮಹಿಮೆಯದು ಘನವೆಂದರೆ ಪರ್ವತದಲ್ಲಲ್ಲದೆ ವೇಶ್ಯಾ ಕೋಶಕ್ಕೆ ಹರಿದು ಹರನೆಂದಿನಿಸದಿರಯ್ಯ! ಶರಣರ ಮಹಿಮೆಯದು ಘನವೆಂದರೆ ಶಿವಶರಣನಲ್ಲಲ್ಲದೆ ಕಿಂಚಿಜ್ಞ ಮಾನವನಲ್ಲಿ ಹರಿಯದು ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೨೨೦. ಶಿವ ನಿರ್ಮಿತ ಮಂತ್ರಗಳು ಕೋಟಾನುಕೋಟಿ. ಶಿವ ನಿರ್ಮಿತ ಮಂತ್ರಗಳು ಕೋಟಾನು ಕೋಟಿ. ಶಿವ ನಿರ್ಮಿತ ಮಹಾ ಮೂಲಿಕೆಗಳು ಕೋಟಾನುಕೋಟಿ. ಶಿವನಿರ್ಮಿತ ವಿದ್ಯಾದಿಗಳು ಕೋಟಾನುಕೋಟಿ. ಇದರಂದವನರಿಯಬೇಕೆಂಬವರು ಕೋಟಾನುಕೋಟಿ. ಸಿದ್ಧಿಯ ಹೊಂದಿ ಪ್ರಸಿದ್ಧಿಗೆ ಬಂದವರು ಕೋಟಾನುಕೋಟಿಯೊಳು ಕೋಟ ಇಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವೆ.

೨೨೧. ಮಂತ್ರ ಮೂರರಲ್ಲಿ ಮಂತ್ರವೆ ಮಂತ್ರ ನೋಡಾ. ಶಕ್ತಿಯ ಮಂತ್ರದಲ್ಲಿ ಮಂತ್ರವೆ ಮಂತ್ರ ನೋಡಾ. ಶಿವನ ಮಂತ್ರ ಮೂರರಲ್ಲಿ ಮಂತ್ರವೆ ಮಂತ್ರ ನೋಡಾ. ನವ ಲಿಂಗದ ಮಂತ್ರ ಮೂರರಲ್ಲಿ ಮಂತ್ರವೆ ಮಂತ್ರ ನೋಡಾ. ನವಲಿಂಗದ ಮಂತ್ರ ಮೂರರಲ್ಲಿ ಮಂತ್ರವೆಂಬುದು ತ್ರಿಲೋಕದಲ್ಲಿಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೨೨. ಬಂದೊಮ್ಮೆ ಜಪಿಸುವದಾಗದಿರೆ ಸಿಂದೊಮ್ಮೆ ನೆನೆಯಬೇಕು ನೋಡಾ. ಮಂತ್ರ ಮೂರವ ಬಂದೊಮ್ಮೆ ಜಪಿಸುವದಾಗದಿರೆ ಸಿಂದೊಮ್ಮೆ ನೋಡಬೇಕು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವ.

೭೨೩. ಆ ಶರಣನ ರೂಹು ಈ ಶರಣನ ಹಸ್ತ ಕಮಲದಲ್ಲಿ ತೋರುತ್ತದೆ. ಈ ಶರಣನ ರೂಹು ಆ ಶರಣನ ಪಾದದಲ್ಲಿ ತೋರುತ್ತದೆ. ಆ ಶರಣನ ಪಾದ ಈ ಶರಣನ ಮಹಾ ಹೃದಯದಲ್ಲಿ ಮಹಾ ಲಿಂಗ ನೇತ್ರದಲ್ಲಿ ಶಿವಲಿಂಗವಾಗಿ ತೋರಿದ ಜಗತ್ತಿಗೆ ವಿಶ್ವೋದರಿಯಾಗಿ ತೋರಿತ್ತು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಶ್ರೀ ಸಿದ್ಧರಾಮೇಶ್ವರ ದೇವರು ಈ ಸೊನ್ನಲಾಪುರದಲ್ಲಿ ಅನೇಕ ವಚನಗಳ ಹಾಡಿದ ತದನಂತರದಲ್ಲಿ ಸರ್ವಗಣಾದಿಯಾಗಿ ಬಸವ ಚನ್ನ ಬಸವ ಮಡಿವಾಳ ಪ್ರಭು ಮೊದಲಾದ ಮಹಾ ಪುರಾತರು ತಮ್ಮ ಸ್ಥೂಲದೇಹದ ಅರುಹಿನ ಕುರುಹಿನಲ್ಲಿ ಬಯಲ ಮಾಡಿದುದ ತಿಳಿದು ಇನ್ನು ನಾವು ಈ ಜನರ ಮಧ್ಯದಲ್ಲಿರಬಾರದೆಂದು ಐಕ್ಯದ ವಚನಗಳು ಹಾಡಿದರು ಅದೆಂತೆಂದೊಡೆ,

೭೨೪. ನೋಡುವ ನರರಿಗೆ ನಿನ್ನ ರೂಹು ತೋರದಯ್ಯಾ. ನುಡಿಸುವ ನರರಿಗೆ ನೀನು ನುಡಿದುದು ಮಾಜುವನಲ್ಲಯ್ಯಾ. ಹಾಡುವ ನರರಿಗೆ ನೀ ಮನವ ನೀಡು ಮಾಡುವನಲ್ಲಯ್ಯಾ. ತೋರುವ ತೋರ್ವ ನುಡಿವ ನುಡಿಸುವ ಪ್ರಮಥರನೇಕೆ ಒಳಕೊಂಡೆ ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ?

೭೨೫. ಒಲಿಯದ ಮೂರ್ತಿ ಒಲಿಸಿ ಕೊಟ್ಟ ನಮ್ಮ ಚನ್ನಬಸವ. ಉಲಿಯುವ ಮೂರ್ತಿ ಬಲಿಯ ಹಾಕಿಕೊಟ್ಟ ನಮ್ಮ ಚನ್ನಬಸವಣ್ಣ. ಕಲಿಯುಗ ಕಲಿಯುಹ ಕಲಾಧರ ಧರ ಗುರುವೈಕ್ಯವನರಿದು ಇನ್ನರುಹಿನ ಮನೆಯಲ್ಲಿರಲಾರೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ ದೇವಾ.

೭೨೬. ಲಿಂಗ ಪೂಜೆಯಿಂದೊಬ್ಬ ಜೀವನ್ಮುಕ್ತ, ಜಲಪ್ರಭಾವದಿಂದೊಬ್ಬ ಜೀವನ್ಮುಕ್ತ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೭೨೭. ಅರಿಗೆ ನಿಲುಕದ ಬ್ರಹ್ಮವೆ ನೀನಾರಿಸಿ ನೋಡಿದರೆ ಹುರಿಳಿಲ್ಲ ನೋಡಾ ಮರುಳುಮಾನವಾ. ಅರಿಗೆಂಬಲ್ಲಿ ಜೀವಭಾವ, ಅರಿಸಿದೆನೆಂಬಲ್ಲಿ ಅಹಂಭಾವ. ಅರಿಗೆಂಬುದು ಅರಿಸಿದೆನೆಂಬುದು ಅಳಿದರೆ ಅದೆ ಪರಬ್ರಹ್ಮ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೭೨೮. ಯೋಗಿಯ ಹೊಲಬು ಯೋಗಿಯಾದವಂಗಲ್ಲದೆ ಇತರ ನರಂಗೆ ಸಾಧಿಸಬಾರದು ಕೇಳಯ್ಯಾ! ಧಾತುವಾದವದು ರಸವಾದಿಯಾ

ದವಂಗಲ್ಲದೆ ಇತರ ನರಂಗದು ಸಾಧಿಸಬಾರದು ಕೇಳಯ್ಯ! ನೋಡಿ ಮಾಡುವದಾದಡೆ ಭವವೆಲ್ಲಿಹುದು ದರಿದ್ರವೆಲ್ಲಿಹುದು ಹೇಳಯ್ಯ ಕಪಿಲ ಸಿದ್ಧಯ್ಯ?

೭೨೯. ಯೋಗವ ಸಾಧಿಸಿದನವನೊಬ್ಬ ನಿಜಗುಣ; ಯೋಗವ ಸಾಧಿಸಿದನವನೊಬ್ಬ ವೃಷಭಯೋಗೀಶ್ವರ; ಯೋಗವ ಸಾಧಿಸಿದನವನೊಬ್ಬ ಶಿವನಾಗಮಯ್ಯ; ಯೋಗವ ಸಾಧಿಸಿದೆ ನಾನೊಬ್ಬ ಕಪಿಲಸಿದ್ಧಮಲ್ಲಿಕಾ ರ್ಜುನನಲ್ಲಿ ಕೂಡುವ ಯೋಗವ.

೭೩೦. ಮೂರು ಗುಂಡಿನ ಒಲೆಯಲ್ಲಿ ಮೂರಾರಿ ಮೂರು ರೀತಿಯ ಪಾಕವ ಮಾಡುತ್ತಾನೆ ನೋಡಾ! ಆ ಪಾಕ ಪಕ್ವವಾಗದು. ಈ ವಿಚಿತ್ರವ ನೋಡಿ ನಿಬ್ಬೆರಗಾದೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೭೩೧. ಅಯ್ಯಗಳ ರುದ್ರಾಕ್ಷಿ ಕೊಟ್ಟಲ್ಲಿ ಫಲವಲ್ಲದೆ ಸುಮ್ಮನೆ ಧರಿಸಿದಲ್ಲಿ ಫಲವಿಲ್ಲ ನೋಡಾ! ಭಕ್ತನ ಪದಾರ್ಥ ನೀಡಿದಲ್ಲಿ ಫಲವ ಲ್ಲದೆ ಬೇಡಿ ರುಚಿಸಿದಲ್ಲಿ ಫಲವಿಲ್ಲ ನೋಡಾ. ನಿನ್ನರಿವು ನಾನರಿತಲ್ಲಿ ಫಲ ವಲ್ಲದೆ ಅರುಹಿಸಿದಲ್ಲಿ ಫಲವಿಲ್ಲ. ಅಹುದೆಂಬುದ ನೀತಿ ಬಲ್ಲೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೭೩೨. ಉದ್ದೊಂದು ಕಲ್ಲೊಳು ಪ್ರಸಿದ್ಧವಾಗಿ ಮುಗ್ಧನ ಕಂಡೆ. ಆ ಮುಗ್ಧ ಮಾತಾಡನು. ಮಾತಾಡದೆ ಸುಮ್ಮನಿರನು. ಆತನ ಸೊಮ್ಮು ಅರಿಯದು. ಅರಿಯಬೇಕಾದರೆ ಕರಣಗಳ ಒಡನಾಟ ಆಗಬಾರದು ನೋಡೈ ಕಪಿಲಸಿದ್ಧಮಲ್ಲಿಕಾರ್ಜುನಾ.

೭೩೩. ಕಲ್ಲುದೇವರಲ್ಲಿ ವಲ್ಲಭನಿದ್ದಾನೆಂದು ಲಲ್ಲೆಗರಿಯ ಬೇಡ. ಖುಲ್ಲತನದಿಂದೊಮ್ಮೆ ಅರಿಯಬಲ್ಲಡೆ ಕಪಿಲಸಿದ್ಧ ಮಲ್ಲಿಕಾರ್ಜುನ ಶರಣರ ಪಾದದಲ್ಲಿ ತಲ್ಲೀಯವಾಗಾ ಕಲ್ಲಯ್ಯ.

೭೩೪. ಮಣಿ ಮೂರರಲ್ಲಿ ಗುಣತ್ರಯಾತೀತನ ಕಂಡೆ. ಗುಣತ್ರ ಯಾತೀತನಲ್ಲಿ ಹವಣಿಸಬಾರದ ಆನಂದ ಯೋಗವ ಕಂಡೆ. ಆ ಆನಂದ ಯೋಗವ ಸಾಧಿಸಬಾರದು ಸಾಧಿಸಬಾರದು ಮತ್ತೆ ಭವಭವದ ದಾವಾನಲ ಕಪಿಲಸಿದ್ಧಮಲ್ಲಿಕಾರ್ಜುನಾ.

೭೩೫. ಮೂರು ಗುಣ ಮುರಿ ಮುರಿದು ಮೂರಕ್ಕೆ ತಂದು ಮುರಿ ದಿಟ್ಟಿತ್ತು ನೋಡಾ! ಮಾರಹರ ಪಾದ ಪದ್ಮ ಭ್ರಮರ ಮೂರು ಗುಣ

ದಂತಾಚರಿಸಬಾರದು. ಮೂರು ಗುಣವ ಬಿಡಬಾರದು. ಮೂರರಿಂದಾ ಲಿಂಗವ ದಾಂಟಿ ಮೂರರಲ್ಲಿ ಐಕ್ಯವ ನೋಡಿ ಪುರಾರಿ ಪರಮಾತ್ಮ ಕಪಿಲಸಿದ್ಧಮಲ್ಲಿಕಾರ್ಜುನಶಾನೆ ನೋಡಾ ಮಾರಯ್ಯಾ.

೭೩೬. ಮಂಚ ಒಂದರಲ್ಲಿ ಕಂಚುಕಿ ಸಹ ಮೂರ್ತಿವ ಮಾಡಿದ್ದಾನೆ. ಆ ಮೂರ್ತಿ ಹಂಚು ಹಂಚಿನಲ್ಲಿ ಕಂಚುಕಿಯಾಗಿದ್ದಾನೆ. ಆ ಮಂಚ ಈ ಹಂಚು ಕಂಚುಕಿಯರಿಯಬಲ್ಲಡೆ ಸಂಚಿತ ತ್ರಯ ಒಡಕ ಹಂಚು ನೋಡಾ ಪ್ರಪಂಚಹರ ಪಂಚಮುಖ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೩೭. ಕುಂಬಾರನ ಆವಿಗೆಯಲ್ಲಿ ಕುಂಬಾರನಿಲ್ಲ. ಕಂಬಾರನ ಕಲಶಗಳಲ್ಲಿ ಕಂಬಾರನಿಲ್ಲ. ಕಲಶಾವಿಗೆಗಳಲ್ಲಿ ಅಸ್ತಿತ್ವ ಉಂಟಾಗಿಹ ಕುಂಬಾರ ಕಂಬಾರನಂತಿಪ್ಪ ನೋಡಾ ಈ ಪ್ರಪಂಚದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೩೮. ಬೀಜ ಒಂದರಲ್ಲಿ ಸೋಜಿಗದ ಮೂರುತಿ ಮಾಡುವ ಬುದ್ಧಿಯೊಳೈದಾನೆ ನೋಡವ್ವಾ! ಬೀಜವ ನೋಡಿದರೆ ತಾನು ಬೀಜ ಆದರಲ್ಲಿಯು ಸೋಜಿಗನು ತಾನು ಮಾಡುವ ಬುದ್ಧಿ ತಾ ಎನಬಾರದು ಮಾಯೆ ಎನಬಾರದು. ಇವರೀರ್ವರಲ್ಲಿ ಜಾಡು ಇಟ್ಟು ಚಲಿಸುತ್ತದೆ ನೋಡವ್ವಾ ಕಪಿಲಸಿದ್ದ ಮಲ್ಲಿಕಾರ್ಜುನನೆಂಬ ಮಹಾ ವಸ್ತುವವ್ವಾ.

೭೩೯. ಸಾಧಿಸಲಸಾಧ್ಯ ನೋಡಾ. ಸಾಧಿಸಬಾರದ ವಸ್ತುವ ಸಾಧಿಸಲಸಾಧ್ಯ ನೋಡಾ. ಸಾಧಿಸಬಾರದ ಮಹಾಜ್ಞಾನವ ಸಾಧಿಸಲಸಾಧ್ಯ ನೋಡಾ. ಸಾಧಿಸಬಾರದ ಕಪಿಲ ಸಿದ್ಧಮಲ್ಲಿಕಾರ್ಜುನನಲ್ಲಿ ನಿರ್ವಂಚಕತ್ವವ.

೭೪೦. ಅವಸ್ಥಾ ತ್ರಯ ಜೀವಂಗಾದ ಬಳಿಕ ಜೀವವೆಂಬುದು ಪರಮಾತ್ಮ. ಪರಮಾತ್ಮಂಗವಸ್ಥಾತ್ರಯವೆಂದ ಬಳಿಕ ಜನನ ಮರಣ ಕ್ಕೊಳಗಾಯಿತ್ತು. ಜೀವಗಲ್ಲ, ಪರಮಾತ್ಮಗಲ್ಲ, ಅಂತರಾತ್ಮಗಲ್ಲ. ಆಗುವ ಅವಸ್ಥೆ ಮಾಯಾಶಕ್ತಿಗೆ ಕಪಿಲ ಸಿದ್ಧಮಲ್ಲಿಕಾರ್ಜುನಾ.

೭೪೧. ಪಂಚವರ್ಣದ ಗಿಳಿಯೊಂದು ಪ್ರಪಂಚ ರಚನೆಗೆ ಬಂದು ಭವಬ್ರಹ್ಮವೆಂಬುತ್ತಿದೆ. ಆ ಗಿಳಿಯ ಮೂರು ಮನೆಯ ಪಿಂಜರದಲ್ಲಿ ಕೂತು ಕುರುಷ್ವ ಲಿಂಗ ಪೂಜಾಂ ಲಿಂಗ ಪೂಜಾಂ ಎಂಬುತ್ತಿದೆ. ಆ

ಗಿಳಿಯು ವಚನವ ಕೇಳಿದಾತ ತನಗೆ ಸುಖ ಗಿಳಿಗೆ ಸುಖ ಕೇಳದವಂಗೆ ಸುಖವಿಲ್ಲ. ಹೇಳಿದಾತಂಗೆಯು ಸುಖವಿಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೪೨. ಒಣಗಿದ ಮರವದು ಭೂಮಿಯಲ್ಲಿ ಲೀನ ನೋಡಾ! ಒಣಗದ ಮರವದು ಭೂಮಿಯಲ್ಲಿ ಲೀನ ನೋಡಾ. ತಿಳಿಯದ ಯೋಗಿಯು ಲಯವಿಲ್ಲೆ. ಸ್ವರ್ಗಕ್ಕೆ ಹೋದೆನೆಂಬುದು ಗೊಡ್ಡು ಹುಸಿ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೪೩. ಮನದಲ್ಲಿಲ್ಲದ ಮಹಂತರು ಮನದಲ್ಲಿ ಘನಗೊಳಿಸಬಾರದ ಅಂಗನೆಯರಲ್ಲಿ ಮನದಲ್ಲಿಲ್ಲದ ಕಾಯದಲಿಲ್ಲದ ಮಹಂತರ ಕಂಡರೆ ಎನ್ನ ಮನ ಮನೋಹರವಾಯಿತ್ತಯ್ಯ ಮಹಾದೇವ ಮದನ ಮರ್ದನ ಮಹಾಂತ ಮಹಿಮಾಶಾಲಿ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೪೪. ತಾನೊಮ್ಮೆ ಸ್ಥೂಲಕ್ಕೆ ಬಂದ ಬಳಿಕ ಆತನ ನಾವು ಒಮ್ಮೆ ಸೊಮ್ಮುಗೊಳಿಸಬೇಕು. ತಾನೊಮ್ಮೆ ಸಿದ್ಧನಾಗಿ ನಿಂದ ಬಳಿಕ ಕಪಿಲಸಿದ್ಧ ಮಲ್ಲಿಕಾರ್ಜುನನ ಕೀಲ ತಿಳಸಬೇಕು ಕೇದಾರಯ್ಯ.

೭೪೫. ಆವ ಜ್ಞಾನಿಯಾದರೇನು? ದೇಹಾವಸಾನದಲ್ಲಿಯು ಭಾವದಂತೆ ತಪ್ಪಲರಿಯದು ನೋಡಾ! ಆವ ಜ್ಞಾನಿಯಾದರೇನು ನೋಡಾ? ಭಾವವೆಂಬುದು ಜನ್ಮಕ್ಕೆ ಈಡು. ನಿರ್ಭಾವವೆಂಬುದು ಜನ್ಮಕ್ಕೆ ಕಾಡುಗಿಚ್ಚು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೪೬. ಯಥಾ ಭಾವಸ್ಥತಾ ದೇವ ಎಂದ ಬಳಿಕ ದೇವರ ಬಯಲ ಭಾವ ತನ್ನಲ್ಲಿ ಇಂಬುಗೊಂಡೊಡೆ ಮುಕ್ತಿದೇವ ರೀತಿಯೊಂದು ತನ್ನ ರೀತಿಯೊಂದಾದ ಬಳಿಕ ಘಟಿಸದು ಕಪಿಲಸಿದ್ಧ ಮಲ್ಲಿಕಾರ್ಜುನನ ಐಕ್ಯವು.

೭೪೭. ಆಕಾರವಿಲ್ಲದ ಮೂರ್ತಿಯು ಸಾಕಾರಕ್ಕೆ ತಂದು ಪೂಜಿಸಿದೆ ನೋಡಾ ಮನವೆ. ಆಕಾರದ ಮೂರ್ತಿಯು ನಿರಾಕಾರಕ್ಕೆ ತಂದು ಪೂಜಿಸಲರಿಯೆ ನೋಡಾ ಮನವೆ. ಯದೃಷ್ಟಂ ತನ್ನಷ್ಟವೆಂದ ಬಳಿಕ ನಿರಾಕಾರ ನಿಜ ನಿರ್ವಯಲವೆ ಸ್ಥಿರವೆಂದು ನಂಬು ಮನವೆ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ.

೭೪೮. ಆಚಾರವಿಲ್ಲದವನ ಗುರುವು ಕಂಡರೆ ವಿಚಾರಿಸಿ ನೋಡನು ಜ್ಞಾನಾಜ್ಞಾನದಲ್ಲಿ ಆಚಾರವಿಲ್ಲದ ಗುರುವು ಆಚಾರವಿಲ್ಲದ ಶಿಷ್ಯ ಇವರೀ

ರ್ವರು ಚರಿಸಿ ಬೆಳಗಿನ ಭವಕ್ಕೆ ಗುರಿಯಾದರು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವೆ.

೭೪೯. ಲಿಂಗವಂತರು ತಾವಾದ ಬಳಿಕ ಅಂಗನೆಯರ ನಡೆ ನುಡಿಗೊಮ್ಮೆ ಲಿಂಗದ ರಾಣಿಯರೆಂದು ಭಾವಿಸಬೇಕು. ಲಿಂಗವಂತರು ತಾವಾದ ಬಳಿಕ ಅನುಭವ ವಚನಗಳ ಹಾಡಿ ಸುಖದುಃಖಂಗಳಿಗಭೇದ್ಯವಾಗಿರಬೇಕು. ಲಿಂಗವಂತರು ತಾವಾದ ಬಳಿಕ ಜಂಗಮ ಪೂಜಿಸಿ ಲಿಂಗೈಕ್ಯ ಸುಖಿಗಳಾಗಿರಬೇಕು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೫೦. ಸರ್ವರು ಲಿಂಗವಂತರೆಂದು ಮನದಲ್ಲಿ ಭಾವಿಸಿ ನಡೆಯಬೇಕಲ್ಲದೆ ನಡೆನುಡಿಯಲ್ಲಿ ಭಾವಿಸಿ ನಡೆಯಬಾರದು ನೋಡಯ್ಯ! ಸರ್ವರು ಲಿಂಗವಂತರೆಂದು ಭಾವಿಸಿದಲ್ಲಿ ಪೂರೈಸಗೊಳಬೇಕಲ್ಲದೆ ಪುರಹರ ಕಪಿಲಸಿದ್ಧ ಮಲ್ಲಿಕಾರ್ಜುನನ ಮಂದಿರ ನಿವಾಸಿಗಳೆಂದು ಭಾವಿಸಬಾರದು ನೋಡಯ್ಯ.

೭೫೧. ಶ್ರೀಶೈಲದ ಮಹಿಮೆಯದು ಕರ್ಣಾಭರಣ ಶ್ರೀಶೈಲದ ಮಹಿಮೆಯದು ಸಾಧಿಸುವರೆ ಬಹು ವೈವರ್ಣ್ಯ ಶ್ರೀಶೈಲದ ಮಹಿಮೆಯದು ಶ್ರೀಶೈಲದಲ್ಲಿ ನಿನ್ನ ಮಹಿಮೆ ಮೂಲೋಕವೆಲ್ಲ ಇಂಬುಗೊಂಡಿತ್ತು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೭೫೨. ಎಲ್ಲರು ತಪವ ಮಾಡಿದರು ನಮ್ಮ ಶ್ರೀಶೈಲನ ತಪದಂತೆ ತಪವ ಓರ್ವರನು ಕಾಣೆ. ಎಲ್ಲರು ಲಿಂಗವ ಪೂಜಿಸಿದರು ನಮ್ಮ ವ್ಮನವರ ಪೂಜೆಯಂತೋರ್ವರನು ಕಾಣೆ. ಎಲ್ಲರು ಮಹಿಮೆಯ ಮಾಡಿದರು ನಮ್ಮ ಶ್ರೀಶೈಲ ವಲ್ಲಭ ಕಪಿಲಸಿದ್ಧಮಲ್ಲನಂತೋರ್ವರನು ಕಾಣೆ ಬೊಮ್ಮಣ್ಣಾ.

೭೫೩. ಜನ್ಮವನೊಮ್ಮೆ ಧರಿಸಿದ ಬಳಿಕ ಜನನ ವಿನಾಶ ವಿಗ್ರಹ ಮೂರ್ತಿಯ ಪೂಜಿಸಲೆಬೇಕು. ಜನ್ಮವನೊಮ್ಮೆ ಧರಿಸಿದ ಬಳಿಕ ಶ್ರೀಶೈಲದ ಮಹಿಮೆಯ ಸಾಧಿಸಿ ನೋಡಲೆಬೇಕ. ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೫೪. ಭಕ್ತಿಯ ಲಿಂಗ ಪೂಜೆಯಾಗಿ ಅಳವಡಿಸಿಕೊಂಡ ಬಸವೇಶಾ, ಜ್ಞಾನ, ಕ್ರಿಯೆ ಲಿಂಗಪೂಜೆಯಾಗಿ ಅಳವಡಿಸಿಕೊಂಡ ಚನ್ನಬಸವೇಶಾ. ವೈರಾಗ್ಯವೆ ಲಿಂಗಪೂಜೆಯಾಗಿ ಅಳವಡಿಸಿಕೊಂಡನಲ್ಲಮಪ್ರಭು.

ಅನುಭಾವವೇ ಲಿಂಗಪೂಜೆಯಾಗಿ ಅಳವಡಿಸಕೊಂಡ ನಿಮ್ಮ ಬಾಲಕೇಶ ಕಪಿಲಸಿದ್ಧಮಲ್ಲೇಶ ವ್ಯೋಮಕೇಶ ನಾಶಪಾಶಾ.

೭೫೫. ಭವ ಭರ್ಗ ಭೀಮ ನೀಲಲೋಹಿತ ವಿರೂಪಾಕ್ಷನೆನ್ನು ಮನವೆ. ನೀಲಕಂಠ ಉಮಾಪತಿ ದಯಾಳು ದಯಾಸಾಗರನೆನ್ನು ಮನವೆ. ಉಗ್ರ ಕಪರ್ದಿ ಕೈಲಾಸವಾಸಿ ಶಿತಿಕಂಠ ಫಾಳಲೋಚನನೆನ್ನು ಮನವೆ. ಕಾಮಾರಿ ಕಾಲಾರಿ ಪುರಾರಿ ಪಾಪಾರಿ ಕಪಿಲ ಸಿದ್ಧಮಲ್ಲಿಕಾರ್ಜುನನೆನ್ನು ಮನವೆ ಪ್ರಾತಃಕಾಲದಲ್ಲಿ.

೭೫೬. ವೇದವೇದಗಳೆಲ್ಲ ಶಿವನ ಹೊಗಳಿ ನಿರ್ಮಲವಾದವು ನೋಡಾ! ಓಂ ನಮಃ ಸೋಮಾಯ ಚ ರುದ್ರಾಯ ಚ ವೆಂದು ವೇದ ವಾಕ್ಯ ನೋಡಾ. ನಮಸ್ತಾಮ್ರಾಯ ಚಾರುಣಾಯ ಚ ಎಂದು ಪಂಡಿತ ಮುಖ ಪ್ರಸಿದ್ಧ ನೋಡಾ! ನಮಃ ಶಂಗಾಯ ಚ ಪಶುಪತಯೆ ಚ ಎಂದು ವೇದಾಧ್ಯಾಯಿಗಳಗರಿಕೆ ನೋಡಾ! ನಮಃಶಿವಾಯ ಚ ಶಿವ ತರಾಯ ಚ ಎಂದು ಕಪಿಲ ಸಿದ್ಧ ಮಲ್ಲಿಕಾರ್ಜುನನ ಪಂಚಮುಖ ದಲ್ಲಿ ನಿತ್ಯ ನಿತ್ಯ ಘೋಷ ನೋಡಾ ಕೇದಾರಯ್ಯಾ.

೭೫೭. ನೀಲ ಲೋಹಿತ ಗಣೇಶ್ವರಾಯ, ಕಾಲ ಲೋಹಿತ ಗಣೇಶ್ವರಾಯ, ಕಪಾಲಮೂಲಾಧಾರ ಗಣೇಶ್ವರಾಯ, ಮಾರಹರ ಗಣೇಶ್ವರಾಯ, ವೃಷಾಂಕವಾಹನ ಗಣೇಶ್ವರಾಯ, ಜಗದಂಬಾಸ್ವರೂಪ ಗಣೇಶ್ವರಾಯ, ಕಾಲಕಂಠ ಗಣೇಶ್ವರಾಯ, ಪಾರ್ವತೀ ಧ್ಯಾನಾಸಕ್ತಗಣೇಶ್ವರಾಯ, ಸೋಮವಿಭೂಷಣಗಣೇಶ್ವರಾಯ, ಕಾಲಕಂಠ ಗಣೇಶ್ವರಾಯ, ಕುಮಾರಪ್ರೀತ ಗಣೇಶ್ವರಾಯ, ವೀರಭದ್ರಗಣೇಶ್ವರಾಯ, ವ್ಯಾಲಭೂಷಣ ಗಣೇಶ್ವರಾಯ, ಶಾಂಭವ ಮುನೀಶ್ವರಗಣೇಶ್ವರಾಯ, ವೃಷಭಯೋಗೀಶ್ವರ ಗಣೇಶ್ವರಾಯ, ನಮೋನಮಃ ಶಂಕರ ಗಣೇಶ್ವರಾಯ, ನಮೋ ನಮಃ ಕಪಿಲಸಿದ್ಧಮಲ್ಲಿಕಾರ್ಜುನಾಯ ಮಹಾದೇವಾಯ ನಮೋನಮಃ.

ಮತ್ತು ಸಿದ್ಧರಾಮೇಶ್ವರ ದೇವರು ಕೈಲಾಸದಲ್ಲಿ ಅಮ್ಮನವರ ಮಂದಿರದಲ್ಲಿ ಹೋಗಿ ಹಾಡಿದ ವಚನ ||

೭೫೮. ಎಲ್ಲರು ಶಿವಮಂತ್ರವ ಜಪಿಸುವದಕ್ಕಿಂತ ಎಮ್ಮಮ್ಮನವರ ಮಂತ್ರವ ಜಪಿಸಿ ಸೇವೆಯಲ್ಲಿರಲಾರರು ನೋಡಾ! ಮನು ಮುನೀಶ್ವರರು ಎಲ್ಲರು ಶಿವಮಂತ್ರವ ಜಪಿಸುವದಕ್ಕಿಂತ ಎಮ್ಮಮ್ಮನ ಮಂತ್ರ

ಸರ್ವಮಂಗಲಾಯೈ ಶಿವಾಯೈ ಜಗದಂಬಾಯೈ ಜಗದ್ವಂದ್ಯ ಜಗದಾಧಾರಾಯೈ ನಮೊ ನಮಃ ಎನ್ನರು ನೋಡಾ ಕಪಿಲ ಸಿದ್ಧ ಮಲ್ಲಿಕಾರ್ಜುನ ಮಹಾಪ್ರಮಥರು.

೭೫೯. ಐದಕ್ಷರವವು ಎಮ್ಮವ್ವನವರು ಮುಂದಣ ಅಕ್ಷರವದು ಜಗಜ್ಜನಕನದು ಮುಂದೊಂದು ತಾರೆ ಮುಂದೊಂದು ತಾರೆ ಇಡಲದ ತೋರುವಳೀ ಸ್ಥಾನಮೀ ಸಂಪದ್ವೈಭವ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೬೦. ಎನ್ನ ರೋಮಂಗಳೆಲ್ಲ ನಯನಂಗಳಾದಡೆ ಸಾಲ್ವವು ನೋಡಾ! ಜಗದಂಬೆಯ ಪಾದ ಪಂಕಜ ದರ್ಶನಕ್ಕೆ ಎನ್ನ ನಯನಂಗಳೆಲ್ಲ ಜ್ಞಾನಚಕ್ಷುಗಳಾದಡೆ ಸಾಲ್ವವು ನೋಡಾ! ಜಗದಂಬೆಯ ಪಾದ ಪಂಕಜ ಧ್ಯಾನಕ್ಕೆ ಎನ್ನ ಜ್ಞಾನಚಕ್ಷುಗಳೆಲ್ಲ ಅಖಂಡಾದ್ವಯ ಏಕೋನೇತ್ರವಾದಡೆ ಕೂಡುವದು ನೋಡಾ! ಜಗದಂಬೆಯ ಪಾದ ಪಂಕಜದಲ್ಲಿ ಭಾವವು ಭವಹರ ಮುರಹರನು ಕಪಿಲಸಿದ್ಧ ಮಲ್ಲೇಂದ್ರಾ.

೭೬೧. ತಾನು ಧನವಂತನಾಗಬೇಕೆಂಬಾಶೆಯುಳ್ಳೊಡೆ ಜಪಿಸಿ ನೋಡಾ ಮಂತ್ರವ. ತಾನುಪೇಂದ್ರನಾಗಬೇಕೆಂಬಾಶೆಯುಳ್ಳೊಡೆ ಜಪಿಸಿ ನೋಡಾ ಶಕ್ತಿಮಂತ್ರವ. ತಾನು ಬ್ರಹ್ಮನಾಗಬೇಕೆಂಬ ಇಚ್ಛೆಯುಳ್ಳೊಡೆ ಜಪಿಸಿ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ ಮಹಾದೇವಿಯರ ಮಹಾಮಂತ್ರವ.

ಸಿದ್ಧರಾಮೇಶ್ವರ ದೇವರು ಅಮ್ಮನವರ ತೊಡೆಯಲ್ಲಿ ಮೂರ್ತವ ಮಾಡಿ ಹಾಡಿದ ವಚನ.

೭೬೨. ಭೋ ಜಗದಂಬಾ ಭೋ ಜಗದಂಬಾ ಮಮಾಂಬಾ ಎಂದು ನಂಬಿದೆ. ಭೋ ಸರ್ವ ಮಂಗಲಾ ಸರ್ವ ಮಂಗಲಾ ಎಂದು ನಂಬಿದೆ. ಭೋ ಅಂಬಾ ಮಮಾಂಬಾ ಎಂದು ನಂಬಿದೆ. ಭೋ ಕಪಿಲಸಿದ್ಧ ಮಲ್ಲಿಕಾರ್ಜುನ ಭೋ ನಿಮ್ಮ ಶಕ್ತಿ ನಿಮಗಾಧಾರವೆಂದು ನಂಬಿದೆ.

೭೬೩. ಯಥಾ ಷಡಕ್ಷರಿ ದೇವಿ ದೇವಯೋರ್ಮಂತ್ರ ಮೀರಿತಂ ಎಂದ ಬಳಿಕ ಷಡಕ್ಷರವೆಂಬುದು ಶಿವಮಂತ್ರ. ಪಂಚಾಕ್ಷರವೆಂಬುದು ಶಕ್ತಿಮಂತ್ರ. ಇದರಂತವನರಿಯಬಲ್ಲಡೆ ಗುರುವಿನಿಂವಲ್ಲದೆ ಪೆರ ನರರಿಂದಾಗದು ನೋಡಾ ಕಪಿಲಸಿದ್ಧಮಹಾಮಲ್ಲಿಕಾರ್ಜುನಾ.

೭೬೪. ಪಂಚಾಕ್ಷರವೆಂಬುದದು ಪಂಚ ಮುಖ ಪ್ರಸಾದ ನೋಡಾ ಬಸವಂಗೆ. ಪಂಚಾಕ್ಷರ ಮಂತ್ರವೆಂಬುದು ಮಹಾದೇವಿಯ ಪ್ರಸನ್ನತೆ ನೋಡಾ ಚನ್ನಬಸವಂಗೆ. ಪಂಚಾಕ್ಷರ ಮಂತ್ರವೆಂಬುದು ಪಂಚವಸ್ಥಾತೀತ ಪರವಸ್ತುವಿನಲ್ಲಿ ಮೇಳನ ನೋಡಾ ಪ್ರಭುದೇವಂಗೆ. ಪಂಚಾಕ್ಷರವೆಂಬುದು ಪಂಚವರ್ಷದ ಕುಮಾರಾವಸ್ಥೆ ನೋಡಾ ಸನತ್ಕುಮಾರಂಗೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೬೫. ಕೋಟಿ ಕೋಟಿ ಜನ್ಮವ ತಾಳಿ ಕೋಟಲೆಗೊಳಲುವದೇಕೆ? ಕೋಟಿಯೊಳಗರ್ಧ, ಅರ್ಧದೊಳಗರ್ಧ ನಾಟಿಸಿದೆ. ನಮಶ್ಶಿವಾಯ ಎಂದರೆ ಕೋಟಿ ಕೋಟಿ ನರಕಗಳೀಡಾಡಿ ಮಹಾದೇವಿಯರ ಮಂದಿರದ. ಕೋಟಿಯನೇರಿಸಿತ್ತು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೬೬. ಎಂಟು ಮಣಿಯ ಮನೆಯಲ್ಲಿ ಕಂಟಕವಿಲ್ಲದ ಮೂರ್ತಿ ತಾ ನಾಂಟ್ಯವ ಮಾಡುತ್ತದೆ ನೋಡಾ! ಆ ಎಂಟು ಮಣಿಯಲ್ಲಿ ತನ್ನಂಟವಿಲ್ಲದೆ ತಾ ಸ್ವತಂತ್ರ ನಾಟ್ಯನಾಗಿ ಆಡುತ್ತಿಹ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನನ ಮೂರ್ತಿಯೂ.

೭೬೭. ಜಾಗ್ರದಲ್ಲಿಹ ಮನುಷ್ಯಂಗೆ ಸ್ವಪ್ನ ಸುಷುಪ್ತಿ ಮಿಥ್ಯವೆಂಬುವದು ಪ್ರಸಿದ್ಧ. ಸ್ವಪ್ನದಲ್ಲಿಹ ಮನುಷ್ಯಂಗೆ ಸ್ವಪ್ನ ಸುಷುಪ್ತಿ ಎಂಬುವದು ತೋರಬಾರದು. ಸುಷುಪ್ತಿಯಲ್ಲಿ ಜಾಗ್ರ ಸ್ವಪ್ನವೆಂಬುದು ತಿಲಮಾತ್ರ ತಿಳಿಯಬಾರದು ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೭೬೮. ಪಂಚ ಕರ್ಣ ಕ್ರಿಯದಿಂದಲ್ಲದೆ ದೇಹದಿಂದರಿಯಬಾರದು. ಪಂಚೇಂದ್ರಿಯ ಪಂಚ ಮುಖದಿಂದಲ್ಲದೆ ಸ್ವತಂತ್ರ ತಿಳಿಯಬಾರದು ನೋಡಾ ಕಲ್ಲಯ್ಯ.

೭೬೯. ಮೀರಿದ ಮಹಾ ಮಂತ್ರವಿದೆಂದು ಕೂಗುವ ಅಷ್ಟಾದಶ ಪುರಾಣ ನೋಡಿ ನೀ ಕೂಗದಿರು ಮರುಳೆ. ಕಡೆಯಕ್ಷರದ ಅರ್ಥವದು ಕಾರಣಾತೀತ ವಸ್ತು ನೋಡಾ ಮರುಳೆ. ಆ ವಸ್ತುವಿಗೆ ನೀನಾಗಬೇಕೆಂಬುವದಕ್ಕೆ ನಮಃ ಎನ್ನು ಮರುಳೆ ಕಪಿಲಸಿದ್ಧಮಲ್ಲಿಕಾರ್ಜುನ ಮಹಾಲಿಂಗದಲ್ಲಿ.

೭೭೦. ಮನನ ಮಾಡಿದ ಮಹಾ ಪದವಿ ಕೊಟ್ಟಿತ್ತಯ್ಯ! ಮನನವರಿಯದ ಮಂತ್ರ ಮಂತ್ರದಲ್ಲಿಯ ವಸ್ತು. ಕೊಟ್ಟಿತ್ತಯ್ಯ. ಮಂತ್ರ

ದೇನು ಮನವೆ? ಕಪಿಲಸಿದ್ಧಮಲ್ಲಿಕಾರ್ಜುನನ ಧ್ಯಾನವೇನು ವಿಚಾರದಿಂ ವಿಶ್ವಾಸದಿಂದಗಣಿತ ಫಲ ಕೊಟ್ಟೆತ್ತಯ್ಯ.

೭೭೧. ಜಪವೇನು? ತಪವೇನು? ಸಾಧಿಸುವಾತಂಗದು ದುರ್ಲಭವಲ್ಲವೆ ಮನವೆ? ನೇಮವೇನು? ನಿತ್ಯವೇನು? ಸಾಧಿಸುವಾತಂಗದು ದುರ್ಲಭ ದೇವಾ. ಪೂಜೆಯ ಸೋಜಿಗತನದ ಮಹಾ ಮಹತ್ವವೇನು? ಸಾಧಿಸುವಾತಂಗದು ದುರ್ಲಭವಲ್ಲವೆ ಹೆ ದೇವಾ ಕಪಿಲಸಿದ್ಧಮಲ್ಲಿಕಾರ್ಜುನಾ.

೭೭೨. ತಾ ಜಿತೇಂದ್ರಿಯನಾಗಿ ಹಲ ಕೆಲವು ತಪಸ್ಸಿನಾಶೆ ತನಗೇಕಯ್ಯ? ತಾ ಪುರುಷನಾಗಲಾಗಿ ಅನ್ಯ ರಜತ ತಾಮ್ರ ಚಿನ್ನದಾಸೆ ತನಗೇಕಯ್ಯ? ತಾ ಜೀವನ್ಮುಕ್ತಿಯಾಗಲಾಗಿ ಭವದ ನಿಬಿಡದಾಸೆ ತನಗೇಕಯ್ಯ? ತಾ ಕಪಿಲಸಿದ್ಧಮಲ್ಲಿಕಾರ್ಜುನ ತಾನಾಗಲಾಗಿ ಮೂಲೋಕದ ಸುದ್ದಿಯಾಶೆ ತನಗೇಕಯ್ಯ ಕೇದಾರಯ್ಯ?

೭೭೩. ಲಿಂಗದ ಅಂಗವದು ಅಳವಡದಿರೆ ಸಂಗವ ಮಾಡು ಪುರಾತರ ಮನವೆ. ಕಂಗಳ ವರಿಯದಿರೆ ತಿಂಗಳಧರನ ಪೂಜಿಸು ಮನವೆ. ಲಿಂಗಾಂಗ ಸಮರಸವಾಗದಿರೆ ಗಂಗಾಧರ ಕಪಿಲ ಸಿದ್ಧಮಲ್ಲಿಕಾರ್ಜುನ ನೆನ್ನು ಮನವೆ.

೭೭೪. ಹುಣಚಿಯ ಮರದಲ್ಲೊಂದು ಹಣಿಚಿಯ ಬೆರಳಿಟ್ಟು ಹೋದಲ್ಲಿ ಆ ಹುಣಚಿಯ ಮರ ಹಣಚಿಯ ಮರವಾಗಿ ತಾ ಕಣಚಿ ಹೋದುದ ಕಂಡೆ. ಈ ಹುಣಚಿಯ ಹಣಚಿಯ ಹವಣವ ತಿಳಿದು ಅರಿಯಬಲ್ಲರೆ ಹಣೆಯ ಗಣ್ಣಿನ ಶರಣನೆಂಬೆ ನೋಡಾ ತ್ರಿಣಯನ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೭೫. ಕಾಡುವರೆ ಕೈ ಎರಡುಂಟೆ? ಬೇಡುವರೆ ಬಾಯಿ ಹರಿಯದುಂಟೆ? ಕಾಡಬಾರದು ಬೇಡಬಾರದು. ಕೂಡುವ ಕಾಲಕ್ಕೆ ತಾ ಕೂಡಲಿಕಬಾರದು ಕಾಣಾ ಗುರು ಚನ್ನಬಸವಣ್ಣನಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೭೬. ವ್ಯಾಕರಣವನೋದಿದಲ್ಲಿ ಶಬ್ದ ಶುದ್ಧಿಯಲ್ಲದೆ ಮನ ಶುದ್ಧವಾಗಿ ಜ್ಞಾನಶುದ್ಧಿಯಾಗದು. ಛಂದಸ್ಸವ ಸಾಧಿಸಿದಲ್ಲಿ ಕವಿತಾ ಶುದ್ಧಿಯಲ್ಲದೆ ಕವಿತೆಯ ಸಾಧಿಸಿ ವ್ಯಾಸನಂತೆ ಚಿರಂಜೀವಿಯಾಗನು. ಅಷ್ಟಾ

ದಶ ಪುರಾಣವ ಸಾಧಿಸಿದಲ್ಲಿ ವಾಕ್ಯದ್ಧಿಯಲ್ಲದೆ ಕಪಿಲಸಿದ್ಧ ಮಲ್ಲಿಕಾರ್ಜುನ ಮಹಾದೇವನ ದೇಹ ಸ್ವಭಾವ ಶುದ್ಧಿಯಾಗದು ನೋಡಾ ಮಡಿವಾಳಮಾಚಯ್ಯ.

೭೭೭. ರೇಖಾ ರೇಖಾ ಕೂಡಿದಲ್ಲಿ ಅಕ್ಷರವಾದವು. ಅಕ್ಷರಾಕ್ಷರ ಕೂಡಿದಲ್ಲಿ ಶಬ್ದವಾಯಿತ್ತು. ಶಬ್ದಾಶಬ್ದ ಕೂಡಿದಲ್ಲಿ ಗ್ರಂಥಾನ್ವಯವಾಯಿತ್ತು. ಅಕ್ಷರದಲ್ಲಿಲ್ಲ ಶಬ್ದದಲ್ಲಿಲ್ಲ. ಗ್ರಂಥಾನ್ವಯದಲ್ಲಿಲ್ಲ. ಏನೆಂಬುವದಿಲ್ಲ. ಮೊದಲೆ ಇಲ್ಲ. ಇಲ್ಲೆಂಬುವ ಅಹುದೆಂಬುವ ಉಭಯ ಶಬ್ದಕ್ಕೆ ತೋಪವಿಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ ಮಹಾ ಮಹಿಮನು.

೭೭೮. ದೀಪದಂತಿಹ ಜನ್ಮ ಬಂದುದು ತಿಳಿಯಬಾರದು ಹೋದುದು ತಿಳಿಯಬಾರದು ಮೇಘದಂತಿಹ ಜನ್ಮ ಬಂದುದು ತಿಳಿಯಬಾರದು ಹೋಹುದು ತಿಳಿಯಬಾರದು ಶಿಶುವಿನಂತಿಹ ಜನ್ಮ ಬದುಕುವದದು ತಿಳಿಯದು ಬದುಕಿ ಬಾಳೀತೆಂಬುವದು ತಿಳಿಯದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೭೯. ಸ್ವಪ್ನದಲ್ಲಿ ಪಾಶಬದ್ಧತ್ವಕ್ಕೆ ಸ್ವಪ್ನದಲ್ಲಿ ಬೇರ್ಪಡಿಸು ಕಂಡಾ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನ ಗುರುವೆ.

೭೮೦. ದಿನ ಒಂದರಲ್ಲಿ ವಾರ ಏಳು ನೋಡಾ. ಆ ಏಳು ವಾರಂಗಳೆಂಬುವವು ಕಲ್ಪಿತವಲ್ಲದೆ ದೃಷ್ಟಿಯನಿಟ್ಟು ನೋಡಬಾರದು ನೋಡಾ. ದೇವರೆಂಬುವದೊಂದರಲ್ಲಿ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ವಿರಾಟ್ಪುರುಷರೆಂಬುವದು ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೭೮೧. ಚೌಕೋಣೆಯ ಮಂಟಪದಲ್ಲಿ ಪಂಚ ಕೋಣೆಯ ದೇಹ ತ್ರಿಕೋಣೆಯಲ್ಲಿ ನಿಂತು ಸುಳಿವುತ್ತಿರ್ಪ. ಆ ತ್ರಿಕೋಣೆಗಳಿದ್ದಂತಿರ್ಪವೆಂಬುದು ಅರಿಯಬಾರದು. ಹೊತ್ತಿಗೊಮ್ಮೆ ಪರಿಪರಿಯಾಗಿ ಕೇಡುಗೊಂಡವು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ.

೭೮೨. ತಾನು ಮಾನವಂತನಾದರೆ ಅಹಂಕಾರದ ನಾಶದಲ್ಲಿ ಮರೆಯ ಮಾಡಿ ಕೊಂಡಿರ್ಪುದು ಬಹು ಕರ ಲೇಸಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

ಈ ವಚನವಂ ಕೇದಾರ ಗುರುಗಳು ಹಾವಿನಹಾಳ ಕಲ್ಲಯ್ಯ ಅಣ್ಣ ಬೊಮ್ಮಣ್ಣ ಮತ್ತೂ ಮಹಾಗಣಂಗಳು ಕೇಳಿ ದುಃಖಿತರಾಗಿ

ಎಲೈ ಸಿದ್ಧರಾಮೇಶ್ವರ ದೇವರೆ ನಿತ್ಯದಲ್ಲಿ ನೀವು ಹಾಡುವಂತೆ ಹಾಡ ಲಿಲ್ಲವೆಂದು ಕೇಳಿದಲ್ಲಿ ವಿಕಸಿತ ಮುಖರಾಗಿ ನುಡಿದ ವಚನ. ॥

೭೮೩. ಘಟವೆಂಬುದು ದಿಟವಲ್ಲ ನೋಡಾ ಕೇದಾರಯ್ಯ. ಪಟ ವೆಂಬುದು ದಿಟವಲ್ಲ ನೋಡಾ ಕಲ್ಲಯ್ಯ. ಮಾಡಿದ ಘಟ ನೆಯ್ದ ವಸ್ತ್ರ ಪಟಕಡಿ ಕಾಣಬಲ್ಲರೆ ಲಯುವೆಂಬುದೆಲ್ಲಿಹದು ಹೇಳಯ್ಯ ಕಪಿಲಸಿದ್ಧಮಲ್ಲಿ ಕಾರ್ಜುನನ ಸಾನ್ನಿಧ್ಯದಲ್ಲಿ?

೭೮೪. ಜೀವಾತ್ಮವೆಂಬುದು ಪಂಚ ಭೂತ ಮಯ ದೇಹವಾಶ್ರೈ ಸಿತ್ತು ನೋಡಾ. ಪರಮಾತ್ಮವೆಂಬುದು ಅಜಾಂಡ ನೂರಾರು ಒಳಗು ಮಾಡಿ ಅತ್ಯತಿಷ್ಠದ್ದಶಾಂಗುಲನೆನಿಸಿತ್ತು ನೋಡಾ. ಅಂತರಾತ್ಮವೆಂ ಬುದು ಜೀವಾತ್ಮವನಳಿದು ಪರಮಾತ್ಮನಲ್ಲಿ ಕೂಡುವ ಕೂಟವೆನಿಸಿತ್ತು. ಈ ಆತ್ಮತ್ರಯ ಕಡೆಗೆ ಕಪಿಲಸಿದ್ಧ ಮಲ್ಲಿಕಾರ್ಜುನನ ರೂಪು ಪ್ರಸಿದ್ಧ ನೋಡಾ ಕೇದಾರಯ್ಯ.

೭೮೫. ಶಿವಾ ಭವಾನಿ ರುದ್ರಾಣಿ ಶಿವೊ ಮಹೇಶ್ವರಃ ಶಂಭು ಎಂಬಲ್ಲಿ ಶಿವನ ನಮ್ಮವ್ವನ ನಾಮ ಒಂದೆ ನೋಡಾ. ವಿವೇಕ ದೃಷ್ಟಿ ಯಿಂದ ನೋಡಿದರೆ ಅದು ಶಿವಶಕ್ತಿ ಮಂತ್ರವಾಗಿ ಅರಿಯ ಬಂದಿತ್ತು ನೋಡಾ. ಓಂನಮಶ್ಶಿವಾಯ ನಮಶ್ಶಿವಾಯ ಎಂಬುಭಯ ಮಂತ್ರ ಒಂದೆ ಮಂತ್ರ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೭೮೬. ಪಂಚಾಕ್ಷರವೆಂಬುವದು ಶಿವನ ಪಂಚಾವಸ್ಥೆ ನೋಡಾ. ಪಂಚಾಕ್ಷರವೆಂಬುವದು ಪಂಚಾಚಾರ ಫಲದಾಯಕ ನೋಡಾ. ಪಂಚಾಕ್ಷರವೆಂಬುವದು ಪಂಚಮುಖ ಪಂಚಮುಖಿ ಮಹಾದೇವಿ ಕಪಿ ಲಸಿದ್ಧ ಮಲ್ಲಿಕಾರ್ಜುನನ ಪ್ರಸನ್ನತೆ ನೋಡಾ ಎಂದು ತಿಳುಹಿದ ಚನ್ನ ಬಸವಣ್ಣನ ಪಾದಕ್ಕೆ ನಮೊ ನಮೊ ಎಂಬೆ ನೋಡಾ ಮಡಿವಾಳ ಮಾಚಯ್ಯ.

೭೮೭. ಕಾಯ್ದ ಕರ್ಬುನ ನೀರೊಳಕೊಂಬಂತೆ ಬಿದ್ದ ಬಿಂದು ಭೂಮಿಯೊಳಕೊಂಬಂತೆ ನವನೀತ ಘೃತವನೊಳಕೊಂಬಂತೆ ವೀಳ್ಯ ರಸವನೊಳಕೊಂಬಂತೆ ಎನ್ನ ಕಾಯ ತನ್ನ ಕಾಯದಲ್ಲಿ ಒಳಕೊಂಬ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ ಮಹಾಶರಣನ.

೨೮೮. ಕಾಲು ಮೇಲು ಮಾಡಿ ಕೋಲು ಕೆಳಗೆ ಊರಿ ಕಾಲ ಕಾಲ ತಪಶ್ಚರ್ಯ ಮಾಡಿದರೆ ಕಾಲಾಂತಕ ನಿಲ್ಲ ನೋಡಾ. ದೇಶಕಾಲ ವಸ್ತುತ್ರಯವರಿದಲ್ಲಿ ಕಾಲಾರಿ ಕಾಲಕಾಲದಲ್ಲಿ ಕಾಲದೊಡಕನಾಗಿರುವ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೮೯. ವೇದವನೋದಿ ವೇದಾಧ್ಯಯನವ ಮಾಡಿಸಿದರೇನು? ಬ್ರಾಹ್ಮಣನಾಗಬಲ್ಲನೆ? ಬ್ರಹ್ಮವೀತ್ತುಗಳ ಶುಕ್ಲ ಶೋಣಿತದಿಂದ ಜನಿಸಿದರೇನು? ಬ್ರಾಹ್ಮಣನಾಗಬಲ್ಲನೆ? ಯಜನಾದ್ಯಷ್ಟಷಟ್ಕರ್ಮಂಗಳ ಬಿಡದೆ ಮಾಡಿದರೇನು? ಬ್ರಾಹ್ಮಣನಾಗಬಲ್ಲನೆ? ಬ್ರಹ್ಮ ಜಾನಾತಿ ಬ್ರಾಹ್ಮಣವೆಂಬ ವೇದವಾಕ್ಯವನರಿತು ಬ್ರಹ್ಮಭೂತನಾದಾತನೆ ಬ್ರಾಹ್ಮಣ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೯೦. ಗುಣದಿಂದ ಹಾರುವನಲ್ಲದೆ ಅಗಣಿತ ವಿದ್ಯಾಭ್ಯಾಸದಿಂದ ಹಾರುವನಲ್ಲ ನೋಡಾ. ಹಾರಬೇಕು ಮಲತ್ರಯಗಳ ಹಾರಬೇಕು ಸೃಷ್ಟಿ ಸ್ಥಿತಿ ಲಯವ ಹಾರಬೇಕು ಸರ್ಪಹಾರ ಕಪಿಲಸಿದ್ಧಮಲ್ಲಿಕಾರ್ಜುನನ ಆಹಾರದಲ್ಲಿ.

೨೯೧. ಶಿಷ್ಯನೆಂಬ ವನಕ್ಕೆ ವಸಂತ ನೋಡಾ ಗುರುವು. ಶಿಷ್ಯನೆಂಬ ತಿಮಿರಕ್ಕೆ ಜ್ಯೋತಿ ನೋಡಾ ಗುರುವು. ಶಿಷ್ಯನೆಂಬ ರಾತ್ರಿಗೆ ಸೂರ್ಯ ನೋಡಾ ಗುರುವು. ಶಿಷ್ಯನೆಂಬ ನನಗೆ ಪ್ರಕೃಷ್ಟ ಪ್ರಮಥ ಚಿಂತಾಮಣಿ ಚನ್ನಬಸವ ಗುರುವು ಕಪಿಲಸಿದ್ಧಮಲ್ಲಿಕಾರ್ಜುನಾ.

೨೯೨. ಕುಲದಿಂದಧಿಕವೆಂದು ಹೋರಾಡುವ ಅಣ್ಣಗಳಿರಾ ಕೇಳಿರಯ್ಯ! ಬ್ರಾಹ್ಮಣನವ ಮಧುವಯ್ಯ, ಚಂಡಾಲನವ ಹರಳಯ್ಯ, ದೂರ್ವಾಸನವ ಮುಚ್ಚಿಗ, ಊರ್ವಶಿ ಆಕೆಯು ದೇವಾಂಗನೆಯು, ಚಂಡಾಲನವ ಪಾರಾಶರ, ಕುಸುಮಗಂಧಿ ಆಕೆ ಕಬ್ಬಿಲಗಿತ್ತಿಯು, ಜಪತಸ್ತಪತೋಗುಣತಃ ಕಪಿಲಸಿದ್ಧಮಲ್ಲಿಕಾರ್ಜುನ ಕೇಳಾ ಕೇದಾರಯ್ಯ.

೨೯೩. ಜೀವಾತ್ಮಕ ಜೀವನಲ್ಲ. ಜೀವಾತ್ಮಕ ಶಿವನಲ್ಲ ಶಿವನಂತುವನರಿಯದೆ ಹೋದವು ವೇದಗಳು. ಜೀವನಂತುವನರಿತು ಹೋದರು ಮಹಾ ಮುನಿಗಳು. ಶಿವ ಜೀವಕ್ಕೆ ಭೇದವಿಲ್ಲೆಂಬುವರ ನಾ ನೋಡಲಾರೆನು ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೯೪. ಈ ರಚನೆ ಎಂಬುದು ಇಮ್ಮಡಿ ಮುಮ್ಮಡಿಯಿಂದಲ್ಲದೆ ಒಮ್ಮಡಿಯಿಂದಾಗದು. ಆದಿಯಲ್ಲಿ ಬ್ರಹ್ಮ, ಅನಾದಿಯಲ್ಲಿ ಏನೆಂಬು

ದಿಲ್ಲ. ಇತ್ತಲದು ಮಾಯಾಶಕ್ತಿಯಿಂ ಮಾಧವನ ಉತ್ಪತ್ತಿ. ಮಾಧವನು ತ್ಪತ್ತಿ ಮೂಲೋಕ ಮೀರಿತ್ತು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೯೫. ಕಾಜಿನ ಮಣಿ ಪಚ್ಚೆದಂದವಿರೆ ಕಾಜನ ಮಣಿಯು ಪ್ರಸಿದ್ಧ. ಲೋಕದ ಮಾನವ ಯೋಗಿಯಂತಿರೆ ಲೋಕದ ಮಾನವನೆ ಪ್ರಸಿದ್ಧ. ಬಾಹ್ಯವರ್ಣ ಜನ ಪ್ರಸಿದ್ಧವಲ್ಲದೆ ಕಪಿಲಸಿದ್ಧ ಮಲ್ಲಿಕಾರ್ಜುನನ ಚಿತ್ತಕ್ಕೆ ಪ್ರಸಿದ್ಧವಲ್ಲ.

೭೯೬. ಆಂದೋಲನದಲ್ಲಿಹ ರಾಜ ಶಿಸುವಿನಂತಿರಬಲ್ಲಡೆ ಅದು ಯೋಗಿಗೆ ಭೂಷಣ. ಸಂಧ್ಯಾಕಾಲದಲ್ಲಿಹ ಪ್ರಕಾಶದಂತೆ ವಿಷಯ ಸುಖ ವಿರಬಲ್ಲಡೆ ಅದು ಯೋಗಿಗೆ ಭೂಷಣ. ವಾರಾಂಗನೆಯಲ್ಲಿಹ ಪ್ರೀತಿಯಂ ತಿರಬಲ್ಲಡೆ ಅದು ಯೋಗಿಗೆ ಭೂಷಣ. ಪತಿವ್ರತೆಯಂತಿಹ ಭಕ್ತಿಯಂತಿರ ಬಲ್ಲಡೆ ಅದು ಯೋಗಿಗೆ ಭೂಷಣ, ಕಪಿಲಸಿದ್ಧ ಮಲ್ಲಿಕಾರ್ಜುನಂಗದು ಬಹು ತೋಷಣ ಕೇಳಾ ಮನವೆ.

೭೯೭. ಸಂಯೋಗವೆಂಬುದು ಪರಮೇಶ್ವರನ ಲೀಲೆಯದು. ಅಲ್ಲ ಅಲ್ಲೆಂಬಡೆ ಆ ಸಂಯೋಗದಿಂದವೆ ಜಗದುತ್ಪನ್ನ. ಉತ್ಪತ್ತಿ ನಾಶನಕ್ಕೆಯೂ ಸಂಯೋಗವೇ ಬೇಕು. ಆ ಸಂಯೋಗ ಸರಿಯೆ ಪ್ರಾರಬ್ಧ ವಳಿಯಿತ್ತೆಂ ಬರು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೯೮. ದೇಶವ ತಿರುಗಿದರೇನು? ಕಾಶೀ ರಾಮೇಶ್ವರ ಯಾತ್ರೆಯ ಮಾಡಿದರೇನು ಕೋಶತ್ರಯವರಿದು ದಾಂಟಿದನ್ನಕ್ಕ? ದೇಶವ ತಿರುಗಿದಲ್ಲಿ ಲಕ್ಷಣಾ ಲಕ್ಷಣಾವಲೋಕತ್ವವೆ ಪ್ರಾಪ್ತಿ. ಯಾತ್ರೆಯ ಮಾಡಿದಲ್ಲಿ ಮೂಢ ಜನಕ್ಕೆ ಸಾಧು ದೃಷ್ಟತ್ವವೆ ಪ್ರಾಪ್ತಿ. ಕೋಶತ್ರಯ ದಾಟಿದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನನ ಸ್ವಭಾವವೆ ಪ್ರಾಪ್ತಿ ನೋಡಾ ಕೇದಾರಯ್ಯಾ.

೭೯೯. ಏಕ ಪಂಜ್ತಿಯಲ್ಲಿ ತಾ ಭೋಜನ ಭೇದ ಮಾಡಬಾರದು. ಭೋಜನ ಭೇದ ಮಾಡಿದರೆಯು ತಾನೆಣಿಸಬಾರದು. ತಾನೆಣಿಸಿದಲ್ಲಿಯು ಅನ್ಯರಿಗೆಯು ತಿಳಿಯಬಾರದು. ಅನ್ಯರಿಗೆ ತಿಳಿದರೆಯು ಮನೆ ಬೇರಾಗ ಬಾರದು. ಮನೆ ಜೇರಾದರೆಯು ಮನ ಬೇರಾಗಬಾರದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೦೦. ಗುರುಸಾಹಿತ್ಯ ಚನ್ನಬಸವಣ್ಣಂಗಾಯಿತ್ತು. ಲಿಂಗಸಾಹಿತ್ಯ ಬಸವೇಶಂಗಾಯಿತ್ತು. ಜಂಗಮ ಸಾಹಿತ್ಯ ಅಲ್ಲಮದೇವಂಗಾಯಿತ್ತು ಪ್ರಸಾದ ಸಾಹಿತ್ಯ ಬಿಬ್ಬಿಬಾಚರಸಂಗಾಯಿತ್ತು. ಪಾದೋದಕ ಸಾಹಿತ್ಯ

ಹೊಡೆಹುಲ್ಲ ಬಂಕಯ್ಯಂಗಾಯಿತ್ತು, ಭಸ್ಮಸಾಹಿತ್ಯ ಅಕ್ಕನಾಗಮ್ಮಂಗಾಯಿತ್ತು, ರುದ್ರಾಕ್ಷಿ ಸಾಹಿತ್ಯ ಸರ್ವ ಪ್ರಮಥರಿಗಾಯಿತ್ತು, ಮಂತ್ರ ಸಾಹಿತ್ಯ ಅಜಗಣ್ಣಂಗಾಯಿತ್ತು, ಈ ಸರ್ವ ಸಾಹಿತ್ಯದವರ ಕಂಡರೆ ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯನಿವರೆ ಎಂದು ಎನ್ನ ಮನ ನಂಬಿತ್ತು ನೋಡಾ ಮಡಿವಾಳ ಮಾಚಯ್ಯ.

೮೦೧. ಸರ್ವರು ಜ್ಞಾನದಿಂದಲ್ಲದೆ ಮತ ಗೋತ್ರಾಭಿಮಾನದಿಂದ ಮೋಕ್ಷವಂತರಲ್ಲ ಕೇಳಾ. "ತಪಸಾ ಬ್ರಾಹ್ಮಣೊ ಜಾತಃ ವಿಶ್ವಾಮಿತ್ರೋ ಮಹಾ ಮುನಿಃ ತಪಸಾ ಬ್ರಾಹ್ಮಣೊ ಜಾತಃ ನಾರದೋ ಹಿ ಮಹಾ ಮುನಿಃ ತಪಸಾ ಬ್ರಾಹ್ಮಣೋ ಜಾತಃ ಅಗಸ್ತ್ಯೋ ಮುನಿಪುಂಗವಃ ತಪಸಾ ಬ್ರಾಹ್ಮಣೋ ಜಾತಃ ಪರಾಶರ ಮಹಾ ಮುನಿಃ ತಪಸಾ ಬ್ರಾಹ್ಮಣೋ ಜಾತಃ ದೂರ್ವಾಸಸ್ತು ಮಹಾ ಮುನಿಃ ತಪಸಾ ಬ್ರಾಹ್ಮಣೋ ಜಾತಃ ಭೃಗು ವ್ಯಾಸೋ ಹಿ ಮಾಂಡವ್ಯಃ" ಎಂಬುದು ಹುಸಿಯಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೦೨. ಕುಲದಲ್ಲಿಯೂ ಅಧಿಕ ಜ್ಞಾನದಲ್ಲಿಯೂ ಅಧಿಕನಾಗಲಾಗಿ ಆ ಕುಲೀನ ಜ್ಞಾನವಂತನಲ್ಲಿ ಸಮರಸ ಸಲ್ಲದು ನೋಡಾ ಗುರುವೆ. ಶಿವಶಕ್ತಿಯೆ ಸತ್ಕುಲ ಶಿವಧ್ಯಾನವೆ ಸತ್ಕುಲ ಶಿವಪೂಜೆಯೆ ಸತ್ಕುಲ ನೋಡಾ ಗುರುವೆ. ಕಥಾವರ್ಣವೆ ಸತ್ಕುಲ ಶಿವಗೋಷ್ಠಿಯೆ ಸತ್ಕುಲ ನೋಡಾ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನ ಗುರುವೆ.

೮೦೩. ಆಕಾರದ ಮೂರ್ತಿ ವರ್ಣಿಸಿಹೆನೆಂದರೆ ತೀರದು. ನಿರಾಕಾರದ ಮೂರ್ತಿ ವರ್ಣಿಸಿಹೆನೆಂದರೆ ಮೊದಲಿಗೆ ತೀರದು. ತೀರದು ಎಂದು ಶಬ್ದಮುಗ್ಧವಾಗಿರಬಾರದು ಬಾರದು ಕಪಿಲಸಿದ್ಧ ಮಲ್ಲಿಕಾರ್ಜುನ ಎನ ಬಹುದು ಮನವೆ.

೮೦೪. ಅಕ್ಷರತ್ರಯದ ಗುಂಡಿನಲ್ಲಿ ಸಕಲಾಕ್ಷರದ ಮೂರ್ತಿ ಮನೆಯ ಮಾಡಿಕೊಂಡಿದೆ. ಅಕ್ಷರವರಿಯಬಾರದು. ಅರಿದ ಬಳಿಕ . ಜನನ ಮರೆಯಬಾರದು. ಮರೆದ ಬಳಿಕಾಕ್ಷರದ ಧ್ಯಾನ ನೆಲೆಗೊಳಿಸಬಾರದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೦೫. ಸಾಂಬನಾಗಲಿ ಶಿವನೆ ತಾನಾಗಲಿ ಪಂಚಭೌತಿಕಕ್ಕೆ ಬಂದ ಬಳಿಕ ಕೇಡೆಂಬುವುದು ನಿಶ್ಚಯ. ಭೌತಿಕದಲ್ಲಿ ಕೇಡು ನಿಶ್ಚಯವಲ್ಲದೆ

ಮಹಾ ಅರುಹಿನಲ್ಲಿ ಕೇಡಿಲ್ಲ. "ತತ್ವಾತ್ಮಕಂ ವಪುರ್ದೇವೀ ನಾಶಾರ್ಥಂ ಕಾರಣಂ ದೃಢಂ" ಎಂಬುದು ಪುಸಿಯಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ ಮಹಾ ಗುರುವೆ.

೮೦೬. ಅಲಿಂಗಗಳ ಸಂಗ ಸಲ್ಲದೆಂದರೆ ಉದರದಲ್ಲಿಹ ಲಿಂಗವು ಲಿಂಗವಲ್ಲವೆ ಲಿಂಗಯ್ಯ? ಅಲಿಂಗಿಗಳ ಭೋಜನ ಸಲ್ಲದೆಂದರೆ ಪಶು ಪೃಥ್ವಿಗಳು ಅಂಗವಲ್ಲವೆ ಲಿಂಗಯ್ಯ? ಲಿಂಗಮಧ್ಯೆ ಜಗತ್ಸರ್ವಂ ಎಂದ ಬಳಿಕ ಲಿಂಗವಲ್ಲವೆ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗಯ್ಯ?

೮೦೭. ಮೇಲು ಮಾಡಿದ ನುಡಿಯಂತೆ ನಡೆಯಬೇಹಡೆ ಮೃಡ ಭಾವವಡಗಿರಬೇಕು. ಪ್ರಾಣಿಯಲ್ಲಿ ಅಡಗಿದ ಭಾವ ನಡಹಿಕೊಳ್ಳಬೇಕಾದರೆ ದೃಢ ಲಿಂಗಮೂರ್ತಿ ಧರಿಸ ಬಹುದೆ ದೇಹವಲ್ಲಿ? ಅರಿದು ಧರಿಸದೆ ಧರಿಸಿ ಅರಿಯದೆ ಇದ್ದವನ ಭಾವ ಬಯಲಲ್ಲಿಹ ದೀಪದಂತೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೦೮. ವಸ್ತು ನಿರಾಕಾರವೆಂದರೆ ಆಕಾರಕ್ಕೆ ಬರುವದೆ? ವಸ್ತು ನಿರ್ವಿಕಾರವೆಂದರೆ ವಿಕಾರಕ್ಕೆ ಬರುವದೆ? ವಸ್ತು ಉಭಯವೆಂದರೆ ಉಭಯ ಸಂದೇಹತ್ವವೆಂಬು ಅಳಿವುದೆ? ವಸ್ತುವಿನ ವ್ಯವಹಾರ ಆರಿಗೂ ಅರಿಯ ಬಾರದು ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗ ಉಭಯಾತೀತ ನೋಡಾ ಪ್ರಭುವೆ.

೮೦೯. ತೋರುವ ಜಗತ್ತು ಬ್ರಹ್ಮವೆಂದೊಮ್ಮೆ ವಾದಿಸುವೆ. ತೋರುವ ಜಗತ್ತು ಮಾಯೆ ಎಂದೊಮ್ಮೆ ವಾದಿಸುವೆ. ತೋರಿಯಡಗಿದಲ್ಲಿ ಮಾಯೆ ಎನಿಸಿತ್ತು. ತೋರಿ ತೋರಿದಲ್ಲಿ ಬ್ರಹ್ಮವೆನಿಸಿತ್ತು. ತೋರಿದಲ್ಲಿ ತೋರಿ ಕೆಡದಲ್ಲಿ ಏನೆಂದೆನಿಸದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೧೦. ನಿರ್ಗುಣ ಮಹಾದೇವನೆಂದ ಬಳಿಕ ಗುಣಹೀನನಲ್ಲವೆ? ಸಗುಣನವನು ತನ್ನರುವಿಗೆ ನಿರ್ಗುಣನವನು ಜಗಜ್ಜೀವಿಗಳಿಗೆ ಅರಿದರೆ ನಿರ್ಗುಣನಲ್ಲ ಸಗುಣ ಗುಣಾಗ್ರಗಣ್ಯ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೧೧. ಕನಕ ಒಂದರಲ್ಲಿ ಕಡಗ ಕಂಟಿಯಾದಂತೆ ಶಕುನ ಒಂದರಲ್ಲಿ ಶಕುನ ಬೇರಾದಂತೆ ಘನಕೆ ಘನವಾದ ಪರವಸ್ತುವಿನಲ್ಲಿ ಜನನ ವಾಯಿತ್ತು ಮಜೋಕ್ಷದ ಮಹಾಲಿಂಗ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೧೨. ಮೃತ್ತಿಕೆಯೊಂದರಲ್ಲಿ ಮಡಿಕೆಗಳು ನೂರಾರು. ಮನ ಒಂದರಲ್ಲಿ ಕ್ರಿಯಾದಿಗಳು ನೂರಾರು. ಜನಕ ಒಬ್ಬನಲ್ಲಿ ಸಂತತಿಗಳು ನೂರಾರು. ಘನಕ್ಕೆ ಘನವಾದ ಚಿನ್ಮಯ ಕಪಿಲಸಿದ್ಧ ಮಲ್ಲಿಕಾರ್ಜುನ ನಲ್ಲಿ ಜಗತ್ತುಗಳು ನೂರಾರು.

೮೧೩. ಸರ್ವಂ ಖಲ್ವಿದಂ ಬ್ರಹ್ಮವೆಂಬುದ ಅರಿದ ಬಳಿಕ ಲಿಂಗ ದಲ್ಲಿ ಶಿಲೆಯ ಭಾವನರಸಲುಂಟೆ? ಸರ್ವಂ ಖಲ್ವಿದಂ ಬ್ರಹ್ಮವೆಂದರಿದ ಬಳಿಕ ಗುರುವಿನಲ್ಲಿ ನರನ ಭಾವನರಸಲುಂಟೆ? ಸರ್ವಂ ಖಲ್ವಿದಂ ಬ್ರಹ್ಮವೆಂದರಿದ ಬಳಿಕ ಮಾಯಾಮಯ ಸಂಸಾರವೆಂದರಸಲುಂಟೆ? ಸರ್ವಂ ಬ್ರಹ್ಮವೆಂದರಿದ ಬಳಿಕ ನಾನು ಜೀವಿ ನಾನು ಜಡ ನಾನು ಬದ್ಧನೆಂದರಸಲುಂಟೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ?

೮೧೪ ಅರಿದಾಚರಿಸುವವನಾಚರಣೆ ಬ್ರಹ್ಮಮಯ. ಅರಿಯದವ ನಾಚರಣೆ ಮಾಯಾಮಯ. ಅರಿಯಬೇಕು ಅರಿಯಬೇಕು. ಗುರುಮುಖ ದಿಂದಾರು ಪರಶಿವನೆಂಬುದನರಿಯದವನರುಹು ಸ್ವಪ್ನದಲ್ಲಿಯ ರತಿಯಂತೆ ರತಿಯಲ್ಲಿಯ ರಾಜಸುತನಂತೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೧೫. ಲೋಕದಲ್ಲಿಹ ನೂರಾರು ಗುರುಗಳ ನೋಡಿ ನೋಡಿ ನಾನು ಬೇಸರಗೊಂಡೆನಯ್ಯ. ವಿತ್ತಾಪಹಾರಿ ಗುರುಗಳು ನೂರಾರು. ಶಾಸ್ತ್ರಾರ್ಥ ಪೇಳುವ ಗುರುಗಳು ನೂರಾರು. ಮಂತ್ರತಂತ್ರದಿಂದುಭಯ ಲೋಕದಲ್ಲಿ ಸುಖದುಃಖನೀವ ಗುರುಗಳು ನೂರಾರು. ಸತ್ಕರ್ಮೋಪದೇಶವನರುಹಿ ಸ್ವರ್ಗಮರ್ತ್ಯದಲ್ಲಿ ಸುಖವನೀವ ಗುರುಗಳು ನೂರಾರು. ವಿಚಾರ ಮುಖ ದಿಂದ ಷಟ್ಸಾಧನೆಯನರುಹಿಪ ಗುರುಗಳು ನೂರಾರು. ವಿಷಯಾದಿಗ ಳೆಲ್ಲ ಮಿಥ್ಯವೆಂದರುಹಿ ಆತ್ಮಾನುರಾಗತ್ವವನೀವ ಗುರುಗಳು ನೂರಾರು. ವಿಷಯಂಗಳೆಲ್ಲ ಮಿಥ್ಯವೆಂದರುಹಿ ಆತ್ಮಾನುರಾಗತ್ವನೀವ ಗುರುಗಳು ಹತ್ತೈದು. ಶಿವಜೀವರ ಏಕತ್ವವನರುಹಿ ನಿರ್ಮಲ ಜ್ಞಾನವನೀವ ಗುರು ಗಳು ಪ್ರಮಥರು. ಸಂಶಯಾಳಿಗಳೆಲ್ಲ ಜ್ಞಾನಾಗ್ನಿಯಿಂದೆ ದಹಿಸಿ ಮುಕ್ತಿಯ ಹಂಗೆಂಬುವ ಅರುಹಿನ ಬಂಧನದಲ್ಲಿರಿಸಿದ ಗುರು ಚನ್ನಬಸವಣ್ಣನಲ್ಲದೆ ಮತ್ತೋರ್ವನ ಕಾಣೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೧೬. ನಿರಾಕಾರ ಪರವಸ್ತು ತಾನೆಂದರಿದರೆಯು ಕಿರಿದಾಗಿ ನುಡಿ ಯಲೇಬೇಕು. ಗುರು ದೇವ ಜಡದೇಹಿ ನಾನೆಂಬರುಹುವುಳ್ಳವಂಗಾದರೂ

ಅರುಹಿ ಕೊಡಲೇಬೇಕು. ಸಜ್ಜನರವರು ಗುರುದೇವ ಮಹಾ ಮಹಿಮ ಕಪಿಲಸಿದ್ಧ ಮಲ್ಲಿಕಾರ್ಜುನದೇವಾ.

೮೧೭. ಅಯ್ಯಾ ನಿಮ್ಮ ಶರಣ ಉಂಡ ಶಬ್ದವೆನ್ನ ಮನಕ್ಕೆ ವೇದ್ಯವಾಯಿತ್ತು. ಅಯ್ಯಾ ನಿಮ್ಮ ನಿಜ ಉಂಡ ನಿಲವು ಎನ್ನ ಮತಿಗೆ ವೇದ್ಯವಾಯಿತ್ತು. ನಿಮ್ಮ ಕಾಯವಿಡಿದಿಪ್ಪ ಕರಸ್ಥಲವೆಂತು ಹೇಳಾ ಕಪಿಲಸಿದ್ಧ ಮಲ್ಲಿನಾಥಾ ?

೮೧೮. ಎಲೆ ಅಯ್ಯ ಎನ್ನ ಹೆತ್ತಿಪ್ಪವಳ ನೆತ್ತಿಗಣ್ಣಿನಲ್ಲಿಪ್ಪ ಲಿಂಗವ ನಾನೆಚ್ಚತ್ತು ನೋಡುವೆನೆಂತಯ್ಯ ? ಓದಹೋದರೆ ನೆತ್ತಿ ಬಿರಿದು ಕಣ್ಣಾಯಿತ್ತು. ನೋಡದಿರ್ದರೆ ಅವಳು ಎನಗೆ ತೋರಳು. ನಾ ಕಾಂಬ ತೆರನ ತೋರಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೧೯. ನೀರ ಕ್ಷೀರ ಹಂಸೆ ಬಿಚ್ಚುವದು. ದೇಹ ಜೀವ ಸಂದುಗಳ ದೇವ ಬಿಚ್ಚುವ. ನೀನಿಕ್ಕಿದ ತೊಡಕ ಬಿಡಿಸಬಾರದು. ಬಿಡಿಸಿ ತೊಡಕನಿಕ್ಕಬಾರದು ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾ.

೮೨೦. ಲಿಂಗ ಸುಖದಲ್ಲಿ ಮನ ವೇದ್ಯವಾಯಿತ್ತು. ಇನ್ನೆಂತಯ್ಯ? ಎನಗೆ ನಿಮ್ಮಲ್ಲಿ ನಿರವಯವು ಇನ್ನೆಲ್ಲಿಹುದಯ್ಯ ? ನಿಮ್ಮಲ್ಲಿ ಮಾಡುವದು ಪರಮ ಸುಖದ ಪರಿಣಾಮದ ಮೇರೆದಪ್ಪಿ ನಾನು ನಿಜವನೈದುವ ಠಾವ ಹೇಳಾ ಚನ್ನಮಲ್ಲಿಕಾರ್ಜುನ ಪ್ರಭುವೆ.

೮೨೧. ಆನು ಆರೆಂಬುವದಕ್ಕೆ ಅಷ್ಟು ಪ್ರಮಾಣಂಗಳಂತಿರಲಿ ದೇವಾ. ಆರು ಆರೆಂಬುವದಕ್ಕೆ ಪ್ರತ್ಯಕ್ಷ ಪ್ರಮಾಣದಿಂದರಿಯಬಹುದು ದೇವಾ. ಅವಸ್ಥೆ ಮೂರರ ತೂರ್ಯ ತಿಳಿಯಿತ್ತು. ತೂರ್ಯವೆರಡರ ಚಿನ್ಮಯ ಮೂರ್ತಿ ಅರಿಯಿತ್ತು ದೇವಾ ನಾನು ಆರೆಂಬ ಬಾರದು ಘನ ಗುರು ಚನ್ನಬಸವನರುಹಿದ ಬಳಿಕ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾ.

೮೨೨. ಮಾಡುವ ಕ್ರಿಯಾ ಕ್ರಿಯೆಗಳು ಸುಖದುಃಖಗಳಿಗಲ್ಲದೆ ಭವ ವೀಡಾಡುವುದು ಮೃಡನ ಪದ ದೊರೆಯದು ನೋಡಾ. ಮಾಡುವ ಕ್ರಿಯೆ ಮನೋಧರ್ಮ. ಮಾಡುವ ಕ್ರಿಯೆ ಚಿತ್ತಿನ ಧೈರ್ಯ. ತಾನರಿದ ಮನೋತೀತ ಮಾಡುವನಲ್ಲ ಇದು ಬಿಡುವನಲ್ಲ ಬಿಟ್ಟು ಭವಭಾರಿಯಲ್ಲ ಕಪಿಲಸಿದ್ಧ ಮಲ್ಲಿಕಾರ್ಜುನ ಗುರುವೆ.

೮೨೩. ಆಗದಯ್ಯ ಆಗದಯ್ಯ ಇಲ್ಲದವಂಗೆ ಆಗದಯ್ಯ ಅಲ್ಲದವಂಗೆ. ಆಗದಯ್ಯ ಇಲ್ಲದವಂಗೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೮೨೪. ಆಗದು ಆಗದು ಕಾಯದ ಗುಣವಳಿಯದವಂಗೆ ಜೀವನ್ಮುಕ್ತಿ ಆಗಬೇಕು ಆಗಬೇಕು ಇದಿರಿಟ್ಟು ಆಗಬೇಕು ಆಗಬೇಕು ಪಶ್ಚಾತ್ತಾಪ. ಆಗದೆ ಆದೆನೆಂಬ ಮನುಜನ ಅರಿವು ಶ್ವಾನನರಿವು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೨೫. ಇಲ್ಲದ ಮಾಯೆಯ ಇಲ್ಲೆನಿಸುವದದೆ ಅಲ್ಲನ ಅರುಹು ಕಂಡಯ್ಯ! ಇಲ್ಲದ ಮಾಯೆ ಅಹುದೊ ಅಲ್ಲವೋ ಎಂಬು ಭಯ ಭಾವ ಜಲ್ಲರಿಯ ಕಳಂಕು ಕಂಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ?

೮೨೬. ಅರುಹಿನ ಆಚರಣೆ ಇದು ಕುರುಹಿನ ಕರುಮಾಡ ನೋಡಾ ಲಿಂಗಯ್ಯ. "ಕ್ರಿಯಾಪಿ ಜ್ಞಾನೇನ ವರ್ತತೆ" ಎಂದ ಬಳಿಕ ಅರುಹು ಬೇಕು. ಆಚರಣೆಯಲ್ಲಿ ಮರಹು ಬೇಕು ವಿಷಯಗಳಲ್ಲಿ ಈ ಅರುಹಿನ ಮರವೆಯ ಶರಣನ ಕಂಡು ಕಣ್ದೆರಹುವ ಕಪಿಲಸಿದ್ಧ ಮಲ್ಲಿಕಾರ್ಜುನನು.

೮೨೭. ತಾನು ಪ್ರಪಂಚಿಕನಾಗಿ ಪಾರಮಾರ್ಥವ ಪಡೆಯಬೇಕೆಂಬ ಆಶೆಯುಳ್ಳೊಡೆ ಪರಧನ ಪರಸ್ತ್ರೀ ವಿವರ್ಜಿಸಿ ಪೂಜಿಸುವ ಪರಶಿವನ. ತಾನು ಪ್ರಪಂಚಿಯಾಗಿ ಕೀರ್ತಿಯ ಪಡೆಯಬೇಕೆಂಬ ಆಶೆಯುಳ್ಳೊಡೆ ಸರ್ವಜೀವ ದಯಾಪರತ್ವ ಮೃಷಾಭಾಷಾ ನಿರಾಕರಣತ್ವ ಯಾಚಕರೊಳ್ಪಾತ್ರತ್ವ ಮಾಡಿ ನೋಡಾ ಪರಶಿವನ. ಇದೆ ಅಂತರಂಗದ ವಿಚಾರ ಇದೆ ಬಹಿರಂಗವಲ್ಲಿ ಭೂಷಣ ಇದೆ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಮಹಾಬೊಮ್ಮ ನಾನು ಕಂಡ್ಯಾ ಬೊಮ್ಮಯ್ಯ.

೮೨೮. ಕರದಲ್ಲಿಯ ಅರುಹು ಕರಕರಸಿ ಬೆರಸಿದಂತಾದರೆ ಕರ ಕಂಜದ ಪರವಸ್ತು ತಾ ನೋಡಾ. ಕರದಲ್ಲಿ ಅರುಹು ಕರದಂತಾಗಬಾರದಯ್ಯ. "ಕರಾಭ್ಯಾಂ ರಹಿತಸ್ಯ ಕುತೊ ಕರ್ಮ ಕುತೊ ಆನಂದಂ" ಎಂಬುದು ಪ್ರಸಿದ್ಧ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೨೯. ಹರಿಯಾನಂದದಲ್ಲಿ ಭವ ಮದಗಜಕ್ಕೆ ಹರಿಯಲ್ಲದೆ ದಶಾವತಾರದ ಹರಿಯಲ್ಲ ನೋಡಾ. ಹರನಾನಂದಲ್ಲಿ ಸರ್ವಭಾವಿನಾ ವಿರಹಿತ ನಾನಲ್ಲದೆ ಪಂಚ ಕೃತ್ಯಾಧಿಕಾರಿ ಹರನಲ್ಲ ನೋಡಾ. ನರನಾನಂದಲ್ಲಿ ಉತ್ಪತ್ತಿ ವಿರಹಿತ ನಾನಲ್ಲದೆ ಉತ್ಪತ್ತ್ಯಾಧಿಕಾರಿ ನರ ನಾನಲ್ಲ ನೋಡಾ.

ತೋರುವ ಸಚರಾಚರನಾನಂದಲ್ಲಿ ಜಡಾಜಡ ನಾನಲ್ಲದೆ ಜನನ ಮರಣ ಪೊದ್ದ ಸಚರಾಚರ ನಾನಲ್ಲ ನೋಡಾ. ಕಪಿಲಸಿದ್ಧ ಮೊದಲಲ್ಲಿಯು ಪಾಪ ಪುಣ್ಯವದು ಇದರಲ್ಲಿಯು ಜೀವಕ್ಕೆ ಸುಖ ದುಃಖ ನೋಡಾ ಎಂದೆನ ಲಾರೆ. ಸಂಗಾತ್ಸಂ ಜಾಯತೆ ಜ್ಞಾನಂ ಜ್ಞಾನಾತ್ಸಂಜಾಯತೆ ಗಿರಂ ಶಿವಾತ್ಸಂಜಾಯತೆ ಮುಕ್ತಿಃ ಮುಕ್ತಿರನ್ಯತ್ರ ನಾಸ್ತಿ ವೈ॥ ಎಂದ ಬಳಿಕ ಸಂಗದಿಂ ಸುಖದುಃಖವಲ್ಲದೆ ಪೂರ್ವಾರ್ಜಿತ ಪುಣ್ಯಪಾಪವೆಂಬವು ತಿಳಿ ಯಬಾರದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ.

೮೩೦. ಸ್ವರ್ಗವೆಂದರೆ ಸುಖಕ್ಕೆ ನಾಮ, ನರಕವೆಂದರ ಬಾಧೆಗೆ ನಾಮ. ಸುಖವೆಂದರೆ ಪುಣ್ಯ, ನೋವೆಂದರೆ ದುಃಖಃ ಸುಖವಿಯೋಗವಾ. ದಲ್ಲಿ ದುಃಖವೆನಿಸಿತ್ತು. ದುಃಖ ವಿಯೋಗವಾದಲ್ಲಿ ಸುಖವೆನಿಸಿತ್ತು. ಸುಖಾಸುಖವೆಂದರಿಯುಬಾರದು. ಮೊದಲ ಹಿಡಿದ ಸಂಗತಿಯಿಂದ ಸುಖ ಸಂಗದಿಂ ದುಃಖ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೩೧. ಸುಖಕ್ಕೆ ದೈವವೆಂದು, ಸುಖಕ್ಕೆ ವಿಧಿಲಿಪಿಯೆಂದು, ಸುಖಕ್ಕೆ ಪುಣ್ಯವೆಂದು ಸುಖಕ್ಕೆ ಪ್ರಾರಬ್ಧವೆಂದು ನುಡಿವರಯ್ಯ ಸಿದ್ಧಾಂತಿಗಳು. ಸುಖವೆ ದೈವವೆನಲಾಗಿ ಮಾಡುವ ಕ್ರಿಯೆಯುಲ್ಲರಿಯು ಬಂದಿತು. ಸುಖವು ದೈವವಲ್ಲ, ದೈವವದು ಕಪಿಲ ಸಿದ್ಧಮಲ್ಲಿಕಾರ್ಜುನನಲ್ಲಿ ಕೂಡುವ ಕೂಟವು.

೮೩೨. ಹುಟ್ಟಿದ ಮಗನ ರಚನೆ ಹುಟ್ಟಲಿಕ್ಕೆ ಯೋಗ್ಯವಾದಂತೆ ಹುಟ್ಟಿದ ಮಾಯೆ ಬಿಟ್ಟಜನ ಅರಿವ ಪರಿಯಂತೆ ನೀನಿಪ್ಪೆ ಜೀವ ಭಾವ ದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೩೩. ಬಸವನವ ಎರಡನೆಯ ಶಂಭುವೆನ್ನುವರು. ನಾವು ಮೂರ ನೆಯ ಶಂಭುವೇನಯ್ಯ! ತನ್ನ ತಾ ತಿಳಿದಲ್ಲಿ ಎರಡನೆಯ ಶಂಭುವೆನಿಸಿದ. ತನ್ನ ತಾ ಮರೆದಲ್ಲಿ ಮಹೀತಳದ ಮಾನವನೆನಿಸಿದ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೩೪. ತಿಳಿದೆ ನಾ ತಿಳಿದೆ ನಾನೆಂದು ಹಲಬರು ಹೋದರು. ಅಹಂಕಾರದಲ್ಲಿ ತಿಳಿಯೆ ನಾನೆಂದು ಹಲಬರು ಹೋದರು. ಮರವೆ ಯಲ್ಲಿ ತಿಳಿದೆನೆಂಬುದು ತಿಳಿಯೆನೆಂಬುದು ಜ್ಞಾನದ ವೈದೊಡಕು. ತಿಳಿ ಯರಿವುದು ತಿಳಿಯ ಮರೆಯೆಂಬುದು ಮರೆಯಂಬುಭಯ ತಿಳಿದು ತಿಳಿ ಯದಿರೆ ತಿಳಿನೀರ ನಳಿನಾಕ್ಷ ನುತ ಕಪಿಲಸಿದ್ಧ ಮಲ್ಲಿಕಾರ್ಜುನ ತಾನೆ.

೬೩೫. ಚರಿಸುವ ಚರನಿಗೆ ಚರ್ಚೆಯೆ ಭೂಷಣ, ಸುಂದರ ನಾರಿಗೆ ಗಂಭೀರಪುರುಷನೇ ಭೂಷಣ, ಕೊಳನಲ್ಲಿಯ ನೀರಿಗೆ ಕಲಕಲ ಹಂಸೆಯೆ ಭೂಷಣ, ವನದಲ್ಲಿಯ ವಸಂತಿಗೆ ಕೋಕಿಲ ನಾದವೆ ಭೂಷಣ, ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ಶರಣರಿಗೆ ನಿರ್ಮಲ ನಿಜಾನಂದವೆ ಭೂಷಣ.

೬೩೬. ಕಲ್ಲಿನಲ್ಲಿ ವಲ್ಲಭನಿದ್ದಾನೆಂದು ಅಲ್ಲಾಡುತ್ತಾರೆ ನೋಡಾ ಅಲ್ಲಯ್ಯ. ಈ ಖುಲ್ಲ ಮನುಜರು ಕಲ್ಲಿನಲ್ಲಿ ವಲ್ಲಭನ ಕಂಡೆವೆಂದು ಬಡಿದಾಡುತ್ತಾರೆ ನೋಡಾ ಅಲ್ಲಯ್ಯ! ಈ ಹೊಲ್ಲ ಮನುಜರು ಕಲ್ಲಿನಲ್ಲುಂಟು ಮಣ್ಣಿನಲ್ಲಿಲ್ಲವೆಂದೆಂಬರೆ ಅಂತರ್ಯಾಮಿ ಪರಿಪೂರ್ಣತ್ವ ಭಂಗವಹುದಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೬೩೭. ಚರಿಸುವ ಜನರೆಲ್ಲ ದೇವರಲ್ಲ. ಚರಿಸಿ ಚರಿಸಿ ಭ್ರಮೆಗೊಂಡರು. ಮತ್ತೆ ದೇವರು ದೇವರು ಎಂದು ನೋಡಾ ಚರಿಸುವ ಜನರು ದೇವರು ಚರಿಸದ ವಸ್ತು ದೇವರು ನಾ ನೀನೆಂಬುಭಯ ದೇವರು ಕಪಿಲಸಿದ್ಧ ಮಲ್ಲಿಕಾರ್ಜುನ ದೇವರು ದೇವರು.

೬೩೮. ಆಗದು ಆಗದು ಮಾಡದವಂಗೆ ಬ್ರಹ್ಮಪದವಿ, ಆಗದಾಗದು ಮಾಡದವಂಗೆ ವಿಷ್ಣು ಪದವಿ, ಆಗದಾಗದು ಮಾಡದವಂಗೆ ಶಿವಪದವಿ. ಆಗದು ಮಾಡದವಂಗೆ ತೂರ್ಯಾತೀತ ನಿರ್ಮಲ ನಿಜಾನಂದ ಕಪಿಲಸಿದ್ಧ ಮಲ್ಲಿಕಾರ್ಜುನನ ಅರಿವು.

೬೩೯. ಮಾಡಬೇಕು ಮಾಡಬೇಕು ಮಹಾನುಭಾವರ ಸಂಗವ, ನೋಡಬೇಕು ನೋಡಬೇಕು ಸಿದ್ಧಾಂತ ವೇದಾಂತಂಗಳ, ಹಾಡಬೇಕು ಹಾಡಬೇಕು ಪರಶಿವಲಿಂಗವ, ಕೂಡಬೇಕು ಕೂಡಬೇಕು ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವ.

೬೪೦. ನನ್ನಿಚ್ಛೆ ತನ್ನ ತಂದೀತೆಂದರಿಯೆ. ಆತನಿಚ್ಛೆಯಿಂದ ನಾ ಬಂದೆನೆಂಬುದು ಅರಿಯೆ. ನಮ್ಮಿಚ್ಛೆಯಾಗಲಿ ಶಿವನಿಚ್ಛೆಯಾಗಲಿ ಬಂದುದು ನೀ ನಾನೆಂದೆ. ಇದಕ್ಕೆ ಇನ್ನು ಬರಬಾರದ ಚನ್ನ ಮಾರ್ಗ ತೋರಾ ಚನ್ನಬಸವ ಕಪಿಲಸಿದ್ಧ ಮಲ್ಲಿಕಾರ್ಜುನಾ.

೬೪೧. ಪರತರ ಸಾಧಿಸುವರೆ ಪ್ರಪಂಚದ ವಿಷಯ ಅಳಿದಿರಬೇಕು. ರಾಜ್ಯವ ಸಾಧಿಸುವರೆ ಪ್ರಾಣದಾಶೆಯ ಮರೆದಿರಬೇಕು. ವಿದ್ಯೆಯ ಸಾಧಿ

ಸುವರೆ ಅನ್ಯ ಆಶೆ ಮತೆ ಮಾಡಿರಬೇಕು. ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡುವರೆ ಸಂಶಯುವಳಿದು ನಿಶ್ಚಿಂತನಾಗಬೇಕು.

೮೪೨. ಬಡವರ ಭೋಜನವ ಭೋಗಿಸಿದವ ಭವಾನೀ ಪುತ್ರ ನೋಡಯ್ಯಾ! ಕಡವರನೆಡೆಗೊಂಡವ ವಿಷ್ಣುವಿನ ವಂಶದವ ನೋಡಯ್ಯಾ! ಬಡವರ ಭೋಜನವಮೃತ ಸೇವನೆ, ಕಡವರನಮೃತ ಸುರಾಪಾನ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೮೪೩. ಅಂತರ್ಲಿಂಗ ಬಾಯಿ ತೆರೆದ ಬಳಿಕ ಬಹಿರ್ಲಿಂಗದ ಪೂಜೆ ಮೋಟನ ಮೌಳಿಯಂತೆ. ಅಂತರ್ಲಿಂಗ ಬಹಿರ್ಲಿಂಗ ಬೇರಾದ ಬಳಿಕ ಕಪಿಲಸಿದ್ಧ ಮಲ್ಲಿಕಾರ್ಜುನ ಒಲಿಯುನಂತೆ.

೮೪೪. ಹಸಿವು ದೋರದ ಮುನ್ನ ತೃಷೆ ದೋರದ ಮುನ್ನ ವ್ಯಾಧಿ ವಿಪತ್ತುಗಳು ಬಂದಡಸದ ಮುನ್ನ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವ ಪೂಜಿಸೊ ಮುನ್ನ ಮುನ್ನ.

೮೪೫. ತನ್ನವರೆನ್ನಬಾರದು ತನ್ನ ಬಂಧುಗಳೆನ್ನಬಾರದು ತನಗನ್ಯರೆನಬಾರದು. ತಮ್ಮ ತಮ್ಮ ಮನಕ್ಕೆ ಮನವೆ ಸಾಕ್ಷಿ. ಮನಕ್ಕೆ ಮಹಾದೇವ ಕಪಿಲಸಿದ್ಧ ಮಲ್ಲಿಕಾರ್ಜುನನೆ ಸಾಕ್ಷಿ ಬಿಲ್ಲೇಶಯ್ಯಾ.

೮೪೬. ನ್ಯಾಯಿ ತಾನಾದರೆ ಅನ್ಯಾಯ ಮಾಡಬಾರದು. ಲಿಂಗಿ ತಾನಾದರೆ ಅಂಗಿ ತಾನಾಗಬಾರದು. ಭೋಗಿ ತಾನಾದರೆ ತಾ ಯೋಗಿಯಾಗಬಾರದು ಕಪಿಲಸಿದ್ಧ ಮಲ್ಲಿಕಾರ್ಜುನನಾ.

೮೪೭. ಮಾಡಿದವನ ಹೆಸರು ಮಣ್ಣಿನಲ್ಲಿ, ಮಣ್ಣು ಮಾಡಿದವನ ಹೆಸರು ಮೂಲೋಕದಲ್ಲಿ, ಮಾಡಿದೆನೆಂಬುದು ಮನದ ಗುಣ, ಮಾಡಿದವನವನೆಂಬುದು ಮಹಾದೇವ ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡುವ ಗುಣ ಮಡಿವಾಳಯ್ಯ ಸಾಕ್ಷಿಯಾಗಿ.

೮೪೮. ಎನ್ನ ಲಲಾಟದಲ್ಲಿ ಓಂಕಾರವಾಗಿರ್ದಾತ ಚನ್ನಬಸವ, ಎನ್ನ ನೇತ್ರದಲ್ಲಿ ಶಿಕಾರವಾಗಿರ್ದಾತ ಬಸವ, ಎನ್ನ ಮಸ್ತಕದಲ್ಲಿ ಹಕಾರವಾಗಿರ್ದಾತ ಪ್ರಭುದೇವ, ಎನ್ನ ಘ್ರಾಣದಲ್ಲಿ ನಕಾರವಾಗಿರ್ದಾತ ಮಡಿವಾಳಯ್ಯ, ಎನ್ನ ಬಾಯಿಯಲ್ಲಿ ಮಕಾರವಾಗಿರ್ದಾತ ಮರುಳು ಶಂಕರಯ್ಯ, ಎನ್ನ ಕಪೋಲದಲ್ಲಿ ವಕಾರವಾಗಿರ್ದಾತ ಪಡಿಹಾರಿ ಬಸವಯ್ಯ, ಎನ್ನ ಶ್ರೋತ್ರದಲ್ಲಿ ಯಕಾರವಾಗಿರ್ದಾತ ಹಡಪದಪ್ಪಣ್ಣ. ಎನ್ನ

ಜಿಹ್ವೆಯಲ್ಲಿ ಹ್ರೀಂಕಾರವಾಗಿರ್ದಾಕೆ ಅಕ್ಕನಾಗಮ್ಮ, ಎನ್ನ ಸರ್ವಾಂಗ ದಲ್ಲಿ ಸಕಲ ಪ್ರಣವ ರೂಪಾಗಿರ್ದಾತ ಗುರುವಿನ ಗುರು ಚನ್ನಬಸ ವನ ಪಾದಕ್ಕೆ ನಮೊ ನಮೊ ಎಂಬೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೪೪೯. ಎಲ್ಲರ ಮರೆಯಬಹುದು. ಎನ್ನ ವಲ್ಲಭ ಗುರುಮೂರ್ತಿಯ ಮರೆಯಬಾರದು. ಎಲ್ಲರ ಕೀರ್ತಿಸಬಹುದು. ಎನ್ನ ಗುರುಮೂರ್ತಿಯ ಕೀರ್ತಿಸಬಾರದು. ಎಲ್ಲರು ಹೋಗಲಾಡಿದರೆಂದು ಎನ್ನ ನಲ್ಲನು ಹೋಗ ಲಾಡನು ನೀ ಹೋಗಲಾಡೆನೆ ಕಪಿಲಸಿದ್ಧ ಮಲ್ಲಿಕಾರ್ಜುನ ನಿಮ್ಮ ಪಾದ ಸಾಕ್ಷಿಯಾಗಿ.

೪೫೦. ಅಂತರಂಗದಲ್ಲಿಹ ಲಿಂಗ ಬಹಿರಂಗದಲ್ಲಿ ಲಿಂಗವಾಯಿ ತ್ತಯ್ಯ ಎಂಬುದರಿಯೆ. ಬಹಿರಂಗದಲ್ಲಿಯ ಲಿಂಗ ಅಂತರಂಗದಲ್ಲಿ ಲೀಯ ವಾಗುವ ಕಾರಣವರಿಯೆ. ಅಂತರಂಗ ಬಹಿರಂಗವೆಂಬೆರಡರ ಸಂಗ ಕಪಿ ಸಿದ್ಧ ಮಲ್ಲಿಕಾರ್ಜುನಯ್ಯನೆಂಬುದರಿಯೆ ಏನೆಂದರಿಯೆ.

೪೫೧. ಆಕಾಶದಲ್ಲಿಯ ಮಿಂಚಿನಂತೆ, ಯೋಗಿಯಲ್ಲಿಯ ಕೋಪ ದಂತೆ, ವೇಶಿಯಲ್ಲಿಯ ಅನುರಾಗದಂತೆ, ಗಾಳಿಯಲ್ಲಿಯ ದೀಪದಂತೆ, ಓಗರದಲ್ಲಿಯ ಪ್ರಸಾದದಂತೆ, ಗುರುಮೂರ್ತಿಯಲ್ಲಿಯ ಪಾದೋದಕ ದಂತೆ ಕಪಿಲಸಿದ್ಧ ಮಲ್ಲಿಕಾರ್ಜುನನ ಲೀಲೆಯಂತೆ ಎನ್ನ ಪ್ರಾಣಲಿಂಗದ ಐಕ್ಯ. ಅದರಂತೆ ಶಬ್ದ ಮುಗ್ಧವಾಯಿತ್ತಯ್ಯ ಶಿವಶಿವಾ, ಶಿವಶಿವಾ, ಶಿವ ಶಿವಾ, ಶಿವಶಿವಾ, ಶಿವಶಿವಾ.

ಇತಿ ಶ್ರೀ ಸಿದ್ಧರಾಮೇಶ್ವರ ದೇವರು ನಿರೂಪಿಸಿದ ವಚನ ಸಮಾಪ್ತ.

